ಸೋಮವಾರ, ಮಾರ್ಚ್ 8, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 67 | ಪುಟ 14
● www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಶಿಕ್ಷಣ
'ಸ್ಕೋಪ್' ಎನ್ನುವುದು ಯಾವ ಕ್ಷೇತ್ರದ ಸೊತ್ತಲ್ಲ. ಆಯ್ಕೆಯಲ್ಲಿ ಸ್ಪಷ್ಟತೆ ಮತ್ತು ಕೌಶಲಗಳು ಜೊತೆಗಿದ್ದರೆ ವೃತ್ತಿಬದುಕಿನಲ್ಲಿ ಯಶಸ್ಸು ಕಟ್ಟಿಟ್ಟಬುತ್ತಿ

ಹಳೆ ವಾಹನ ಗುಜರಿಗೆ ಹಾಕಿದರೆ ಹೊಸ ವಾಹನಕ್ಕೆ ರಿಯಾಯಿತಿ 10

ಉತ್ತರಾಖಂಡ: ಸರ್ಕಾರದಲ್ಲಿ ಬದಲಾವಣೆ ಸಾಧ್ಯತೆ 5

ಸ್ವಂತ ಖರ್ಚಿನಲ್ಲಿ ಸ್ವಚ್ಛತಾ ಕಾರ್ಯ
ಸರ್ಕಾರಿ ಶಾಲೆಗೆ ಜೀವಕಳೆ ತಂದ ಶಿಕ್ಷಕ 4

ಎಸ್ಸೆಸ್ಸೆಲ್ಸಿ- ಪಿಯುಸಿ
ಪರೀಕ್ಷೆ ದಿಕ್ಸೂಚಿ

ಪ್ರಿಯ ವಿದ್ಯಾರ್ಥಿಗಳೇ, ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ..
ಪುಟ–7

ಇಂದು ವಿಶ್ವ ಮಹಿಳಾ ದಿನ
ಸ್ತ್ರೀ- ಸವಾಲು- ಸಾಧನೆ
ಹಲವು ಸವಾಲುಗಳನ್ನು ಎದುರಿಸಿ ಸಾಧನೆ ಮಾಡಿದ ದಿಟ್ಟ ಯುವತಿಯರ ಅನುಭವಗಳು... 9

ಅನಾಮಧೇಯ ದೂರು ತನಿಖೆ ಅಗತ್ಯವಿಲ್ಲ – ಸರ್ಕಾರ ಸುತ್ತೋಲೆ

ಉಲ್ಟಾ ಹೊಡೆದ ದೂರುದಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಲ ಸಂಪನ್ಮೂಲ ಸಚಿವರಾಗಿದ್ದ ರಮೇಶ ಜಾರಕಿಹೊಳಿ ಯುವತಿಯೊಬ್ಬಳನ್ನು ಲೈಂಗಿಕವಾಗಿ ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ಆರೋಪಿಸಿ ನೀಡಿದ್ದ ದೂರನ್ನು ಹಿಂಪಡೆಯುವುದಾಗಿ ಸಾಮಾಜಿಕ ಕಾರ್ಯಕರ್ತ ದಿನೇಶ್ ಕಲ್ಲಹಳ್ಳಿ ಭಾನುವಾರ ದಿಢೀರ್ ಬೆಳವಣಿಗೆಯಲ್ಲಿ ತಿಳಿಸಿದ್ದಾರೆ.

ರಮೇಶ ಜಾರಕಿಹೊಳಿ ವಿರುದ್ಧ ಇದೇ 2ರಂದು ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಗೆ ದೂರು ನೀಡಿದ್ದ ದಿನೇಶ್, ಪ್ರಕರಣಕ್ಕೆ ಸಂಬಂಧಿಸಿದ್ದು ಎನ್ನಲಾದ ವಿಡಿಯೊ ಮತ್ತು ಆಡಿಯೊ ತುಣುಕುಗಳುಳ್ಳ ಸಿ.ಡಿಗಳನ್ನು ಸಲ್ಲಿಸಿದ್ದರು. ಮರುದಿನ ರಮೇಶ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಶನಿವಾರ ಪೊಲೀಸ್ ಠಾಣೆಗೆ ಹಾಜರಾಗಿದ್ದ ದಿನೇಶ್, ಭಾನುವಾರ ಮಧ್ಯಾಹ್ನ ವಕೀಲರ ಮೂಲಕ ಐದು ಪುಟಗಳ ಪತ್ರ ರವಾನಿಸಿ, ದೂರು ಹಿಂಪಡೆಯುತ್ತಿರುವುದಾಗಿ ಮಾಹಿತಿ ನೀಡಿದ್ದಾರೆ.

'ಪ್ರಕರಣವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುತ್ತೇನೆ' ಎಂದು ಆಗಾಗ ಹೇಳುತ್ತಲೇ ಇದ್ದ ದಿನೇಶ್ ಕಲ್ಲಹಳ್ಳಿ, ದಿಢೀರ್ ದೂರು ಹಿಂಪಡೆಯುವ ನಿರ್ಧಾರಕ್ಕೆ ಬಂದಿದ್ದಾರೆ. ದೂರು ಹಿಂಪಡೆಯುವಂತೆ ರಾಜಕೀಯ ಒತ್ತಡಗಳು ಬಂದಿಲ್ಲ ಎಂದು ಅವರು ಹೇಳಿದ್ದಾರೆ.

'ತನಿಖೆ ಮುಂದುವರಿಯಲಿದೆ'

'ಸಂತ್ರಸ್ತೆಯ ಹೇಳಿಕೆ ಇಲ್ಲದೇ ನೀಡಿದ ದೂರನ್ನು ಸ್ವೀಕರಿಸಿದ ನಂತರ ತನಿಖೆ ನಡೆಸಿ, ಎಫ್‌ಐಆರ್ ದಾಖಲಿಸಲು 15 ದಿನಗಳ ಕಾಲಾವಕಾಶವಿದೆ. ತನಿಖೆ ಮುಂದುವರಿದಿದ್ದು, ಈ ಹಂತದಲ್ಲಿ ದೂರು ಹಿಂಪಡೆಯಲು ಅವಕಾಶವಿಲ್ಲ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ದಿನೇಶ್ ಕಲ್ಲಹಳ್ಳಿ ಪರವಾಗಿ ವಕೀಲರು ಪತ್ರ ತಲುಪಿಸಿದ್ದಾರೆ. ದೂರುದಾರರನ್ನೇ ಠಾಣೆಗೆ ಕಳುಹಿಸುವಂತೆ ಸೂಚಿಸಲಾಗಿದೆ. ಅವರು ಬಂದ ಬಳಿಕ ಮತ್ತಷ್ಟು ಮಾಹಿತಿ ಪಡೆಯಲಾಗುವುದು. ಸಾಕ್ಷ್ಯಗಳನ್ನು ಸಂಗ್ರಹಿಸಿದ ಬಳಿಕ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಈ ಮಾತನ್ನೇ ವಕೀಲರಿಗೂ ತಿಳಿಸಲಾಗಿದೆ' ಎಂದು ಮೂಲಗಳು ಹೇಳಿವೆ.

ಸಿ.ಡಿ ಬೆದರಿಕೆ ತಡೆಗೆ ಕಾನೂನು

'ಸಚಿವರು, ಶಾಸಕರು ಸೇರಿದಂತೆ ರಾಜಕಾರಣಿಗಳ ವಿರುದ್ಧ ಸಿ.ಡಿಗಳನ್ನು ಸೃಷ್ಟಿಸಿ, ಬೆದರಿಕೆ ಒಡ್ಡುವುದನ್ನು ತಡೆಯಲು ಕಾನೂನು ರಚಿಸುವಂತೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ಗೃಹ ಸಚಿವ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಮಾಡಿದ್ದೇವೆ. ಹಲವು ಶಾಸಕರು ಈ ಒತ್ತಾಯ ಮಾಡಿದ್ದಾರೆ. ಗೃಹ ಸಚಿವರು ಈಗಾಗಲೇ ಮಸೂದೆಯ ಕರಡು ಸಿದ್ಧಪಡಿಸುತ್ತಿದ್ದಾರೆ' ಎಂದು ಬಾಲಚಂದ್ರ ಜಾರಕಿಹೊಳಿ ಹೇಳಿದರು.

ರಮೇಶ ಜಾರಕಿಹೊಳಿ ಮೊದಲು ಮನೆಯಿಂದ ಹೊರಬಂದು ಪೊಲೀಸರಿಗೆ ದೂರು ನೀಡಬೇಕು. ಅವರನ್ನು ಭೇಟಿ ಮಾಡಿ ಈ ಬಗ್ಗೆ ಮನವೊಲಿಸುತ್ತೇನೆ
ಬಾಲಚಂದ್ರ ಜಾರಕಿಹೊಳಿ

ರಮೇಶ ಜಾರಕಿಹೊಳಿ ಯಾಕೆ ರಾಜೀನಾಮೆ ನೀಡಿದರು? ಸುಸಂಸ್ಕೃತರಾಗಿದ್ದರೆ ಆರು ಸಚಿವರು ಕೋರ್ಟ್‌ನಿಂದ ತಡೆಯಾಜ್ಞೆ ತರುತ್ತಿದ್ದರೇ?
ಸಿದ್ದರಾಮಯ್ಯ
ವಿರೋಧ ಪಕ್ಷದ ನಾಯಕ

ಶಾಸಕರ ಹೆಸರು ಕೇಳಿದಾಕ್ಷಣ ಜನರು 'ಛೀ... ಥೂ... ಕಳ್ಳ...' ಎಂದು ಉಗುಳುತ್ತಿದ್ದಾರೆ. ಇಂಥ ಕೆಟ್ಟ ಪರಿಸ್ಥಿತಿಯನ್ನು ಬಿಜೆಪಿ ಶಾಸಕರು ತಂದಿಟ್ಟಿದ್ದಾರೆ
ಡಿ.ಕೆ. ಶಿವಕುಮಾರ್
ಕೆಪಿಸಿಸಿ ಅಧ್ಯಕ್ಷ

4ನೇ ಪುಟ ನೋಡಿ
ಇನ್ನೊಂದು ಸುದ್ದಿ 3A

'ಐಎಂಎ' ವಂಚಿತರಿಗೆ ₹ 50 ಸಾವಿರ

ಬೆಂಗಳೂರು: ಹೆಚ್ಚಿನ ಲಾಭಾಂಶದ ಆಮಿಷಕ್ಕೆ ಒಳಗಾಗಿ ಐಎಂಎ (ಐ ಮಾನಿಟರಿ ಅಡ್ವೈಸರಿ) ಕಂಪನಿಯಲ್ಲಿ ಹಣ ಠೇವಣಿ ಇಟ್ಟು ಮೋಸ ಹೋಗಿದ್ದ ಗ್ರಾಹಕರಿಗೆ ಆ ಕಂಪನಿಯಿಂದ ಜಪ್ತಿ ಮಾಡಿದ ಆಸ್ತಿ, ಚಿನ್ನಾಭರಣ ಮಾರಾಟದಿಂದ ಬಂದ ಹಣವನ್ನು ಹಂಚಲು ರಾಜ್ಯ ಸರ್ಕಾರ ನೇಮಿಸಿದ ಸಕ್ಷಮ ಪ್ರಾಧಿಕಾರ ಮುಂದಾಗಿದೆ. 2

ರೈತ ಪ್ರತಿಭಟನೆಗೆ ಮಹಿಳಾ ದಿನದ ಬೆಡಗು

ನವದೆಹಲಿ/ಭೋಪಾಲ್: ಕೇಂದ್ರದ ಮೂರು ಕೃಷಿ ಕಾಯ್ದೆಗಳ ವಿರುದ್ಧ ದೆಹಲಿಯ ಗಡಿಯ ಸಿಂಘು, ಟಿಕ್ರಿ ಮತ್ತು ಗಾಜಿಪುರದಲ್ಲಿ ರೈತರು ನಡೆಸುತ್ತಿರುವ ಪ್ರತಿಭಟನೆ ಸೋಮವಾರ ವಿಶಿಷ್ಟವಾಗಿರಲಿದೆ. ಮಹಿಳಾ ದಿನದ ಅಂಗವಾಗಿ ಅಂದು ವೇದಿಕೆ ನಿರ್ವಹಣೆ, ಆಹಾರ ಪೂರೈಕೆ ಮತ್ತು ಭದ್ರತೆಯ ಎಲ್ಲ ಹೊಣೆಯನ್ನು ಮಹಿಳೆಯರೇ ನಿರ್ವಹಿಸಲಿದ್ದಾರೆ. 6

ವಿನೇಶಾಗೆ ಚಿನ್ನ: ಅಗ್ರಸ್ಥಾನ

ರೋಮ್(ಪಿಟಿಐ): ಎರಡು ವಾರಗಳ ಅಂತರದಲ್ಲಿ ಎರಡನೇ ಚಿನ್ನದ ಪದಕ ಮುಡಿಗೇರಿಸಿಕೊಂಡ ಭಾರತದ ವಿನೇಶಾ ಫೋಗಟ್, ವಿಶ್ವ ಕ್ರಮಾಂಕದಲ್ಲಿ 53 ಕೆಜಿ ವಿಭಾಗದಲ್ಲಿ ಅಗ್ರಸ್ಥಾನಕ್ಕೆ ಮರಳಿದರು. 12

ಕೊರತೆ ಬಜೆಟ್ ಸಾಧ್ಯತೆ

ಪ್ರಜಾವಾಣಿ ವಾರ್ತೆ



● ಬಜೆಟ್ ಮಂಡನೆ: ಇಂದು ಮಧ್ಯಾಹ್ನ 12.05

ಬೆಂಗಳೂರು: ಕೋವಿಡ್ ಸಂಕಷ್ಟ ಮತ್ತು ಆರ್ಥಿಕ ಹಿಂಜರಿತದ ಬೆನ್ನಲ್ಲೇ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಸೋಮವಾರ ಬಜೆಟ್ ಮಂಡಿಸಲಿದ್ದು, ಸಾಲ ಪಡೆಯುವ ಪ್ರಮಾಣ ಹೆಚ್ಚಿಸುವುದರ ಜತೆಗೆ ಕೊರತೆ ಬಜೆಟ್ ಮಂಡಿಸುವ ಸಾಧ್ಯತೆ ಇದೆ.

'ಕೊರತೆ ಬಜೆಟ್ ಮಂಡಿಸುವುದಿಲ್ಲ' ಎಂದು ಯಡಿಯೂರಪ್ಪ ಇತ್ತೀಚೆಗೆ ಹೇಳಿದ್ದರೂ, 'ಬಜೆಟ್ ಗಾತ್ರ ತಗ್ಗಿಸುವ ಮತ್ತು ಕೊರತೆ ಬಜೆಟ್ ಮಂಡಿಸುವ ಸಾಧ್ಯತೆ ಹೆಚ್ಚು' ಎಂಬುದು ಆರ್ಥಿಕ ವಲಯದ ಲೆಕ್ಕಾಚಾರ.

ಇವೆಲ್ಲದರ ನಡುವೆಯೂ ಕೃಷಿ, ಮಹಿಳೆಯರು, ಆರೋಗ್ಯ ಕ್ಷೇತ್ರ, ಪ್ರವಾಸೋದ್ಯಮಕ್ಕೆ ಹೆಚ್ಚಿನ ಅನುದಾನ, ಹೊಸ ಯೋಜನೆಗಳನ್ನು ಪ್ರಕಟಿಸುವ ನಿರೀಕ್ಷೆಗಳಿವೆ ಎಂದೂ ಮೂಲಗಳು ಹೇಳಿವೆ.

ಆರ್ಥಿಕ ಸಮೀಕ್ಷೆ ಕೊರತೆ ಬಜೆಟ್‌ನ ಸುಳಿವು ನೀಡಿದೆ. ರಾಜ್ಯದ ಒಟ್ಟು ವರಮಾನದಲ್ಲಿ ಶೇ 93 ರಷ್ಟು ಬಾಬ್ತು ಸಂಬಳ, ಪಿಂಚಣಿ, ಬಡ್ಡಿ ಪಾವತಿಯ ಬದ್ಧತಾ ವೆಚ್ಚಕ್ಕೇ ವ್ಯಯವಾಗುತ್ತದೆ. ಅಭಿವೃದ್ಧಿಗೆ ಶೇ 7 ರಷ್ಟು ಮಾತ್ರ ಲಭ್ಯವಾಗಲಿದೆ. ಹೀಗಾಗಿ ಜನಪ್ರಿಯ ಯೋಜನೆಗಳಿಗೆ ಹಣ ಹೊಂದಿಸಲು ಹೆಚ್ಚಿನ ಸಾಲ ಮಾಡುವುದು ಅನಿವಾರ್ಯ ಎಂದು ಹಣಕಾಸು ಇಲಾಖೆ ಮೂಲಗಳು ತಿಳಿಸಿವೆ.

ಕೋವಿಡ್ ಲಾಕ್‌ಡೌನ್ ಬಳಿಕ ರಾಜ್ಯದ ಆರ್ಥಿಕ ವೃದ್ಧಿ ದರ (ಎಸ್‌ಜಿಡಿಪಿ) ಕೇಂದ್ರಕ್ಕೆ ಹೋಲಿಸಿದರೆ ತುಸು ಹೆಚ್ಚಾಗಿದ್ದರೂ, ಆಶಾದಾಯಕವಾಗಿಲ್ಲ. ಹೀಗಾಗಿ ಹೆಚ್ಚು ಸಾಲ ಮಾಡುವುದು ರಾಜ್ಯಕ್ಕೆ ಅನಿವಾರ್ಯ. ಲಾಕ್‌ಡೌನ್ ಬಳಿಕ ಆದಾಯ ಸಂಗ್ರಹದ ಪ್ರಮಾಣ ತೀರಾ ಕಡಿಮೆ ಇತ್ತು. ಕೇಂದ್ರಸರ್ಕಾರ ಜಿಎಸ್‌ಟಿ ಪರಿಹಾರ ಕೊಡದೇ ಇದ್ದ ಕಾರಣ, ಅಭಿವೃದ್ಧಿ ಕಾರ್ಯಗಳಿಗಾಗಿ ₹33 ಸಾವಿರ ಕೋಟಿ ಹೆಚ್ಚುವರಿ ಸಾಲ ಮಾಡಲು ಈಗಾಗಲೇ ನಿರ್ಧರಿಸಿದೆ. ಇದರಿಂದ ಅಭಿವೃದ್ಧಿ ಕಾರ್ಯಗಳನ್ನು ಮುಂದುವರಿಸಲು ಅನುಕೂಲವಾಗುತ್ತದೆ ಎನ್ನುವುದು ಸರ್ಕಾರದ ಲೆಕ್ಕಾಚಾರ.

2ನೇ ಪುಟ ನೋಡಿ

ಏಪ್ರಿಲ್ 9ರಿಂದ ಐಪಿಎಲ್ ಪ್ರೇಕ್ಷಕರಿಗಿಲ್ಲ ಪ್ರವೇಶ

ನವದೆಹಲಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ 14ನೇ ಆವೃತ್ತಿಯ ಟಿ20 ಕ್ರಿಕೆಟ್ ಟೂರ್ನಿಯು ಏಪ್ರಿಲ್ 9 ರಿಂದ ಮೇ 30ವರೆಗೆ ಭಾರತದಲ್ಲಿಯೇ ನಡೆಯಲಿದೆ.

ಭಾನುವಾರ ನಡೆದ ಐಪಿಎಲ್ ಆಡಳಿತ ಸಮಿತಿ ಸಭೆಯಲ್ಲಿ ಈ ಕುರಿತು ತೀರ್ಮಾನ ಕೈಗೊಳ್ಳಲಾಯಿತು. ವೇಳಾಪಟ್ಟಿಯನ್ನೂ ಬಿಡುಗಡೆ ಮಾಡಲಾಯಿತು. ಬೆಂಗಳೂರು, ಮುಂಬೈ, ಅಹಮದಾಬಾದ್, ಚೆನ್ನೈ, ದೆಹಲಿ ಮತ್ತು ಕೋಲ್ಕತ್ತ ನಗರಗಳಲ್ಲಿ ಪಂದ್ಯಗಳು ನಡೆಯಲಿವೆ.



ಚೆನ್ನೈನಲ್ಲಿ ನಡೆಯಲಿರುವ ಉದ್ಘಾಟನೆ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಮುಂಬೈ ಇಂಡಿಯನ್ಸ್ ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಗಳು ಮುಖಾಮುಖಿಯಾಗಲಿವೆ. ಮೇ 30ರಂದು ಅಹಮದಾಬಾದಿನ ಮೊಟೇರಾದ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಫೈನಲ್ ಪಂದ್ಯ ನಡೆಯಲಿದೆ.

ಪ್ರೇಕ್ಷಕರಿಗಿಲ್ಲ ಅವಕಾಶ: ಕೋವಿಡ್ ಪ್ರಸರಣ ತಡೆ ನಿಯಮದ ಕಾರಣ ಐಪಿಎಲ್ ಪಂದ್ಯಗಳು ನಡೆಯುವ ಆರು ಸ್ಥಳಗಳಲ್ಲಿಯೂ ಪ್ರೇಕ್ಷಕರಿಗೆ ಪ್ರವೇಶ ನಿಷೇಧಿಸಲಾಗಿದೆ.

ಮುಂಬೈನಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆಯು ಪ್ರತಿದಿನ ಹೆಚ್ಚಾಗುತ್ತಿವೆ. ಆದರೆ ಎಲ್ಲ ಸುರಕ್ಷತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲಾಗಿದ್ದು ಪಂದ್ಯಗಳನ್ನು ನಡೆಸಲು ಸದ್ಯ ತೀರ್ಮಾನಿಸಲಾಗಿದೆ. ಪರಿಸ್ಥಿತಿಯ ಕುರಿತು ಅವಲೋಕಿಸಲಾಗುತ್ತಿದೆ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ಸಂಜೆಯ ಪಂದ್ಯದ ಸಮಯದಲ್ಲಿಯೂ ಬದಲಾವಣೆ ಮಾಡಲಾಗಿದೆ. ಈ ಮೊದಲು ಇದ್ದ ರಾತ್ರಿ 8 ಗಂಟೆ ಬದಲು 7.30ಕ್ಕೆ ಪಂದ್ಯಗಳು ಆರಂಭವಾಗಲಿವೆ. ಮಧ್ಯಾಹ್ನದ ಪಂದ್ಯಗಳು 3.30ಕ್ಕೆ ನಡೆಯಲಿವೆ. ಹೋದ ವರ್ಷ ಭಾರತದಲ್ಲಿ ಕೊರೊನಾ ಪ್ರಕರಣಗಳ ಸಂಖ್ಯೆ ಹೆಚ್ಚಿದ್ದ ಕಾರಣ, ಐಪಿಎಲ್ ಟೂರ್ನಿಯನ್ನು ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ ಆಯೋಜಿಸಲಾಗಿತ್ತು.

ವೇಳಾಪಟ್ಟಿ 11

ಚಿನಕುರಳಿ

ಪ್ರಕಾಶ್ ಶೆಟ್ಟಿ



ಇಂದಿನ ಪಾಡ್‌ಕಾಸ್ಟ್ ವಿಶೇಷ
ಪ್ರಜಾವಾಣಿ ಕನ್ನಡ ಧ್ವನಿ
ವಚನವಾಣಿ
ಪ್ರತೀ ದಿನ: ದಿನದ ಸೂಕ್ತಿ, ಸಂಪಾದಕೀಯ, ಪ್ರಚಲಿತ
Prajavani.net/podcast

ಒಳ ಪುಟಗಳು
'ಸರ್ಕಾರ ಸ್ವಯಂಪ್ರೇರಿತ ದೂರು ದಾಖಲಿಸಲಿ' 4
'ಸಾರ್ವಜನಿಕ ಸ್ಥಳ ಈಗಲೂ ಮಹಿಳೆಯರಿಗೆ ಸುರಕ್ಷಿತವಲ್ಲ' 6









ಕೋರಮಂಗಲ ರಾಜಕಾಲುವೆ ಒತ್ತುವರಿ ತೆರವಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋರಮಂಗಲ ಕಣಿವೆಯ ರಾಜಕಾಲುವೆ ವ್ಯಾಪ್ತಿಯಲ್ಲಿನ ಎಲ್ಲ ರೀತಿಯ ಒತ್ತುವರಿಯನ್ನು ತೆರವುಗೊಳಿಸಬೇಕು ಎಂದು ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ (ಎನ್‌ಜಿಟಿ) ಉಸ್ತುವಾರಿ ಸಮಿತಿ ಸೂಚನೆ ನೀಡಿದೆ.

ಚಿಕ್ಕಲಾಲ್‌ಬಾಗ್‌ನಿಂದ ವರ್ತೂರು ಕೆರೆಯವರೆಗಿನ 11.4 ಕಿಲೋ ಮೀಟರ್ ಉದ್ದದ ಕೋರಮಂಗಲ ಕಣಿವೆಯ ರಾಜಕಾಲುವೆ ಅಭಿವೃದ್ಧಿಗೆ ಅಧಿಕಾರಿಗಳು ತ್ವರಿತ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸೂಚಿಸಿದೆ.

ರಾಜಕಾಲುವೆ ಅಭಿವೃದ್ಧಿ ಕುರಿತು ನಿವೃತ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ನೇತೃತ್ವದ ಉಸ್ತುವಾರಿ ಸಮಿತಿ ಎನ್‌ಜಿಟಿಗೆ ವರದಿ ಸಲ್ಲಿಸಿದೆ. ರಾಜಕಾಲುವೆಗಳ ಮೂಲ ಅಗಲವನ್ನು ಕಾಪಾಡಿಕೊಳ್ಳಬೇಕು ಮತ್ತು ಭಾರಿ ಮಳೆಯಾದ ಸಂದರ್ಭದಲ್ಲಿ ಪ್ರವಾಹವಾಗದಂತೆ ಯೋಜನೆ ರೂಪಿಸಬೇಕು. ಜತೆಗೆ, ರಾಜಕಾಲುವೆಗೆ ತ್ಯಾಜ್ಯ ಪ್ರವೇಶಿಸದಂತೆ ಸುಸ್ಥಿರ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಮಿತಿ ನಿರ್ದೇಶನ ನೀಡಿದೆ.

ಹೆಚ್ಚಿನ ಲಾಭಾಂಶ ಆಮಿಷಕ್ಕೆ ಒಳಗಾಗಿ ಹಣ ಕಳೆದುಕೊಂಡವರಿಗೆ ಸಿಹಿಸುದ್ದಿ

‘ಐಎಂಎ’ ವಂಚಿತರಿಗೆ ₹ 50 ಸಾವಿರ

• ರಾಜೇಶ್ ರೈ ಚಟ್ಲ

ಪ್ರಜಾವಾಣಿ ವಿಶೇಷ

ಬೆಂಗಳೂರು: ಹೆಚ್ಚಿನ ಲಾಭಾಂಶದ ಆಮಿಷಕ್ಕೆ ಒಳಗಾಗಿ ಐಎಂಎ (ಐ ಮಾನಿಟರಿ ಅಡ್ವೈಸರಿ) ಕಂಪನಿಯಲ್ಲಿ ಹಣ ಠೇವಣಿ ಇಟ್ಟು ಮೋಸ ಹೋಗಿದ್ದ ಗ್ರಾಹಕರಿಗೆ ಆ ಕಂಪನಿಯಿಂದ ಜಪ್ತಿ ಮಾಡಿದ ಆಸ್ತಿ, ಚಿನ್ನಾಭರಣ ಮಾರಾಟದಿಂದ ಬಂದ ಹಣವನ್ನು ಹಂಚಲು ರಾಜ್ಯ ಸರ್ಕಾರ ನೇಮಿಸಿದ ಸಕ್ಷಮ ಪ್ರಾಧಿಕಾರ ಮುಂದಾಗಿದೆ.

ಈ ಪ್ರಕರಣದ ವಿಚಾರಣೆ ನಡೆಸುತ್ತಿರುವ ವಿಶೇಷ ನ್ಯಾಯಾಲಯದ ಆದೇಶದಂತೆ ವಂಚನೆಗೆ ಒಳಗಾದ ಠೇವಣಿದಾರರಿಗೆ ಗರಿಷ್ಠ ₹ 50 ಸಾವಿರ ಹಂಚಿಕೆ ಆಗಲಿದೆ. ಅತೀ ಕಡಿಮೆ ಹಣ ಕಳೆದುಕೊಂಡಿರುವವರ ಖಾತೆಗೆ ಮೊದಲು ಹಣ ಜಮೆ ಆಗಲಿದೆ.

₹ 50 ಸಾವಿರಕ್ಕಿಂತ ಕಡಿಮೆ ಹಣ ವಂಚನೆಗೆ ಒಳಗಾದ 11,492 ಠೇವಣಿದಾರರಿದ್ದಾರೆ. ಅವರ ಕ್ಲೈಮ್ ಅರ್ಜಿಗಳನ್ನು ಸಂಪೂರ್ಣ ಸೆಟ್ಲ್ ಮಾಡಲು ₹ 32 ಕೋಟಿ ಅಗತ್ಯವಿದೆ. ಕಂಪನಿಯಿಂದ ವಶಪಡಿಸಿಕೊಂಡ ₹ 10 ಕೋಟಿ ಸದ್ಯ ಲಭ್ಯವಿದೆ. ಈ ಮೊತ್ತದಲ್ಲಿ ಸುಮಾರು 3,500 ಠೇವಣಿದಾರರಿಗೆ, ಅವರು ಕಳೆದುಕೊಂಡ ಹಣ ಸಂಪೂರ್ಣ ಸಿಗಲಿದೆ.

ಈ ಬಗ್ಗೆ ‘ಪ್ರಜಾವಾಣಿ’ಗೆ ಮಾಹಿತಿ ನೀಡಿದ ಐಎಂಎ ಸಕ್ಷಮ ಪ್ರಾಧಿಕಾರದ ಮುಖ್ಯಸ್ಥ ಹರ್ಷ ಗುಪ್ತ, ‘ವಂಚಿತರಾದ 65,258 ಮಂದಿ ಆನ್‌ಲೈನ್ ಮೂಲಕ ಕ್ಲೈಮ್ ಅರ್ಜಿ ಸಲ್ಲಿಸಿದ್ದಾರೆ. ಅಷ್ಟೂ ಅರ್ಜಿಗಳಿಗೆ ಹಣ ಮರು ಪಾವತಿಸಲು ₹ 2,695 ಕೋಟಿ ಅಗತ್ಯವಿದೆ. ಆದರೆ, ಅರ್ಜಿ ಸಲ್ಲಿಸಿರುವ 10,201 ಠೇವಣಿದಾರರು, ಠೇವಣಿ ಇಟ್ಟಿದ್ದ ಮೊತ್ತದಷ್ಟು ಹಣವನ್ನು ಲಾಭಾಂಶ ರೀತಿಯಲ್ಲಿ ಈಗಾಗಲೇ (ವಂಚನೆ ಪ್ರಕರಣ ಬಯಲಾಗುವ ಮೊದಲೇ) ಪಡೆದಿದ್ದಾರೆ. ಅವರಿಗೆ ಯಾವುದೇ ಹಣ ಪಾವತಿ ಇಲ್ಲ. ಅವರನ್ನು ಹೊರತುಪಡಿಸಿದರೆ, ಉಳಿದ, 55,057 ಅರ್ಜಿದಾರರಿಗೆ ಪಾವತಿಸಲು ₹1,372 ಕೋಟಿ ಬೇಕಾಗಿದೆ’ ಎಂದರು.



> ವಂಚಿತ ಎಲ್ಲರಿಗೂ ಏಕಕಾಲದಲ್ಲಿ ₹ 50 ಸಾವಿರ ಸಿಗದು. ಸದ್ಯ ಲಭ್ಯ ಮೊತ್ತವನ್ನು ಹಂಚಲಾಗುವುದು. ಹಣ ಲಭ್ಯವಾದಂತೆ ಉಳಿದವರಿಗೂ ಹಣ ಸಿಗಲಿದೆ
>
> **ಹರ್ಷ ಗುಪ್ತ**
> ಮುಖ್ಯಸ್ಥರು, ಐಎಂಎ ಸಕ್ಷಮ ಪ್ರಾಧಿಕಾರ



‘ವಂಚನೆ ಮೊತ್ತ ಎಷ್ಟೇ ಇದ್ದರೂ ಗರಿಷ್ಠ ₹ 50 ಸಾವಿರಕ್ಕೆ ಮಿತಿಗೊಳಿಸಿ ಕ್ಲೈಮ್‌ದಾರರ ಖಾತೆಗಳಿಗೆ ಹಣ ವರ್ಗಾಯಿಸಲು ವಿಶೇಷ ನ್ಯಾಯಾಲಯ ಅನುಮತಿ ನೀಡಿದೆ. ಗ್ರಾಹಕರು ಇಟ್ಟಿದ್ದ ಠೇವಣಿ ಹಣ ಮತ್ತು ಈಗಾಗಲೇ ಪಡೆದ ಲಾಭಾಂಶವನ್ನು ಹೊಂದಾಣಿಕೆ ಮಾಡಿ, ಕೊಡಬೇಕಾದ ಮೊತ್ತವನ್ನು ಲೆಕ್ಕ ಹಾಕಲಾಗುತ್ತದೆ’ ಎಂದು ಅವರು ಹೇಳಿದರು.

‘ಐಎಂಎಗೆ ಸೇರಿದ ಆಸ್ತಿ, ಚಿನ್ನಾಭರಣ ಜಪ್ತಿಯನ್ನು ಕೋರ್ಟ್ ದೃಢೀಕರಿಸಿ, ಅವುಗಳ ಮಾರಾಟದಿಂದ ಇನ್ನಷ್ಟು ಹಣ ಬಂದ ಬಳಿಕ ಕೋರ್ಟ್ ಆದೇಶದಂತೆ ಮುಂದೆ ಕ್ಲೈಮ್‌ದಾರರ ಖಾತೆಗೆ ಮತ್ತಷ್ಟು ಹಣ ವರ್ಗಾಯಿಸಲಾಗುವುದು. ಗರಿಷ್ಠ ₹ 50 ಸಾವಿರ ಪಾವತಿ ಪ್ರಕ್ರಿಯೆಯಲ್ಲಿ ಅತೀ ಕಡಿಮೆ ಹಣ ಪಾವತಿಸಬೇಕಾದ ಠೇವಣಿದಾರರಿಗೆ ಮೊದಲು ಹಣ ಸಿಗಲಿದೆ’ ಎಂದು ತಿಳಿಸಿದರು.

‘ಕ್ಲೈಮ್‌ದಾರರ ಬ್ಯಾಂಕ್ ಖಾತೆಗೆ ವಾರದೊಳಗೆ ಹಣ ಜಮೆ ಪ್ರಕ್ರಿಯೆ ಆರಂಭವಾಗಲಿದೆ. ಜಮೆ ಆಗುತ್ತಿದ್ದಂತೆ ಠೇವಣಿದಾರರ ಮೊಬೈಲ್ ಸಂಖ್ಯೆಗೆ ಸಂದೇಶ ರವಾನೆಯಾಗಲಿದೆ. ಪ್ರಾಧಿಕಾರ ವೆಬ್‌ಸೈಟ್‌ನಲ್ಲೂ ಈ ಬಗ್ಗೆ ಪರಿಶೀಲಿಸಬಹುದು. ಸದ್ಯ, ಜಪ್ತಿ ಮಾಡಲಾದ ₹ 475 ಕೋಟಿ ಮೊತ್ತದ ಆಸ್ತಿಯಲ್ಲಿ ಫೆಬ್ರುವರಿ ಅಂತ್ಯದವರೆಗೆ ₹ 10 ಕೋಟಿ ಮೌಲ್ಯದ ಆಸ್ತಿಯನ್ನು ವಿಶೇಷ ಕೋರ್ಟ್ ದೃಢೀಕರಿಸಿದೆ. ವಿವರಗಳಿಗೆ ಸಹಾಯವಾಣಿ (080-46885959) ಸಂಪರ್ಕಿಸಬಹುದು’ ಎಂದೂ ವಿವರಿಸಿದರು.

ಸುದ್ದಿ 2 ನಿಮಿಷ

ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ದುಂದು ವೆಚ್ಚ ತಡೆಗೆ ಸಿ.ಎಂಗೆ ಪತ್ರ

ಬೆಂಗಳೂರು: ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಉದ್ಘಾಟನಾ ಹಾಗೂ ಸಮಾರೋಪ ಸಮಾರಂಭಕ್ಕೆ ₹2 ಕೋಟಿ ವೆಚ್ಚ ಮಾಡಲಾಗುತ್ತಿದೆ. ಪ್ರಸ್ತುತ ಇರುವ ಕೋವಿಡ್ ಹಾಗೂ ಆರ್ಥಿಕ ಸ್ಥಿತಿಯನ್ನು ಗಮನದಲ್ಲಿ ಇರಿಸಿಕೊಂಡು ಈ ದುಂದು ವೆಚ್ಚಕ್ಕೆ ಕಡಿವಾಣ ಹಾಕಿ ಎಂದು ವಿಧಾನ ಪರಿಷತ್ ಸದಸ್ಯ ಮೋಹನ್ ಕೊಂಡಜ್ಜಿ ಅವರು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಪತ್ರ ಬರೆದಿದ್ದಾರೆ.

‘ಚಿತ್ರೋತ್ಸವಕ್ಕೆ ಪ್ರತಿ ವರ್ಷ ಸರ್ಕಾರ ₹5 ಕೋಟಿ ನೀಡುತ್ತಿದೆ. ಚಿತ್ರ ನಿರ್ಮಾಪಕನಾಗಿ ಹಾಗೂ ಸಾಮಾನ್ಯ ಪ್ರತಿನಿಧಿಯಾಗಿ ಈ ಚಿತ್ರೋತ್ಸವಕ್ಕೆ ಭೇಟಿ ನೀಡುತ್ತಿರುತ್ತೇನೆ. ದುಂದುವೆಚ್ಚ ಮಾಡಿ ನಡೆಸುವ ಈ ಉದ್ಘಾಟನಾ ಹಾಗೂ ಸಮಾರೋಪ ಕಾರ್ಯಕ್ರಮವು ಸಿನಿಮಾ ಸಂಸ್ಕೃತಿಯನ್ನು ಉತ್ತೇಜಿಸಲು ಯಾವುದೇ ಸಹಾಯ ಮಾಡುತ್ತಿಲ್ಲ. ಹೀಗಾಗಿ ಈ ಖರ್ಚಿಗೆ ಕಡಿವಾಣ ಹಾಕಿ, ಈ ಹಣವನ್ನು ಚಲನಚಿತ್ರ ಅಕಾಡೆಮಿಗೆ ನೀಡಿ. ಈ ಹಣವನ್ನು ಬಳಸಿಕೊಂಡು, ಅಕಾಡೆಮಿಯು ಮುಂದಿನ ದಿನಗಳಲ್ಲಿ ಸಣ್ಣ ನಗರ ಹಾಗೂ ರಾಜ್ಯದಾದ್ಯಂತ ಚಿತ್ರೋತ್ಸವಗಳನ್ನು ಆಚರಿಸಲು ಬಳಕೆಯಾಗಲಿ’ ಎಂದು ಅವರು ಉಲ್ಲೇಖಿಸಿದ್ದಾರೆ.

‘ಕಾರ್ಯಕ್ರಮವನ್ನು ಸರಳವಾಗಿ ಬ್ಯಾಂಕ್ವೆಟ್ ಹಾಲ್‌ನಲ್ಲೇ ನಡೆಸಬಹುದಲ್ಲವೇ. ಕಾರ್ಯಕ್ರಮ ಆಯೋಜನೆ ಜವಾಬ್ದಾರಿಯನ್ನು ಖಾಸಗಿ ಸಂಸ್ಥೆಯೊಂದಕ್ಕೆ ನೀಡಲಾಗಿದೆ. ಚಲನಚಿತ್ರ ಅಕಾಡೆಮಿ ಸದಸ್ಯರ ಸಭೆ ನಡೆಸದೇ ಇಂತಹ ನಿರ್ಧಾರಗಳನ್ನು ಕೈಗೊಳ್ಳಲಾಗುತ್ತಿದೆ ಎಂಬ ಮಾಹಿತಿ ದೊರಕಿದೆ’ ಎಂದು ಕೊಂಡಜ್ಜಿ ಹೇಳಿದರು.

ಈ ಕುರಿತು ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೂ ಪತ್ರ ಬರೆದಿದ್ದೇನೆ ಎಂದರು.

ಗಾಯಿತ್ರಿ ‘ಅತ್ಯುತ್ತಮ ಶಿಕ್ಷಕಿ’



ಬೆಂಗಳೂರು: ಅಂತರರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ರೋಟರಿ ಇಂದಿರಾನಗರ ನೀಡುವ 2020–21ನೇ ಸಾಲಿನ ‘ಜಿ.ಎಸ್. ಖನ್ನಾ ಅತ್ಯುತ್ತಮ ಶಿಕ್ಷಕಿ’ ಪ್ರಶಸ್ತಿಗೆ ಇಂದಿರಾನಗರದ ಕಾವೇರಿ ಶಾಲೆಯ ಆರ್.ಗಾಯಿತ್ರಿ ಪಾತ್ರರಾಗಿದ್ದಾರೆ.

ಭಾನುವಾರ ನಡೆದ ಸಮಾರಂಭದಲ್ಲಿ ಗಾಯಿತ್ರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಹಿಂದಿನ ಒಂದು ದಶಕದಿಂದ ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಗಾಯಿತ್ರಿ, 1 ರಿಂದ 8ನೇ ತರಗತಿಯ ವಿದ್ಯಾರ್ಥಿಗಳಿಗೆ ವಿಶೇಷ ವಿಧಾನಗಳ ಮೂಲಕ ಬೋಧನೆ ಮಾಡಿ ಶಾಲೆಯು ಉತ್ತಮ ಫಲಿತಾಂಶ ಪಡೆಯಲು ನೆರವಾಗಿದ್ದಾರೆ.

ಬಿಗ್‌ಬಾಸ್ ಮನೆಯಿಂದ ಧನುಶ್ರೀ ಹೊರಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಗ್‌ಬಾಸ್ ಎಂಟನೇ ಆವೃತ್ತಿಯ ಮೊದಲ ವಾರ ಪೂರ್ಣಗೊಂಡಿದ್ದು, ಯಾರು ಹೊರಹೋಗುತ್ತಾರೆ ಎನ್ನುವ ಕೌತುಕಕ್ಕೆ ತೆರೆಬಿದ್ದಿದೆ. ಭಾನುವಾರ ಟಿಕ್‌ಟಾಕ್ ಸ್ಟಾರ್ ಧನುಶ್ರೀ ಮನೆಯಿಂದ ಹೊರಬಿದ್ದಿದ್ದಾರೆ.



8ನೇ ಆವೃತ್ತಿಯ ಮೊದಲ ‘ವಾರದ ಕಥೆ ಕಿಚ್ಚನ ಜೊತೆ’ ಶನಿವಾರ ಹಾಗೂ ಭಾನುವಾರ ನಡೆದಿದ್ದು, ಧನುಶ್ರೀ ಅವರು ಮನೆಯಿಂದ ಹೊರಹೋಗಲು ನಾಮಿನೇಟ್ ಆಗಿ ಡೇಜಂರ್ ಝೋನ್‌ನಲ್ಲಿ ಇದ್ದರು. ನಿಧಿ ಸುಬ್ಬಯ್ಯ, ಶುಭಾ ಪೂಂಜ, ವಿಶ್ವನಾಥ್ ಹಾವೇರಿ, ರಘು ಗೌಡ, ನಿರ್ಮಲಾ ಚೆನ್ನಪ್ಪ ಕೂಡಾ ನಾಮಿನೇಟ್ ಆಗಿದ್ದರು. ಇವರೆಲ್ಲರಿಗೂ ಜನರಿಂದ ಹೆಚ್ಚಿನ ಮತಗಳು ಸಿಕ್ಕಿದ ಕಾರಣ ಅವರು ಸೇಫ್ ಝೋನ್‌ಗೆ ಮರಳಿದ್ದರು. ಕಡಿಮೆ ಮತಗಳನ್ನು ಪಡೆದ ಧನುಶ್ರೀ ಮನೆಯಿಂದ ಹೊರಕ್ಕೆ ಬಂದಿದ್ದಾರೆ.

‘ಮನೆಯಿಂದ ಹೊರಬಿದ್ದಿರುವುದಕ್ಕೆ ಬೇಸರವಿದೆ. ಇದಕ್ಕಿಂತ ಉತ್ತಮವಾಗಿ ನಾನು ಪ್ರದರ್ಶನ ನೀಡಬಹುದಿತ್ತು. ಟಾಸ್ಕ್‌ಗಳಲ್ಲಿ ನಾನು ಹಿಂದೆ ಬಿದ್ದೆ. ಇತರರು ನನಗಿಂತ ಚೆನ್ನಾಗಿ ಸವಾಲು ಎದುರಿಸಿದರು. ನಾನು ಮನೆಯೊಳಗೆ ಹೆಚ್ಚಿನ ಜನರೊಡನೆ ಸ್ನೇಹ ಬೆಳೆಸಲಿಲ್ಲ’ ಎಂದಿದ್ದಾರೆ.

ಇನ್ನು ಮನೆಯೊಳಗಿನ ಸದಸ್ಯರ ಕುರಿತು ಅಭಿಪ್ರಾಯ ವ್ಯಕ್ತಪಡಿಸಿರುವ ಧನುಶ್ರೀ, ‘ನಿರ್ಮಲಾ ಅವರ ವರ್ತನೆ ಭಿನ್ನವಾಗಿದೆ. ಮುಂದಿನ ವಾರ ಖಂಡಿತವಾಗಿಯೂ ಇವರು ಮನೆಯಿಂದ ಹೊರಬೀಳುತ್ತಾರೆ’ ಎಂದಿದ್ದಾರೆ. ಲ್ಯಾಗ್ ಮಂಜು ಕುರಿತು ಹೇಳಿರುವ ಧನುಶ್ರೀ, ‘ಇನ್ನೊಬ್ಬರ ಭಾವನೆಗಳನ್ನು ನೋಯಿಸಿ ಅವರನ್ನು ಅಪಹಾಸ್ಯ ಮಾಡುವುದಕ್ಕೆ ಯಾವುದೇ ಅರ್ಥವಿಲ್ಲ. ಇದು ಸೂಕ್ತವೂ ಅಲ್ಲ’ ಎಂದಿದ್ದಾರೆ. ‘ನನ್ನ ಮೇಕ್‌ಅಪ್ ಕುರಿತು ಪ್ರಶಾಂತ್ ಸಂಬರಗಿ ಹೇಳಿರುವುದು ಸತ್ಯ. ಆದರೆ ಬೇರೆಯವರಿಗಾಗಿ ನಾನು ಬದಲಾಗಲು ಸಾಧ್ಯವಿಲ್ಲ’ ಎಂದು ಹೇಳಿದ್ದಾರೆ.

ಮನೆಯಿಂದ ಹೊರಹೋಗುವ ಮುನ್ನ ಮುಂದಿನ ವಾರದ ನಾಮಿನೇಷನ್‌ನಿಂದ ರಘು ಅವರನ್ನು ಧನುಶ್ರೀ ಸೇಫ್ ಮಾಡಿದ್ದಾರೆ.

ಕೊರತೆ ಬಜೆಟ್ ಸಾಧ್ಯತೆ

ಒಂದನೇ ಪುಟದಿಂದ...

ರಾಜ್ಯದ ಸಾಲದ ಪ್ರಮಾಣ ಈಗ ₹ 3.68 ಲಕ್ಷ ಕೋಟಿ ಇದೆ. ₹ 33 ಸಾವಿರ ಕೋಟಿ ಸಾಲ ತೆಗೆದುಕೊಂಡರೆ, ಒಟ್ಟು ಸಾಲವು ₹ 4 ಲಕ್ಷ ಕೋಟಿ ಮೀರಲಿದೆ ಎಂದು ಹೇಳಲಾಗಿದೆ.

‘ಆರ್ಥಿಕ ಶಿಸ್ತು ಇಲ್ಲಿಯವರೆಗೆ ಹಳಿ ತಪ್ಪಿರಲಿಲ್ಲ. ಈಗ ₹46 ಸಾವಿರ ಕೋಟಿ ಹಣಕಾಸು ಕೊರತೆ ಇದೆ. ₹33 ಸಾವಿರ ಕೋಟಿ ಸಾಲ ಪಡೆದರೆ, ಕೊರತೆ ಪ್ರಮಾಣ ₹93 ಸಾವಿರ ಕೋಟಿ ದಾಟಬಹುದು. ಬದ್ಧತಾ ವೆಚ್ಚದ ಪ್ರಮಾಣ ಹೆಚ್ಚಾಗಿದ್ದು, ಅಭಿವೃದ್ಧಿ ಕಾರ್ಯಗಳಿಗೆ ಅತ್ಯಲ್ಪ ಹಣ ವೆಚ್ಚ ಮಾಡಲಾಗುತ್ತಿದೆ. ಬಡವರಿಗೆ ಮನೆ, ರಸ್ತೆ, ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಳ್ಳುವುದು ಹೇಗೆ’ ಎಂದು ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

ಕಡಿಯಬೇಕಾದ ಮರಗಳ ಸಂಖ್ಯೆ ಶೇ 30ರಷ್ಟು ಇಳಿಕೆ

ರಸ್ತೆಗಳ ವಿಸ್ತರಣೆ ಕಾಮಗಾರಿ: ಜಿಕೆವಿಕೆ ತಜ್ಞರಿಂದ ಅಧ್ಯಯನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ (ಕೆಆರ್‌ಡಿಸಿಎಲ್) ರಸ್ತೆ ವಿಸ್ತರಣೆ ಮಾಡುತ್ತಿರುವ ಆರು ಕಾಮಗಾರಿಗಳ ಬಗ್ಗೆಯೂ ಕೂಲಂಕಷವಾಗಿ ಅಧ್ಯಯನ ನಡೆಸಿರುವ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಹಾಗೂ ಗಾಂಧಿ ಕೃಷಿವಿಜ್ಞಾನ ಕೇಂದ್ರದ (ಜಿಕೆವಿಕೆ) ತಜ್ಞರ ಸಮಿತಿ ಈ ಹಿಂದೆ ಕಡಿಯಲು ಉದ್ದೇಶಿಸಿದ್ದ ಶೇ 30ರಷ್ಟು ಮರಗಳನ್ನು ಉಳಿಸಿಕೊಳ್ಳಬಹುದು ಎಂದು ಶಿಫಾರಸು ಮಾಡಿದೆ.

ನಗರದ ಹೊರವಲಯಗಳಲ್ಲಿ ವಿವಿಧ ರಸ್ತೆಗಳ ವಿಸ್ತರಣೆಗಾಗಿ 2,300ಕ್ಕೂ ಅಧಿಕ ಮರಗಳನ್ನು ಕಡಿದಿರುವ ಕೆಆರ್‌ಡಿಸಿಎಲ್ ಹೈಕೋರ್ಟ್ ಮಧ್ಯಪ್ರವೇಶ ಮಾಡದೇ ಇರುತ್ತಿದ್ದರೆ, ಕರ್ನಾಟಕ ಮರಗಳ ಸಂರಕ್ಷಣಾ ಕಾಯ್ದೆಯು ಬೆಂಗಳೂರು ಹೊರವಲಯಕ್ಕೆ ಅನ್ವಯವಾಗದು ಎಂದು ಹೇಳಿಕೊಂಡು ಇನ್ನೂ 7500ಕ್ಕೂ ಅಧಿಕ ಮರಗಳ ಮಾರಣ ಹೋಮಕ್ಕೆ ಸಜ್ಜಾಗಿತ್ತು. ಅರಣ್ಯ ಇಲಾಖೆಯೂ 5,297 ಮರಗಳನ್ನು ಕಡಿಯಲು ಅನುಮತಿ ನೀಡಿತ್ತು. ಕಡಿಯಬೇಕಾಗುವ ಮರಗಳ ಸಂಖ್ಯೆಯನ್ನು ತಜ್ಞರ ಸಮಿತಿ 1,721ಕ್ಕೆ ಇಳಿಸಿದೆ.

ಕೆಆರ್‌ಡಿಸಿಎಲ್ ಕೈಗೆತ್ತಿಕೊಂಡಿರುವ ರಸ್ತೆ ವಿಸ್ತರಣೆ ಕಾಮಗಾರಿಗಳಿಗಾಗಿ ತೆರವುಗೊಳಿಸಬೇಕಾಗುವ ಮರಗಳ ಕುರಿತು ಅಧ್ಯಯನ ಕೈಗೊಳ್ಳಲು ಹೈಕೋರ್ಟ್ ಆದೇಶದ ಮೇರೆಗೆ ತಜ್ಞರ ಸಮಿತಿಯನ್ನು ರಚಿಸಲಾಗಿತ್ತು. ಅನೇಕ ಬಾರಿ ಕ್ಷೇತ್ರ ಪರಿವೀಕ್ಷಣೆ ನಡೆಸಿ ಅಧ್ಯಯನ ಕೈಗೊಂಡಿರುವ ತಜ್ಞರ ಬಳಿಕ ಸಮಿತಿಯು ಉಳಿಸಿಕೊಳ್ಳಬಹುದಾದ ಹಾಗೂ ಸ್ಥಳಾಂತರ ಮಾಡಬಹುದಾದ ಮರಗಳ ಸಂಖ್ಯೆಯನ್ನು ಹೆಚ್ಚಿಸಿದೆ. ಸಮಿತಿಯ ವರದಿ ಪ್ರಕಾರ, ನಗರದ ಹೊರವಲಯದಲ್ಲಿ ವಿವಿಧ ರಸ್ತೆ ವಿಸ್ತರಣೆ ಕಾಮಗಾರಿಗಳ ಸಲುವಾಗಿ ಕೆ.ಆರ್.ಪುರ, ಯಲಹಂಕ, ದೇವನಹಳ್ಳಿ, ನೆಲಮಂಗಲ, ದೊಡ್ಡಬಳ್ಳಾಪುರ, ಮಲ್ಲೇಶ್ವರ ಹಾಗೂ ರಾಮನಗರವೂ ಸೇರಿದಂತೆ ವಿವಿಧ ಅರಣ್ಯ ವಲಯಗಳಲ್ಲಿ 2,347 ಮರಗಳು ರಸ್ತೆ ಪಕ್ಕದಲ್ಲಿವೆ.

ಮರಗಳ ತೆರವಿಗೆ ಸಂಬಂಧಿಸಿದ ಅರ್ಜಿಯ ವಿಚಾರಣೆ ವೇಳೆ ತನ್ನ ವಾದವನ್ನೂ ಆಲಿಸುವಂತೆ ಬೆಂಗಳೂರು ಎನ್‌ವಿರಾನ್‌ಮೆಂಟ್ ಟ್ರಸ್ಟ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು.

‘ಕರ್ನಾಟಕ ಮರಗಳ ಸಂರಕ್ಷಣಾ ಕಾಯ್ದೆಯ ವ್ಯಾಪ್ತಿ ಬೆಂಗಳೂರು ಮಹಾನಗರ ಪಾಲಿಕೆಗೆ ಸೀಮಿತವಾಗಿದೆ. ನಗರದ ಹೊರಗಿನ ಪ್ರದೇಶಗಳಿಗೆ ಅನ್ವಯಿಸುವುದಿಲ್ಲ’ ಎಂಬುದು ಕೆಆರ್‌ಡಿಸಿಎಲ್ ವಾದವಾಗಿತ್ತು. ಆದಾಗ್ಯೂ ಹೈಕೋರ್ಟ್, ‘ಮರಗಳನ್ನು ಉಳಿಸಿಕೊಳ್ಳುವ ಸಾಧ್ಯತೆಯನ್ನು ಸಂಸ್ಥೆಯು ಪರಿಗಣಿಸದ ಕಾರಣ ವಿಸ್ತೃತ ಅಧ್ಯಯನ ನಡೆಸಿ’ ಎಂದು ಜಿಕೆವಿಕೆಗೆ ಆದೇಶ ಮಾಡಿತ್ತು.

ಸ್ಥಳಾಂತರಗೊಳಿಸಬಹುದಾದ ಮರವನ್ನು ಕಡಿದುದಕ್ಕಾಗಿ ಕೆಆರ್‌ಡಿಸಿಎಲ್ ವಿರುದ್ಧ ಅರಣ್ಯ ಇಲಾಖೆ ಎಫ್‌ಐಆರ್ ದಾಖಲಿಸಿದೆ.

ಕ್ಯಾನ್ಸರ್ ತಪಾಸಣೆಗೆ ಆದ್ಯತೆ ನೀಡಲು ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರಾರಂಭಿಕ ಹಂತದಲ್ಲಿಯೇ ಸೂಕ್ತ ತಪಾಸಣೆಗಳ ಮೂಲಕ ಕ್ಯಾನ್ಸರ್ ಇರುವುದನ್ನು ಪತ್ತೆ ಮಾಡಿ, ಚಿಕಿತ್ಸೆ ಒದಗಿಸಿದಲ್ಲಿ ಕಾಯಿಲೆ ಗುಣಪಡಿಸಲು ಸಾಧ್ಯ. ಹಾಗಾಗಿ, ರಾಜ್ಯದಾದ್ಯಂತ ಕ್ಯಾನ್ಸರ್ ತಪಾಸಣೆಗೆ ವಿಶೇಷ ಆದ್ಯತೆ ನೀಡಬೇಕು’ ಎಂದು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿರ್ದೇಶಕ ಡಾ.ಸಿ. ರಾಮಚಂದ್ರ ಅವರು ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದಾರೆ.

‘ಕ್ಯಾನ್ಸರ್ ಕಾಯಿಲೆಯ ಬಗ್ಗೆ ಜನರಿಗೆ ಇತ್ತೀಚಿನ ದಿನಗಳಲ್ಲಿ ಅರಿವು ಮೂಡುತ್ತಿದೆ. ಹೀಗಾಗಿ, ತಪಾಸಣೆಗೆ ಬರುವವರ ಸಂಖ್ಯೆ ಸಹ ವರ್ಷದಿಂದ ವರ್ಷಕ್ಕೆ ಏರಿಕೆ ಕಾಣುತ್ತಿದೆ. ಹೆಚ್ಚಿನವರು ರೋಗ ಉಲ್ಬಣಗೊಂಡ ಬಳಿಕ ಸಂಸ್ಥೆಗೆ ಚಿಕಿತ್ಸೆಗಾಗಿ ಬರುತ್ತಾರೆ. ಪ್ರಾರಂಭಿಕ ಹಂತದಲ್ಲಿಯೇ ಪತ್ತೆ ಮಾಡಿದಲ್ಲಿ ಹೆಚ್ಚಿನ ಚಿಕಿತ್ಸೆ ಇಲ್ಲದೆಯೇ ಕಾಯಿಲೆ ವಾಸಿ ಮಾಡಬಹುದು. ಈ ಕಾಯಿಲೆಯು ಎಲ್ಲ ವಯೋಮಾನದವರನ್ನೂ ಕಾಡಲಾರಂಭಿಸಿದೆ. ಆದ್ದರಿಂದ ಕ್ಯಾನ್ಸರ್ ನಿಯಂತ್ರಣಕ್ಕಾಗಿ ಕಾರ್ಯನೀತಿಗಳು ಹಾಗೂ ಕಾರ್ಯತಂತ್ರ ರೂಪಿಸಬೇಕಾಗಿದೆ. ಮುಂದಿನ ದಿನಗಳಲ್ಲಿ ಸರ್ಕಾರವು ತಪಾಸಣೆ ಮತ್ತು ಚಿಕಿತ್ಸೆಗೆ ಹೆಚ್ಚಿನ ಆದ್ಯತೆ ನೀಡಿ, ಹೆಚ್ಚಿನ ಅನುದಾನ ಒದಗಿಸಿದಲ್ಲಿ ಈ ಕಾಯಿಲೆಯನ್ನು ನಿಯಂತ್ರಣ ಸಾಧ್ಯವಾಗುತ್ತದೆ’ ಎಂದರು.

‘ಕ್ಯಾನ್ಸರ್‌ಗೆ ಸಂಬಂಧಿಸಿದಂತೆ ಅಷ್ಟಾಗಿ ಸಂಶೋಧನೆಗಳು ನಡೆಯುತ್ತಿಲ್ಲ. ಹಾಗಾಗಿ, ನಗರದ ಹೊರವಲಯದಲ್ಲಿ 100 ಎಕರೆ ಜಮೀನು ನೀಡುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ. ಅಲ್ಲಿ ಕ್ಯಾನ್ಸರ್‌ಗೆ ಸಂಬಂಧಿಸಿದ ಸಂಶೋಧನೆಗಳನ್ನು ನಡೆಸಲು ಯೋಜನೆ ರೂಪಿಸಲಾಗಿದೆ. ಚಿಕಿತ್ಸೆ ಸಂಬಂಧ ಸಂಸ್ಥೆಗೆ ಬರುವ ರೋಗಿಗಳ ಸಂಖ್ಯೆ ಹೆಚ್ಚುತ್ತಿದ್ದು, ರೋಗಿಗಳ ದಟ್ಟಣೆ ನಿಯಂತ್ರಿಸುವುದು ಸವಾಲಾಗಿದೆ. ಪ್ರತಿನಿತ್ಯ 1,200ರಿಂದ 1,500 ಹೊರರೋಗಿಗಳು ಬರುತ್ತಿದ್ದಾರೆ. ಆದ್ದರಿಂದ ರಾಜ್ಯದಲ್ಲಿ ನಾಲ್ಕು ವಿಭಾಗಗಳಲ್ಲಿ ಸಂಸ್ಥೆಯ ಶಾಖೆ ತೆರೆಯಲು ಕೂಡ ಪ್ರಸ್ತಾವನೆ ಸಲ್ಲಿಸಲಾಗಿದೆ. ಈ ಬಾರಿಯ ಬಜೆಟ್‌ನಲ್ಲಿ ನಮ್ಮ ಬೇಡಿಕೆಗಳು ಈಡೇರುವ ನಿರೀಕ್ಷೆಯಿದೆ’ ಎಂದು ಹೇಳಿದರು.



ಮಹಾ ಶಿವರಾತ್ರಿ ವಿಶೇಷ

ವಿಮೋಚನಾ ವೆಲ್ಫೇರ್ ಟ್ರಸ್ಟ್ ಆಯೋಜಿಸುತ್ತಿರುವ ಮಹಾ ಶಿವರಾತ್ರಿ ವಿಶೇಷ ಪೂಜೆಗೆ ಎಂಟು ಕಲಾವಿದರು 38 ಅಡಿ ಎತ್ತರದ ಶಿವನ ವಿಗ್ರಹವನ್ನು ನಿರ್ಮಿಸಿದ್ದಾರೆ. ವಿಲ್ಸನ್ ಗಾರ್ಡನ್‌ನ ಬಿಬಿಎಂಪಿ ಮೈದಾನದಲ್ಲಿ ಇರಿಸಲಾಗಿರುವ ಈ ವಿಗ್ರಹವನ್ನು ಸಂಘಟಕರು ಪರಿಶೀಲಿಸಿದರು – ಪ್ರಜಾವಾಣಿ ಚಿತ್ರ

ತರಬೇತಿಗೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯವು 2020-21ನೇ ಸಾಲಿನಲ್ಲಿ ಅರೆಕಾಲಿಕ ಗ್ರಂಥಾಲಯ ತರಬೇತುದಾರರಾಗಿ ಕೆಲಸ ಮಾಡಲು ಇಚ್ಛಿಸುವವರಿಂದ ಅರ್ಜಿಗಳನ್ನು ಆಹ್ವಾನಿಸಿದೆ.

ಗ್ರಂಥಾಲಯ ಹಾಗೂ ಮಾಹಿತಿ ವಿಜ್ಞಾನ ವಿಷಯದಲ್ಲಿ ಯಾವುದೇ ಅಂಗೀಕೃತ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿ ಪಡೆದವರು ಅರ್ಜಿ ಸಲ್ಲಿಸಲು ಅರ್ಹರಾಗಿದ್ದಾರೆ.

ಆಸಕ್ತರು ಹೆಸರು, ಜನ್ಮ ದಿನಾಂಕ, ವಿಳಾಸ, ವಿದ್ಯಾರ್ಹತೆ, ಜಾತಿ ಹಾಗೂ ಇತರ ಮಾಹಿತಿಯನ್ನೊಳಗೊಂಡ ಅರ್ಜಿ ನಮೂನೆಯನ್ನು ವಿಶ್ವವಿದ್ಯಾಲಯದ ಜಾಲತಾಣದಿಂದ (www.bcu.ac.in) ಡೌನ್‌ಲೋಡ್ ಮಾಡಿಕೊಳ್ಳಬೇಕು.

ಭರ್ತಿ ಮಾಡಿ ಸ್ವಯಂ ದೃಢೀಕರಿಸಿದ ಅರ್ಜಿಗಳನ್ನು ಕುಲಸಚಿವರು, ಬೆಂಗಳೂರು ನಗರ ವಿಶ್ವವಿದ್ಯಾಲಯ, ಸೆಂಟ್ರಲ್ ಕಾಲೇಜು ಆವರಣ, ಬೆಂಗಳೂರು- 560001ಈ ವಿಳಾಸಕ್ಕೆ ಇದೇ 15ರೊಳಗೆ ಸಲ್ಲಿಸತಕ್ಕದ್ದು.

ಇದೇ 18 ರಂದು ಸಂದರ್ಶನ ನಡೆಯಲಿದೆ. ಈ ವೇಳೆ ಅಭ್ಯರ್ಥಿಗಳು ಮೂಲ ದಾಖಲೆಗಳೊಂದಿಗೆ ಹಾಜರಾಗತಕ್ಕದ್ದು. 2020-21ನೇ ಸಾಲಿನಲ್ಲಿ ಪರೀಕ್ಷೆ ಬರೆದು ಫಲಿತಾಂಶಕ್ಕಾಗಿ ಕಾಯುತ್ತಿರುವವರೂ ಅರ್ಜಿ ಸಲ್ಲಿಸಬಹುದು. ಈ ಹಿಂದೆ ತರಬೇತಿ ಪಡೆದವರು ಹಾಗೂ ಪ್ರಸ್ತುತ ತರಬೇತಿ ಪಡೆಯುತ್ತಿರುವವರು ಅರ್ಜಿ ಸಲ್ಲಿಸುವಂತಿಲ್ಲ.

ತರಬೇತಿಯ ವೇಳೆ ಅಭ್ಯರ್ಥಿಗಳಿಗೆ ₹15 ಸಾವಿರ ಶಿಷ್ಯ ವೇತನ ನೀಡಲಾಗುತ್ತದೆ. ಸಾಮಾನ್ಯ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ತಲಾ ಒಬ್ಬರನ್ನು ನೇಮಕಮಾಡಿಕೊಳ್ಳಲು ಅವಕಾಶವಿದೆ ಎಂದು ಪ್ರಕಟಣೆ ತಿಳಿಸಿದೆ.

ನಗರದಲ್ಲಿ ಇಂದು

ವಿಚಾರ ಸಂಕಿರಣ: ಮಾಧ್ಯಮ ಮತ್ತು ಮಹಿಳೆ, ಭಾಷಣಕಾರರು: ವಿದ್ಯಾ ರಶ್ಮಿ, ಪ್ರಿಯಾಂಕಾ, ಗೌರವ ಅತಿಥಿ: ಡಾ. ಅರ್ಚನಾ ಸುರಾನಾ, ಉದ್ಘಾಟನೆ ಭಾಷಣ: ಎಚ್.ಎನ್. ಸುರೇಶ್, ಉಪಸ್ಥಿತಿ: ಡಾ.ಎನ್.ಎಸ್. ಶ್ರೀಧರಮೂರ್ತಿ, ಡಾ. ಭವಾನಿ ಎಂ.ಆರ್., ಆಯೋಜನೆ ಹಾಗೂ ಸ್ಥಳ: ಸುರಾನಾ ಕಾಲೇಜು, ಬೆಳಿಗ್ಗೆ 11

ವಿಶ್ವ ಮಹಿಳಾ ದಿನಾಚರಣೆ ಉದ್ಘಾಟನೆ: ಐಎಎಸ್ ಅಧಿಕಾರಿ ಉಮಾ ಮಹದೇವನ್, ಮುಖ್ಯ ಅತಿಥಿ: ಕೊಂಡಜ್ಜಿ ಬ. ಷಣ್ಮುಖಪ್ಪ, ಅಧ್ಯಕ್ಷತೆ: ಸ್ಕೌಟ್ಸ್ ಮತ್ತು ಗೈಡ್ಸ್ ಮುಖ್ಯ ಆಯುಕ್ತ ಪಿ.ಜಿ.ಆರ್. ಸಿಂಧ್ಯ, ಗೌರವ ಸಮರ್ಪಣೆ: ಐಪಿಎಸ್ ಅಧಿಕಾರಿ ಇಶಾ ಪಂತ್, ವಿ. ಸುಮಂಗಲಾ, ಕೆ.ಆರ್. ಪಲ್ಲವಿ, ಡಾ.ಎನ್. ಶೈಲಜಾ, ಡಾ. ಶ್ರೀಲಕ್ಷ್ಮಿ ಶ್ರೀನಿವಾಸನ್, ಡಾ. ರಿತು ಗಂಜಿಗಟ್ಟಿ, ಡಾ.ಜಿ.ವಿ. ಸಹನಾ, ಡಾ.ಸಿ. ವಿ. ಕೃಪಾ ವಿಜಯ್, ಯಶೋದಾ ಲೋಕೇಶ್, ಯಶೋದಾ, ಆಯೋಜನೆ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಬೆಳಿಗ್ಗೆ 11

ಮಹಿಳಾ ವಾದ್ಯ ನಾದ ವೈಭವ: ವಿಶ್ವ ಮಹಿಳಾ ದಿನದ ಅಂಗವಾಗಿ ನಾಡಿನ ಪ್ರಸಿದ್ಧ ಮಹಿಳಾ ವಾದ್ಯಗಾರರಿಂದ ವಾದ್ಯ ವೈಭವ, ಉದ್ಘಾಟನೆ: ಕನ್ನಡ ಮತ್ತು ಸಂಸ್ಕೃತಿ ಸಚಿವ ಅರವಿಂದ ಲಿಂಬಾವಳಿ, ಮುಖ್ಯ ಅತಿಥಿಗಳು: ಮಂಜಮ್ಮ ಜೋಗತಿ, ಎಸ್. ರಂಗಪ್ಪ, ವಿದುಷಿ ಅನಸೂಯಾ ಕುಲಕರ್ಣಿ, ತೇಜಸ್ವಿನಿ ಅನಂತಕುಮಾರ್, ಅಧ್ಯಕ್ಷತೆ: ಆನೂರು ಅನಂತ ಕೃಷ್ಣ ಶರ್ಮ, ಆಯೋಜನೆ: ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 9.30



ಮಂಜಮ್ಮ ಜೋಗತಿ

ವಿಶ್ವ ಮಹಿಳಾ ದಿನಾಚರಣೆ: 111 ಮಹಿಳಾ ಸಾಧಕರಿಗೆ 111 ನಿಮಿಷಗಳಲ್ಲಿ ಸನ್ಮಾನದ ವಿಶ್ವ ದಾಖಲೆ ಪ್ರಯತ್ನ, ಮುಖ್ಯ ಅತಿಥಿಗಳು: ಉಪಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ, ಗೌರವ ಅತಿಥಿಗಳು: ಸಂತೋಷ್ ಶುಕ್ಲಾ, ಎನ್.ಆರ್. ನಾರಾಯಣ ಮೂರ್ತಿ, ಕಿರಣ್ ಬೇಡಿ, ಕಿರಣ್ ಮಜುಂದಾರ್ ಷಾ, ಶ್ರದ್ಧಾ ಶರ್ಮಾ, ಆಯೋಜನೆ: ಲೀಡ್ ಇಂಡಿಯಾ ಫೌಂಡೇಷನ್, ಸ್ಥಳ: ಪುರಭವನ, ಜೆ.ಸಿ. ರಸ್ತೆ, ಸಂಜೆ 4



ನಾರಾಯಣ ಮೂರ್ತಿ

ವಿಶ್ವ ಮಹಿಳಾ ದಿನಾಚರಣೆ: ಮುಖ್ಯ ಅತಿಥಿ: ಕೆ. ಜ್ಯೋತಿ, ಅಧ್ಯಕ್ಷತೆ: ಕುಲಪತಿ ನರಸಿಂಹ ಮೂರ್ತಿ ಎನ್., ಗೌರವ ಅತಿಥಿ: ಆರತಿ ಆನಂದ್, ಡಾ. ರಮೇಶ್ ಬಿ., ಡಾ. ವೆಂಕಟೇಶ್ ಮೂರ್ತಿ, ಆಯೋಜನೆ: ಬೆಂಗಳೂರು ನಗರ ವಿಶ್ವವಿದ್ಯಾಲಯ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಬೆಳಿಗ್ಗೆ 11

ವಿಶ್ವ ಮಹಿಳಾ ದಿನಾಚರಣೆ: ಮುಖ್ಯ ಭಾಷಣ: ಶೋಭಾ ಎಸ್., ಆಯೋಜನೆ: ಅಖಿಲ ಭಾರತ ಮಹಿಳಾ ಸಾಂಸ್ಕೃತಿ ಸಂಘಟನೆ, ಸ್ಥಳ: ಮೈಸೂರು ಬ್ಯಾಂಕ್ ವೃತ್ತ, ಬೆಳಿಗ್ಗೆ 11.30

ವಿಶ್ವ ಮಹಿಳಾ ದಿನಾಚರಣೆ: ಬಾಕ್ಸ್ ಇಟ್ ಕಾರ್ಯಕ್ರಮಕ್ಕೆ ಚಾಲನೆ: ಬಿಎಂಟಿಸಿ ಅಧ್ಯಕ್ಷ ಎನ್.ಎಸ್. ನಂದೀಶ್ ರೆಡ್ಡಿ, ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕಿ ಸಿ. ಶಿಖಾ, ಪ್ರಿಯಾ ವರದರಾಜನ್, ಆಯೋಜನೆ: ದುರ್ಗಾ ಸಂಘಟನೆ ಹಾಗೂ ಬಿಎಂಟಿಸಿ, ಸ್ಥಳ: ಬಿಎಂಟಿಸಿ ವರ್ಕ್‌ಶಾಪ್ ಸಭಾಂಗಣ, ಶಾಂತಿನಗರ, ಮಧ್ಯಾಹ್ನ 2

ಪುಸ್ತಕ ಬಿಡುಗಡೆ: ‘ಬದುಕ ಭಿತ್ತಿಯ ಚಿತ್ರಗಳು’ ಮತ್ತು ‘ಪ್ರವಲ್ಲಿಕಾ’, ಲೇಖಕರು: ಶೈಲಜಾ ಸುರೇಶ್, ಪುಸ್ತಕ ಬಿಡುಗಡೆ: ಲತಾ ಶ್ರೀನಿವಾಸ್, ಅಧ್ಯಕ್ಷತೆ: ವಿ. ನಾಗೇಂದ್ರ ಪ್ರಸಾದ್, ಪುಸ್ತಕ ಪರಿಚಯ: ರವೀಂದ್ರನಾಥ ಸಿರಿವರ, ಉಪಸ್ಥಿತಿ: ಟಿ.ಎನ್. ನಾಗೇಶ್, ಆಯೋಜನೆ: ಕಲಾ ನೇಕಾರ, ಸ್ಥಳ: ಸಮ್ಮೇಳನ ಸಭಾಂಗಣ, ಶಾಸಕರ ಭವನ–1, ವಿಧಾನಸೌಧ ಹಿಂಭಾಗ, ಸಂಜೆ 4

ಶಿವರಾಮ ಕಾರಂತ ಬಡಾವಣೆಯಲ್ಲಿ 17 ಹಳ್ಳಿಗಳ ಜನರ ಅತಂತ್ರ ಬದುಕು

ಭೂಸ್ವಾಧೀನ: 13 ವರ್ಷಗಳ ಕನವರಿಕೆ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಕಟ್ಟಿರುವ ಮನೆಗಳು ಉಳಿಯುವ ಖಾತರಿ ಇಲ್ಲ, ಆದರೂ ಮನೆ ಕಟ್ಟುವುದು ನಿಂತಿಲ್ಲ. ಭೂಸ್ವಾಧೀನದ ಕನವರಿಕೆಯಲ್ಲೇ 13 ವರ್ಷಗಳಿಂದ ಸಾಗಿದ ಬದುಕು... ಇದು ಉತ್ತರ ಬೆಂಗಳೂರಿನ 17 ಹಳ್ಳಿಗಳ ಜನರ ಅತಂತ್ರ ಸ್ಥಿತಿ.

ಡಾ.ಕೆ.ಶಿವರಾಮ ಕಾರಂತ ಬಡಾವಣೆ ಅಭಿವೃದ್ಧಿಪಡಿಸುವ ಉದ್ದೇಶಕ್ಕೆ 3,546 ಎಕರೆ ಸ್ವಾಧೀನಪಡಿಸಿಕೊಳ್ಳಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) 2008ರಲ್ಲಿ ಮೊದಲ ಅಧಿಸೂಚನೆ ಹೊರಡಿಸಿತು. ಇದನ್ನು ಪ್ರಶ್ನಿಸಿ ಹಲವರು ಹೈಕೋರ್ಟ್ ಮೊರೆ ಹೋದರು. ಬಿಡಿಎ ಹೊರಡಿಸಿದ್ದ ಅಧಿಸೂಚನೆಯನ್ನು ಹೈಕೋರ್ಟ್ ಏಕಸದಸ್ಯ ಪೀಠ 2014ರಲ್ಲಿ ರದ್ದುಗೊಳಿಸಿತು. ಬಿಡಿಎ ಅಧಿಕಾರಿಗಳು ದ್ವಿಸದಸ್ಯ ಪೀಠಕ್ಕೆ ಮೇಲ್ಮನವಿ ಸಲ್ಲಿಸಿದರು. ಏಕ ಸದಸ್ಯ ಪೀಠದ ಆದೇಶವನ್ನೇ ದ್ವಿಸದಸ್ಯ ಪೀಠ ಎತ್ತಿ ಹಿಡಿಯಿತು.

ಅಲ್ಲಿಗೆ ರೈತರು ನಿಟ್ಟುಸಿರು ಬಿಟ್ಟಿದ್ದರು. ಆದರೆ, ಸುಪ್ರೀಂ ಕೋರ್ಟ್‌ಗೆ ಬಿಡಿಎ ಮೇಲ್ಮನವಿ ಸಲ್ಲಿಸಿತು. ಹೈಕೋರ್ಟ್ ಆದೇಶವನ್ನು 2018ರ ಆಗಸ್ಟ್ 3ರಂದು ರದ್ದುಪಡಿಸಿದ ಸುಪ್ರೀಂ ಕೋರ್ಟ್, ಭೂಸ್ವಾಧೀನ ಪ್ರಕ್ರಿಯೆ ಮುಂದುವರಿಸುವಂತೆ ಆದೇಶ ನೀಡಿತು. ಅಲ್ಲದೇ, ಈ ಆದೇಶದ ಬಳಿಕ ಕಟ್ಟಡಗಳು ನಿರ್ಮಾಣವಾಗಿದ್ದರೆ ಅವುಗಳನ್ನು ತೆರವುಗೊಳಿಸಬೇಕು ಎಂದು 2020ರ ಡಿಸೆಂಬರ್ 20ರಂದು ಮತ್ತೊಂದು ಆದೇಶ ಹೊರಡಿಸಿತು.

ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆ ಮುಗಿಯುವಷ್ಟರಲ್ಲಿ 10 ವರ್ಷಗಳು ಕಳೆದು ಹೋಗಿದ್ದವು. ಅಷ್ಟರಲ್ಲಿ ಹಲವು ಬಡಾವಣೆಗಳ ಅಭಿವೃದ್ಧಿಗೆ ಅನುಮತಿಯನ್ನೂ ಬಿಡಿಎ ನೀಡುತ್ತಾ ಬಂದಿತು. ಕೆಲವರು ಬಿಡಿಎ ಅನುಮತಿ ಪಡೆದಿದ್ದರೆ, ಹಲವರು ಗ್ರಾಮ ಪಂಚಾಯಿತಿಗಳಿಂದ ಅನುಮತಿ ಪಡೆದುಕೊಂಡು ಮನೆಗಳನ್ನು ನಿರ್ಮಿಸಿಕೊಂಡರು. ಭೂಪರಿವರ್ತನೆ, ಭೂಪರಭಾರೆಗಳೂ ಆಗಿವೆ. ಬಡಾವಣೆಗೆ ಗುರುತಿಸಿದ್ದ ಜಾಗದಲ್ಲಿ ಸಾವಿರಾರು ಮನೆಗಳು ನಿರ್ಮಾಣಗೊಂಡಿವೆ.

ಭೂಸ್ವಾಧೀನ ಪ್ರಕ್ರಿಯೆ ಮುಂದುವರಿಸುವಂತೆ 2018ರಲ್ಲಿ ಸುಪ್ರೀಂ ಕೋರ್ಟ್ ಆದೇಶ ನೀಡಿದ್ದರೂ, ಮನೆಗಳ ನಿರ್ಮಾಣ ನಿಲ್ಲಲಿಲ್ಲ. ತ್ವರಿತಗತಿಯಲ್ಲೇ ಕಟ್ಟಡಗಳನ್ನು ನಿರ್ಮಿಸಿದ್ದಾರೆ, ಈಗಲೂ ನಿರ್ಮಿಸುತ್ತಲೇ ಇದ್ದಾರೆ. 17 ಹಳ್ಳಿಗಳೂ ಈಗಾಗಲೇ ಹಳ್ಳಿಯ ಸೊಗಡಿನಿಂದ ಕಳಚಿಕೊಂಡು ನಗರ ಸ್ವರೂಪ ಪಡೆದುಕೊಳ್ಳುತ್ತಿವೆ. ಅಲ್ಲಲ್ಲೇ ಅಪಾರ್ಟ್‌ಮೆಂಟ್ ಸಮುಚ್ಚಯಗಳೂ ತಲೆ ಎತ್ತಿ ನಿಂತಿವೆ.


ಇದರ ಜತೆಗೆ ಕೃಷಿ ಭೂಮಿಯೂ ಇದೆ. ಕೆಲವರು ಭೂಮಿ ಹೊಂದಿದ್ದರೂ ಮನೆ ಕಟ್ಟುವ ಗೋಜಿಗೆ ಹೋಗಿಲ್ಲ. 'ಗೊಂದಲ ಇರುವ ಕಾರಣ ನಿವೇಶನವಾಗಿ ಪರಿವರ್ತಿಸಿಲ್ಲ. ಇಲ್ಲಿ ಭೂಸ್ವಾಧೀನಕ್ಕೆ ಪ್ರಾಥಮಿಕ ಅಧಿಸೂಚನೆ ಹೊರಡಿಸಿರುವುದರಿಂದ ಜಾಗ ಮಾರಾಟ ಮಾಡಲಿಕ್ಕೂ ಆಗುವುದಿಲ್ಲ. ಮಕ್ಕಳ ಮದುವೆ ಮಾಡಲೂ ಕಷ್ಟಪಡುತ್ತಿದ್ದೇವೆ' ಎನ್ನುತ್ತಾರೆ ರೈತರು.


ಶಿವರಾಮ ಕಾರಂತ ಬಡಾವಣೆಯಲ್ಲಿ ಅರ್ಧಕ್ಕೆ ನಿಂತಿರುವ ಕಾಮಗಾರಿ

3,546 ಎಕರೆ
ಭೂಸ್ವಾಧೀನ ಆಗಲಿರುವ ಭೂಮಿ

17 ಹಳ್ಳಿಗಳು
ಭೂಸ್ವಾಧೀನಕ್ಕೆ ಒಳಪಡುವ ಹಳ್ಳಿಗಳು

17 ಹಳ್ಳಿಗಳು ಯಾವುವು?



ಯಾವಾಗ ಏನಾಯಿತು...	
2008 ಡಿಸೆಂಬರ್ 30	ಭೂಸ್ವಾಧೀನಕ್ಕೆ ಮೊದಲ ಅಧಿಸೂಚನೆ ಪ್ರಕಟ
2014 ನವೆಂಬರ್ 26	ಅಧಿಸೂಚನೆ ರದ್ದುಪಡಿಸಿ ಹೈಕೋರ್ಟ್ ಏಕಸದಸ್ಯ ಪೀಠ ಆದೇಶ
2017ರ ಏಪ್ರಿಲ್ 20	ಏಕ ಸದಸ್ಯ ಪೀಠದ ಆದೇಶ ಎತ್ತಿಹಿಡಿದ ಹೈಕೋರ್ಟ್ ದ್ವಿಸದಸ್ಯ ಪೀಠ
2018 ಆಗಸ್ಟ್ 3	ಹೈಕೋರ್ಟ್ ಆದೇಶ ರದ್ದುಪಡಿಸಿ ಭೂಸ್ವಾಧೀನ ಪ್ರಕ್ರಿಯೆ ಮುಂದುವರಿಸಲು ಆದೇಶ
2020ರ ಡಿಸೆಂಬರ್ 3	ನ್ಯಾಯಮೂರ್ತಿ ಎ.ವಿ.ಚಂದ್ರಶೇಖರ್ ನೇತೃತ್ವದ ಸಮಿತಿ ರಚನೆ
2020 ಡಿಸೆಂಬರ್ 20	ಅಕ್ರಮವಾಗಿ ಕಟ್ಟಿರುವ ಮನೆಗಳ ತೆರವಿಗೆ ಸುಪ್ರೀಂ ಕೋರ್ಟ್ ಆದೇಶ

ದಾಖಲೆಗಳ ಪರಿಶೀಲನೆ ಚುರುಕು

2008ರಿಂದ 2018ರ 10 ವರ್ಷಗಳ ಅವಧಿಯಲ್ಲಿ ನಿರ್ಮಾಣ ಆಗಿರುವ ಮನೆಗಳೆಷ್ಟು, ಸದ್ಯದ ಅಲ್ಲಿನ ಪರಿಸ್ಥಿತಿ ಏನು ಎಂಬುದನ್ನು ತಿಳಿದುಕೊಳ್ಳಲು ಮುಂದಾಗಿರುವ ಸುಪ್ರೀಂ ಕೋರ್ಟ್, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎ.ವಿ. ಚಂದ್ರಶೇಖರ್ ನೇತೃತ್ವದ ಸಮಿತಿಯೊಂದನ್ನು 2020ರ ಡಿಸೆಂಬರ್ 3ರಂದು ನೇಮಿಸಿದೆ.

ನಿವೃತ್ತ ಐಎಎಸ್ ಅಧಿಕಾರಿ ಜೈಕರ್ ಜೆರೋಮ್, ನಿವೃತ್ತ ಡಿಜಿಪಿ ಎಸ್.ಟಿ. ರಮೇಶ್ ಅವರನ್ನು ಸಮಿತಿ ಸದಸ್ಯರನ್ನಾಗಿ ಮಾಡಿದೆ.

ಶಿವರಾಮ ಕಾರಂತ ಬಡಾವಣೆಯ ವೈಮಾನಿಕ ಸರ್ವೆ ನಡೆದಿದೆ. ಅದರ ಪ್ರಕಾರ 2008ಕ್ಕೂ ಮುನ್ನ 2 ಸಾವಿರದಷ್ಟು ಮನೆಗಳಿದ್ದರೆ, 2018ರ ವೇಳೆಗೆ 7 ಸಾವಿರಕ್ಕೂ ಹೆಚ್ಚು ಮನೆಗಳು ನಿರ್ಮಾಣ ಆಗಿವೆ. ಅವುಗಳನ್ನು ನಿಖರವಾಗಿ ಗುರುತಿಸುವ ಕಾರ್ಯವನ್ನು ಸಮಿತಿ ಆರಂಭಿಸಿದೆ.

ಕಟ್ಟಡಗಳ ಮಾಲೀಕರಿಂದ ದಾಖಲೆಗಳನ್ನು ಸಂಗ್ರಹಿಸುತ್ತಿದೆ. ಮೇಡಿ ಅಗ್ರಹಾರದಲ್ಲಿ ಸಹಾಯ ಕೇಂದ್ರವೊಂದನ್ನು ತೆರೆದಿದೆ. ಇನ್ನೂ ನಾಲ್ಕು ಕಡೆ ಸಹಾಯ ಕೇಂದ್ರ ತೆರೆಯುವ ಉದ್ದೇಶ ಹೊಂದಿದೆ. ಮನೆಗಳ ಮಾಲೀಕರು ದಾಖಲೆಗಳ ಪ್ರತಿಯನ್ನು ಸಮಿತಿಗೆ ಸಲ್ಲಿಸುತ್ತಿದ್ದಾರೆ. ಆರು ತಿಂಗಳಲ್ಲಿ ಸಮಿತಿ ಸುಪ್ರೀಂ ಕೋರ್ಟ್‌ಗೆ ವರದಿ ಸಲ್ಲಿಸಬೇಕಿದೆ.

ಮನೆ ಕಟ್ಟಿದ್ದರೆ ತೆರವು ಅನಿವಾರ್ಯ



ಹೆಚ್.ಆರ್. ಮಹಾದೇವ್

ಸುಪ್ರೀಂ ಕೋರ್ಟ್‌ನ 2018ರ ಆದೇಶದ ಬಳಿಕವೂ ಮನೆಗಳನ್ನು ಕಟ್ಟಿದರೆ ತೆರವುಗೊಳಿಸುವುದು ಅನಿವಾರ್ಯವಾಗಲಿದೆ ಎಂದು ಬಿಡಿಎ ಆಯುಕ್ತ ಎಚ್.ಆರ್. ಮಹದೇವ ತಿಳಿಸಿದರು.

ಆದೇಶ ಉಲ್ಲಂಘಿಸಿ ಮನೆ ಕಟ್ಟಿದ್ದರೆ ತೆರವುಗೊಳಿಸಬೇಕು ಎಂದು ಸುಪ್ರೀಂ ಕೋರ್ಟ್ ಸ್ಪಷ್ಟವಾಗಿ ಆದೇಶಿಸಿದೆ. ಹೀಗಾಗಿ, ಮನೆಗಳನ್ನು ತೆರವುಗೊಳಿಸಬೇಕಾಗುತ್ತದೆ. ಈಗಲೂ ಮನೆ ಕಟ್ಟುತ್ತಿದ್ದರೆ ನಿಲ್ಲಿಸುವುದು ಒಳ್ಳೆಯದು ಎಂದು ಅವರು ಹೇಳಿದರು.

ಭೂಸ್ವಾಧೀನ ಪ್ರಕ್ರಿಯೆ ಚುರುಕುಗೊಳಿಸಲಾಗಿದೆ. ಕೊನೆಯ ಹಂತದಲ್ಲಿರುವ ಪ್ರಕ್ರಿಯೆ ಇನ್ನು ಮೂರ್‍ನಾಲ್ಕು ತಿಂಗಳಲ್ಲಿ ಪೂರ್ಣಗೊಳ್ಳಲಿದೆ ಎಂದು ಸ್ಪಷ್ಟಪಡಿಸಿದರು.

ಅಪಪ್ರಚಾರ ಮಾಡುವುದು ಅಪರಾಧ: ನ್ಯಾ. ಚಂದ್ರಶೇಖರ್


ಎ.ವಿ ಚಂದ್ರಶೇಖರ್

'ಸುಪ್ರೀಂ ಕೋರ್ಟ್ ಆದೇಶದಂತೆ ಸಮಿತಿ ಕಾರ್ಯ ನಿರ್ವಹಿಸುತ್ತಿದೆ. ಈ ಸಮಿತಿಗೆ ದಾಖಲೆಗಳನ್ನು ನೀಡಬಾರದು ಎಂದು ಕೆಲವರು ಅಪಪ್ರಚಾರ ಮಾಡುತ್ತಿರುವ ಮಾಹಿತಿ ಬಂದಿದೆ. ಹೀಗೆ ಮಾಡುವುದು ಸುಪ್ರೀಂ ಕೋರ್ಟ್ ಆದೇಶಕ್ಕೆ ವಿರುದ್ಧ' ಎಂದು ನ್ಯಾಯಮೂರ್ತಿ ಎ.ವಿ.ಚಂದ್ರಶೇಖರ್ ಹೇಳಿದರು.

'ಕಾನೂನುಬದ್ಧವಾಗಿ ಮನೆ ಕಟ್ಟಿದ್ದರೆ ಅವರಿಗೆ ತೊಂದರೆ ಆಗಬಾರದು ಎಂಬ ಉದ್ದೇಶದಿಂದ ಸುಪ್ರೀಂ ಕೋರ್ಟ್ ಈ ಕೆಲಸ ಮಾಡುತ್ತಿದೆ. ಇದಕ್ಕೆ ಅಡ್ಡಿಪಡಿಸಿದರೆ ಅಪರಾಧ ಎಂದು ಪರಿಗಣಿಸಲಾಗುತ್ತದೆ. ಅಗತ್ಯ ಬಿದ್ದರೆ ಅಪಪ್ರಚಾರ ಮಾಡುವವರ ವಿರುದ್ಧ ಸುಪ್ರೀಂ ಕೋರ್ಟ್‌ಗೆ ವರದಿ ನೀಡುವ ಹಂತಕ್ಕೂ ಸಮಿತಿ ಹೋಗಬಹುದು' ಎಂದರು.

'ಎಲ್ಲರ ದಾಖಲೆಗಳನ್ನು ಗೋಪ್ಯವಾಗಿ ಇಡಲು ಬೇಕಿರುವ ಎಲ್ಲ ವ್ಯವಸ್ಥೆಯನ್ನೂ ನಾವು ಮಾಡಿಕೊಂಡಿದ್ದೇವೆ. ಹೀಗಾಗಿ ಜನ ಭಯಪಡುವ ಅಗತ್ಯ ಇಲ್ಲ' ಎಂದು ಹೇಳಿದರು.

ಕೋಡಿಹಳ್ಳಿಗೆ ಷೋಕಾಸ್ ನೋಟಿಸ್: ಸುಪ್ರೀಂ ಕೋರ್ಟ್ ನೇಮಿಸಿರುವ ಸಮಿತಿ ಬಗ್ಗೆ ಅಪಪ್ರಚಾರ ಮಾಡುತ್ತಿರುವ ಆರೋಪ ಸಂಬಂಧ ರೈತ ಮುಖಂಡ ಕೋಡಿಹಳ್ಳಿ ಚಂದ್ರಶೇಖರ್ ಅವರಿಗೆ ನ್ಯಾಯಮೂರ್ತಿ ಎ.ವಿ.ಚಂದ್ರಶೇಖರ್ ಸಮಿತಿ ಷೋಕಾಸ್ ನೋಟಿಸ್ ನೀಡಿದೆ.


ಈ ಸಮಿತಿಗೆ ದಾಖಲೆಗಳನ್ನು ನೀಡಿದರೆ ಗೋಪ್ಯತೆ ಕಾಪಾಡುವ ಸಾಧ್ಯತೆ ಇಲ್ಲ. ದಾಖಲೆಗಳನ್ನು ಒದಗಿಸಿದರೆ ಮನೆ ಮಾಲೀಕರಿಗೆ ಅನ್ಯಾಯ ಆಗಲಿದೆ ಎಂದು ಕೋಡಿಹಳ್ಳಿ ಚಂದ್ರಶೇಖರ್ ಅಪಪ್ರಚಾರ ಮಾಡಿದ್ದಾರೆ ಎಂಬ ಕಾರಣಕ್ಕೆ ನೋಟಿಸ್ ನೀಡಲಾಗಿದೆ ಎಂದು ಸಮಿತಿಯ ಮೂಲಗಳು ಖಚಿತಪಡಿಸಿವೆ. ಪ್ರತಿಕ್ರಿಯೆಗೆ ಕೋಡಿಹಳ್ಳಿ ಚಂದ್ರಶೇಖರ್ ಲಭ್ಯರಾಗಲಿಲ್ಲ.

ಎಲ್ಲ ನಿರಾಕ್ಷೇಪಣಾ ಪತ್ರಗಳೂ ಅನೂರ್ಜಿತ

ಬಿಡಿಎ ಭೂಸ್ವಾಧೀನ ಪ್ರಕ್ರಿಯೆ ಚುರುಕುಗೊಳಿಸಿದೆ. ಈ ಉದ್ದೇಶಕ್ಕಾಗಿಯೇ ಆರು ವಿಶೇಷ ಭೂಸ್ವಾಧೀನಾಧಿಕಾರಿಗಳನ್ನು ನಿಯೋಜಿಸಿಕೊಂಡಿದೆ.

'ಹೈಕೋರ್ಟ್ ಆದೇಶವನ್ನೇ ಸುಪ್ರೀಂ ಕೋರ್ಟ್ ರದ್ದುಪಡಿಸಿರುವ ಕಾರಣ ಈ ಅವಧಿಯಲ್ಲಿ ಭೂಪರಿವರ್ತನೆ ಅನುಮತಿ, ನಿವೇಶನ ಅಭಿವೃದ್ಧಿ, ಕಟ್ಟಡ ನಿರ್ಮಾಣ ಮತ್ತು ಪರಭಾರೆಗೆ ನೀಡಿರುವ ಎಲ್ಲ ನಿರಾಕ್ಷೇಪಣಾ ಪತ್ರಗಳೂ ಅನೂರ್ಜಿತಗೊಳಿಸಲಾಗಿದೆ' ಎಂದು ಭೂಸ್ವಾಧೀನ ಆದೇಶದಲ್ಲಿ ಬಿಡಿಎ ಉಲ್ಲೇಖಿಸುತ್ತಿದೆ.

'ಭೂಪರಿಹಾರ ಮತ್ತು ಹಣದ ರೂಪದ ಪರಿಹಾರ ಎರಡನ್ನೂ ಪಡೆದುಕೊಳ್ಳಲು ಅವಕಾಶ ನೀಡಲಾಗಿದೆ. ನಗದು ಪರಿಹಾರವಾಗಿ ಎಕರೆಗೆ ₹80 ಲಕ್ಷದಿಂದ ₹1 ಕೋಟಿ ತನಕ ಸಿಗಲಿದೆ. ಬಹುತೇಕರು ಭೂಪರಿಹಾರವನ್ನೇ ಬಯಸುತ್ತಿದ್ದಾರೆ' ಎಂದು ಬಿಡಿಎ ಅಧಿಕಾರಿಗಳು ಹೇಳಿದರು.



2006ರಲ್ಲಿ ನಿವೇಶನ ಖರೀದಿಸಿ 2018ರಲ್ಲಿ ಮನೆ ಕಟ್ಟಿದ್ದೇವೆ. ಈಗ ಅದು ಉಳಿಯುವುದೋ ಇಲ್ಲವೋ ಗೊತ್ತಿಲ್ಲ. ಆತಂಕದಲ್ಲೇ ದಿನ ದೂಡುತ್ತಿದ್ದೇವೆ

ತ್ಯಾಗರಾಜ್, ಬೆಮೆಲ್ ನಿವೃತ್ತ ನೌಕರ



ನಿವೇಶನ ಖರೀದಿಸಿ ಮನೆ ಕಟ್ಟಿರುವುದು ನಮ್ಮ ಜೀವಮಾನದ ಸಾಧನೆ. ಈಗ ಅದು ಹೋದರೆ ಏನು ಮಾಡಬೇಕು ಎಂಬುದೆ ಮನೆಯಲ್ಲಿ ಎಲ್ಲರ ಚಿಂತೆ, ಇದರಿಂದ ಎಲ್ಲರ ಆರೋಗ್ಯ ಹಾಳಾಗಿದೆ

ವಿಜಯಲಕ್ಷ್ಮಿ, ಲಕ್ಷ್ಮಿಪುರ ನಿವಾಸಿ

'ಭೂಸ್ವಾಧೀನ: 13 ವರ್ಷಗಳ ಕನವರಿಕೆ' ನೋಡಲು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ



ಪ್ರಶಸ್ತಿ ಪ್ರದಾನ ತುಳು ಸಾಹಿತ್ಯ ಅಕಾಡೆಮಿಯು ರವೀಂದ್ರ ಕಲಾಕ್ಷೇತ್ರದಲ್ಲಿ ಭಾನುವಾರ ಆಯೋಜಿಸಿದ್ದ ಸಮಾರಂಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಸಚಿವ ಅರವಿಂದ ಲಿಂಬಾವಳಿ ಅವರು ಹಿರಿಯ ಕಲಾವಿದ ಗುರುವ ಕೊರಗ ಹಿರಿಯಡ್ಕ ಅವರಿಗೆ 2019ನೇ ಸಾಲಿನ ತುಳು ಜಾನಪದ ಕ್ಷೇತ್ರದ ಗೌರವ ಪ್ರಶಸ್ತಿ ಪ್ರದಾನ ಮಾಡಿದರು. (ಎಡದಿಂದ) ಆರ್‌ಎಸ್‌ಎಸ್ ಮುಖಂಡ ಕಲ್ಲಡ್ಕ ಪ್ರಭಾಕರ ಭಟ್, ಸಚಿವ ಅಂಗಾರ, ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ದಯಾನಂದ ಕತ್ತಲ್‌ಸಾರ್ ಇದ್ದಾರೆ -ಪ್ರಜಾವಾಣಿ ಚಿತ್ರ

ಕೊಣ್ಣೂರ ಗ್ರಾಮದ ಯೋಧ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ತಾಳಿಕೋಟೆ: ತಾಲ್ಲೂಕಿನ ಕೊಣ್ಣೂರ ಗ್ರಾಮದ ಯೋಧ ಪರಶುರಾಮ ಬಸಪ್ಪ ಚಿರಕನಳ್ಳಿ(25) ಅವರು ನವದೆಹಲಿಯ ಮಥುರಾ ಕ್ಯಾಂಪ್ ನಿವಾಸದಲ್ಲಿ ಶನಿವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

7 ವರ್ಷಗಳಿಂದ 20ನೇ ಎಂಜಿನಿಯರಿಂಗ್ ರೆಜಿಮೆಂಟ್‌ನಲ್ಲಿ ಯೋಧರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಎರಡು ವರ್ಷಗಳ ಹಿಂದಷ್ಟೇ ಮದುವೆಯಾಗಿದ್ದ ಪರಶುರಾಮ ಅವರು, ಕಳೆದ ಒಂದು ವರ್ಷದಿಂದ ಪತ್ನಿ ಜಯಶ್ರೀ ಸಮೇತರಾಗಿ ಮಥುರಾ ಕ್ಯಾಂಪ್‌ನ ವಸತಿಗೃಹದಲ್ಲಿ ವಾಸವಾಗಿದ್ದರು. ಕಳೆದ ರಾತ್ರಿ ಮನೆಯಲ್ಲಿಯೇ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆತ್ಮಹತ್ಯೆಗೆ ನಿಖರ ಕಾರಣ ತಿಳಿದುಬಂದಿಲ್ಲ. ಅವರಿಗೆ ಪತ್ನಿ, ತಂದೆ, ತಾಯಿ, ಸಹೋದರ ಹಾಗೂ ಇಬ್ಬರು ಸಹೋದರಿಯರಿದ್ದಾರೆ. ಸೋಮವಾರ ಸಂಜೆ ಯೋಧನ ಪಾರ್ಥಿವ ಶರೀರ ಸ್ವಗ್ರಾಮಕ್ಕೆ ಆಗಮಿಸುವ ಸಾಧ್ಯತೆ ಇದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.


ಶಿಬಿರವನ್ನು ಗೀತಾ ವಿವೇಕಾನಂದಬಾಬು ಉದ್ಘಾಟಿಸಿದರು. ಮಂಜುಳಾದೇವಿ ಶ್ರೀನಿವಾಸ್ ಇದ್ದರು.

'ಆರೋಗ್ಯದ ಕಡೆಗೆ ಮಹಿಳೆ ಗಮನ ಹರಿಸಬೇಕು'

ಕೆ.ಆರ್.ಪುರ: ಹೆಣ್ಣು ಸಂಸಾರದ ಜವಾಬ್ದಾರಿ ಹೊರುವ ಜೊತೆಗೆ ಎಲ್ಲ ಕ್ಷೇತ್ರಗಳಲ್ಲಿ ಶ್ರಮಿಸುವ ಮೂಲಕ ದೇಶದ ಪ್ರಗತಿಗೂ ಕಾರಣವಾಗಿದ್ದಾಳೆ ಎಂದು ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಗೀತಾ ವಿವೇಕಾನಂದಬಾಬು ತಿಳಿಸಿದರು.

ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಕೆ.ಆರ್.ಪುರ ಕ್ಷೇತ್ರ ಮಹಿಳಾ ಮೋರ್ಚಾ ವತಿಯಿಂದ ಬಸವನಪುರ ವಾರ್ಡ್‌ನ ಗಾಯಿತ್ರಿ ಬಡಾವಣೆಯಲ್ಲಿ ಏರ್ಪಡಿಸಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಮಹಿಳೆಯರು ಕೂಡ ಹೆಚ್ಚು ಒತ್ತಡದ ಜೀವನ ನಡೆಸುತ್ತಿದ್ದಾರೆ. ಕುಟುಂಬ ಜೊತೆ ಸೌಹಾರ್ದಯುತ ಜೀವನ ನಡೆಸುವ ಮೂಲಕ ಆರೋಗ್ಯ ಕಾಪಾಡಿಕೊಳ್ಳುವಲ್ಲಿ ಹೆಚ್ಚು ಗಮನವಹಿಸಬೇಕು ಎಂದರು.

ಕೆ.ಆರ್.ಪುರ ಕ್ಷೇತ್ರ ಘಟಕದ ಅಧ್ಯಕ್ಷೆ ಮಂಜುಳಾದೇವಿ ಶ್ರೀನಿವಾಸ್ ಮಾತನಾಡಿ, 'ಮಹಿಳೆಯರು ದೇಶದ ಕಣ್ಣಿದ್ದಂತೆ. ಮಹಿಳೆಯರು ಆರೋಗ್ಯವಾಗಿದ್ದರೆ ದೇಶ ಆರೋಗ್ಯವಾಗಿರುತ್ತದೆ' ಎಂದರು.

ಸಚಿವ ಬಿ.ಶ್ರೀರಾಮುಲು ಟೀಕೆ

'ಡಿಕೆಶಿ, ಸಿದ್ದು ಜೋಡೆತ್ತುಗಳಲ್ಲ'

ಪ್ರಜಾವಾಣಿ ವಾರ್ತೆ


ಶ್ರೀರಾಮುಲು

ಗದಗ: 'ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹಾಗೂ ಮಾಜಿ ಸಿಎಂ ಸಿದ್ದರಾಮಯ್ಯ ಜೋಡೆತ್ತು ಅಂತ ಹೇಳಿಕೊಂಡು ತಿರುಗಾಡುತ್ತಿದ್ದಾರೆ. ಆದರೆ ಅವರು ಜೋಡೆತ್ತುಗಳಲ್ಲ. ಬಯಲಿನಲ್ಲಿ ಹೊಡೆದಾಡಲು ಬಿಟ್ಟಿರುವ ಹೋರಿಗಳು. ಅವರನ್ನು ಎದುರಿಸುವ ಶಕ್ತಿ ಬಿಜೆಪಿಗೆ ಇದೆ' ಎಂದು ಸಮಾಜ ಕಲ್ಯಾಣ ಇಲಾಖೆ ಸಚಿವ ಬಿ.ಶ್ರೀರಾಮುಲು ಹೇಳಿದರು.

ಭಾನುವಾರ ಗದುಗಿನಲ್ಲಿ ಮಾಧ್ಯಮ ಪ್ರತಿನಿಧಿಗಳ ಜತೆಗೆ ಮಾತನಾಡಿದ ಅವರು, 'ಒಂದು ದೇಶ ಒಂದು ಚುನಾವಣೆ' ಎನ್ನುವುದು ದೇಶದ ಆಡಳಿತ ಹಾಗೂ ಆರ್ಥಿಕ ದೃಷ್ಟಿಯಿಂದ ಒಳ್ಳೆಯದು. ಈ ಕುರಿತು ಕಾಂಗ್ರೆಸ್ ನಾಯಕರು ಸದನದ ಬಾವಿಗಿಳಿದು ಪ್ರತಿಭಟಿಸುವುದನ್ನು ಬಿಟ್ಟು ಸಾಧಕ ಬಾಧಕ ಚರ್ಚೆಯಲ್ಲಿ ಪಾಲ್ಗೊಳ್ಳಬೇಕಿತ್ತು' ಎಂದು ಹೇಳಿದರು.

'ಸದನದಲ್ಲಿ ಚರ್ಚಿಸಲು ಸ್ಪೀಕರ್ ಮುಕ್ತ ಅವಕಾಶ ಕಲ್ಪಿಸಿದ್ದಾರೆ. ಆದರೆ, ಚರ್ಚೆ ಮಾಡದೇ ಪ್ರತಿಭಟಿಸುತ್ತಿದ್ದಾರೆ. ಚರ್ಚೆ ಅಂದರೆ ಓಡಿ ಹೋಗುವವರು ಸದನ ಬಾವಿಗಿಳಿದು ಪ್ರತಿಭಟನೆ ಮಾಡುತ್ತಿರುವುದು ಯಾಕೆ' ಎಂದು ಪ್ರಶ್ನಿಸಿದರು.

'ಒಂದು ದೇಶ ಒಂದು ಚುನಾವಣೆ' ಇವತ್ತಿನದ್ದಲ್ಲ. ಹಿಂದಿನ ಪ್ರಧಾನಿ ಇಂದಿರಾ ಗಾಂಧಿ ಅವರೂ ಈ ಬಗ್ಗೆ ಉಲ್ಲೇಖಿಸಿದ್ದಾರೆ. ಗ್ರಾಮ ಪಂಚಾಯ್ತಿಯಿಂದ ಸಂಸತ್‌ವರೆಗೂ ಒಂದೇ ಚುನಾವಣೆ ಮಾಡಿದರೆ ಅದು ಆರ್‌ಎಸ್‌ಎಸ್ ಅಜೆಂಡಾ ಹೇಗಾಗುತ್ತದೆ?' ಎಂದರು.

'ದೇಶದ ಯಾವ್ಯಾವ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಇರುತ್ತದೆಯೋ, ಎಲ್ಲಿ ವಿರೋಧ ಪಕ್ಷದ ಸ್ಥಾನದಲ್ಲಿ ಇದೆಯೋ ಅಲ್ಲಿ ಗೊಂದಲ ಸೃಷ್ಟಿಸಲಾಗುತ್ತಿದೆ. ಕಾಂಗ್ರೆಸ್ ತನ್ನ ಹಳೆಯ ಚಾಳಿ ಮುಂದುವರಿಸಿದೆ. ದೇಶದಲ್ಲಿ ಕಾಂಗ್ರೆಸ್ ಹೀನಾಯ ಪರಿಸ್ಥಿತಿಗೆ ತಲುಪಿದೆ. ಪ್ರತಿಭಟನೆ ಮಾಡಿ ಗೊಂದಲ ಸೃಷ್ಟಿಸುವ ಮೂಲಕ ಜನರ ವಿಶ್ವಾಸ ಗಳಿಸಲು ಯತ್ನಿಸುತ್ತಿದೆ. ಆದರೆ, ಹಳೆ ಚಾಳಿ ಮುಂದುವರಿಸಿದರೆ ಜನರು ನಂಬುವುದಿಲ್ಲ' ಎಂದು ವ್ಯಂಗ್ಯವಾಡಿದರು.


ವೈದ್ಯರು ರೋಗಿಯೊಬ್ಬರ ಆರೋಗ್ಯ ತಪಾಸಣೆ ನಡೆಸಿದರು.

ಆರೋಗ್ಯ ತಪಾಸಣಾ ಶಿಬಿರ

ಯಲಹಂಕ: ಕೇಸರಿ ಫೌಂಡೇಷನ್ ಆಶ್ರಯದಲ್ಲಿ ಬ್ಯಾಟರಾಯನಪುರ ಕ್ಷೇತ್ರದ ದೇವಿನಗರದಲ್ಲಿ ಉಚಿತ ಆರೋಗ್ಯ ಮತ್ತು ದಂತ ತಪಾಸಣಾ ಶಿಬಿರ ಏರ್ಪಡಿಸಲಾಗಿತ್ತು

ಶಿಬಿರದಲ್ಲಿ ತಜ್ಞವೈದ್ಯರು ಪಾಲ್ಗೊಂಡು, ಮಧುಮೇಹ, ದಂತ, ಮೂತ್ರಪಿಂಡ, ರಕ್ತದೊತ್ತಡ ಮತ್ತಿತರ ಸಮಸ್ಯೆಗಳ ತಪಾಸಣೆ ನಡೆಸಿದರು.

ಫೌಂಡೇಷನ್ ಸಂಸ್ಥಾಪಕ ಎಚ್.ಸಿ.ತಮ್ಮೇಶ್ ಗೌಡ ಮಾತನಾಡಿ, 'ಕೊರೊನಾದಿಂದ ಬಡಜನರು ಸಂಕಷ್ಟ ಪರಿಸ್ಥಿತಿಯಲ್ಲಿದ್ದಾರೆ. ಈ ದಿಸೆಯಲ್ಲಿ ಅಂತಹ ಜನರಿಗೆ ನೆರವಾಗಲಿ ಎಂಬ ಉದ್ದೇಶದಿಂದ ಈ ಶಿಬಿರವನ್ನು ಏರ್ಪಡಿಸಲಾಗಿದೆ' ಎಂದು ತಿಳಿಸಿದರು.

ಸುತ್ತಮುತ್ತಲ ಗ್ರಾಮಗಳ 140 ಜನರು ಶಿಬಿರದ ಸೌಲಭ್ಯ ಪಡೆದರು.

ಸೋಮವಾರ ● ಮಾರ್ಚ್ 8, 2021 ಪ್ರಜಾವಾಣಿ

ಸಿ.ಡಿ. ಪ್ರಕರಣ: ದೂರು ಹಿಂಪಡೆಯಲು ದಿನೇಶ್ ಕಲ್ಲಹಳ್ಳಿ ಕೊಟ್ಟ ಕಾರಣ

‘ಅಸಹಾಯಕ ಯುವತಿಯ ಚಾರಿತ್ರ್ಯ ಹರಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿ.ಡಿ. ಪ್ರಕರಣದ ದೂರು ಹಿಂಪಡೆಯಲು ಕಬ್ಬನ್‌ಪಾರ್ಕ್ ಠಾಣೆ ಇನ್‌ಸ್ಪೆಕ್ಟರ್‌ಗೆ ಐದು ಪುಟಗಳ ಪತ್ರ ಬರೆದಿರುವ ನಾಗರಿಕ ಹಕ್ಕು ಹೋರಾಟ ಸಮಿತಿ ಅಧ್ಯಕ್ಷ ದಿನೇಶ್ ಕಲ್ಲಹಳ್ಳಿ, ‘ಪೊಲೀಸರ ತನಿಖೆಗೂ ಮುನ್ನವೇ ಅಸಹಾಯಕ ಯುವತಿಯ ಚಾರಿತ್ರ್ಯ ಹರಣವಾಗುತ್ತಿದೆ. ನನ್ನನ್ನೂ ಮುಗಿಸಿಬಿಡುವ ಸಿದ್ಧಾಂತದವರೂ ಹುಟ್ಟಿಕೊಂಡಿದ್ದಾರೆ’ ಎಂದಿದ್ದಾರೆ.

‘ರಮೇಶ ಜಾರಕಿಹೊಳಿ ವಿರುದ್ಧ ದೂರು ನೀಡಿದ್ದು ಸರಿಯಷ್ಟೇ. ಬಟ್ಟೆಯ ಮೇಲೆ ಮುಳ್ಳು ಬಿದ್ದರೂ, ಮುಳ್ಳಿನ ಮೇಲೆ ಬಟ್ಟೆ ಬಿದ್ದರೂ ಹರಿಯುವುದು ಬಟ್ಟೆಯೇ ಎಂಬ ಮಹಿಳೆಯರ ಕುರಿತಾದ ನಾಣ್ನುಡಿ ಇಂದಿನ ಸುಸಂಸ್ಕೃತ ನಾಗರಿಕ ಸಮಾಜದಲ್ಲೂ ನಿಜವಾಗುತ್ತಿದೆ. ಲೈಂಗಿಕ ದೌರ್ಜನ್ಯದ ಸಿ.ಡಿಯನ್ನು ಪೊಲೀಸರಿಗೆ ಒಪ್ಪಿಸಿದ್ದೆ. ಆದರೆ, ಈಗ ಇಡೀ ಸಮಾಜದಲ್ಲಿ ಯುವತಿಯ ಚಾರಿತ್ರ್ಯ ಹರಣ ನಡೆಯುತ್ತಿದೆಯೋ ಹೊರತು, ಅದನ್ನು ಹೊರತುಪಡಿಸಿ ಬೇರೆ ಏನೂ ನಡೆಯುತ್ತಿಲ್ಲ.’

‘ನನ್ನ ಹೋರಾಟದ ಬಗ್ಗೆ ತಿಳಿದಿದ್ದ ಅಪರಿಚಿತ ವ್ಯಕ್ತಿಯೊಬ್ಬರು ಸಿ.ಡಿ. ತಲುಪಿಸಿದ್ದರು. ಮಹಿಳೆಗೆ ಅನ್ಯಾಯವಾಗಿದ್ದರೆ, ನ್ಯಾಯ ದೊರಕಿಸಿ ಎಂದು ಮನವಿ ಮಾಡಿದ್ದರು. ನಾನು ಸಿ.ಡಿ.ಯನ್ನು ಎಲ್ಲಿಯೂ ಬಹಿರಂಗಪಡಿಸದೇ ನೇರವಾಗಿ ನಗರ ಪೊಲೀಸ್ ಕಮಿಷನರ್ ಕಚೇರಿಗೆ ನೀಡಿದ್ದೆ. ಅಲ್ಲಿಂದ ಕಬ್ಬನ್ ಪಾರ್ಕ್ ಠಾಣೆಗೆ ನೀಡಿದ್ದೇನೆ.’

‘ಅಪರಾಧದ ಮಾಹಿತಿಯನ್ನು ಪೊಲೀಸರಿಗೆ ನೀಡುವುದು ಪ್ರಜ್ಞಾವಂತ ನಾಗರಿಕರ ಕರ್ತವ್ಯವೆಂಬುದನ್ನು ಹೋರಾಟಗಾರನಾಗಿ ನಾನು ಭಾವಿಸಿದ್ದೆ. ಪೊಲೀಸರು ನನ್ನ ಮಾಹಿತಿ ದಾಖಲಿಸಿಕೊಂಡು ತನಿಖೆ ಪ್ರಾರಂಭಿಸಿದರು. ಲೈಂಗಿಕ ದೌರ್ಜನ್ಯ ನಡೆದಿದೆಯೋ ಇಲ್ಲವೋ ಎಂಬ ಬಗ್ಗೆ ತನಿಖೆಗೆ ಆಗ್ರಹಿಸಿದ್ದು ಬಿಟ್ಟರೆ, ಯಾವುದೇ ಬೇಡಿಕೆಗಳು ದೂರಿನಲ್ಲಿ ಇಲ್ಲ’ ಎಂದೂ ತಿಳಿಸಿದ್ದಾರೆ.

‘ದೂರು ನೀಡಿದವನನ್ನೇ ಈ ಸಮಾಜ ಗುರಿಯಾಗಿಸುತ್ತಿರುವುದು ಅಚ್ಚರಿ ತರಿಸಿದೆ. ಯುವತಿ ಮೇಲೆ ಲೈಂಗಿಕ ದೌರ್ಜನ್ಯ ನಡೆದಿದೆಯೇ? ಅಧಿಕಾರ ದುರುಪಯೋಗಪಡಿಸಿಕೊಂಡು ಯುವತಿಯನ್ನು ದುರ್ಬಳಕೆ ಮಾಡಲಾಗಿದೆಯೇ? ಆ ಯುವತಿಯನ್ನು ಅಸಹಾಯಕ ಸ್ಥಿತಿಗೆ ದೂಡಲಾಗಿತ್ತೇ? ಎಂಬ ಸಂಗತಿಗಳ ಬಗ್ಗೆ ಚರ್ಚೆಗಳು ನಡೆಯಬೇಕಿತ್ತು. ಆದರೆ, ಸಿ.ಡಿ. ಕೊಟ್ಟವರು ಯಾರು? ಸಿ.ಡಿ. ಮಾಡಿದ್ದು ಯಾರು? ಮಾಹಿತಿದಾರ ಯಾರನ್ನೆಲ್ಲ ಸಂಪರ್ಕಿಸಿದ್ದ ಎಂಬ ಚರ್ಚೆಗಳು ನಡೆಯುತ್ತಿರುವುದು ದುರದೃಷ್ಟಕರ.’

‘ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ, ಸಿ.ಡಿ.ವಿಚಾರದಲ್ಲಿ ₹ 5 ಕೋಟಿ ಡೀಲ್ ನಡೆದಿರುವುದಾಗಿ ಆಧಾರ ರಹಿತವಾಗಿ ಮಾತನಾಡಿದ್ದಾರೆ. ಈ ಹೇಳಿಕೆಯನ್ನು ನಾನು ಸ್ವಾಗತಿಸುತ್ತೇನೆ. ಬ್ಲ್ಯಾಕ್‌ಮೇಲ್ ಮಾಡುವವರನ್ನು, ಡೀಲ್ ಮಾಡುವವರನ್ನು ಬಂಧಿಸುವಂತೆ ನಾನೂ ಆಗ್ರಹಿಸುತ್ತೇನೆ. ಆದರೆ, ಕುಮಾರಸ್ವಾಮಿ ಅವರ ಈ ಹೇಳಿಕೆ ಸಂದೇಶ ವಾಹಕನನ್ನೇ ಮುಗಿಸಿಬಿಡುವಂತಿದೆ. ನನ್ನ ಪ್ರಾಮಾಣಿಕತೆಯನ್ನು ಪ್ರಶ್ನೆ ಮಾಡುವಂತಿದೆ. ಇಂಥ ಆಧಾರ ರಹಿತ ಹೇಳಿಕೆ, ನನ್ನ ಹೋರಾಟಕ್ಕೂ ಹಿನ್ನಡೆ ಉಂಟು ಮಾಡಲಿದೆ. ನನಗೆ ಆತಂಕವಾಗಿರುವುದು ಮಹಿಳೆಯೊಬ್ಬಳ ಬದುಕಿನ ಬಗ್ಗೆ. ಸಿ.ಡಿ.ಯಲ್ಲಿ ಇದ್ದಾರೆ ಎನ್ನಲಾಗುವ ಯುವತಿಯ ಫೋಟೊಗಳನ್ನು ಸಾಲು-ಸಾಲಾಗಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಡಲಾಗುತ್ತಿದೆ. ಶಾಸಕ ಎಂ.ಪಿ.ರೇಣುಕಾಚಾರ್ಯ, ಇಂಥ ಮಹಿಳೆಯರು ದೇಶಕ್ಕೆ ಕಂಟಕ ಎಂಬ ಹೇಳಿಕೆ ನೀಡಿದ್ದಾರೆ’ ಎಂದೂ ದಿನೇಶ್ ಪತ್ರದಲ್ಲಿ ತಿಳಿಸಿದ್ದಾರೆ.

‘ಸಾಮಾಜಿಕ ಜಾಲತಾಣದಲ್ಲಿ ಯುವತಿಯ ಫೋಟೊಗಳನ್ನು ಅಪ್‌ಲೋಡ್ ಮಾಡಿ ನಿಂದಿಸಲಾಗುತ್ತಿದೆ. ಸಾಮಾಜಿಕ ಹೊಣೆಗಾರಿಕೆಯಿಂದಾಗಿ ಪೊಲೀಸರಿಗೆ ನೀಡಿದ ಮಾಹಿತಿಯೇ ಸಾಮಾಜಿಕ ಪೀಡೆಯಾಗಿ ಪರಿವರ್ತನೆಯಾಗಿದೆ. ಜಾತಿ ಸಂಘಟನೆಗಳು ಹಲವು ರೀತಿಯಲ್ಲಿ ವ್ಯಾಖ್ಯಾನ ನೀಡಿದವೇ ಹೊರತು, ಅಸಹಾಯಕಳ ಜತೆ ನಿಲ್ಲಲಿಲ್ಲ. ಸಿ.ಡಿ.ಯಲ್ಲಿರುವ ಮಾಹಿತಿಯನ್ನು ಕೂಲಂಕಷವಾಗಿ ವಿಚಾರಣೆ ನಡೆಸದೆ, ಪೊಲೀಸ್ ಹೇಳಿಕೆ ಇಲ್ಲದೆ ತೀರ್ಪು ನೀಡುವ ಹುನ್ನಾರಗಳು ನಡೆದವು. ಸಾಮಾಜಿಕ ಜಾಲತಾಣದಲ್ಲಿ ಯುವತಿಯೊಬ್ಬಳು ಅಪರಾಧಿಯಾದಳು. ಒಂದು ಕಡೆ ಮಾಹಿತಿದಾರರನ್ನು ಮುಗಿಸಿ ಬಿಡುವ ಸಿದ್ಧಾಂತದವರು ಹುಟ್ಟಿಕೊಂಡಿದ್ದಾರೆ. ಮತ್ತೊಂದೆಡೆ, ರಾಜಕೀಯ ಕೇಂದ್ರಿತ ಅಧಿಕಾರದಿಂದಾಗಿ ಸಂತ್ರಸ್ತೆಯೇ ಅಪರಾಧಿಯಾಗಿದ್ದಾರೆ. ಒಟ್ಟಾರೆಯಾಗಿ ದೂರು ನೀಡಿದ ಉದ್ದೇಶವೇ ಮಹಿಳೆಗೆ ಮತ್ತು ದೂರುದಾರನಾದ ನನಗೆ ತಿರುಗುಬಾಣದಂತಾಗಿದ್ದು, ಮಹಿಳೆ ಮತ್ತು ಸಾಮಾಜಿಕ ಹಿತದೃಷ್ಟಿಯಿಂದ ಪ್ರಕರಣವನ್ನು ಇಲ್ಲಿಗೆ ಮುಕ್ತಾಯಗೊಳಿಸಲು ಬಯಸಿದ್ದೇನೆ’ ಎಂದೂ ಅವರೂ ಬರೆದಿದ್ದಾರೆ.

‘ಒತ್ತಡಕ್ಕೆ ಮಣಿಯುವ ವ್ಯಕ್ತಿಯಲ್ಲ’

‘ಇದು ಕ್ರಿಮಿನಲ್ ಪ್ರಕರಣ. ಹಿಂಪಡೆಯುವ ಬಗ್ಗೆ ಪಕ್ಷಕಾರ ದಿನೇಶ್ ಅವರು ಪತ್ರ ಕೊಟ್ಟಿದ್ದರು. ಅದನ್ನು ಠಾಣೆಗೆ ಕೊಟ್ಟಿದ್ದೇನೆ. ದೂರುದಾರರನ್ನು ಠಾಣೆಗೆ ಕಳುಹಿಸುವಂತೆ ಪೊಲೀಸರು ಹೇಳಿದ್ದು, ಆ ಬಗ್ಗೆ ದಿನೇಶ್‌ಗೆ ಹೇಳುತ್ತೇನೆ’ ಎಂದು ದಿನೇಶ್ ಪರ ವಕೀಲ ಕುಮಾರ ಪಾಟೀಲ ಹೇಳಿದರು.

ಕಬ್ಬನ್ ಪಾರ್ಕ್ ಠಾಣೆ ಎದುರು ಸುದ್ದಿಗಾರರ ಜೊತೆ ಮಾತನಾಡಿದ ಕುಮಾರ, ‘ಸಾಮಾಜಿಕ ಹೋರಾಟದಲ್ಲಿ ತೊಡಗಿಸಿಕೊಂಡಿರುವ ದಿನೇಶ್, ರಾಜಕೀಯ ಒತ್ತಡಕ್ಕೆ ಮಣಿಯುವ ವ್ಯಕ್ತಿಯಲ್ಲ. ಸಂತ್ರಸ್ತೆಗೆ ನ್ಯಾಯ ಒದಗಿಸಬೇಕು ಎಂಬುದು ಅವರ ಉದ್ದೇಶವಾಗಿತ್ತು. ಆದರೆ, ಈಗ ಯುವತಿಯ ಮಾನ ಹರಾಜು ಮಾಡಲಾಗುತ್ತಿದೆ. ಇದರಿಂದ ಅವರು ಬೇಜಾರಾಗಿದ್ದಾರೆ’ ಎಂದೂ ತಿಳಿಸಿದರು.



ಸೈಕಲ್ ಜಾಥಾ ಮಹಿಳಾ ದಿನಾಚರಣೆ ಪ್ರಯುಕ್ತ ಕನಕಪುರ ರಸ್ತೆ ‘ಚೇಂಜ್ ಮೇಕರ್’ ವತಿಯಿಂದ ಯಲಚೇನಹಳ್ಳಿ ಮೆಟ್ರೊ ನಿಲ್ದಾಣ ಬಳಿ ಭಾನುವಾರ ಹಮ್ಮಿಕೊಂಡಿದ್ದ ಸೈಕಲ್ ಜಾಥಾಕ್ಕೆ ಐಪಿಎಸ್ ಅಧಿಕಾರಿ ಡಿ. ರೂಪಾ, ಬಾವುಟ ತೋರಿಸುವ ಮೂಲಕ ಚಾಲನೆ ನೀಡಿದರು

ಪ್ರಜಾವಾಣಿ ಚಿತ್ರ

ಯೋಗೇಂದ್ರ ಯಾದವ್ ಹೇಳಿಕೆ

ಮಾ.22 ರಂದು ರೈತರಿಂದ ವಿಧಾನಸೌಧ ಮುತ್ತಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲಬುರ್ಗಿಯಿಂದ ಆರಂಭವಾಗಿರುವ ಬೆಂಬಲ ಬೆಲೆ ಹಕ್ಕೊತ್ತಾಯ (ಎಂಎಸ್‌ಪಿ ದಿಲಾವ್) ದೇಶದಾದ್ಯಂತ ಮುಂದುವರಿಯಲಿದೆ. ಹೋರಾಟದ ಭಾಗವಾಗಿ ಕರ್ನಾಟಕ ಸಂಯುಕ್ತ ಹೋರಾಟ ಮೈತ್ರಿಕೂಟದ ನೇತೃತ್ವದಲ್ಲಿ ರೈತರು ಮಾರ್ಚ್ 22ರಂದು ವಿಧಾನಸೌಧಕ್ಕೆ ಮುತ್ತಿಗೆ ಹಾಕಲಿದ್ದಾರೆ ಎಂದು ಸಂಯುಕ್ತ ಕಿಸಾನ್ ಮೋರ್ಚಾ ಸಂಚಾಲನಾ ಸಮಿತಿ ಸದಸ್ಯ ಯೋಗೇಂದ್ರ ಯಾದವ್ ಪ್ರಕಟಿಸಿದರು.

ಸಂಯುಕ್ತ ಹೋರಾಟ ಮೈತ್ರಿಕೂಟದ ಸದಸ್ಯರೊಂದಿಗೆ ಭಾನುವಾರ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಬೆಂಬಲ ಬೆಲೆಯ ವಿಚಾರದಲ್ಲಿ ಕೇಂದ್ರ ಸರ್ಕಾರ ಸುಳ್ಳು ಹೇಳುತ್ತಿದೆ. ಕೃಷಿ ಸಂಬಂಧಿ ಹೊಸ ಕಾಯ್ದೆಗಳ ಜಾರಿಯಿಂದ ಕೃಷಿ ಉತ್ಪನ್ನ ಮಾರುಕಟ್ಟೆ (ಎಪಿಎಂಸಿ) ಮತ್ತು ಬೆಂಬಲ ಬೆಲೆ ವ್ಯವಸ್ಥೆಗಳು ನಾಶವಾಗಲಿವೆ. ಕರ್ನಾಟಕದಲ್ಲೇ ಇದಕ್ಕೆ ಸಾಕ್ಷ್ಯ ದೊರೆತಿದೆ’ ಎಂದರು.

ಕಲಬುರ್ಗಿ, ಬಳ್ಳಾರಿ ಜಿಲ್ಲೆಗಳ ಎಪಿಎಂಸಿಗಳಿಗೆ ಭೇಟಿ ನೀಡಿ ಅಧ್ಯಯನ ಮಾಡಲಾಗಿದೆ. ರೈತರಿಗೆ ಬೆಂಬಲ ಬೆಲೆಗಿಂತ ಕಡಿಮೆ ದರ ದೊರೆಯುತ್ತಿರುವುದು ಕಂಡುಬಂದಿದೆ. ಎಪಿಎಂಸಿಗಳಿಗೆ ಕೃಷಿ ಉತ್ಪನ್ನಗಳ ಆವಕದ ಪ್ರಮಾಣವೂ ಕುಸಿದಿದೆ. ಡಾ.ಎಂ.ಎಸ್.ಸ್ವಾಮಿನಾಥನ್ ವರದಿಯ ಆಧಾರದಲ್ಲಿ ಬೆಂಬಲ ಬೆಲೆಯನ್ನು ಕಾನೂನಿನ ಮೂಲಕ ಖಾತರಿಪಡಿಸಬೇಕು ಎಂಬುದು ರೈತರ ಬೇಡಿಕೆ. ಅದನ್ನು ಪಡೆಯುವವರೆಗೂ ಹೋರಾಟ ಮುಂದುವರಿಯುತ್ತದೆ ಎಂದು ಯಾದವ್ ತಿಳಿಸಿದರು.

ಕೇಂದ್ರ ಸರ್ಕಾರವು ರೈತ ಹೋರಾಟವನ್ನು ಹತ್ತಿಕ್ಕಿ, ಭೂಮಿಯೊಳಗೆ ಹೂತುಹಾಕಲು ಯತ್ನಿಸಿತು. ಅದಕ್ಕಾಗಿಯೇ ಸುಳ್ಳುಗಳನ್ನು ಹೊಸೆಯಿತು. ನಾನಾ ತರಹದ ಅಪಪ್ರಚಾರ ಮಾಡಿತು. ಸರ್ಕಾರ ಹತ್ತಿಕ್ಕಲು ಯತ್ನಿಸಿದಂತೆಲ್ಲ ಹೋರಾಟ ವಿಸ್ತಾರವಾಗಿ ಬೆಳೆಯುತ್ತಿದೆ ಎಂದು ಹೇಳಿದರು.

ರಾಜ್ಯ ಕೃಷಿ ಬೆಲೆ ಆಯೋಗದ ಮಾಜಿ ಅಧ್ಯಕ್ಷ ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ ಮಾತನಾಡಿ, ‘2020ರ ಮೇ 15ರಿಂದಲೂ ಎಪಿಎಂಸಿ ತಿದ್ದುಪಡಿ ಕಾಯ್ದೆ ಜಾರಿಯಲ್ಲಿದೆ. ಈ ಅವಧಿಯಲ್ಲಿ ಎಪಿಎಂಸಿಗಳಿಗೆ ಕೃಷಿ ಉತ್ಪನ್ನಗಳ ಆವಕದ ಪ್ರಮಾಣ ಶೇಕಡ 25ರಷ್ಟು ಕಡಿಮೆಯಾಗಿದೆ. ಎಪಿಎಂಸಿ ಹೊರಗೆ ವಹಿವಾಟು ನಡೆಸಲು ಅವಕಾಶ ನೀಡಿರುವುದರಿಂದ ರೈತರ ಸುಲಿಗೆ ನಡೆಯುತ್ತಿದೆ’ ಎಂದರು.

ಪಂಜಾಬ್‌ನ ಜಾಂಬೂರಿ ಕಿಸಾನ್ ಸಭಾ ಅಧ್ಯಕ್ಷ ಡಾ. ಸತ್ನಾಂ ಸಿಂಗ್ ಅಜ್ನಾಲ, ಹರ್ಯಾಣದ ಜೈ ಕಿಸಾನ್ ರೈತ ಸಂಘಟನೆಯ ಪ್ರಧಾನ ಕಾರ್ಯದರ್ಶಿ ದೀಪಕ್ ಲಾಂಬಾ, ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ, ಕಾರ್ಯಾಧ್ಯಕ್ಷ ಚಾಮರಸ ಮಾಲಿಪಾಟೀಲ, ರೈತ ಸಂಘ ಮತ್ತು ಹಸಿರು ಸೇನೆ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್, ಜನಾಂದೋಲನ ಮಹಾಮೈತ್ರಿಯ ಅಧ್ಯಕ್ಷ ಎಸ್.ಆರ್. ಹಿರೇಮಠ, ಕರ್ನಾಟಕ ಪ್ರಾಂತ ರೈತ ಸಂಘದ ಯಶವಂತ್, ಕನ್ನಡ ಜನ ಶಕ್ತಿಯ ಡಾ.ಕೆ.ವಿ. ವಾಸು, ದೊಡ್ಡಿಪಾಳ್ಯ ನರಸಿಂಹಮೂರ್ತಿ, ಕರ್ನಾಟಕ ರೈತ ಸಂಘದ ಶಿವಪ್ರಕಾಶ್ ಪತ್ರಿಕಾಗೋಷ್ಠಿಯಲ್ಲಿದ್ದರು.

₹ 3,319 ಕೋಟಿ ನಷ್ಟ

‘ಸರಿಯಾದ ರೀತಿಯಲ್ಲಿ ಬೆಂಬಲ ಬೆಲೆ ದೊರಕದ ಕಾರಣದಿಂದ 2019-20ರಲ್ಲಿ ಕರ್ನಾಟಕದ ರೈತರಿಗೆ 13 ಬೆಳೆಗಳಲ್ಲಿ ₹ 3,319 ಕೋಟಿ ನಷ್ಟವಾಗಿದೆ. ಸ್ವಾಮಿನಾಥನ್ ವರದಿಯ ಶಿಫಾರಸಿನಂತೆ ಲೆಕ್ಕ ಹಾಕಿದರೆ ನಷ್ಟದ ಪ್ರಮಾಣ ₹20,339 ಕೋಟಿ ಆಗುತ್ತದೆ. ಬೆಂಬಲ ಬೆಲೆ ನೀಡಲು ಲಕ್ಷಾಂತರ ಕೋಟಿ ರೂಪಾಯಿ ಬೇಕಾಗಿಲ್ಲ. ಅಧಿಕಾರದಲ್ಲಿ ಇರುವವರಿಗೆ ಬದ್ಧತೆ ಮತ್ತು ಇಚ್ಛಾಶಕ್ತಿ ಇರಬೇಕು’ ಎಂದು ಯೋಗೇಂದ್ರ ಯಾದವ್ ಹೇಳಿದರು.

ಸುದ್ದಿ 2 ನಿಮಿಷ

‘ಕೃಷಿ ರಂಗದ ಬಿಕ್ಕಟ್ಟಿಗೆ ಸುಸ್ಥಿರ ಪರಿಹಾರ ಅಗತ್ಯ’

ಬೆಂಗಳೂರು: ‘ಕೃಷಿ ರಂಗ ಎದುರಿಸುತ್ತಿರುವ ಹಲವು ಬಿಕ್ಕಟ್ಟಿಗೆ ಸುಸ್ಥಿರ ಪರಿಹಾರ ಕಂಡುಕೊಳ್ಳುವುದು ಅಗತ್ಯ’ ಎಂದು ಚಿತ್ರ ನಿರ್ದೇಶಕ ಕೇಸರಿ ಹರವು ಹೇಳಿದರು.

ಬಹುರೂಪಿ ಬುಕ್ ಹಬ್‌ನಲ್ಲಿ ಭಾನುವಾರ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ಶ್ರೀ ಪಡ್ರೆ ಅವರ ‘ರೈತರ ಆದಾಯವರ್ಧನೆಗೆ ಮೌಲ್ಯವರ್ಧನೆ’ ಹಾಗೂ ಆನಂದತೀರ್ಥ ಪ್ಯಾಟಿ ಅವರ ‘ಥಾಯ್ಲೆಂಡ್ ಕೃಷಿ ಪ್ರವಾಸ’ ಪುಸ್ತಕಗಳನ್ನು ಬಿಡುಗಡೆಮಾಡಿ ಮಾತನಾಡಿದರು.

‘ದೆಹಲಿಯ ಗಡಿಯಲ್ಲಿ ರೈತರು ನಡೆಸುತ್ತಿರುವ ಪ್ರತಿಭಟನೆಯನ್ನು ಮುಷ್ಕರದ ಆಚೆಗೂ ನೋಡಬೇಕಿದೆ. ಒಂದೊಮ್ಮೆ ಕೇಂದ್ರವು ನೂತನ ಕಾಯ್ದೆಗಳನ್ನು ಹಿಂದಕ್ಕೆ ಪಡೆದುಕೊಂಡರೂ ಕೃಷಿ ಕ್ಷೇತ್ರದ ಸಮಸ್ಯೆಗಳು ಬಗೆಹರಿಯುವುದಿಲ್ಲ. ರೈತರು ಬಹುರಾಷ್ಟ್ರೀಯ ಕಂಪನಿಗಳನ್ನು ಅವಲಂಬಿಸುವುದು ಮುಂದುವರಿಯುತ್ತದೆ. ಪ್ರತಿಭಟನೆ ಅಂತ್ಯಗೊಂಡ ನಂತರವೂ ಅವರ ಸಂಕಷ್ಟಗಳಿಗೆ ಪರಿಹಾರ ಏನು ಎಂಬ ಬಗ್ಗೆ ಆಲೋಚಿಸಬೇಕಿದೆ’ ಎಂದರು.

ಹಿರಿಯ ಪತ್ರಕರ್ತ ನಾಗೇಶ ಹೆಗಡೆ ‘ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದ ಪ್ರೇರಣಾದಾಯಕ ಪುಸ್ತಕಗಳು ಗ್ರಾಮೀಣ ಯುವಜನತೆಗೆ ತಲುಪಬೇಕಿದೆ. ಆ ಮೂಲಕ ಅವರು ನಗರಗಳತ್ತ ವಲಸೆ ಬರದೆ ಹಳ್ಳಿಗಳಲ್ಲೇ ಉಳಿಯುವಂತೆ ಪ್ರೋತ್ಸಾಹಿಸಬೇಕು’ ಎಂದು ನುಡಿದರು.

ಉರುಳಿಬಿದ್ದ ಕಾರು: ಚಾಲಕ ಸಾವು



ಬೆಂಗಳೂರು: ನೈಸ್ ರಸ್ತೆಯಿಂದ ಸರ್ವೀಸ್ ರಸ್ತೆಗೆ ಕಾರೊಂದು ಉರುಳಿ ಬಿದ್ದಿದ್ದು, ಚಾಲಕ ಪವನ್‌ಕುಮಾರ್ ಜೈನ್ (48) ಸ್ಥಳದಲ್ಲೇ ಮೃತಪಟ್ಟಿದ್ದಾರೆ.

'ಟಿ. ದಾಸರಹಳ್ಳಿ ನಿವಾಸಿ ಪವನ್‌ಕುಮಾರ್, ಪತ್ನಿ ಪುಷ್ಪಾ (40), ಮಗ ವಿನೀತ್ (23) ಹಾಗೂ ಮಗಳು ವರ್ಷಾ (18) ಜೊತೆ ಕೃಷ್ಣಗಿರಿಗೆ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ' ಎಂದು ಬ್ಯಾಡರಹಳ್ಳಿ ಪೊಲೀಸರು ಹೇಳಿದರು.

'ಕೃಷ್ಣಗಿರಿಯ ಜೈನ್ ಮಂದಿರಕ್ಕೆ ಹೋಗುವುದಕ್ಕಾಗಿ ಕುಟುಂಬದ ಸದಸ್ಯರು, ಭಾನುವಾರ ಬೆಳಿಗ್ಗೆ ಮನೆಯಿಂದ ಕಾರಿನಲ್ಲಿ ತೆರಳುತ್ತಿದ್ದರು. ಬ್ಯಾಡರಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ನೈಸ್ ರಸ್ತೆಯಲ್ಲಿ ಅತೀ ವೇಗದಲ್ಲಿ ಕಾರು ಚಲಾಯಿಸಲಾಗಿತ್ತು ಎಂಬುದು ಗೊತ್ತಾಗಿದೆ. ಹೀಗಾಗಿ, ಕಾರು ಉರುಳಿ ಬಿದ್ದಿದೆ. ಈ ಬಗ್ಗೆ ಪ್ರತ್ಯಕ್ಷದರ್ಶಿಗಳು ಹೇಳಿಕೆ ನೀಡಿದ್ದಾರೆ' ಎಂದು ತಿಳಿಸಿದರು.

'ಅವಘಡದಲ್ಲಿ ಕಾರಿನ ಮುಂಭಾಗ ಜಖಂಗೊಂಡಿದೆ. ಪುಷ್ಪಾ, ವಿನಿತ್ ಹಾಗೂ ವರ್ಷಾ ಅವರಿಗೂ ಗಾಯವಾಗಿದೆ. ಅವರೆಲ್ಲ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಪವನ್‌ಕುಮಾರ್ ಅವರ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಗಿದೆ' ಎಂದೂ ತಿಳಿಸಿದರು.

ವಿಮರ್ಶಕ ಎಚ್.ಎಸ್. ರಾಘವೇಂದ್ರ ರಾವ್ ಅಭಿಮತ

‘ಕವಿತೆಗಳಲ್ಲಿ ಸಮಾಜದ ಜತೆಗೆ ಜೀವನ ದರ್ಶನ ಅಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೆಲ ವರ್ಷಗಳಿಂದ ಕವಿತೆಗಳಲ್ಲಿ ಸಮಾಜ ದರ್ಶನಕ್ಕೆ ಹೆಚ್ಚಿನ ಒತ್ತು ನೀಡಿ, ಸಮಗ್ರ ಜೀವನ ದರ್ಶನವನ್ನು ಸ್ವಲ್ಪ ಪಕ್ಕಕ್ಕೆ ಇಟ್ಟಿದ್ದರ ಪರಿಣಾಮವಾಗಿ ಕೆಲವು ಅತಿರೇಕಗಳು ನಿರ್ಮಾಣವಾದವು’ ಎಂದು ವಿಮರ್ಶಕ ಎಚ್.ಎಸ್. ರಾಘವೇಂದ್ರ ರಾವ್ ತಿಳಿಸಿದರು.

ಅಂಕಿತ ಪುಸ್ತಕ ಪ್ರಕಾಶನವು ಬುಕ್ ಬ್ರಹ್ಮ ಸಹಯೋಗದಲ್ಲಿ ಆನ್‌ಲೈನ್‌ನಲ್ಲಿ ಭಾನುವಾರ ಆಯೋಜಿಸಿದ ಕಾರ್ಯಕ್ರಮದಲ್ಲಿ ಚಂದ್ರಶೇಖರ ಕಂಬಾರ ಅವರ ‘ಎಂದೆಂದಿಗೂ ಶಿವಾಪುರ’ ಕವನ ಸಂಕಲನ ಬಿಡುಗಡೆ ಮಾಡಿ ಮಾತನಾಡಿದರು.

‘ಸಮಾಜ ದರ್ಶನದ ಅತಿರೇಕದ ಪರಿಣಾಮ ಕವಿತೆ ವಾದ ಭೂಮಿಯಾಗಿ ಪರಿವರ್ತನೆಯಾಯಿತು. ಅದೇ ರೀತಿ, ವಿಚಾರಧಾರೆ, ಅನುಭವ ಮತ್ತು ಭಾವನೆಗಳ ಮಂಡನೆಗೆ ರಂಗವಾಯಿತು. ಯಾವಾಗ ಇದೆಲ್ಲ ಆಗುತ್ತದೆಯೋ ಆಗ ಭಾಷೆ ಎಂಬ ಅನುಭವಗಳನ್ನು ಅವಲಂಬಿಸಿದ ಕವಿತೆ ಪಕ್ಕಕ್ಕೆ ಸರಿಯುತ್ತದೆ. ಇದರ ಅಪಾಯ ಅರಿತಿದ್ದ ಕಂಬಾರರು ಇತರ ಕವಿಗಳಿಗಿಂತ ಬೇರೆಯಾಗಿ ನಿಲ್ಲುತ್ತಾರೆ. ಅವರದ್ದು ಜೀವನ ಕೇಂದ್ರಿತ ದರ್ಶನವೇ ಹೊರತು ಕೇವಲ ಸಮಾಜ ಕೇಂದ್ರಿತವಾದದ್ದಲ್ಲ. ಕನ್ನಡ ಸಾಹಿತ್ಯಕ್ಕೆ ತನ್ನ ಸಮಕಾಲಿನವರಿಗಿಂತ, ಉತ್ತರಾಧಿಕಾರಿಗಳಿಗಿಂತ ಬಹಳ ಭಿನ್ನವಾದ ಕಾವ್ಯದ ಕೊಡುಗೆಯನ್ನು ಅವರು ನೀಡಿದ್ದಾರೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಲೇಖಕ ಚಂದ್ರಶೇಖರ ಕಂಬಾರ ಮಾತನಾಡಿ, ‘ಕಥೆ, ಕವನ, ಕಾದಂಬರಿ, ನಾಟಕ ಹೀಗೆ ಹಲವು ಪ್ರಕಾರಗಳಲ್ಲಿ ಸಾಹಿತ್ಯ ರಚಿಸಿದ್ದರೂ ಬದುಕು ಸಾರ್ಥಕತೆಯ ಭಾವ ಹೊಂದಿಲ್ಲ. ಆ ಭಾವ ಇದ್ದಿದ್ದರೆ ಮತ್ತೆ ಈ ಕವನ ಸಂಕಲನ ರಚಿಸುವ ಅಗತ್ಯವಿರಲಿಲ್ಲ. ಕೆಲವರು ಕವಿತೆಗಳು ಮಾತಾಗಬೇಕು ಹಾಡಾಗಬಾರದು ಎಂದು ಹೇಳುತ್ತಾರೆ. ಆದರೆ, ನಾನು ರೂಪಕ, ಹಾಡು, ಕಥಾನಕಗಳ ಮೂಲಕ ಹೇಳಲು ಬಯಸುತ್ತೇನೆ. ಅದೇ ನನ್ನ ಕಾವ್ಯದ ಪ್ರಕಾರವಾಗಿದೆ’ ಎಂದು ತಿಳಿಸಿದರು.

ವಿಮರ್ಶಕ ಎಸ್.ಆರ್. ವಿಜಯಶಂಕರ್, ‘ಪಶ್ಚಿಮ ಮತ್ತು ಪೂರ್ವದ ಮುಖಾಮುಖಿಯನ್ನು ಕಂಬಾರರು ಸಾಧಿಸಿಕೊಂಡಿದ್ದಾರೆ. ಆಧುನಿಕ ಹೊಸ ತಲ್ಲಣಕ್ಕೆ ಪ್ರತಿಕ್ರಿಯಿಸುತ್ತಾ ಅವರು ಮುನ್ನಡೆದಿದ್ದಾರೆ. ಅವರು ಸೃಷ್ಟಿಸುವ ಮಿತ್‌ಗಳು ನಿಂತ ನೀರಿನ ಪುನರಾವರ್ತನೆಯಲ್ಲ’ ಎಂದು ಹೇಳಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರ ಸದಸ್ಯ ಸ್ಥಾನಕ್ಕೆ ಕಬ್ಬಿನಾಲೆ ವಸಂತ ಭಾರದ್ವಾಜ್ ರಾಜೀನಾಮೆ

ಪ್ರಜಾವಾಣಿ ವಾರ್ತೆ

ಮೈಸೂರು: ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಸ್ಥಾನಕ್ಕೆ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್ ರಾಜೀನಾಮೆ ನೀಡಿದ್ದಾರೆ.

‘ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಪ್ರಾಧಿಕಾರದ ಅಧ್ಯಕ್ಷರು ಏಕಪಕ್ಷೀಯ ನಿರ್ಧಾರ ತೆಗೆದುಕೊಳ್ಳುತ್ತಿದ್ದಾರೆ. ಸರ್ವಾಧಿಕಾರಿ ರೀತಿ ನಡೆದುಕೊಳ್ಳುತ್ತಿದ್ದಾರೆ. ಅಧ್ಯಕ್ಷರ ವರ್ತನೆಗೆ ಬೇಸತ್ತು ರಾಜೀನಾಮೆ ಸಲ್ಲಿಸಿರುವೆ’ ಎಂದು ಕಬ್ಬಿನಾಲೆ ವಸಂತ ಭಾರದ್ವಾಜ್ ‘ಪ್ರಜಾವಾಣಿ’ಗೆ ತಿಳಿಸಿದರು.



ಕಬ್ಬಿನಾಲೆ ವಸಂತ ಭಾರದ್ವಾಜ್

‘ರಿಜಿಸ್ಟರ್ಡ್ ಅಂಚೆ ಮೂಲಕ ರಾಜೀನಾಮೆ ಸಲ್ಲಿಸಿರುವೆ. ಕನ್ನಡ ಮತ್ತು ಸಂಸ್ಕೃತಿ ಸಚಿವ ಅರವಿಂದ ಲಿಂಬಾವಳಿ ಅವರಿಗೂ ನನ್ನ ರಾಜೀನಾಮೆ ಪತ್ರವನ್ನು ಇ-ಮೇಲ್ ಮಾಡಿರುವೆ. ರಾಜೀನಾಮೆ ಅಂಗೀಕಾರಗೊಂಡ ಮಾಹಿತಿ ನನಗೆ ಇದುವರೆಗೆ ತಲುಪಿಲ್ಲ’ ಎಂದರು.

ಅಪಘಾತ: ಯುವಕ ಸಾವು

ಪ್ರಜಾವಾಣಿ ವಾರ್ತೆ

ವಡ್ಡನಹಳ್ಳಿ (ಹಿರಿಯೂರು): ರಾಷ್ಟ್ರೀಯ ಹೆದ್ದಾರಿ–4ರ ವಡ್ಡನಹಳ್ಳಿ ಸಮೀಪ ಭಾನುವಾರ ಬೊಲೆರೊ ವಾಹನಕ್ಕೆ ಕ್ಯಾಂಟರ್ ಹಿಂದಿನಿಂದ ಬಂದು ಡಿಕ್ಕಿ ಹೊಡೆದು ವ್ಯಕ್ತಿಯೊಬ್ಬರು ಮೃತಪಟ್ಟಿದ್ದು, 6 ಜನರು ಗಾಯಗೊಂಡಿದ್ದಾರೆ.

ಬೆಂಗಳೂರಿನ ಮಂಜಣ್ಣ (24) ಮೃತಪಟ್ಟವರು. ರೇಣುಕಾ, ಕುಮಾರ್, ಲಕ್ಷ್ಮೀ, ಶ್ರೀದೇವಿ, ಸುನಿತಾ, ರವಿಬಸಪ್ಪ ಅವರಿಗೆ ಗಾಯಗಳಾಗಿದ್ದು, ನಗರದ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಲಾಗಿದೆ.

ರವಿಬಸಪ್ಪ ಕುಟುಂಬದವರು ಬೊಲೆರೊ ವಾಹನದಲ್ಲಿ ಬೆಂಗಳೂರಿನಿಂದ ಸವದತ್ತಿ ಯಲ್ಲಮ್ಮ ದೇವಿಯ ದರ್ಶನಕ್ಕೆ ಹೋಗುತ್ತಿದ್ದಾಗ ಕ್ಯಾಂಟರ್ ಡಿಕ್ಕಿ ಹೊಡೆದಿದೆ. ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜನೌಷಧಿ ಕೇಂದ್ರ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: 'ಅತಿ ಕಡಿಮೆ ಬೆಲೆಯಲ್ಲಿ ಗುಣಮಟ್ಟದ ಔಷಧಿಗಳು ಜನೌಷಧಿ ಕೇಂದ್ರದಲ್ಲಿ ಲಭ್ಯವಿದ್ದು ತಾವೂ ಪಡೆದೂ ಇತರರಿಗೂ ತಿಳಿಸಬೇಕು' ಎಂದು ಬಿಜೆಪಿ ಮುಖಂಡ ಎಸ್. ಮುನಿರಾಜು ಹೇಳಿದರು.

ಮಲ್ಲಸಂದ್ರದ ಏಕತಾ ಭವನದಲ್ಲಿ ಜನೌಷಧಿ ದಿನದ ಪ್ರಯುಕ್ತ ಎನ್. ಲೋಕೇಶ್ ನೇತೃತ್ವದಲ್ಲಿ ಸ್ಥಾಪಿಸಲಾದ ಜನೌಷಧಿ ಕೇಂದ್ರ ಉದ್ಘಾಟಿಸಿ ಅವರು ಮಾತನಾಡಿದರು.

'ವೈದ್ಯರು ಬಡಜನರಿಗೆ ಜನೌಷಧಿ ಬರೆದುಕೊಟ್ಟರೆ ಆರ್ಥಿಕ ಹೊರೆ ಕಡಿಮೆಯಾಗುತ್ತದೆ' ಎಂದರು.



ಕೇಂದ್ರವನ್ನು ಮಾಜಿ ಶಾಸಕ ಎಸ್ ಮುನಿರಾಜು ಉದ್ಘಾಟಿಸಿದರು. ಎನ್ ಲೋಕೇಶ್, ಟಿ.ಎಸ್ ಗಂಗರಾಜು ಇದ್ದರು

ದಾಸರಹಳ್ಳಿ ಮಂಡಲ ಅಧ್ಯಕ್ಷ ಎನ್. ಲೋಕೇಶ್, ನಗರ ಜಿಲ್ಲಾ ಉಪಾಧ್ಯಕ್ಷ ಟಿ. ಎಸ್. ಗಂಗರಾಜು, ಬಿಜೆಪಿ ಮುಖಂಡರಾದ ಆರ್. ಸಿ. ದೊರೆ, ರವಿ ಗೌಡ, ಕ್ಷೇತ್ರ ಮಹಿಳಾ ಅಧ್ಯಕ್ಷೆ ಉಮಾದೇವಿ ನಾಗರಾಜು ಇದ್ದರು.

ವ್ಯವಸ್ಥಾಪಕ ಅನುಮಾನಾಸ್ಪದ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಮಾಜಿ ಸದಸ್ಯ ಧನರಾಜ್ ಅವರ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ವ್ಯವಸ್ಥಾಪಕ ಪ್ರಭು (30) ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದು, ಅವರ ಮೃತದೇಹ ನೇಣು ಬಿಗಿದ ಸ್ಥಿತಿಯಲ್ಲಿ ಭಾನುವಾರ ಪತ್ತೆಯಾಗಿದೆ.

‘ತಮಿಳುನಾಡಿನ ಪ್ರಭು, ಕೆಲ ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದರು. ಧರ್ಮರಾಯ ಸ್ವಾಮಿ ದೇವಸ್ಥಾನ ವಾರ್ಡ್‌ನ ಮಾಜಿ ಸದಸ್ಯ ಧನರಾಜ್ ಕಚೇರಿಯಲ್ಲಿ ನಾಲ್ಕು ವರ್ಷಗಳಿಂದ ಪ್ರಭು ಕೆಲಸ ಮಾಡುತ್ತಿದ್ದರು. ಅವರಿಗೆ ಪತ್ನಿ ಹಾಗೂ ಇಬ್ಬರು ಮಕ್ಕಳಿದ್ದಾರೆ’ ಎಂದು ಕಲಾಸಿಪಾಳ್ಯ ಪೊಲೀಸ್ ಮೂಲಗಳು ತಿಳಿಸಿವೆ.



ಪ್ರಭು

‘ಕಚೇರಿ ಚಾವಣಿಯಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಭಾನುವಾರ ಬೆಳಿಗ್ಗೆ ಮೃತದೇಹ ಪತ್ತೆಯಾಗಿದೆ. ಅದನ್ನು ನೋಡಿದ್ದ ಸ್ಥಳೀಯರು ಠಾಣೆಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಹೋಗಿ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಗಿದೆ’ ಎಂದೂ ಹೇಳಿವೆ.

ಪತ್ನಿಯಿಂದ ದೂರು: ‘ಶನಿವಾರ ಎಂದಿನಂತೆ ಕೆಲಸಕ್ಕೆ ಹೋಗಿದ್ದ ಪ್ರಭು, ರಾತ್ರಿಯಾದರೂ ಮನೆಗೆ ವಾಪಸು ಬಂದಿರಲಿಲ್ಲ. ಬೆಳಿಗ್ಗೆ ಬರಬಹುದೆಂದು ಮನೆಯವರು ಸುಮ್ಮನಾಗಿದ್ದರು. ಆದರೆ, ಬೆಳಿಗ್ಗೆಯೇ ಮೃತದೇಹ ಸಿಕ್ಕಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ. ಸಾವಿನ ಬಗ್ಗೆ ಪತ್ನಿ ದೂರು ನೀಡಿದ್ದಾರೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಪ್ರಕರಣವೊಂದರ ಜಾಮೀನಿಗಾಗಿ ಪ್ರಭು ಸಹಿ ಮಾಡಿದ್ದರು. ಅದೇ ವಿಚಾರಕ್ಕಾಗಿ ಇತ್ತೀಚೆಗೆ ಪೊಲೀಸ್ ಠಾಣೆಯೊಂದಕ್ಕೆ ಹೋಗಿ ಬಂದಿದ್ದರು ಎಂಬ ಮಾಹಿತಿ ಸಿಕ್ಕಿದೆ. ಪತಿಯ ಸಾವಿನ ಬಗ್ಗೆ ತನಿಖೆ ನಡೆಸುವಂತೆ ಪತ್ನಿ ದೂರಿನಲ್ಲಿ ಕೋರಿದ್ದಾರೆ. ಇದು ಆತ್ಮಹತ್ಯೆಯೋ ಅಥವಾ ಕೊಲೆಯೋ ಎಂಬುದು ಮರಣೋತ್ತರ ಪರೀಕ್ಷೆ ವರದಿ ಬಂದ ನಂತರ ತಿಳಿಯಬೇಕಿದೆ’ ಎಂದೂ ಮೂಲಗಳು ತಿಳಿಸಿವೆ.

ಪೆಂಕಾಕ್ ಸಿಲತ್ ಪಂದ್ಯಾವಳಿ

ಪ್ರಜಾವಾಣಿ ವಾರ್ತೆ

ನೆಲಮಂಗಲ: ಮಾನಸಿಕವಾಗಿ, ದೈಹಿಕವಾಗಿ ದುರ್ಬಲರಾಗುತ್ತಿರುವ ಪ್ರಸ್ತುತ ಕಾಲಘಟ್ಟದಲ್ಲಿ ಪೆಂಕಾಕ್ ಸಿಲತ್‌ನಂತಹ ಸಮರಕಲೆಗಳು, ಸ್ವಯಂ ರಕ್ಷಣೆಯೊಂದಿಗೆ, ದೇಹಕ್ಕೆ ಚೈತನ್ಯ ನೀಡುತ್ತವೆ ಎಂದು ಪಂದ್ಯಾವಳಿಯ ಪ್ರಾಯೋಜಕ ಮಹೇಂದ್ರ ಮುನ್ನೋಟ್ ತಿಳಿಸಿದರು.

ರಾಜ್ಯ ಪೆಂಕಾಕ್ ಸಿಲತ್ ಸಂಸ್ಥೆಯು ಪಟ್ಟಣದ ಬಸವಣ್ಣದೇವರ ಮಠದ ಆವರಣದಲ್ಲಿ ಹಮ್ಮಿಕೊಂಡಿರುವ ರಾಜ್ಯಮಟ್ಟದ ಪಂದ್ಯಾವಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ‘ಪೆಂಕಾಕ್ ಸಿಲತ್‌ನಂತಹ ಸಮರಕಲೆಗಳ ಅಭ್ಯಾಸ ಮಕ್ಕಳಿಗೆ ಅವಶ್ಯವಾಗಿದೆ‘ ಎಂದರು.

ರಾಜ್ಯ ಪೆಂಕಾಕ್ ಸಿಲತ್ ಸಂಸ್ಥೆಯ ತಾಂತ್ರಿಕ ನಿರ್ದೇಶಕ ಎಸ್.ಪಿ.ಜಗದೀಶ್, ಸಂಸ್ಥೆಯ ಗುರು ಎ.ಜೆಬಮನಿ, ಜಯಪ್ರಸಾದ್, ಗ್ರಾಮಾಂತರ ಜಿಲ್ಲಾ ಘಟಕದ ಅಧ್ಯಕ್ಷ ಕೆ.ಪುಟ್ಟಸ್ವಾಮಯ್ಯ, ರಂಗನಾಥ್ ಇದ್ದರು.

ಅಭಿವೃದ್ಧಿ ಕಾಮಗಾರಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ದೊಡ್ಡಬಿದರಕಲ್ಲು ವಾರ್ಡ್‌ನ ಲಿಂಗಧೀರನಹಳಿ, ಅಂದ್ರಹಳ್ಳಿ, ಡಿ.ಗ್ರೂಪ್ ಬಡಾವಣೆಗಳಿಗೆ ಮನೆಮನೆಗೆ ಕಾವೇರಿ ಕುಡಿಯುವ ನೀರು ಸರಬರಾಜು ಯೋಜನೆಯನ್ನು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಉದ್ಘಾಟಿಸಿದರು.

ದೊಡ್ಡಬಿದರಕಲ್ಲು ವ್ಯಾಪ್ತಿಯ ಎಲ್ಲ ಬಡಾವಣೆಗಳಲ್ಲಿ ₹150 ಕೋಟಿ ವೆಚ್ಚದಲ್ಲಿ ಕೈಗೊಂಡಿರುವ ವಿದ್ಯುತ್ ನೆಲದಡಿ ಕೇಬಲ್ ಅಳವಡಿಕೆ ಕಾಮಗಾರಿ ಮತ್ತು ದೊಡ್ಡಬಿದರಕಲ್ಲು ಪರಿಶಿಷ್ಟ ಜಾತಿಯ ಕಾಲೊನಿಯಲ್ಲಿ ₹5ಕೋಟಿ ವೆಚ್ಚದಲ್ಲಿ ಕೈಗೊಂಡಿರುವ ಕಾಮಗಾರಿಗೆ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ’ಸಂಪೂರ್ಣ ಕಂದಾಯ ಬಡಾವಣೆಗಳು, ಹಳೆಯ ಗ್ರಾಮಗಳು ವಾರ್ಡ್ ವ್ಯಾಪ್ತಿಗೆ ಸೇರಿದ್ದು ಎಲ್ಲ ಬಡಾವಣೆಗೆ ಮೂಲಸೌಲಭ್ಯ ದೊರಕಿಸಿ ಕೊಡಲಾಗುತ್ತಿದೆ‘ ಎಂದರು.

ಬಿಜೆಪಿ ಮುಖಂಡ ಹೊಸಹಳ್ಳಿ ಸತೀಶ್, ಬಿಜೆಪಿ ವಾರ್ಡ್ ಅಧ್ಯಕ್ಷ ಪ್ರಸಾದ್, ಪ್ರಧಾನ ಕಾರ್ಯದರ್ಶಿ ಪ್ರಶಾಂತ್, ಎಪಿಎಂಸಿ ಮಾಜಿ ನಿರ್ದೇಶಕ ಕೂರ್ಲಪ್ಪ ಇದ್ದರು.

ರೌಡಿ ಚಡ್ಡಿಗೆ ಗುಂಡೇಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊಲೆಗೆ ಯತ್ನಿಸಿ ಪರಾರಿಯಾಗಿದ್ದ ರೌಡಿ ಕಿರಣ್ ಅಲಿಯಾಸ್ ಚಡ್ಡಿಯನ್ನು ಪೊಲೀಸರು ಕಾಲಿಗೆ ಗುಂಡು ಹಾರಿಸಿ ಸೆರೆ ಹಿಡಿದಿದ್ದಾರೆ.

'ಬಂಧಿಸಲು ಹೋಗಿದ್ದ ಪೊಲೀಸರ ಮೇಲೆಯೇ ರೌಡಿ ಕಿರಣ್ ಹಲ್ಲೆ ಮಾಡಿದ್ದ. ಆತ್ಮರಕ್ಷಣೆಗಾಗಿ ರಾಜಗೋಪಾಲನಗರ ಠಾಣೆಯ ಪಿಎಸ್‌ಐ ನವೀದ್, ರೌಡಿ ಕಾಲಿಗೆ ಗುಂಡು ಹೊಡೆದು ಬಂಧಿಸಿದ್ದಾರೆ' ಎಂದು ಉತ್ತರ ವಿಭಾಗದ ಡಿಸಿಪಿ ಧರ್ಮೇಂದ್ರಕುಮಾರ್ ಮೀನಾ 'ಪ್ರಜಾವಾಣಿ'ಗೆ ತಿಳಿಸಿದರು.

'ಲಗ್ಗೆರೆ ನಿವಾಸಿ ಕಿರಣ್ ಹಾಗೂ ಆತನ ಸಹಚರರ ವಿರುದ್ಧ 10ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ. ಆತ ಜೈಲಿಗೂ ಹೋಗಿ, ಜಾಮೀನು ಮೇಲೆ ಹೊರಬಂದಿದ್ದ. ಅಪರಾಧ ಕೃತ್ಯ ಎಸಗುವುದನ್ನು ಮುಂದುವರಿಸಿದ್ದ.'

'ಮಾ. 2ರಂದು ವಿನೋದ್ ಹಾಗೂ ಅವರ ಕುಟುಂಬದವರ ಮೇಲೆ ದಾಳಿ ಮಾಡಿದ್ದ ರೌಡಿ ಕಿರಣ್ ಹಾಗೂ ಸಹಚರರು, ಚಾಕುವಿನಿಂದ ಇರಿದು ಕೊಲೆಗೆ ಯತ್ನಿಸಿ ಪರಾರಿಯಾಗಿದ್ದರು. ಈ ಬಗ್ಗೆ ಪ್ರಕರಣ ದಾಖಲಾಗಿತ್ತು. ಪಿಎಸ್‌ಐ ನವೀದ್ ಹಾಗೂ ಸಿಬ್ಬಂದಿ ಆರೋಪಿಗಾಗಿ ಶೋಧ ನಡೆಸುತ್ತಿದ್ದರು' ಎಂದೂ ಅವರು ಹೇಳಿದರು.

'ಲಗ್ಗೆರೆ ಸೇತುವೆ ಬಳಿ ಭಾನುವಾರ ನಸುಕಿನಲ್ಲಿ ರೌಡಿ ಸಹಚರನೊಂದಿಗೆ ದ್ವಿಚಕ್ರ ವಾಹನದಲ್ಲಿ ಹೊರಟಿದ್ದ ಮಾಹಿತಿ ಸಿಕ್ಕಿತ್ತು. ಸ್ಥಳಕ್ಕೆ ಹೋಗಿದ್ದ ಪೊಲೀಸರು ಶರಣಾಗುವಂತೆ ಹೇಳಿದ್ದರು. ರೌಡಿ ಹಾಗೂ ಆತನ ಸಹಚರ ದ್ವಿಚಕ್ರ ವಾಹನವನ್ನು ವೇಗವಾಗಿ ಚಲಾಯಿಸಿಕೊಂಡು ಹೊರಟಿದ್ದರು. ಪೊಲೀಸರು ಬೆನ್ನಟ್ಟಿದ್ದರು.'

‘ಮಾರ್ಗಮಧ್ಯೆಯೇ ಕಾನ್‌ಸ್ಟೆಬಲ್ ಬಸವಣ್ಣ ರೌಡಿಯನ್ನು ಹಿಡಿದುಕೊಳ್ಳಲು ಮುಂದಾಗಿದ್ದರು. ಅದೇ ಸಂದರ್ಭದಲ್ಲೇ ರೌಡಿಯ ಸಹಚರ ದಾಸ್, ಕಾನ್‌ಸ್ಟೆಬಲ್ ಅವರ ಕೈಗೆ ಚಾಕುವಿನಿಂದ ಇರಿದಿದ್ದ. ರೌಡಿ ಸಹ ದಾಳಿ ಮಾಡಲು ಮುಂದಾಗಿದ್ದ. ಆಗ ಪಿಎಸ್‌ಐ ರೌಡಿಯ ಬಲಗಾಲಿಗೆ ಗುಂಡು ಹಾರಿಸಿದ್ದರು. ಸ್ಥಳದಲ್ಲೇ ಕುಸಿದು ಬಿದ್ದಿದ್ದ ರೌಡಿಯನ್ನು ಪೊಲೀಸರು ಆಸ್ಪತ್ರೆಗೆ ಸೇರಿಸಿದ್ದಾರೆ. ಕಾನ್‌ಸ್ಟೆಬಲ್ ಸಹ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದೂ ಅವರು ತಿಳಿಸಿದರು.



ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ರೌಡಿ ಚಡ್ಡಿ

ವಿದುರಾಶ್ವತ್ಥದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಸಂಭ್ರಮ

12ರಂದು ಅಮೃತ ಮಹೋತ್ಸವ


ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಸ್ವಾತಂತ್ರ್ಯ ಸಂಗ್ರಾಮದ 75ನೇ ವರ್ಷದ ಸಂಭ್ರಮದ ಅಂಗವಾಗಿ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ ಕಾರ್ಯಕ್ರಮ ಮಾರ್ಚ್ 12 ರಂದು ಗೌರಿಬಿದನೂರಿನ ವಿದುರಾಶ್ವತ್ಥದಲ್ಲಿ ನಡೆಯಲಿದೆ.

ಅಮೃತ ಮಹೋತ್ಸವದ ಕಾರ್ಯಕ್ರಮಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಮಾ. 12ರಂದು ಚಾಲನೆ ನೀಡುವರು. ದೇಶದಾದ್ಯಂತ ಆಯ್ದ 75 ಸ್ಥಳಗಳಲ್ಲಿ ಕಾರ್ಯಕ್ರಮ ಜರುಗಲಿದೆ. ರಾಜ್ಯದಲ್ಲಿ ಗೌರಿಬಿದನೂರು ತಾಲ್ಲೂಕಿನ ವಿದುರಾಶ್ವತ್ಥವನ್ನು ಆಯ್ಕೆ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಆರ್. ಲತಾ ತಿಳಿಸಿದರು.

ಅಂದು ಬೆಳಿಗ್ಗೆ ವಿದುರಾಶ್ವತ್ಥದ ವೀರಸೌಧ ಸ್ಮಾರಕ ಪಕ್ಕ ಯೋಗಾಸನ, ಗೌರಿಬಿದನೂರಿನಿಂದ-ವಿದುರಾಶ್ವತ್ಥ ಮಾರ್ಗವಾಗಿ ಸೈಕಲ್ ರ‍್ಯಾಲಿ, ಸ್ವಾತಂತ್ರ್ಯ ಸ್ಮಾರಕಕ್ಕೆ ಗೌರವ ಸಮರ್ಪಣೆ, ಕರ್ನಾಟಕ ಜಲಿಯನ್ ವಾಲಾಬಾಗ್ ಸ್ವಾತಂತ್ರ್ಯ ಸಂಗ್ರಾಮದ ಕಿರುಚಿತ್ರ ಪ್ರದರ್ಶನ, ಭಾರತ ಸ್ವಾತಂತ್ರ್ಯ ಸಂಗ್ರಾಮದ ವಿರಾಟ್ ಚಿತ್ರ-ಇತಿಹಾಸ ದರ್ಶನ, ನಾಟಕ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದ ಪ್ರಯುಕ್ತ ಶಾಲಾ ಹಾಗೂ ಕಾಲೇಜು ಹಂತದಲ್ಲಿ ತಾಲ್ಲೂಕು, ಜಿಲ್ಲಾ ಮಟ್ಟದಲ್ಲಿ ಪ್ರಬಂಧ ಸ್ಪರ್ಧೆ, ಸ್ವಾತಂತ್ರ್ಯ ಸಂಗ್ರಾಮದ ಕುರಿತು ವಿಚಾರ ಸಂಕಿರಣ ಹಾಗೂ ಎಲ್ಲ ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಕಂದಾಯ ಹೋಬಳಿ ಮಟ್ಟದಲ್ಲಿ ವಿವಿಧ ಕಾರ್ಯಕ್ರಮ ನಡೆಯಲಿವೆ ಎಂದು ತಿಳಿಸಿದರು.



ವಿವಿಧ ಇಲಾಖೆಯ ಅಧಿಕಾರಿಗಳ ಸಭೆ ನಡೆಸಿದ ಜಿಲ್ಲಾಧಿಕಾರಿ ಆರ್ ಲತಾ ಅಮೃತ ಮಹೋತ್ಸವದ ಕಾರ್ಯಕ್ರಮಗಳ ಜವಾಬ್ದಾರಿಗಳನ್ನು ಹಂಚಿಕೆ ಮಾಡಿದರು

ಹೈದರಾಬಾದ್ ರೇಸ್

‘ಪಾಸೊ ರೋಬಲ್ಸ್’ ಗೆಲ್ಲುವ ನಿರೀಕ್ಷೆ

ರಾಯಲ್ ಲ್ಯಾನ್ಸರ್ ಪ್ಲೇಟ್ ಸೋಮವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ‘ಪಾಸೊ ರೋಬಲ್ಸ್’ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.45ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಫಾಟುಮ 11, ಬೋಲ್ಡ್ ಬಿಡ್ಡಿಂಗ್ 10, ಇಂಡಿಯನ್ ಗ್ಲೋರಿ 3

2ನೇ ರೇಸ್: ಎನ್ ಆರ್ ಐ ಸನ್ 4, ಜಸ್ಟ್ ಇಂಕ್ರೆಡಿಬಲ್ 1, ಸ್ಟಾರ್ ರೇಸರ್ 2

3ನೇ ರೇಸ್: ಕೇಸರಿಯ ಬಾಲಮ್ 5, ವಿಜಯ ಸಿಂಹ 9, ಮಾರ್ಕ್ ಮೈ ಡೇ 10

4ನೇ ರೇಸ್: ಪಾಸೊ ರೋಬಲ್ಸ್ 2, ಹ್ಯಾವೆಲಾಕ್ ಕ್ರೂಝ್ 4, ಯುವರ್ಸ್ ಫಾರೆವರ್ 1

5ನೇ ರೇಸ್: ಬ್ಲಿಕ್‌ಫ್ಲ್ಯಾಂಗ್ 7, ಡ್ಯಾನ್ಸಿಂಗ್ ಡಾಲ್ 5, ಏಂಜೆಲ್ ಟೆಸೊರೊ 1

6ನೇ ರೇಸ್: ಫ್ಲೈಯಿಂಗ್ ಜೆಟ್ 1, ಕ್ಯಾಸ್ಲ್ ರಾಕ್ 4, ಸ್ಟಾರ್ ಡ್ಯಾನ್ಸರ್ 2

7ನೇ ರೇಸ್: ಸೋಲ್ ಎಂಪ್ರೆಸ್ 2, ಸಬ್‌ಲೈಮ್ 11, ಸೂಪರ್ ಆ್ಯಕ್ಟ್ 12

8ನೇ ರೇಸ್: ರೆಡ್ ರಿವರ್ 1, ಎನ್ ಆರ್ ಐ ಗಿಫ್ಟ್ 3, ಬೆಡಾಜಲ್ಡ್ 6

ಉತ್ತಮ ಬೆಟ್: ಕೇಸರಿಯ ಬಾಲಮಾ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	1,2,3	3,4,5	6,7,8

ಬೆಂಗಳೂರು: ಮೊದಲ ಕೋವಿಡ್ ಪ್ರಕರಣಕ್ಕೆ ತುಂಬಿತು ವರ್ಷ

ಆತಂಕದ ಕ್ಷಣಗಳ ನೆನಪು ಇನ್ನೂ ಹಸಿಹಸಿ

● ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ನಗರದಲ್ಲಿ ಮೊಟ್ಟಮೊದಲ ಕೋವಿಡ್ ಪ್ರಕರಣ ಪತ್ತೆಯಾಗಿ ಸೋಮವಾರಕ್ಕೆ ಒಂದು ವರ್ಷ ತುಂಬಿದೆ. ಕೋವಿಡ್ ನಿಯಂತ್ರಣಕ್ಕೆ ಮಾದರಿ ಮಾರ್ಗಸೂಚಿಗಳೇ ಇಲ್ಲದ ಸಂದರ್ಭದಲ್ಲಿ ರೋಗಿಗಳನ್ನು ಆಸ್ಪತ್ರೆಗೆ ದಾಖಲಿಸುವುದರಿಂದ ಹಿಡಿದು, ಅವರ ಸಂಪರ್ಕಕ್ಕೆ ಬಂದವರನ್ನು ಪತ್ತೆ ಹಚ್ಚಿ, ಸೋಂಕು ಹರಡದಂತೆ ನಿಯಂತ್ರಿಸುವ ಸವಾಲಿನ ಕ್ಷಣಗಳು ನಗರ ಜಿಲ್ಲಾಡಳಿತ ಹಾಗೂ ಬಿಬಿಎಂಪಿ ಅಧಿಕಾರಿಗಳ ಮನಸ್ಸಿನಲ್ಲಿ ಈಗಲೂ ಹಸಿ ಹಸಿಯಾಗಿವೆ.

ಅಮೆರಿಕದಿಂದ ಮರಳಿದ್ದ ಸಾಫ್ಟ್‌ವೇರ್ ಎಂಜಿನಿಯರ್ (40) ಒಬ್ಬರು ಕೋವಿಡ್ ಹೊಂದಿರುವುದು 2020ರ ಮಾರ್ಚ್ 8ರಂದು ದೃಢಪಟ್ಟಿತ್ತು. ಕಾಡುಗೋಡಿ ನಿವಾಸಿಯಾಗಿದ್ದ ಅವರು ಮಾರ್ಚ್ 1 ರಂದು ಬೆಂಗಳೂರಿಗೆ ಮರಳಿದ್ದರು. ಆಗ ಅವರಲ್ಲಿ ಸೋಂಕಿನ ಯಾವುದೇ ಲಕ್ಷಣಗಳಿರಲಿಲ್ಲ. ಕೋವಿಡ್ ಲಕ್ಷಣಗಳು ಕಾಣಿಸಿಕೊಂಡಿದ್ದರಿಂದ ಮಾರ್ಚ್ 4ರಂದು ಕೋವಿಡ್ ಪರೀಕ್ಷೆಗೆ ಒಳಪಡಿಸಲಾಗಿತ್ತು. ಫಲಿತಾಂಶ ಬಂದಾಗ ಅವರು ಸೋಂಕು ಹೊಂದಿರುವುದು ಖಚಿತವಾಗಿತ್ತು. ಬಳಿಕ ಅವರ ಪತ್ನಿ ಹಾಗೂ ಮಗಳೂ ಕೋವಿಡ್ ಹೊಂದಿರುವುದು ಕಂಡು ಬಂದಿತ್ತು.

‘ನಗರದಲ್ಲಿ ಮೊದಲ ವ್ಯಕ್ತಿಗೆ ಸೋಂಕು ಕಾಣಿಸಿಕೊಂಡಾಗ, ಕೋವಿಡ್ ಪೀಡಿತರ ಚಿಕಿತ್ಸೆ ಹಾಗೂ ಅವರ ಸಂಪರ್ಕಕ್ಕೆ ಬಂದವರ ಪತ್ತೆ ಹಾಗೂ ಸೋಂಕು ನಿಯಂತ್ರಣಕ್ಕೆ ಯಾವುದೇ ಖಚಿತ ಮಾರ್ಗಸೂಚಿಗಳೂ ಇರಲಿಲ್ಲ. ರೋಗದ ಬಗ್ಗೆ ಜನರಲ್ಲಿ ಮಾತ್ರವಲ್ಲ ಅಧಿಕಾರಿ ಮತ್ತು ಸಿಬ್ಬಂದಿಯಲ್ಲೂ ಭಾರಿ ಆತಂಕವಿತ್ತು. ಸೋಂಕಿತರನ್ನು ಪತ್ತೆ ಹಚ್ಚಿ ಅವರನ್ನು ಆಸ್ಪತ್ರೆಗೆ ದಾಖಲಿಸುವುದು ಹಾಗೂ ಸೋಂಕು ಹರಡದಂತೆ ತಡೆಯಲು ಕ್ರಮ ಕೈಗೊಳ್ಳುವುದು ನಿಜಕ್ಕೂ ಸವಾಲಿನ ಕ್ಷಣಗಳು’ ಎಂದು ನಗರ ಜಿಲ್ಲೆಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಶ್ರೀನಿವಾಸ್ ಮೆಲುಕು ಹಾಕಿದರು.

‘ರೋಗಿಯು ವಾಸವಾಗಿದ್ದ ಕಾಡುಗೋಡಿಯ ಅಪಾರ್ಟ್‌ಮೆಂಟ್ ಸಮುಚ್ಚಯದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದವರ ಜೊತೆ ಅಂದು ರಾತ್ರಿ 1 ಗಂಟೆವರೆಗೆ ಸಮಾಲೋಚನೆ ನಡೆಸಿ, ವಹಿಸಬೇಕಾದ ಮುನ್ನೆಚ್ಚರಿಕಾ ಕ್ರಮಗಳ ಬಗ್ಗೆ ವಿವರಿಸಿದ್ದೆ. ಇಡೀ ಅಪಾರ್ಟ್‌ಮೆಂಟ್ ಸಮುಚ್ಚಯಕ್ಕೆ ಸೋಂಕು ನಿವಾರಕ ಸಿಂಪಡಿಸಿದ್ದೆವು. ಅಲ್ಲಿನ ಪ್ರತಿ ಮನೆಗಳಿಗೂ ದಿನಸಿ, ಹಾಲು ಇತರ ಅಗತ್ಯ ವಸ್ತುಗಳನ್ನು ಪೂರೈಸಲು ಕ್ರಮ ಕೈಗೊಂಡೆವು. ಅಲ್ಲಿನ ನಿವಾಸಿಗಳ್ಯಾರೂ ಹೊರಗಡೆ ಬರುವುದಕ್ಕೆ ಅವಕಾಶ ನೀಡಲಿಲ್ಲ. ಅವರೂ ನಮ್ಮೊಂದಿಗೆ ಸಹಕರಿಸಿದ್ದರು’ ಎಂದು ಅವರು ತಿಳಿಸಿದರು.

‘ಕರ್ತವ್ಯವನ್ನು ನಿರ್ವಹಿಸಲೇಬೇಕಿತ್ತು. ನನ್ನ ಪತ್ನಿ ಪ್ರಸೂತಿ ತಜ್ಞೆ. ನಾವಿಬ್ಬರೂ ಸೋಂಕಿಗೆ ಒಳಗಾಗದಂತೆ ಬಹಳ ಮುನ್ನೆಚ್ಚರಿಕೆ ವಹಿಸಿದ್ದೆವು. ಈ ನಡುವೆಯೂ, ನನ್ನ ಮಕ್ಕಳನ್ನು ಊರಿಗೆ ಕಳುಹಿಸಿದ್ದೆ’ ಎಂದು ಅವರು ತಿಳಿಸಿದರು.

ಆಗ ಕಾಡುಗೋಡಿ ಪ್ರದೇಶದ ಸೋಂಕು ನಿಯಂತ್ರಣ ಕಾರ್ಯವನ್ನು ನಗರ ಜಿಲ್ಲಾಡಳಿತ ನಿಭಾಯಿಸುತ್ತಿತ್ತು.

ಅಂಕಿ ಅಂಶ

4,08,029 ಬೆಂಗಳೂರು ನಗರದಲ್ಲಿ ಇದುವರೆಗೆ ಕೋವಿಡ್ ದೃಢಪಟ್ಟವರು (ಮಾರ್ಚ್ 7ರವರೆಗೆ)

2,54,528 ಕೋವಿಡ್ ದೃಢಪಟ್ಟ ಒಟ್ಟು ಪುರುಷರು (ಮಾರ್ಚ್ 7ರವರೆಗೆ)

1,53, 429 ಕೋವಿಡ್ ಪತ್ತೆಯಾದ ಒಟ್ಟು ಮಹಿಳೆಯರು

72 ಕೋವಿಡ್ ದೃಢಪಟ್ಟ ತೃತೀಯಲಿಂಗಿಗಳು

3,98,540 ಕೋವಿಡ್‌ನಿಂದ ಚೇತರಿಸಿಕೊಂಡವರು

4,989 ಪ್ರಸ್ತುತ ಕೋವಿಡ್ ಹೊಂದಿರುವವರು

4,500 ಕೋವಿಡ್‌ನಿಂದ ಮೃತ ಪಟ್ಟವರು

1.10% ಕೋವಿಡ್ ಸೋಂಕಿತರ ಮರಣ ದರ

78,69,556 ನಗರದಲ್ಲಿ ಇದುವರೆಗೆ ನಡೆಸಿರುವ ಕೋವಿಡ್ ಪರೀಕ್ಷೆಗಳು

ಪರೀಕ್ಷೆಗೊಳಪಟ್ಟವರಲ್ಲಿ ಸೋಂಕು ಪತ್ತೆ ದರ

ತಿಂಗಳು	ದರ (%)
2020ರ ಜೂನ್	4.63
ಜುಲೈ	23.84
ಆಗಸ್ಟ್	13.91
ಸೆಪ್ಟೆಂಬರ್	12.21
ಅಕ್ಟೋಬರ್	7.85
ನವೆಂಬರ್	2.19
ಡಿಸೆಂಬರ್	1.42
ಜನವರಿ 2021	0.91
ಫೆಬ್ರುವರಿ	0.94
ಮಾರ್ಚ್ (ಇದುವರೆಗೆ)	0.99

ಕೋವಿಡ್ ಕಾಣಿಸಿಕೊಂಡ ಬಳಿಕ ಭಾನುವಾರ ಹೊರತುಪಡಿಸಿ ಒಂದು ದಿನವೂ ರಜೆ ಪಡೆಯದೆ ಕೆಲಸ ಮಾಡಿದ್ದೇನೆ. ಈ ರೋಗ ನಮಗೂ ಹಲವಾರು ಪಾಠ ಕಲಿಸಿದೆ.

ಡಾ.ಶ್ರೀನಿವಾಸ್
ಡಿಎಚ್‌ಒ, ಬೆಂಗಳೂರು ನಗರ ಜಿಲ್ಲೆ

‘ಸೋಂಕಿತನ ರಾತ್ರೋರಾತ್ರಿ ಕರೆದೊಯ್ದೆವು’

ಬಿಬಿಎಂಪಿ ವ್ಯಾಪ್ತಿಯಲ್ಲಿ ಮೊದಲ ರೋಗ ಪತ್ತೆಯಾಗಿದ್ದು ಇಂದಿರಾ ನಗರದಲ್ಲಿ. ಅಮೆರಿಕದಿಂದ ಮರಳಿದ್ದ ವ್ಯಕ್ತಿಗೆ ಸೋಂಕು ಕಾಣಿಸಿಕೊಂಡಿತ್ತು.

‘ಆ ಯುವಕನ್ನು ಆಸ್ಪತ್ರೆಗೆ ಸೇರಿಸಲು ಮನೆಯಿಂದ ಕರೆದೊಯ್ದಿದ್ದು ರಾತ್ರಿ ವೇಳೆ. ಜನ ಆತಂಕಕ್ಕೆ ಒಳಗಾಗುತ್ತಾರೆ ಎಂಬ ಕಾರಣಕ್ಕೆ ಆಂಬುಲೆನ್ಸ್ ಮನೆಗಿಂತ ಸ್ವಲ್ಪ ದೂರದಲ್ಲೇ ನಿಲ್ಲಿಸಿದ್ದೆವು. ಸೋಂಕಿತ ವ್ಯಕ್ತಿಯು ಸ್ವಲ್ಪ ದೂರ ನಡೆದುಕೊಂಡೇ ಬಂದು ನಂತರ ಆಂಬುಲೆನ್ಸ್ ಹತ್ತಿದ್ದರು’ ಎಂದು ನೆನಪಿಸಿಕೊಳ್ಳುತ್ತಾರೆ ಬಿಬಿಎಂಪಿಯ ಪೂರ್ವ ವಲಯದ ಆರೋಗ್ಯಾಧಿಕಾರಿ ಎ.ಸಿದ್ದಪ್ಪಾಜಿ.

‘ಆ ಯುವಕ ವಿಮಾನನಿಲ್ದಾಣದಿಂದ ಯಾವ ಟ್ಯಾಕ್ಸಿಯಲ್ಲಿ ಬಂದ, ಎಲ್ಲೆಲ್ಲಿ ಅಡ್ಡಾಡಿದ್ದ ಎಂಬೆಲ್ಲ ಮಾಹಿತಿ ಕಲೆ ಹಾಕಿದ್ದು, ಅವನ ಸಂಪರ್ಕಕ್ಕೆ ಬಂದವನ್ನು ಪತ್ತೆ ಹಚ್ಚಿ ಕ್ವಾರಂಟೈನ್‌ಗೆ ಒಳಪಡಿಸಿದ್ದು ಎಲ್ಲವೂ ಒಂದು ವಿಶೇಷ ಅನುಭವ’ ಎಂದು ಮೆಲುಕು ಹಾಕಿದರು.

‘ಒಬ್ಬೊಬ್ಬ ರೋಗಿಯ ಮನೆಯನ್ನು ಪತ್ತೆ ಹಚ್ಚುವುದಕ್ಕೂ ಹರಸಾಹಸ ಪಟ್ಟಿದ್ದೆವು. ಸೋಂಕಿತರ ಸಂಪರ್ಕಕ್ಕೆ ಬಂದವರನ್ನು ಕ್ವಾರಂಟೈನ್‌ಗೆ ಒಳಗಾಗುವಂತೆ ಮನವೊಲಿಸಲು ಹೆಣಗಾಡಬೇಕಿತ್ತು’ ಎಂದರು.

ಪ್ರಜಾವಾಣಿ ವಿಶೇಷ

ಕೋವಿಡ್: ರಾಜ್ಯದಲ್ಲಿ ಏಳು ದಿನಗಳಲ್ಲಿ 3,764 ಪ್ರಕರಣ ದೃಢ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಭಾನುವಾರ 622 ಕೋವಿಡ್ ಪ್ರಕರಣಗಳು ದೃಢಪಟ್ಟಿದ್ದು, ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 9.55 ಲಕ್ಷ ದಾಟಿದೆ.

ಕೋವಿಡ್ ಪ್ರಕರಣಗಳ ಸಂಖ್ಯೆ ಏರುಗತಿ ಪಡೆದುಕೊಂಡಿದೆ. ಈ ತಿಂಗಳು ಏಳು ದಿನಗಳ ಅವಧಿಯಲ್ಲಿ 3,764 ಮಂದಿ ಕೋವಿಡ್ ಪೀಡಿತರಾಗಿರುವುದು ಖಚಿತಪಟ್ಟಿದೆ. ಸೋಂಕಿತರಲ್ಲಿ ಬೆಂಗಳೂರಿನಲ್ಲಿ ಮೂವರು ಮೃತಪಟ್ಟಿದ್ದಾರೆ. ಸಾವಿಗೀಡಾದವರ ಒಟ್ಟು ಸಂಖ್ಯೆ 12,362ಕ್ಕೆ ತಲುಪಿದೆ. ಕೋವಿಡ್ ಪೀಡಿತರಲ್ಲಿ 351 ಮಂದಿ ಗುಣಮುಖರಾಗಿದ್ದು, ಚೇತರಿಸಿಕೊಂಡವರ ಸಂಖ್ಯೆ 9.35 ಲಕ್ಷ ದಾಟಿದೆ.

ಒಂದು ದಿನದ ಅವಧಿಯಲ್ಲಿ 75 ಸಾವಿರ ಪರೀಕ್ಷೆ ನಡೆಸಲಾಗಿದೆ. ಈವರೆಗೆ 1.93 ಕೋಟಿ ಮಂದಿ ಪರೀಕ್ಷೆ ಮಾಡಿಸಿಕೊಂಡಿದ್ದಾರೆ. ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತಷ್ಟು ಏರಿಕೆಯಾಗಿದ್ದು, 6,862 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಅವರಲ್ಲಿ 115 ಮಂದಿ ತೀವ್ರ ನಿಗಾ ಘಟಕದಲ್ಲಿ ಇದ್ದಾರೆ. ಬ್ರಿಟನ್‌ನಿಂದ ಮತ್ತೆ 272 ಮಂದಿ ಇಲ್ಲಿಗೆ ಬಂದಿದ್ದಾರೆ. ಕಳೆದ ನ.25ರಿಂದ ಈವರೆಗೆ ಬಂದವರ ಸಂಖ್ಯೆ 13,487ಕ್ಕೆ ತಲುಪಿದೆ. ಅವರಲ್ಲಿ 64 ಮಂದಿ ಕೋವಿಡ್ ಪೀಡಿತರಾಗಿದ್ದಾರೆ.


ಬೆಂಗಳೂರಿನಲ್ಲಿ 389 ಮಂದಿ ಕೋವಿಡ್ ಪೀಡಿತರಾಗಿದ್ದು, ಸೋಂಕಿತರ ಸಂಖ್ಯೆ 4.08 ಲಕ್ಷ ದಾಟಿದೆ. ಕಲಬುರ್ಗಿಯಲ್ಲಿ 34, ಉಡುಪಿಯಲ್ಲಿ 30, ತುಮಕೂರಿನಲ್ಲಿ 25, ಬೀದರ್‌ನಲ್ಲಿ 24, ಧಾರವಾಡ ಮತ್ತು ದಕ್ಷಿಣ ಕನ್ನಡದಲ್ಲಿ ತಲಾ 16 ಪ್ರಕರಣಗಳು ಹೊಸದಾಗಿ ವರದಿಯಾಗಿವೆ.

ನಗರದ ಕೋವಿಡ್ ಪ್ರಕರಣಗಳು

4,08,025 ಒಟ್ಟು ಸೋಂಕಿತರು

3,98,540 ಗುಣಮುಖರಾದವರು

4,985 ಸಕ್ರಿಯ ಪ್ರಕರಣ



ಭಾನುವಾರದ ಏರಿಕೆ

389 ದೃಢಪಟ್ಟ ಪ್ರಕರಣ

175 ಗುಣಮುಖ

3 ಸಾವು

3 ಸಾವಿರ ಆರೋಗ್ಯ ಕೇಂದ್ರಗಳಲ್ಲಿ ಲಸಿಕೆ ನೀಡಲು ವ್ಯವಸ್ಥೆ

ಪಿಂಕ್ ಬೂತ್‌ಗಳಲ್ಲಿ ಲಸಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವ ಮಹಿಳಾ ದಿನಾಚರಣೆಯ ಪ್ರಯುಕ್ತ ಸೋಮವಾರ ಬೆಂಗಳೂರಿನ ಸಿ.ವಿ. ರಾಮನ್ ಆಸ್ಪತ್ರೆ ಹಾಗೂ ರಾಜ್ಯದ ಎಲ್ಲ ಜಿಲ್ಲಾ ಆಸ್ಪತ್ರೆಗಳಲ್ಲಿ ಒಂದೊಂದು ಪಿಂಕ್ ಬೂತ್‌ಗಳನ್ನು ನಿರ್ಮಿಸಿ, ಅಲ್ಲಿ ಮಹಿಳಾ ಫಲಾನುಭವಿಗಳಿಗೆ ಲಸಿಕೆ ವಿತರಿಸಲಾಗುತ್ತದೆ.

ಪಿಂಕ್ ಬೂತ್‌ಗಳಲ್ಲಿ ಮಹಿಳಾ ಸಿಬ್ಬಂದಿ ಮಾತ್ರ ಕಾರ್ಯನಿರ್ವಹಿಸುತ್ತಾರೆ. ಕೋವಿಡ್ ಪ್ರಕರಣಗಳು ಹೆಚ್ಚಳವಾಗುತ್ತಿರುವ ಕಾರಣ ಲಸಿಕೆ ವಿತರಣೆ ಅಭಿಯಾನಕ್ಕೆ ವೇಗ ನೀಡಲು ಆರೋಗ್ಯ ಇಲಾಖೆ ನಿರ್ಧರಿಸಿದೆ. ಸೋಮವಾರದಿಂದ ರಾಜ್ಯದ ಎಲ್ಲ ತಾಲ್ಲೂಕು ಆಸ್ಪತ್ರೆಗಳು, ಜಿಲ್ಲಾ ಆಸ್ಪತ್ರೆಗಳು, ಸರ್ಕಾರಿ ಹಾಗೂ ಖಾಸಗಿ ವೈದ್ಯಕೀಯ ಕಾಲೇಜುಗಳು ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ವಾರದ ಎಲ್ಲ ದಿನಗಳು ಲಸಿಕೆ ವಿತರಣೆ ನಡೆಯಲಿದೆ. 3 ಸಾವಿರ ಆರೋಗ್ಯ ಕೇಂದ್ರಗಳಲ್ಲಿ ಲಸಿಕೆ ವಿತರಣೆಗೆ ವ್ಯವಸ್ಥೆ ಮಾಡಲಾಗಿದ್ದು, ದಿನವೊಂದಕ್ಕೆ 1.50 ಲಕ್ಷ ಮಂದಿಗೆ ಲಸಿಕೆ ನೀಡುವ ಗುರಿಯನ್ನು ಇಲಾಖೆ ಹೊಂದಿದೆ.

ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಸೋಮವಾರ, ಬುಧವಾರ, ಶುಕ್ರವಾರ ಮತ್ತು ಶನಿವಾರ ಲಸಿಕೆ ವಿತರಿಸಲಾಗುತ್ತದೆ. ಎಲ್ಲ ಕೇಂದ್ರಗಳು ಬೆಳಿಗ್ಗೆ 10 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ಕಾರ್ಯನಿರ್ವಹಿಸಲಿವೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ದಿನಕ್ಕೆ 50 ರಿಂದ 100 ಮಂದಿಗೆ ಲಸಿಕೆ ನೀಡಲಾಗುತ್ತದೆ. ಸಮುದಾಯ ಆರೋಗ್ಯ ಕೇಂದ್ರಗಳು, ತಾಲ್ಲೂಕು ಸರ್ಕಾರಿ ಆಸ್ಪತ್ರೆಗಳಲ್ಲಿ 200 ಮಂದಿಗೆ, 200 ಹಾಸಿಗೆಗಳ ಖಾಸಗಿ ಆಸ್ಪತ್ರೆಗಳಲ್ಲಿ 100 ಮಂದಿಗೆ, ಜಿಲ್ಲಾ ಆಸ್ಪತ್ರೆಗಳು, ವೈದ್ಯಕೀಯ ಕಾಲೇಜುಗಳು ಹಾಗೂ 200ಕ್ಕೂ ಅಧಿಕ ಹಾಸಿಗೆಗಳನ್ನು ಹೊಂದಿರುವ ಖಾಸಗಿ ಆಸ್ಪತ್ರೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಲಸಿಕೆ ವಿತರಿಸಲು ಇಲಾಖೆ ಸೂಚಿಸಿದೆ.



ಮಹಿಳಾ ದಿನಾಚರಣೆ ಪ್ರಯುಕ್ತ ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಪಡೆ (ಕೆಎಸ್‌ಆರ್‌ಪಿ) ವತಿಯಿಂದ ಭಾನುವಾರ ನಗರದಲ್ಲಿ ಸೈಕಲ್ ಜಾಥಾ ನಡೆಸಲಾಯಿತು. ಎಡಿಜಿಪಿ ಅಲೋಕ್ ಕುಮಾರ್ ಹಾಗೂ ಇತರರು ಜಾಥಾದಲ್ಲಿ ಭಾಗವಹಿಸಿದರು

ಮಹಾರಾಷ್ಟ್ರ: ಒಂದೇ ದಿನ 11 ಸಾವಿರ ಕೋವಿಡ್ ಪ್ರಕರಣಗಳು ಪತ್ತೆ

ಮುಂಬೈ: ಮಹಾರಾಷ್ಟ್ರದಲ್ಲಿ ಭಾನುವಾರ ಒಂದೇ ದಿನ 11,141 ಕೋವಿಡ್–19 ಪ್ರಕರಣಗಳು ಪತ್ತೆಯಾಗಿದ್ದು, 38 ಮಂದಿ ಸಾವಿಗೀಡಾಗಿದ್ದಾರೆ.

ಶುಕ್ರವಾರ ಮತ್ತು ಶನಿವಾರ ಕ್ರಮವಾಗಿ 10,216 ಮತ್ತು 10,187 ಪ್ರಕರಣಗಳು ಪತ್ತೆಯಾಗಿದ್ದವು. ಭಾನುವಾರ ಮುಂಬೈ ನಗರವೊಂದರಲ್ಲೇ 1,361 ಪ್ರಕರಣಗಳು ಪತ್ತೆಯಾಗಿವೆ. ರಾಜ್ಯದಲ್ಲಿ ಪ್ರಸ್ತುತ 4.39 ಲಕ್ಷ ಮಂದಿ ಮನೆಯಲ್ಲಿಯೇ ಕ್ವಾರಂಟೈನ್‌ಗೆ ಒಳಗಾಗಿದ್ದಾರೆ. 4,650 ಮಂದಿ ಸಾಂಸ್ಥಿಕ ಕ್ವಾರಂಟೈನ್‌ಗೆ ಒಳಪಡಿಸಲಾಗಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಭಾನುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ರಾಜ್ಯದಲ್ಲಿ ಕೋವಿಡ್–19 ಪ್ರಕರಣಗಳನ್ನು ನಿಯಂತ್ರಿಸುವ ಬಗ್ಗೆ ಚರ್ಚಿಸಲಾಯಿತು.

ಮಾ.11–ಏ. 4ರ ವರೆಗೆ ಲಾಕ್‌ಡೌನ್

ಔರಂಗಾಬಾದ್ (ಪಿಟಿಐ): ಕೋವಿಡ್–19 ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವ ಕಾರಣ, ಮಹಾರಾಷ್ಟ್ರದ ಔರಂಗಾಬಾದ್ ಜಿಲ್ಲೆಯಲ್ಲಿ ಮಾ.11ರಿಂದ ಏಪ್ರಿಲ್ 4ರವರೆಗೆ ಭಾಗಶಃ ಲಾಕ್‌ಡೌನ್ ಜಾರಿಗೊಳಿಸಲು ಜಿಲ್ಲಾಡಳಿತ ಭಾನುವಾರ ನಿರ್ಧರಿಸಿದೆ.

ಈ ಅವಧಿಯಲ್ಲಿ ವಾರಾಂತ್ಯದಲ್ಲಿ ಮಾರುಕಟ್ಟೆಗಳು, ಮಾಲ್‌ಗಳು, ಚಿತ್ರಮಂದಿರಗಳು ಬಂದ್ ಆಗಿರಲಿವೆ ಎಂದು ಅಧಿಕಾರಿಗಳು ಹೇಳಿದ್ದಾರೆ.



ಬುಟ್ಟಿ ಹೆಣೆದರಷ್ಟೇ ನಮ್ಮ ದಿನ...

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಮುನ್ನಾದಿನವಾದ ಭಾನುವಾರ ಜಯನಗರದಲ್ಲಿ ಹೊಟ್ಟೆ ತುಂಬಿಸಿಕೊಳ್ಳಲು ಮಹಿಳೆಯೊಬ್ಬರು ಬಿದಿರಿನ ಬುಟ್ಟಿ ಹೆಣೆಯುತ್ತಿರುವುದು ಕಂಡುಬಂದಿದ್ದು ಹೀಗೆ

– ಪ್ರಜಾವಾಣಿ ಚಿತ್ರ

‘ಅವಕಾಶ ದೊರೆತರೆ ಮಿಂಚುವರು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಹಿಳೆಯರ ದಣಿವರಿಯದ ದುಡಿಮೆಗೆ ಪ್ರೋತ್ಸಾಹ ಅಗತ್ಯವಾಗಿದ್ದು, ಆ ನಿಟ್ಟಿನಲ್ಲಿ ಸಮಗ್ರಾಭಿವೃದ್ಧಿ ಸಂಸ್ಥೆ ಸಕ್ರಿಯವಾಗಿ ಕೆಲಸ ಮಾಡುತ್ತಿದೆ’ ಎಂದು ಸಂಸ್ಥೆಯ ಸಂಸ್ಥಾಪಕಿ ಡಾ.ಸ್ನೇಹಾ ರಾಕೇಶ್ ತಿಳಿಸಿದರು.

ಅಂತರರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ಸಮಗ್ರಾಭಿವೃದ್ಧಿ ಸಂಸ್ಥೆಯು ಆರ್‌ವಿಜಿ ಫೌಂಡೇಷನ್ ಹಾಗೂ ಅಕರ್‌ಮ್ಯಾಕ್ಸ್ ಸಂಸ್ಥೆಗಳ ಸಹಯೋಗದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ‘100 ಮಹಿಳಾ ಸಾಧಕಿಯರಿಗೆ ಪ್ರಶಸ್ತಿ ಪ್ರದಾನ’ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಕೊರೊನಾ ಸಂದರ್ಭದಲ್ಲಿ ಮಹಿಳಾ ಪೊಲೀಸರು, ಆಶಾ ಕಾರ್ಯಕರ್ತೆಯರು, ಪೌರ ಕಾರ್ಮಿಕರು ಹಾಗೂ ವೈದ್ಯರು ಜೀವದ ಹಂಗು ತೊರೆದು ಕೆಲಸ ಮಾಡಿದ್ದಾರೆ. ಇತರ ಕ್ಷೇತ್ರಗಳಲ್ಲೂ ಮಹಿಳೆಯರು ಛಾಪು ಮೂಡಿಸುತ್ತಿದ್ದಾರೆ. ನಮ್ಮ ಸಂಸ್ಥೆಯು ಅಂತಹವರನ್ನು ಗುರುತಿಸಿ ಗೌರವಿಸುವ ಕೆಲಸ ಮಾಡುತ್ತಿದೆ’ ಎಂದರು.

ವೈದ್ಯೆಯರಾದ ಡಾ.ದಿಶಾ ಎಸ್.ಕುಮಾರ್, ಡಾ.ಪದ್ಮಾವತಿ, ಡಾ.ಮಂಜುಳಾ, ಪೊಲೀಸ್ ಸಿಬ್ಬಂದಿ ಶಿಲ್ಪಾ, ನಟಿ ಸಂಚಿತಾ ಹೆಗ್ಡೆ, ಗಾಯಕಿಯರಾದ ಗಾನವಿ, ಹರ್ಷ ರಂಜನಿ, ಶಶಿಕಲಾ ಅವರು ಪ್ರಶಸ್ತಿ ಸಿಕ್ಕಿದ್ದಕ್ಕೆ ಖುಷಿ ವ್ಯಕ್ತಪಡಿಸಿದರು.



ಅಂತರರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ಸಮಗ್ರಾಭಿವೃದ್ಧಿ ಸ್ವಯಂ ಸೇವಾ ಸಂಸ್ಥೆ ತಯಾರಿಸಿದ್ದ 5 ಅಡಿ ಉದ್ದದ ‘ಪಿಂಕ್ ರೋಸ್’ ಲಾಂಛನದೊಂದಿಗೆ ವಿವಿಧ ಕ್ಷೇತ್ರಗಳ ಸಾಧಕಿಯರು

ನಗರದ ಸ್ವಚ್ಛತೆ– ಜನ ಜಾಗೃತಿ ಕಾರ್ಯಕ್ರಮ: 200 ಮಂದಿಗೆ ಗೌರವ

ಸ್ವಚ್ಛತೆ ಕಾಪಾಡಲು ನೆರವಾದವರಿಗೆ ಅಭಿನಂದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಸ್ವಚ್ಛತೆ ಕಾಪಾಡಲು ಶ್ರಮಿಸುತ್ತಿರುವ ಬಿಬಿಎಂಪಿ ಅಧಿಕಾರಿಗಳು, ಪೌರಕಾರ್ಮಿಕರು, ಆಶಾ ಕಾರ್ಯಕರ್ತರು ಹಾಗೂ ಸಂಪರ್ಕ ಕಾರ್ಯಕರ್ತೆಯರು ಸೇರಿದಂತೆ ಸುಮಾರು 200 ಮಂದಿಯನ್ನು ಗೌರವಿಸಲಾಯಿತು.

ಸ್ವಚ್ಛ ಸರ್ವೇಕ್ಷಣ್ ಅಭಿಯಾನ-2021 ಹಾಗೂ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ನಗರದ ಒರಾಯನ್ ಮಾಲ್‌ನಲ್ಲಿ ಭಾನುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ನಗರವನ್ನು ಸ್ವಚ್ಛವಾಗಿಟ್ಟುಕೊಳ್ಳಲು ನೆರವಾಗಿರುವ ಮಹಿಳೆಯರಿಗೆ 'ಸ್ವಚ್ಛತಾ ಷಿ ಚಾಂಪಿಯನ್' ಅಭಿನಂದನಾಪತ್ರಗಳನ್ನು ವಿತರಿಸಲಾಯಿತು.

ನಗರದ ಸ್ವಚ್ಛತೆ ಕಾಪಾಡುವ ಬಗ್ಗೆ ಜನಜಾಗೃತಿ ಮೂಡಿಸಲಾಯಿತು. ಮನೆಯಲ್ಲಿ ಉತ್ಪತ್ತಿಯಾಗುವ ಹಸಿ ಕಸದಿಂದ ಕಾಂಪೋಸ್ಟ್ ತಯಾರಿಸುವ ಬಗ್ಗೆ ಜನರಿಗೆ ತಿಳಿವಳಿಕೆ ನೀಡಲಾಯಿತು.



ಮುಟ್ಟಿನ ಸಂದರ್ಭದಲ್ಲಿ ಸ್ರಾವ ನಿಯಂತ್ರಣಕ್ಕೆ ನೈರ್ಮಲ್ಯ ಪ್ಯಾಡ್ ಬದಲು ಬಳಸುವ ಸುಸ್ಥಿರ ಕಪ್‌ಗಳನ್ನು ಸ್ಟೋನ್ ಸೂಪ್ ಸಂಸ್ಥೆಯ ಸ್ವಯಂಸೇವಕರು ಪೌರಕಾರ್ಮಿಕರಿಗೆ ವಿತರಿಸಿದರು. –ಪ್ರಜಾವಾಣಿ ಚಿತ್ರ

ನಗರದ ಸ್ವಚ್ಛತೆ ಕಾಪಾಡಲು ದುಡಿಯುತ್ತಿರುವ ಪೌರಕಾರ್ಮಿಕರು ಮತ್ತು ಆರೋಗ್ಯದ ಅರಿವು ಮೂಡಿಸುತ್ತಿರುವ ಆಶಾ ಕಾರ್ಯಕರ್ತೆರಿಗೆ ಆರೋಗ್ಯ ಶಿಬಿರ ಆಯೋಜಿಸಲಾಗಿತ್ತು.

ಮಹಿಳೆಯರು ಮುಟ್ಟಿನ ಸಂದರ್ಭದಲ್ಲಿ ಸ್ರಾವ ನಿಯಂತ್ರಣಕ್ಕೆ ನೈರ್ಮಲ್ಯ ಪ್ಯಾಡ್‌ಗಳ ಬದಲು ‘ಸುಸ್ಥಿರ ಮುಟ್ಟಿನ ಕಪ್’ ಬಳಕೆ ಮಾಡುವ ಬಗ್ಗೆ ಸ್ಟೋನ್ ಸೂಪ್ ಸಂಸ್ಥೆಯ (Stonesoup.in) ಸ್ವಯಂಸೇವಕರು ಜಾಗೃತಿ ಮೂಡಿಸಿದರು. ಕಪ್ ಬಳಕೆಯಿಂದ ನೈರ್ಮಲ್ಯ ಪ್ಯಾಡ್‌ಗಳ ಅವೈಜ್ಞಾನಿಕ ವಿಲೇವಾರಿಯಿಂದ ಉಂಟಾಗುವ ಮಾಲಿನ್ಯದ ಬಗ್ಗೆಯೂ ಮಹಿಳೆಯರಿಗೆ ತಿಳಿವಳಿಕೆ ನೀಡಿದರು.

ಬಿಬಿಎಂಪಿ ವಿಶೇಷ ಆಯುಕ್ತ (ಕಸ ವಿಲೇವಾರಿ) ಡಿ.ರಂದೀಪ್ ಹಾಗೂ ಪೂರ್ವ ವಲಯದ ಜಂಟಿ ಆಯುಕ್ತರಾದ ಪಲ್ಲವಿ ಉಪಸ್ಥಿತರಿದ್ದರು.

‘ಕೋವಿಡ್ ಯೋಧರಿಗೆ ಸುಸ್ಥಿರ ಕಪ್’

ಕೋವಿಡ್ ಯೋಧರಾಗಿ ಕಾರ್ಯನಿರ್ವಹಿಸಿರುವ ಪೌರ ಕಾರ್ಮಿಕರು, ಆಶಾ ಕಾರ್ಯಕರ್ತರು ಹಾಗೂ ಸಂಪರ್ಕ ಕಾರ್ಯಕರ್ತರು ಸೇರಿ 100 ಮಹಿಳೆಯರಿಗೆ ಮುಟ್ಟಿನ ವೇಳೆ ಬಳಸುವ ಸುಸ್ಥಿರ ಕಪ್‌ಗಳನ್ನು ಉಚಿತವಾಗಿ ವಿತರಿಸಲಾಯಿತು.

ಐವರು ಬಾಲಕಿಯರು ‘ಕೋವಿಡ್ ಯೋಧರಿಗೆ ಸುಸ್ಥಿರ ಕಪ್’ ಅಭಿಯಾನ ನಡೆಸುತ್ತಿದ್ದಾರೆ. ದೇಣಿಗೆ ಸಂಗ್ರಹಿಸಿ ಕೋವಿಡ್ ಯೋಧರಿಗೆ ಉಚಿತವಾಗಿ ಕಪ್ ವಿತರಿಸುತ್ತಿದ್ದಾರೆ. ಸುಸ್ಥಿರ ಕಪ್ ಬಳಕೆಯ ಜಾಗೃತಿ ಮೂಡಿಸುವ ‘ಸ್ಟೋನ್ ಸೂಪ್’ ಸಂಸ್ಥೆ ಇದಕ್ಕೆ ನೆರವಾಗುತ್ತಿದೆ.

‘ಸರಿಯಾಗಿ ವಿಲೇವಾರಿಯಾಗದ ನೈರ್ಮಲ್ಯ ಪ್ಯಾಡ್ ನೂರಾರು ವರ್ಷ ಭೂಮಿಯಲ್ಲಿ ಉಳಿದುಬಿಡುತ್ತದೆ. ರಾಸಾಯನಿಕಲೇಪಿತ ಪ್ಯಾಡ್ ಮಹಿಳೆಯರಲ್ಲಿ ಆರೋಗ್ಯ ಸಮಸ್ಯೆಯನ್ನೂ ಸೃಷ್ಟಿಸುತ್ತದೆ. ಪ್ಯಾಡ್‌ಗಳಿಗಾಗಿ ಮಹಿಳೆ ತಿಂಗಳಿಗೆ ₹ 50ರಿಂದ ₹ 300 ವೆಚ್ಚ ಮಾಡಬೇಕಾಗುತ್ತದೆ. ಬಡವರಿಗೆ ಇದು ಆರ್ಥಿಕ ಹೊರೆ’ ಎಂದು ಸ್ಟೋನ್ ಸೂಪ್ ಸಂಸ್ಥೆಯ ಎಸ್.ಪದ್ಮಾ ‘ಪ್ರಜಾವಾಣಿ’ಗೆ ತಿಳಿಸಿದರು.

‘ಕೆಲವರು ಮನೆಯ ಕಸದ ಜೊತೆಯೇ ಬಳಸಿದ ನೈರ್ಮಲ್ಯ ಪ್ಯಾಡ್‌ಗಳನ್ನೂ ನೀಡುತ್ತಾರೆ. ಪೌರಕಾರ್ಮಿಕರು ಇವುಗಳನ್ನು ಕೈಯಿಂದ ಮುಟ್ಟಬೇಕಾಗುತ್ತದೆ. ಇದು ಮಲಹೊರುವ ಪದ್ಧತಿಯ ಮುಂದುವರಿದ ಭಾಗದಂತೆ’ ಎಂದು ಅವರು ಟೀಕಿಸಿದರು.



ರಾಜ್ಯ ಬಿಜೆಪಿ ಯುವ ಮುಖಂಡ ಅರುಣ್ ಸೋಮಣ್ಣ, ಮಾಜಿ ಮಹಾಪೌರರಾದ ಶಾಂತಕುಮಾರಿ, ಗೋವಿಂದರಾಜನಗರ ಬಿಜೆಪಿ ಮಂಡಲದ ಅಧ್ಯಕ್ಷ ವಿಶ್ವನಾಥಗೌಡ, ಮಹಿಳಾ ಮೋರ್ಚಾ ಅಧ್ಯಕ್ಷೆ ರತ್ನಮ್ಮ ಅವರು ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಭಾಗವಹಿಸಿದ್ದರು

‘ಮಹಿಳೆಯರ ಸೇವೆ ಅನನ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹೆಣ್ಣು ತ್ಯಾಗಮಯಿ. ತಾಯಿಯಾಗಿ, ಸಹೋದರಿಯಾಗಿ ಕುಟುಂಬದ ನೊಗ ಹೊರುತ್ತಾಳೆ. ಎಂತಹುದೇ ಕಷ್ಟ ಬಂದರೂ ಅದನ್ನು ಸಹಿಸಿಕೊಂಡು ಮನೆತನದ ಏಳ್ಗೆಗೆ ದುಡಿಯುತ್ತಾಳೆ. ಉತ್ತಮ ಸಮಾಜ ನಿರ್ಮಾಣದಲ್ಲಿ ಆಕೆಯ ಕೊಡುಗೆ ಅನನ್ಯ’ ಎಂದು ಬಿಜೆಪಿ ಯುವ ಮುಖಂಡ ಅರುಣ್ ಸೋಮಣ್ಣ ಹೇಳಿದರು.

ಬಿಜೆಪಿ ಮಹಿಳಾ ಮೋರ್ಚಾ ವತಿಯಿಂದ ಅಂತರರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಮಾರುತಿ ಮಂದಿರ ವಾರ್ಡ್‌ನ ಕಚೇರಿಯಲ್ಲಿ ಭಾನುವಾರ ಹಮ್ಮಿಕೊಳ್ಳಲಾಗಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರ ಉದ್ಘಾಟಿಸಿ ಮಾತನಾಡಿದರು.

‘ಅಂತರರಾಷ್ಟ್ರೀಯ ದಿನ ಆಚರಿಸುವ ಮೂಲಕ ಮಹಿಳೆಯರ ಸೇವೆಯನ್ನು ಸ್ಮರಿಸಲಾಗುತ್ತದೆ’ ಎಂದರು.

‘ಒಂದು ದೇಶ–ಒಂದು ಚುನಾವಣೆ’ ಬಗ್ಗೆ ತಜ್ಞರ ಅಭಿಪ್ರಾಯ

‘ಭ್ರಷ್ಟಾಚಾರ ಮುಕ್ತ ಭಾರತ ನಿರ್ಮಾಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭಾರತವನ್ನು ಭ್ರಷ್ಟಾಚಾರ ಮುಕ್ತ ರಾಷ್ಟ್ರವನ್ನಾಗಿ ರೂಪಿಸಲು ‘ಒಂದು ದೇಶ–ಒಂದು ಚುನಾವಣೆ’ ಪರಿಕಲ್ಪನೆ ಸಹಕಾರಿ. ಇದು ಪ್ರಜಾಪ್ರಭುತ್ವಕ್ಕೆ ಮಾರಕವಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಇನ್ನಷ್ಟು ಬಲಪಡಿಸಲು ಅನುಕೂಲಕರ’ ಎಂದು ತಜ್ಞರು ಅಭಿಪ್ರಾಯಪಟ್ಟರು.

ಕರ್ನಾಟಕ ಬಿಜೆಪಿ ವೃತ್ತಿಪರರ ಪ್ರಕೋಷ್ಠವು ಭಾನುವಾರ ಹಮ್ಮಿಕೊಂಡಿದ್ದ ‘ಒಂದು ದೇಶ–ಒಂದು ಚುನಾವಣೆ’ ಸಂವಾದ ಕಾರ್ಯಕ್ರಮದಲ್ಲಿ ಸಂಸದ ತೇಜಸ್ವಿ ಸೂರ್ಯ, ಮಾಜಿ ಅಡ್ವೊಕೇಟ್ ಜನರಲ್ ಅಶೋಕ ಹಾರನಹಳ್ಳಿ ಹಾಗೂ ಸ್ವರಾಜ್ಯದ ಸಂಪಾದಕೀಯ ವಿಭಾಗದ ನಿರ್ದೇಶಕ ಆರ್.ಜಗನ್ನಾಥನ್ ಮಾತನಾಡಿದರು.

ಅಶೋಕ ಹಾರನಹಳ್ಳಿ, ‘ಇಡೀ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮೂಲಭೂತ ಬದಲಾವಣೆ ತರಬೇಕಾದ ಅಗತ್ಯವಿದೆ. ಇದು ಅನೇಕ ವರ್ಷಗಳಿಂದ ಚರ್ಚೆಯಾಗಿ ಜಾರಿಯಾಗದೆ ಉಳಿದಿರುವ ಪರಿಕಲ್ಪನೆ. ದೇಶದ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಪ್ರಧಾನಿ ಮೋದಿ ಅವರು ಬಹಳ ಧೈರ್ಯದಿಂದ ಇದನ್ನು ಎಲ್ಲರ ಮುಂದಿಟ್ಟಿದ್ದಾರೆ. ಇದರ ಬಗ್ಗೆ ಚರ್ಚೆಗಳು ಆಗಬೇಕು. ವಸ್ತುನಿಷ್ಠ ವಿಶ್ಲೇಷಣೆಯಿಂದ ಮಾತ್ರ ಇದರ ಅನುಕೂಲ ಹಾಗೂ ಅನನುಕೂಲದ ಬಗ್ಗೆ ಅರಿತುಕೊಳ್ಳಲು ಸಾಧ್ಯ’ ಎಂದರು.

‘1983ರಲ್ಲಿ ಚುನಾವಣಾ ಆಯೋಗವೇ ಈ ಪರಿಕಲ್ಪನೆಯ ಅನುಷ್ಠಾನದ ಬಗ್ಗೆ ಆಲೋಚಿಸಿತ್ತು. ವರ್ಷಪೂರ್ತಿ ಚುನಾವಣೆಗಳೇ ನಡೆಯುತ್ತಿದ್ದರೆ ಸರ್ಕಾರದ ಆಡಳಿತ ಯಂತ್ರ ಕುಸಿಯುತ್ತದೆ. ‘ಒಂದು ದೇಶ–ಒಂದು ಚುನಾವಣೆ’ ಜಾರಿಗೊಂಡರೆ ಇದನ್ನು ತಪ್ಪಿಸಬಹುದು. ಜೊತೆಗೆ ಭ್ರಷ್ಟಾಚಾರಕ್ಕೂ ಕಡಿವಾಣ ಹಾಕಬಹುದು. ಇದಕ್ಕಾಗಿ ಸಂವಿಧಾನದ ಮೂಲ ಸ್ವರೂಪದಲ್ಲಿ ಬದಲಾವಣೆ ಮಾಡಲು ಅವಕಾಶವಿಲ್ಲ. ಆದರೆ ಕೆಲವು ಸಂದರ್ಭಗಳಲ್ಲಿ ರಾಜ್ಯಗಳ ಒಪ್ಪಿಗೆ ಪಡೆದು ತಿದ್ದುಪಡಿ ತರಲು ಅವಕಾಶವಿದೆ’ ಎಂದು ನುಡಿದರು.

ಸಂಸದ ತೇಜಸ್ವಿ ಸೂರ್ಯ, ‘ಈ ಪರಿಕಲ್ಪನೆ ಜಾರಿಗೊಂಡರೆ ವಂಶಾಡಳಿತವು ಕೊನೆಗೊಳ್ಳಲಿದೆ. ಹೀಗಾಗಿ ಕೆಲವರು ಇದನ್ನು ವಿರೋಧಿಸುತ್ತಿದ್ದಾರೆ. ಈಗಿನ ವ್ಯವಸ್ಥೆಯಲ್ಲಿ ಹಣವಂತರಷ್ಟೇ ಚುನಾವಣೆಯಲ್ಲಿ ಸ್ಪರ್ಧಿಸಬಹುದು. ಸಾಮಾನ್ಯ ಕಾರ್ಯಕರ್ತರು ಹಣ ಹಂಚಿ ಚುನಾವಣೆ ಎದುರಿಸಲು ಸಾಧ್ಯವಿಲ್ಲ. ಈ ವ್ಯವಸ್ಥೆ ಬದಲಾಗಬೇಕಾದರೆ ‘ಒಂದು ದೇಶ–ಒಂದು ಚುನಾವಣೆ’ ಜಾರಿಗೊಳ್ಳುವುದು ಅವಶ್ಯ’ ಎಂದು ತಿಳಿಸಿದರು.

‘ಇದು ಆರ್‌ಎಸ್‌ಎಸ್ ಅಜೆಂಡಾ ಎಂದು ವಿರೋಧ ಪಕ್ಷಗಳು ಟೀಕಿಸುತ್ತಿವೆ. ಅವರ ಮಾತುಗಳಲ್ಲಿ ಯಾವುದೇ ಹುರುಳಿಲ್ಲ’ ಎಂದರು.

‘ಆರು ತಿಂಗಳು ಹಾಗೂ ವರ್ಷಕ್ಕೊಮ್ಮೆ ಚುನಾವಣೆ ನಡೆಸುವುದರಿಂದ ಸಮಯ, ಹಣ ಹಾಗೂ ಮಾನವ ಸಂಪನ್ಮೂಲ ವ್ಯರ್ಥವಾಗುತ್ತದೆ. ‘ಒಂದು ದೇಶ–ಒಂದು ಚುನಾವಣೆ’ ಅನುಷ್ಠಾನದಿಂದ ಆಡಳಿತವನ್ನು ಸುಗಮಗೊಳಿಸಬಹುದು’ ಎಂದು ಜಗನ್ನಾಥನ್ ಹೇಳಿದರು.



ಸಂವಾದದಲ್ಲಿ (ಎಡದಿಂದ) ಮಾಜಿ ಅಡ್ವೊಕೇಟ್ ಜನರಲ್ ಅಶೋಕ ಹಾರನಹಳ್ಳಿ, ಸಂಸದ ತೇಜಸ್ವಿ ಸೂರ್ಯ, ಆರ್‌.ಜಗನ್ನಾಥನ್ ಮತ್ತು ರಾಜ್ಯ ವೃತ್ತಿಪರರ ಪ್ರಕೋಷ್ಠದ ಸಂಚಾಲಕ ಚನ್ನಮಲ್ಲಿಕಾರ್ಜುನ ಬಿ.ಪಾಟೀಲ ಪಾಲ್ಗೊಂಡರು ಪ್ರಜಾವಾಣಿ ಚಿತ್ರ

‘20 ಸಾವಿರ ಸರ್ಕಾರಿ ಶಾಲೆ ಮುಚ್ಚುವ ಸಾಧ್ಯತೆ’

ಪ್ರಜಾವಾಣಿ ವಾರ್ತೆ

ಬಳ್ಳಾರಿ: ‘ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಆಗುತ್ತಿರುವುದರಿಂದ ಮುಂದಿನ ಹತ್ತು ವರ್ಷಗಳಲ್ಲಿ 20 ಸಾವಿರಕ್ಕೂ ಹೆಚ್ಚು ಕನ್ನಡ ಶಾಲೆಗಳು ಮುಚ್ಚುವ ಸಾಧ್ಯತೆ ಇದೆ ಎಂದು ಸರ್ಕಾರವೇ ಹೇಳಿದೆ’ ಎಂದು ರಾಜ್ಯಸಭಾ ಸದಸ್ಯ ಎಲ್.ಹನುಮಂತಯ್ಯ ಕಳವಳ ವ್ಯಕ್ತಪಡಿಸಿದರು.

ನಗರದಲ್ಲಿ ಭಾನುವಾರ ಸಿರಿಗೇರಿ ಅನ್ನಪೂರ್ಣ ಪ್ರಕಾಶನ ಏರ್ಪಡಿಸಿದ್ದ ‘ಕನ್ನಡ ಕಾವಲಿಗೆ ಸಾಕ್ಷಿಕಲ್ಲು’ ಕೃತಿಯ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಇದು ಸರ್ಕಾರವೇ ನೀಡಿರುವ ಅಂಕಿ ಅಂಶ. ಕರ್ನಾಟಕ ಬಿಟ್ಟರೆ ದೇಶದಲ್ಲಿ ಎಲ್ಲಿಯೂ ರಾಜ್ಯಭಾಷೆಯ ಅಭಿವೃದ್ಧಿಗಾಗಿ ಮಂಡಳಿ, ಪ್ರಾಧಿಕಾರಗಳಿಲ್ಲ. ಆದಾಗ್ಯೂ, ಕನ್ನಡಕ್ಕೆ, ಕನ್ನಡ ಶಾಲೆಗಳಿಗೆ ದುಸ್ಥಿತಿ ಒದಗಿದೆ. ನಮ್ಮ ಭಾಷೆಯನ್ನು ನಾವೇ ಅಭಿವೃದ್ಧಿ ಮಾಡಬೇಕಾಗಿ ಬಂದಿರುವುದು ವಿಪರ್ಯಾಸ’ ಎಂದರು.



ಹನುಮಂತಯ್ಯ

‘ಆಂಧ್ರ, ತೆಲಂಗಾಣ, ತಮಿಳುನಾಡಿನಲ್ಲಿ ಈ ರೀತಿಯ ಪರಿಸ್ಥಿತಿಯಿಲ್ಲ. ಆ ರಾಜ್ಯಗಳಲ್ಲಿ ಸಹಜವಾಗಿಯೇ ರಾಜ್ಯಭಾಷೆ ಪ್ರಗತಿ ಕಂಡಿದೆ. ನಮ್ಮಲ್ಲಿ ಮಾತ್ರ ಆಗಿಲ್ಲ’ ಎಂದು ಅವರು ಬೇಸರ ವ್ಯಕ್ತಪಡಿಸಿದರು.

‘ಇಂಗ್ಲಿಷ್ ಶಾಲೆಯಲ್ಲಿ ಓದಿದರೆ ಮಾತ್ರ ಸರ್ಕಾರಿ ಕೆಲಸ ಸಿಗಲಿದೆ ಎನ್ನುವ ಭ್ರಮೆ ಪೋಷಕರಿಗೆ ಇದೆ. ಅವರು ಮೊದಲು ಅದರಿಂದ ಹೊರಬರಬೇಕು’ ಎಂದು ಎಲ್. ಹನುಮಂತಯ್ಯ ಅವರು ಪ್ರತಿಪಾದಿಸಿದರು.

ಇಲ್ಲೇ ಸಾಯುವೆ: ಕಾರ್ಯಕ್ರಮದಲ್ಲಿ ಮಾತನಾಡಿದ ಲೇಖಕ ಕುಂ. ವೀರಭದ್ರಪ್ಪ, ‘ಅನೇಕ ಲೇಖಕರು ಬೆಂಗಳೂರು, ಧಾರವಾಡ, ಶಿವಮೊಗ್ಗ ನೋಡಿಕೊಂಡರು. ನಾನು ನಮ್ಮೂರು ಕೊಟ್ಟೂರಿನಲ್ಲೇ ಉಳಿದಿರುವೆ. ಇಲ್ಲಿಯೇ ಸಾಯುವೆ’ ಎಂದು ಅವರು ಹೇಳಿದರು.

ಸಿ.ಡಿ ಪ್ರಕರಣ: ಮಾಜಿ ಮುಖ್ಯಮಂತ್ರಿ ಎಚ್‌.ಡಿ.ಕುಮಾರಸ್ವಾಮಿ ಒತ್ತಾಯ

‘ಸರ್ಕಾರ ಸ್ವಯಂಪ್ರೇರಿತ ದೂರು ದಾಖಲಿಸಲಿ’

ಪ್ರಜಾವಾಣಿ ವಾರ್ತೆ

ಕೋಲಾರ: ‘ರಮೇಶ ಜಾರಕಿಹೊಳಿ ಅವರಿಗೆ ಸಂಬಂಧಿಸಿದ್ದು ಎನ್ನಲಾದ ಸಿ.ಡಿ ಪ್ರಕರಣದ ದೂರುದಾರ ದಿನೇಶ್ ಕಲ್ಲಹಳ್ಳಿ ಏಕೆ ದೂರು ಹಿಂಪಡೆದಿದ್ದಾರೆ ಎಂಬುದು ಗೊತ್ತಿಲ್ಲ. ಪ್ರಕರಣ ಸಂಬಂಧ ಸರ್ಕಾರವೇ ಸ್ವಯಂಪ್ರೇರಿತ ಪ್ರಕರಣ ದಾಖಲಿಸಲಿ’ ಎಂದು ಮಾಜಿ ಮುಖ್ಯಮಂತ್ರಿ ಎಚ್‌.ಡಿ.ಕುಮಾರಸ್ವಾಮಿ ಭಾನುವಾರ ಒತ್ತಾಯಿಸಿದರು.


ಕುಮಾರಸ್ವಾಮಿ

ತಾಲ್ಲೂಕಿನ ಅಜ್ಜಪ್ಪನಹಳ್ಳಿ ಗೇಟ್ ಬಳಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ರಾಜ್ಯದಲ್ಲಿ ಒಂದು ವಾರದಿಂದ ಅಸಹ್ಯಕರ ಘಟನೆಗಳು ನಡೆಯುತ್ತಿವೆ. ಸಿ.ಡಿ ಪ್ರಕರಣದಲ್ಲಿ ಸರ್ಕಾರ ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕು. ರಾಜ್ಯದ ಜನರಲ್ಲಿ ವಿಶ್ವಾಸ ಮೂಡಿಸುವ ಕೆಲಸ ಮಾಡಬೇಕು’ ಎಂದು ಹೇಳಿದರು.

‘ದಿನೇಶ್ ಯಾವ ಕಾರಣಕ್ಕೆ ದೂರು ಕೊಟ್ಟಿದ್ದರು, ಯಾವ ಕಾರಣಕ್ಕೆ ಹಿಂಪಡೆದಿದ್ದಾರೆ, ಯಾವ ಕಾರಣಕ್ಕೆ ಪ್ರಕರಣ ಬಹಿರಂಗಗೊಂಡಿತು, ದೂರು ಹಿಂಪಡೆಯಲು ಯಾರು ಪ್ರೇರೇಪಿಸಿದ್ದಾರೆ ಎಂಬುದು ತಿಳಿಯಬೇಕು. ಸತ್ಯಾಸತ್ಯತೆಯನ್ನು ಸರ್ಕಾರ ಜನರ ಮುಂದಿಡಬೇಕು. ಸಂತ್ರಸ್ತೆಗೆ ಅನ್ಯಾಯ ವಾಗಿದೆ. ಹೀಗಾಗಿ ಅವರು ಹೊರ ಬಂದು ಮಾತನಾಡಿಲ್ಲ’ ಎಂದರು.

‘ಸಚಿವ ಸಿ.ಪಿ.ಯೋಗೇಶ್ವರ್ ಗ್ರಾಫಿಕ್ಸ್ ಎಕ್ಸ್‌ಪರ್ಟ್. ಅವರಿಗೆ ತಂತ್ರಜ್ಞಾನದ ಬಗ್ಗೆ ಅಪಾರ ಜ್ಞಾನ ಇರುವುದರಿಂದ ಗ್ರಾಫಿಕ್ಸ್ ಬಗ್ಗೆ ಮಾತನಾಡಿದ್ದಾರೆ’ ಎಂದು ವ್ಯಂಗ್ಯವಾಡಿದರು.

ಇದು ಗ್ರಾಫಿಕ್ ಯುಗ. ಆಧುನಿಕ ತಂತ್ರಜ್ಞಾನ ಬಳಸಿ ಏನು ಬೇಕಾದರೂ ಮಾಡಬಹುದು. ಷಡ್ಯಂತ್ರಕ್ಕೆ ಬಲಿಪಶು ಆಗುವ ಭಯದಿಂದ ಕೆಲವರು ನ್ಯಾಯಾಲಯ ಮೊರೆ ಹೋಗಿದ್ದಾರೆ
ಸಿ.ಪಿ.ಯೋಗೇಶ್ವರ್
ಪ್ರವಾಸೋದ್ಯಮ ಸಚಿವ

‘ಮಾನ ಹೋದಮೇಲೆ ತೀರ್ಪು ಬಂದರೇನು ಪ್ರಯೋಜನ?’

ದಾವಣಗೆರೆ: ಮಾನ ಹೋದಮೇಲೆ ಕೋರ್ಟ್ ತೀರ್ಪು ಬಂದು ಏನು ಪ್ರಯೋಜನ? ಅದಕ್ಕಾಗಿ ಕೆಲವರು ಸಹಜವಾಗಿ ತಡೆಯಾಜ್ಞೆ ತಂದಿದ್ದಾರೆ ಎಂದು ಸಚಿವ ಜೆ.ಸಿ.ಮಾಧುಸ್ವಾಮಿ ಸಮರ್ಥಿಸಿಕೊಂಡಿದ್ದಾರೆ.


ದಾವಣಗೆರೆ ಜಿಲ್ಲೆಯ ಹರಿಹರದಲ್ಲಿ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, ‘ರಮೇಶ ಜಾರಕಿಹೊಳಿ ಅವರಿಗೆ ಸಂಬಂಧಿತ ಪ್ರಕರಣದಲ್ಲಿ ನ್ಯಾಯ ಯಾವಾಗ ಸಿಗುವುದೋ ಗೊತ್ತಿಲ್ಲ. ಆದರೆ ತೇಜೋವಧೆ ಆಗಿಹೋಯಿತಲ್ಲ’ ಎಂದು ಹೇಳಿದರು.


ಮಾಧುಸ್ವಾಮಿ

‘ಸುಮ್ಮನೆ ಯಾರೂ ಪ್ರಸಾರ ಮಾಡಬಾರದು ಅಷ್ಟೇ. ನೈತಿಕತೆ ಮತ್ತು ಕಾನೂನಿನ ಪ್ರಶ್ನೆ ಇದು. ಮಹಿಳೆ ದೂರು ನೀಡಿದರೆ ಅದು ಸರಿಯಾದ ಕ್ರಮ. ಬೇರೆಯವರು ನೀಡಿದ್ದಾರೆ. ಇಂಥ ದೂರುಗಳ ಬಗ್ಗೆ ಚರ್ಚೆ ಮಾಡುವುದು ಬಹಳ ಕಷ್ಟ ಎಂದರು.

‘ಯಾವುದೇ ಸಚಿವರ ಸಿ.ಡಿ, ದಾಖಲೆ ನನ್ನ ಬಳಿ ಇಲ್ಲ’

ವಿಜಯಪುರ: ‘ಸಚಿವರು, ಜನಪ್ರತಿನಿಧಿಗಳಿಗೆ ಸಂಬಂಧಿಸಿದ ಯಾವುದೇ ಸಿ.ಡಿ, ದಾಖಲೆಗಳು ನನ್ನ ಬಳಿ ಇಲ್ಲ’ ಎಂದು ಸಾಮಾಜಿಕ ಕಾರ್ಯಕರ್ತ ಬಳ್ಳಾರಿಯ ರಾಜಶೇಖರ ಮುಲಾಲಿ ಭಾನುವಾರ ಹೇಳಿದರು.


ರಾಜಶೇಖರ ಮುಲಾಲಿ

ಸುದ್ದಿಗೋಷ್ಠಿಯಲ್ಲಿ ಅವರು, ‘ಸಚಿವ ರಮೇಶ ಜಾರಕಿಹೊಳಿ ಅವರಿಗೆ ಸಂಬಂಧಿಸಿದ ಸಿಡಿ ಹೊರಬಂದಂತೆ ಇನ್ನೂ ಹಲವರ ಇಂತಹ ಸಿಡಿಗಳು ಇರಬಹುದು ಎಂದು ಹೇಳಿದ್ದೆ. ಅಷ್ಟರಲ್ಲೇ ಅನೇಕ ಸಚಿವರು ಕೋರ್ಟ್ ಮೊರೆ ಹೋಗಿದ್ದಾರೆ’ ಎಂದರು.

‘ನನ್ನನ್ನು ಬಂಧಿಸಿ ವಿಚಾರಣೆ ನಡೆಸುವಂತೆ ಮಂಡ್ಯದ ಕೆ.ಎಚ್. ಇಂದಿರಾ ಅವರ ದೂರು ಆಧರಿಸಿ ಪೊಲೀಸರು ಶನಿವಾರ ದೂರವಾಣಿ ಕರೆ ಮಾಡಿ ಮಾರ್ಚ್ 8ರಂದು ವಿಚಾರಣೆಗೆ ಬರಲು ತಿಳಿಸಿದ್ದಾರೆ. ಅಂದು ಪೂರ್ವ ನಿಗದಿತ ಕಾರ್ಯಕ್ರಮಗಳಿವೆ. ವಿಚಾರಣೆಗೆ ಹಾಜರಾಗುವುದು ಕಷ್ಟಸಾಧ್ಯ. ಈ ಬಗ್ಗೆ ನಮ್ಮ ವಕೀಲರ ಜೊತೆ ಚರ್ಚಿಸಿ ನಿರ್ಧರಿಸುತ್ತೇನೆ’ ಎಂದು ಹೇಳಿದರು.

‘ಮಾಜಿ ಮುಖ್ಯಮಂತ್ರಿಯೊಬ್ಬರು ಕೇರಳದ ವೈನಾಡಿಗೆ ಪದೇ ಪದೇ ಹೋಗ್ತಾರೆ ಎಂಬ ನನ್ನ ಹೇಳಿಕೆಗೆ ಎಚ್.ಡಿ.ಕುಮಾರಸ್ವಾಮಿ ಒಬ್ಬರೇ ಏಕೆ ಪ್ರತಿಕ್ರಿಯಿಸಿದರು’ ಎಂದೂ ಅವರು ಬಾಗಲಕೋಟೆಯಲ್ಲಿ ಪ್ರಶ್ನಿಸಿದರು.

ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದ ಅವರು, ‘ರಾಜ್ಯದಲ್ಲಿ ಏಳು ಮಂದಿ ಮಾಜಿ ಮುಖ್ಯಮಂತ್ರಿಗಳು ಬದುಕಿದ್ದಾರೆ. ಅವರಾರೂ ಪ್ರತಿಕ್ರಿಯಿಸಿಲ್ಲ. ಇವರ‍್ಯಾಕೆ ಕುಂಬಳಕಾಯಿ ಕಳ್ಳ ಅಂದ್ರೆ ಹೆಗಲು ಮುಟ್ಟಿಕೊಂಡು ನೋಡಿಕೊಳ್ಳಬೇಕು’ ಎಂದರು.

‘ಅಧಿಕಾರ ಇದ್ದಾಗ ಬ್ಲ್ಯಾಕ್‌ಮನಿ, ಇಲ್ಲದಾಗ ಬ್ಲ್ಯಾಕ್‌ಮೇಲ್’

ಬೀದರ್: ‘ಕಾಂಗ್ರೆಸ್ ಅಧಿಕಾರದಲ್ಲಿ ಇದ್ದಾಗ ಬ್ಲ್ಯಾಕ್‌ಮನಿ, ಅಧಿಕಾರದಲ್ಲಿ ಇಲ್ಲದಿದ್ದಾಗ ಬ್ಲ್ಯಾಕ್‌ಮೇಲ್ ಮಾಡುತ್ತದೆ. ಸಿ.ಡಿ ಪ್ರಕರಣವೂ ತಂತ್ರಗಾರಿಕೆಯ ಒಂದು ಭಾಗ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ ಕಟೀಲ್ ತಿಳಿಸಿದರು.

‘ಬ್ಲ್ಯಾಕ್‌ಮೇಲ್ ಮಾಡುವುದು, ಗಲಭೆ ಸೃಷ್ಟಿಸುವುದು ಕಾಂಗ್ರೆಸ್‌ನ ರಾಜಕೀಯ ತಂತ್ರಗಾರಿಕೆಯ ಭಾಗ. ಡಿ.ಜೆ ಹಳ್ಳಿ, ಕೆ.ಜಿ ಹಳ್ಳಿ ಪ್ರಕರಣ ಇದಕ್ಕೆ ಉತ್ತಮ ಉದಾಹರಣೆ. ಕಾಂಗ್ರೆಸ್‌ನ ಬ್ಲ್ಯಾಕ್‌ಮೇಲ್ ತಂತ್ರಗಾರಿಕೆಗೆ ಕೆಲವರು ಒಳಗಾಗಿದ್ದಾರೆ’ ಎಂದು ಪ್ರತಿಕ್ರಿಯಿಸಿದರು.



ಉಲ್ಟಾ ಹೊಡೆದ ದೂರುದಾರ

ಒಂದನೇ ಪುಟದಿಂದ

‘ಸಿ.ಡಿ ಬಿಡುಗಡೆ ಹಿಂದೆ ₹ 5 ಕೋಟಿ ಡೀಲ್ ನಡೆದಿದೆ ಎಂದು ಜೆಡಿಎಸ್ ನಾಯಕ ಎಚ್‌.ಡಿ.ಕುಮಾರಸ್ವಾಮಿ ಆರೋಪಿಸಿದ್ದಾರೆ. ಇದರಿಂದ ನೊಂದು ಮತ್ತು ಸಂತ್ರಸ್ತೆ ಚಾರಿತ್ರ್ಯಹರಣಕ್ಕೆ ನಡೆಯುತ್ತಿರುವ ಕಾರಣ ದೂರು ಹಿಂಪಡೆಯಲು ನಿರ್ಧರಿಸಿದೆ’ ಎಂದರು.

ಹೊಸ ಸುತ್ತೋಲೆ ಅನ್ವಯ?: ಸರ್ಕಾರಿ ಅಧಿಕಾರಿಗಳು ಮತ್ತು ನೌಕರರ ವಿರುದ್ಧ ಬರುವ ಅನಾಮಧೇಯ ದೂರು ಆಧರಿಸಿ ತನಿಖೆ ನಡೆಸುವ ಅಗತ್ಯವಿಲ್ಲ ಎಂಬ ಮಾ.5 ರಂದು ಸುತ್ತೋಲೆ ಹೊರಡಿಸಲಾಗಿದೆ. ದೂರುದಾರರ ವಿಳಾಸ ಖಚಿತ ಪಡಿಸಿಕೊಂಡು, ಪೂರಕ ದಾಖಲೆಗಳನ್ನು ಪಡೆದು, ಮೇಲ್ನೋಟಕ್ಕೆ ಸತ್ಯ ಎನಿಸಿದರಷ್ಟೇ ಪ್ರಾಥಮಿಕ ವಿಚಾರಣೆ ನಡೆಸಬೇಕು ಎಂದು ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ಸುತ್ತೋಲೆಯಲ್ಲಿ ತಿಳಿಸಿದ್ದಾರೆ.

ಈ ಸುತ್ತೋಲೆಯನ್ನು ಈಗಿನ ಸಿ.ಡಿ ಪ್ರಕರಣಕ್ಕೂ ಅನ್ವಯಿಸಿ ಸಂತ್ರಸ್ತೆ ಎನ್ನಲಾದ ಯುವತಿ ದೂರು ನೀಡಲು ಬಾರದಿದ್ದರೆ ಪ್ರಕರಣ ಮುಕ್ತಾಯಗೊಳಿಸುವ ಯೋಚನೆ ನಡೆದಿದೆ ಎಂಬ ಮಾಹಿತಿ ಲಭ್ಯವಾಗಿದೆ.

ಸಿಬಿಐ ತನಿಖೆಗೆ ಆಗ್ರಹ: ಈ ಎಲ್ಲ ಬೆಳವಣಿಗೆಗಳ ನಡುವೆಯೇ ಭಾನುವಾರ ತುರ್ತು ಪತ್ರಿಕಾಗೋಷ್ಠಿ ನಡೆಸಿದ ರಮೇಶ ಜಾರಕಿಹೊಳಿ ಅವರ ತಮ್ಮ, ಬಿಜೆಪಿ ಶಾಸಕ ಬಾಲಚಂದ್ರ ಜಾರಕಿಹೊಳಿ, ‘ಬಿಜೆಪಿ ಮತ್ತು ತಮ್ಮ ಕುಟುಂಬದ ವಿರುದ್ಧದ ಸಂಚಿನ ಭಾಗವಾಗಿ ಸಿ.ಡಿ ಬಿಡುಗಡೆ ಆಗಿದೆ. ಈ ಬಗ್ಗೆ ಸಿಬಿಐ ಅಥವಾ ಸ್ವತಂತ್ರ ಸಂಸ್ಥೆಯಿಂದ ತನಿಖೆಗೆ ಆದೇಶಿಸಬೇಕು’ ಎಂದು ಆಗ್ರಹಿಸಿದರು.

‘ರಮೇಶ ಅವರನ್ನು ಸಚಿವ ಸ್ಥಾನದಿಂದ ಕೆಳಕ್ಕೆ ಇಳಿಸುವುದು ಮತ್ತು ಐದು ರಾಜ್ಯಗಳ ಚುನಾವಣೆ ಸಮಯದಲ್ಲಿ ಬಿಜೆಪಿಗೆ ಮುಜುಗರ ಮೂಡಿಸುವುದು ಈ ಕೃತ್ಯದ ಹಿಂದಿನ ಉದ್ದೇಶ. ಇಬ್ಬರು ಯೋಜನೆ ರೂಪಿಸಿದ್ದು, ಮೂವರ ಒಂದು ತಂಡ ಮತ್ತು ನಾಲ್ವರ ಒಂದು ತಂಡ ಕಾರ್ಯರೂಪಕ್ಕೆ ತಂದಿವೆ. ಇಬ್ಬರು ಸಿಕ್ಕರೆ ಉಳಿದ ಎಲ್ಲರೂ ಪತ್ತೆಯಾಗುತ್ತಾರೆ’ ಎಂದರು.

‘ಈ ಕೃತ್ಯಕ್ಕೆ ₹ 15 ಕೋಟಿ ವಿನಿಯೋಗಿಸಲಾಗಿದೆ. ಆ ಯುವತಿಗೆ ₹ 50 ಲಕ್ಷ ಮತ್ತು ದುಬೈನಲ್ಲಿ ಉದ್ಯೋಗದ ಆಮಿಷ ಒಡ್ಡಲಾಗಿತ್ತು. ‘ಹನಿಟ್ರ್ಯಾಪ್’ ಮೂಲಕ ರಮೇಶ ತೇಜೋವಧೆಗೆ ಯತ್ನಿಸಿದ್ದರು. ಕೊನೆಯಲ್ಲಿ ನಕಲಿ ಸಿ.ಡಿ ತಯಾರಿಸಿ ಬಿಡುಗಡೆ ಮಾಡಿದ್ದಾರೆ. ಅದನ್ನು ರಷ್ಯಾದಲ್ಲಿ ಯು ಟ್ಯೂಬ್‌ಗೆ ಅಪ್‌ಲೋಡ್ ಮಾಡಲಾಗಿದೆ’ ಎಂದು ಬಾಲಚಂದ್ರ ಆರೋಪಿಸಿದರು.

‘ಸಿ.ಡಿ ಅಸಲಿಯಲ್ಲ. ಈ ಕುರಿತು ಪರೀಕ್ಷೆ ಮಾಡಿಸಬೇಕು. ತಾವೂ ಖಾಸಗಿಯಾಗಿ ತನಿಖೆ ನಡೆಸಲು ಸಿದ್ಧ. ತಿಂಗಳೊಳಗೆ ಸತ್ಯಾಂಶ ತೆರೆದಿಡಲಾಗುವುದು. ದಿನೇಶ್ ಕಲ್ಲಹಳ್ಳಿ ಕೂಡ ದುರುಪಯೋಗಕ್ಕೆ ಒಳಗಾಗಿರಬಹುದು’ ಎಂದರು. ‘ಆ ಯುವತಿಯನ್ನು ‘ಸಂತ್ರಸ್ತೆ’ ಎಂದು ಯಾರೂ ಕರೆಯಬೇಡಿ. ರಾಜ್ಯದಲ್ಲಿ ‘ಹನಿಟ್ರ್ಯಾಪ್’ ಮಾಡುವುದಕ್ಕಾಗಿಯೇ ತಂಡವಿದೆ. ಅವರ ಮೊಬೈಲ್ ನಂಬರ್ ಸೇರಿ ಎಲ್ಲ ವಿವರಗಳನ್ನೂ ಪೊಲೀಸರು ಸಂಗ್ರಹಿಸಿದ್ದಾರೆ’ ಎಂದರು.


ರಥೋತ್ಸವ ವಿಜಯನಗರ ಜಿಲ್ಲೆಯ ಕೊಟ್ಟೂರಿನ ಕೊಟ್ಟೂರೇಶ್ವರರ ರಥೋತ್ಸವ ಭಾನುವಾರ ಸಂಜೆ ಸಡಗರ, ಸಂಭ್ರಮದ ನಡುವೆ ನೆರವೇರಿತು. ಈ ಸಂದರ್ಭಕ್ಕೆ ಸಹಸ್ರಾರು ಜನ ಸಾಕ್ಷಿಯಾದರು
ಪ್ರಜಾವಾಣಿ ಚಿತ್ರ: ಜಿ. ಕರಿಬಸವರಾಜ

ಕರಾವಳಿ ವೈದ್ಯನಿಗೆ ಮೋದಿ ಶ್ಲಾಘನೆ

ಉಡುಪಿ: ಮಂಗಳೂರಿನ ವೈದ್ಯ ಡಾ. ಪದ್ಮನಾಭ ಕಾಮತ್ ಸೇವೆಯನ್ನು ಭಾನುವಾರ ಬ್ರಹ್ಮಾವರದಲ್ಲಿ ನಡೆದ ಜನೌಷಧ ದಿನಾಚರಣೆ ವಿಡಿಯೊ ಸಂವಾದದಲ್ಲಿ ಪ್ರಧಾನಿ ನರೇಂದ್ರ ಮೋದಿ ಶ್ಲಾಘಿಸಿದರು.


ಡಾ.ಪದ್ಮನಾಭ

‘ಜನೌಷಧದ ಪರಿಕಲ್ಪನೆಗೆ ಮೂರ್ತ ರೂಪ ಕೊಟ್ಟಿದ್ದಕ್ಕೆ ಅಭಿನಂದನೆಗಳು. ಜನೌಷಧ ಕೇಂದ್ರಗಳಲ್ಲಿ ಇಸಿಜಿ ವ್ಯವಸ್ಥೆಯನ್ನು ಆರಂಭಿಸಿರುವುದು ಉತ್ತಮ ಪ್ರಯತ್ನ’ ಎಂದು ಪ್ರಧಾನಿ ಹೊಗಳಿದರು.

ಇದಕ್ಕೂ ಮೊದಲು ಸಂವಾದದಲ್ಲಿ ಡಾ.ಪದ್ಮನಾಭ ಕಾಮತ್ ಅವರು, ‘ಜನೌಷಧ ಅಭಿಯಾನದ ಭಾಗವಾಗಿರುವುದಕ್ಕೆ ಸಂತಸವಿದೆ. ಜನೌಷಧ ಕೇಂದ್ರಗಳಲ್ಲಿ ಇಸಿಜಿ ಯಂತ್ರ ಅಳವಡಿಸಲಾಯಿತು. ಆರಂಭದಲ್ಲಿ ಕೆಲವರು, ‘ಹುಚ್ಚು’ ಎಂದು ಮೂದಲಿಸಿದರು. ಆದರೂ, ಮತ್ತೆ 6 ಕೇಂದ್ರಗಳಲ್ಲಿ ಇಸಿಜಿ ಯಂತ್ರಗಳನ್ನು ಹಾಕಲಾಯಿತು. ಇದುವರೆಗೂ 100ಕ್ಕೂ ಹೆಚ್ಚು ಜನರಲ್ಲಿ ಹೃದ್ರೋಗ ಸಮಸ್ಯೆಯನ್ನು ಆರಂಭದಲ್ಲೇ ಪತ್ತೆ ಹಚ್ಚಿ, ಜೀವ ಉಳಿಸಲಾಗಿದೆ’ ಎಂದು ತಿಳಿಸಿದರು.

₹ 48 ಲಕ್ಷ ಮೌಲ್ಯದ ವಾಚ್ ಒಡೆದ ಕಸ್ಟಮ್ಸ್ ಅಧಿಕಾರಿಗಳು!

ಪ್ರಜಾವಾಣಿ ವಾರ್ತೆ

ಭಟ್ಕಳ: ಚಿನ್ನ ಅಡಗಿಸಿಟ್ಟ ಅನುಮಾನದಲ್ಲಿ ಭಟ್ಕಳದ ವ್ಯಕ್ತಿಯೊಬ್ಬರ ₹ 48 ಲಕ್ಷ ಮೌಲ್ಯದ ಕೈಗಡಿಯಾರವನ್ನು, ಸೀಮಾ ಸುಂಕ ಇಲಾಖೆಯ (ಕಸ್ಟಮ್ಸ್) ಅಧಿಕಾರಿಗಳು ಒಡೆದು ಹಾಕಿದ್ದಾರೆ. ಈ ಪ್ರಕರಣವೀಗ ನ್ಯಾಯಾಲಯದ ಮೆಟ್ಟಿಲೇರಿದೆ.

ದುಬೈನಲ್ಲಿ ರಫ್ತು ವ್ಯವಹಾರ ನಡೆಸುತ್ತಿರುವ ಭಟ್ಕಳದ ಕಾರಗದ್ದೆಯ ನಿವಾಸಿ ಮಹ್ಮದ್ ಇಸ್ಮಾಯಿಲ್ ಅವರು ಮಾರ್ಚ್ 3ರಂದು ಕೇರಳದ ಕಲ್ಲಿಕೋಟೆಯ ವಿಮಾನ ನಿಲ್ದಾಣಕ್ಕೆ ಬಂದಿದ್ದರು. ಆಗ, ಅಧಿಕಾರಿಗಳು ತಪಾಸಣೆಗೆ ಒಳಪಡಿಸಿದ್ದರು. ಅವರು ಧರಿಸಿದ್ದ ₹ 48 ಲಕ್ಷ ಮೌಲ್ಯದ ‘ಆಡಿ ಮೂವರ್ಸ್ ಪಿಗುಯೆಟ್’ ಕಂಪನಿ ಕೈಗಡಿಯಾರ ವಶಪಡಿಸಿಕೊಂಡಿದ್ದರು. ಅದರಲ್ಲಿ ಚಿನ್ನ ಹುದುಗಿಸಿರಬಹುದೇ ಎಂಬ ಶಂಕೆಯಲ್ಲಿ ಒಡೆದು ಹುಡುಕಾಡಿದ್ದರು.

ಗಡಿಯಾರದ ಮೌಲ್ಯ ಅರಿಯದೇ ಪುಡಿಗಟ್ಟಿದ್ದ ಅಧಿಕಾರಿಗಳು, ಬಂಗಾರವಿಲ್ಲವೆಂದು ಖಚಿತವಾದ ಬಳಿಕ ಟ್ರೇನಲ್ಲಿ ಇಟ್ಟು ಹಿಂದಿರುಗಿಸಿದ್ದರು. ಕೈಗಡಿಯಾರ ಸ್ಥಿತಿ ಕಂಡು ಕಂಗಾಲಾದ ಅವರು, ಗಡಿಯಾರವನ್ನು ಮೊದಲಿನ ಸ್ಥಿತಿಯಲ್ಲೇ ನೀಡುವಂತೆ ಪಟ್ಟು ಹಿಡಿದರು. ಗಡಿಯಾರದ ಮೌಲ್ಯವನ್ನು ಕೇಳಿದ ಕಸ್ಟಮ್ಸ್ ಅಧಿಕಾರಿಗಳೂ ಹೌಹಾರಿದ್ದರು.

ಈ ಕುರಿತು ಇಸ್ಮಾಯಿಲ್ ಮಾರ್ಚ್ 4ರಂದು ಕಲ್ಲಿಕೋಟೆಯ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಅದರ ವಿಚಾರಣೆಯು ಮಾರ್ಚ್ 8ರಂದು ಅಲ್ಲಿನ ನ್ಯಾಯಾಲಯದಲ್ಲಿ ನಡೆಯಲಿದೆ ಎಂದು ಅವರ ಸಹೋದರ ಇಬ್ರಾಹಿಂ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.


ಕೈಗಡಿಯಾರವನ್ನು ಕಲ್ಲಿಕೋಟೆಯ ಕಸ್ಟಮ್ಸ್ ಅಧಿಕಾರಿಗಳು ಪುಡಿ ಮಾಡಿರುವುದು

ಅಪಾರ ಪ್ರಮಾಣದ ಸ್ಫೋಟಕ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎರಡು ಪ್ರತ್ಯೇಕ ಪ್ರಕರಣದಲ್ಲಿ ಅಪಾರ ಪ್ರಮಾಣದ ಸ್ಫೋಟಕಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಬೆಳಗಾವಿ ಜಿಲ್ಲೆಯ ಹೊನಗಾದಲ್ಲಿ 6,675 ಕೆ.ಜಿ ಮತ್ತು ಯಾದಗಿರಿ ಜಿಲ್ಲೆಯ ಕೆಂಭಾವಿಯಲ್ಲಿ 750 ಕೆ.ಜಿ ಸ್ಫೋಟಕವನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಶರು ತಿಳಿಸಿದ್ದಾರೆ.

ಬೆಳಗಾವಿ ತಾಲ್ಲೂಕಿನ ಹೊನಗಾ ಗ್ರಾಮದ ಬಳಿ ನಿಯಮ ಉಲಂಘಿಸಿ ಸಾಗಿಸುತ್ತಿದ್ದ ₹ 4 ಲಕ್ಷ ಮೌಲ್ಯದ 6,675 ಕೆ.ಜಿ. ಸ್ಫೋಟಕ ವಸ್ತುಗಳನ್ನು ಕಾಕತಿ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ. ‘ಚಿಕ್ಕೋಡಿಯ ಬೊಬಲವಾಡದ ರಮೇಶ ರಾಯಪ್ಪ ಲಕ್ಕೊಟಿ, ರಾಜು ಈಶ್ವರ ಶಿರಗಾಂವಿ, ಮುಗಳಿಯ ಅರುಣ ಶ್ರೀಶೈಲ ಮಠದ ಬಂಧಿಸಲಾಗಿದೆ. ಮಾಲೀಕರನ್ನು ಬಂಧಿಸಬೇಕಾಗಿದೆ’ ಎಂದು ಡಿಪಿಸಿ ವಿಕ್ರಂ ಅಮಟೆ ತಿಳಿಸಿದ್ದಾರೆ.

750 ಕೆ.ಜಿ ಸ್ಫೋಟಕ ವಸ್ತು ಜಪ್ತಿ ಯಾದಗಿರಿ ಜಿಲ್ಲೆಯ ಕೆಂಭಾವಿ ಸಮೀಪದ ಆಲ್ದಾಳ ಗ್ರಾಮದ ಕಲ್ಲು ಕ್ವಾರಿಯಲ್ಲಿ ಭಾನುವಾರ ಕಲ್ಲು ಗಣಿಗಾರಿಕೆಗೆ ಬಳಸಲ್ಪಡುವ 750 ಕೆ.ಜಿ ತೂಕದ ಸ್ಫೋಟಕ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಕಲಬುರ್ಗಿ–ಯಾದಗಿರಿ ಆಂತರಿಕ ಭದ್ರತಾ ವಿಭಾಗ (ಐಎಸ್‌ಡಿ) ಮತ್ತು ಜಿಲ್ಲಾ ಪೊಲೀಸರು ದಾಳಿ ನಡೆಸಿದರು. ಕ್ವಾರಿ ಮಾಲೀಕ ಶಾಂತಗೌಡ ನಡಹಳ್ಳಿ, ವಾಹನ ಚಾಲಕ ಮೌಲಾಲಿ ಮತ್ತು ಸ್ಫೋಟಕ ಸಾಗಣೆ ಮಾಡಿದ ರವಿ ಬಿರಾದಾರ ವಿರುದ್ಧ ಕೆಂಭಾವಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಹೀರೋ’ ಚಿತ್ರಕ್ಕೆ ಪೈರಸಿ ಹಾವಳಿ: ರಿಷಬ್ ಬೇಸರ

ಬೆಂಗಳೂರು: ಶುಕ್ರವಾರವಷ್ಟೇ ಬಿಡುಗಡೆಯಾದ ರಿಷಬ್ ಶೆಟ್ಟಿ ನಟನೆಯ ‘ಹೀರೋ’ ಚಿತ್ರದ ತಂಡಕ್ಕೆ ಪೈರಸಿ ಹಾವಳಿ ಕಾಡತೊಡಗಿದೆ. ಈ ಕುರಿತು ಸ್ವತಃ ನಟ ರಿಷಬ್ ಶೆಟ್ಟಿ ಬೇಸರ ವ್ಯಕ್ತಪಡಿಸಿದ್ದಾರೆ.



‘ಪ್ರೇಕ್ಷಕರಿಗೆ ಬಹುತೇಕ ಚಿತ್ರ ಇಷ್ಟವಾಯಿತು. ಆದರೆ, ಬೇಸರದ ವಿಷಯ ಏನೆಂದರೆ ಚಿತ್ರ ಬಿಡುಗಡೆಯಾಗಿ ಕೇವಲ ಮೂರನೇ ದಿನಕ್ಕೇ ಪೈರಸಿ ಕಾಪಿಗಳು ಹರಿದಾಡುತ್ತಿವೆ’ ಎಂದು ಉಲ್ಲೇಖಿಸಿ ಟ್ವಿಟರ್‌ನಲ್ಲಿ ವಿಡಿಯೊ ಅಪ್‌ಲೋಡ್ ಮಾಡಿದ್ದಾರೆ.

‘ಚಿತ್ರಮಂದಿರಗಳ ಜವಾಬ್ದಾರಿ ಏನು?’: ‘ಆ್ಯಂಟಿ ಪೈರಸಿ ತಂಡದ ಜೊತೆ ಕೂತು ಹಲವು ವೆಬ್‌ಸೈಟ್‌ಗಳಿಂದ ಪೈರಸಿ ಕಾಪಿಗಳ ಲಿಂಕ್ ತೆಗೆದರೂ, ನಿರಂತರವಾಗಿ ಬರುತ್ತಿದೆ. ಚಿತ್ರಮಂದಿರದಲ್ಲಿಯೇ ಇಡೀ, ಸಿನಿಮಾ ಚಿತ್ರೀಕರಿಸಿ ಅಪ್‌ಲೋಡ್ ಆಗುತ್ತಿರುವುದು ನೋಡಿದರೆ ಚಿತ್ರಮಂದಿರಗಳ ಜವಾಬ್ದಾರಿ ಏನು ಎಂಬ ಪ್ರಶ್ನೆ ಮೂಡುತ್ತದೆ’ ಎಂದು ಬೇಸರ ಹೊರಹಾಕಿದ್ದಾರೆ.

ಸ್ವಂತ ಹಣ ₹ 60 ಸಾವಿರ ವೆಚ್ಚದಲ್ಲಿ ಸ್ವಚ್ಛತಾ ಕಾರ್ಯ

ಸರ್ಕಾರಿ ಶಾಲೆಗೆ ಜೀವಕಳೆ ತಂದ ಶಿಕ್ಷಕ

ಮಂಜುನಾಥ ದೊಡಮನಿ

ಯಡ್ರಾಮಿ (ಕಲಬುರ್ಗಿ ಜಿಲ್ಲೆ): ತಾಲ್ಲೂಕಿನ ಮಂಗಳೂರ ಗ್ರಾಮದಲ್ಲಿ ಕಳೆಗುಂದಿದ್ದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ಶಿಕ್ಷಕ ಸದಾಶಿವ ಪತ್ತಾರ, ತಮ್ಮ ಸ್ವಂತ ಹಣ ₹ 60 ಸಾವಿರ ಭರಿಸಿ ಜೀವಕಳೆ ತಂದಿದ್ದಾರೆ. ಗ್ರಾಮಸ್ಥರಲ್ಲೂ ಅಭಿಮಾನ ಮೂಡಿಸಿದ್ದಾರೆ.

ಪಾಠ ಮಾಡುವ ಕಾಯಕಕ್ಕೆ ಸೀಮಿತಗೊಳ್ಳದ ಅವರು ಶಾಲೆ ಆವರಣದ ಸುತ್ತ ಬೆಳೆದಿದ್ದ ಗಿಡಗಂಟಿಗಳನ್ನು ಗ್ರಾಮಸ್ಥರ ನೆರವಿನಿಂದ ತೆರವುಗೊಳಿಸಿದರು. ನಿತ್ಯ ಬೆಳಿಗ್ಗೆ 8ಕ್ಕೆ ಬಂದು ಪೊರಕೆ ಹಿಡಿದು ಆವರಣ ಶುಚಿಗೊಳಿಸಿ, ಎಲ್ಲರಿಗೂ ಪ್ರೇರಣೆಯಾದರು.

ಎರಡು ಕೊಠಡಿಗಳಿರುವ ಈ ಶಾಲೆಯಲ್ಲಿ ವಿದ್ಯುತ್ ಸೌಲಭ್ಯವಿಲ್ಲ. 1 ರಿಂದ 5ನೇ ತರಗತಿಯವರೆಗೆ 83 ವಿದ್ಯಾರ್ಥಿಗಳು ಓದುತ್ತಾರೆ. ಯಡ್ರಾಮಿಯವರಾದ ಸದಾಶಿವ ಪತ್ತಾರ ಅವರು 10 ವರ್ಷಗಳಿಂದ ಇಲ್ಲಿ ಶಿಕ್ಷಕರಾಗಿದ್ದಾರೆ.



ಯಡ್ರಾಮಿ ತಾಲ್ಲೂಕಿನ ಮಂಗಳೂರ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ

‘ಕೊರೊನಾ ಲಾಕ್‌ಡೌನ್ ಅವಧಿಯಲ್ಲಿ ಶಾಲೆ ಬಂದ್ ಆಗಿದ್ದರೂ ಪ್ರತಿ ದಿನ ಶಾಲೆಗೆ ಬರುವುದು ಸದಾಶಿವ ಪತ್ತಾರ ತಪ್ಪಿಸಲಿಲ್ಲ. ಸಂಬಳದ ಹಣದಿಂದ ಶಾಲೆಗೆ ಸುಣ್ಣಬಣ್ಣ ಬಳಿಸಿದ್ದಾರೆ’ ಎಂದು ಮುಖ್ಯಶಿಕ್ಷಕ ಪ್ರಶಾಂತ ಎಂ.ಕುನ್ನೂರ, ಗ್ರಾಮಸ್ಥರು ತಿಳಿಸಿದರು.

‘ಲಾಕ್‌ಡೌನ್ ಅವಧಿಯಲ್ಲಿ ಪಾಠ ಮಾಡದಿದ್ದರೂ ಸರ್ಕಾರ ನನಗೆ ವೇತನ ನೀಡಿದೆ. ಸರ್ಕಾರ ನೀಡಿದ ಹಣ ಸರ್ಕಾರಿ ಶಾಲೆಗೆ ಬಳಕೆಯಾಗಲಿ ಎಂಬ ಉದ್ದೇಶದೊಂದಿಗೆ ಈ ಕಾರ್ಯ ಕೈಗೊಂಡೆ. ಅನ್ನ ನೀಡುವ ಶಾಲೆಯತ್ತ ಕಾಳಜಿ ತೋರದಿದ್ದರೆ ಹೇಗೆ? ಉತ್ತಮ ವಾತಾವರಣದಲ್ಲಿ ಮಕ್ಕಳು ಶಿಕ್ಷಣ ಪಡೆದರೆ ಅದೇ ನನಗೆ ಖುಷಿಯ ಸಂಗತಿ’ ಎನ್ನುತ್ತಾರೆ ಸದಾಶಿವ ಪತ್ತಾರ.



ಶಾಲೆಯ ಒಂದು ಕೋಣೆಯನ್ನು ಸ್ಮಾರ್ಟ್‌ಕ್ಲಾಸ್ ಆಗಿಸುವ ಕನಸಿದೆ. ಈ ಹಳೆಯ ವಿದ್ಯಾರ್ಥಿಗಳು, ದಾನಿಗಳು, ಪಂಚಾಯಿತಿ ಕೈಜೋಡಿಸಿದ್ದಲ್ಲಿ, ಕನಸು ಖಂಡಿತ ನನಸಾಗುತ್ತದೆ.
ಸದಾಶಿವ ಪತ್ತಾರ, ಶಿಕ್ಷಕ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಚಾಲಕರಿಗೆ ಕೋವಿಡ್ ಪರೀಕ್ಷೆ ವರದಿ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇರಳ, ಮಹಾರಾಷ್ಟ್ರದಿಂದ ಬರುವ ಸರಕು ಸಾಗಣೆ ವಾಹನಗಳ ಚಾಲಕರು ಮತ್ತು ಸಹಾಯಕರು ಕಡ್ಡಾಯವಾಗಿ ಕೋವಿಡ್ ಆರ್‌ಟಿ–ಪಿಸಿಆರ್ ಪರೀಕ್ಷೆಯ ನೆಗೆಟಿವ್ ವರದಿ ಹೊಂದಿರಬೇಕು ಎಂದು ಆರೋಗ್ಯ ಇಲಾಖೆ ಸುತ್ತೋಲೆ ಹೊರಡಿಸಿದೆ.

ನೆರೆಯ ಈ ಎರಡೂ ರಾಜ್ಯಗಳಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಏರುತ್ತಿದೆ. ಈಗಾಗಲೇ ಗಡಿಯಲ್ಲಿ ಅಗತ್ಯ ಮುನ್ನೆಚ್ಚರಿಕೆ ವಹಿಸಲಾಗಿದೆ. ಅಲ್ಲಿಂದ ಬರುವ ಚಾಲಕರು, ಸಹಾಯಕರು 15 ದಿನಗಳಿಗೊಮ್ಮೆ ಆರ್‌ಟಿ–ಪಿಸಿಆರ್ ಪರೀಕ್ಷೆಗೆ ಒಳಪಡಬೇಕು.

ಅದೇ ರೀತಿ, ಪರೀಕ್ಷಾ ವರದಿಯನ್ನೂ ಅವರು ಹೊಂದಿರಬೇಕಾಗುತ್ತದೆ. ವರದಿ ಇಲ್ಲದಿದ್ದಲ್ಲಿ ರಾಜ್ಯಕ್ಕೆ ಬರಲು ಅವಕಾಶವಿಲ್ಲ. ಸೋಂಕು ನಿಯಂತ್ರಣಕ್ಕೆ ಸಂಬಂಧಿಸಿ ಅಧಿಕಾರಿಗಳು ಅಗತ್ಯ ಕ್ರಮಕೈಗೊಳ್ಳಬೇಕು ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.


ಒಳನೋಟ

ಗೋ ರಕ್ಷಣೆಯ ಸಂಕಷ್ಟ

ಬೆಂಗಳೂರು: ‘ಗೋಮಾಳವೆಂಬ ಗೋಜಲು’ ಶೀರ್ಷಿಕೆಯಡಿ ‘ಪ್ರಜಾವಾಣಿ’ಯಲ್ಲಿ ಭಾನುವಾರ (ಮಾರ್ಚ್ 7) ಪ್ರಕಟವಾದ ‘ಒಳನೋಟ’ ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

‘ರಕ್ಷಣೆ ನಮ್ಮ ಹೊಣೆ’

ಬಿಡಾಡಿ ದನಗಳನ್ನು ರಕ್ಷಣೆ ಮಾಡುವುದು ನಮ್ಮೆಲ್ಲರ ಹೊಣೆ. ಅವುಗಳಿಗೆ ಮೀಸಲಾದ ಗೋಮಾಳಗಳನ್ನು ಸಂರಕ್ಷಿಸಬೇಕಿದೆ. ಒತ್ತುವರಿ, ಅನ್ಯ ಕಾರ್ಯಕ್ಕೆ ಬಳಕೆಯಾಗದಂತೆ ನೋಡಿಕೊಳ್ಳುವ ಕೆಲಸವಾಗಬೇಕು. ಇರುವ ಗೋಮಾಳಗಳಿಗೆ ಅಗತ್ಯ ಮೂಲಸೌಕರ್ಯವನ್ನು ಸರ್ಕಾರ ಒದಗಿಸಬೇಕು. ಅದೇ ರೀತಿ, ಸೂಕ್ತ ನಿರ್ವಹಣೆಗೆ ಕ್ರಮಕೈಗೊಳ್ಳಬೇಕು. ಗೋಶಾಲೆಗಳು ಹಾಗೂ ಗೋಮಾಳಗಳ ಉಳಿವಿಗಾಗಿ ಸರ್ಕಾರದ ಜತೆಗೆ ಪ್ರತಿಯೊಬ್ಬರೂ ಕೈಜೋಡಿಸಬೇಕು. ಜಾಗವನ್ನು ಒತ್ತುವರಿ ಮಾಡಿಕೊಂಡವರ ಮೇಲೆ ಕಾನೂನು ಕ್ರಮಗಳನ್ನು ಜಾರಿಗೊಳಿಸಬೇಕು.



ಶಿವರಾಜ್, ದಾವಣಗೆರೆ

‘ಅನುದಾನ ಅಗತ್ಯ’


ರಾಜ್ಯದಲ್ಲಿ ಹಾಲಿ ಇರುವ ಗೋಮಾಳಗಳಿಗೆ ಸೂಕ್ತ ಮೂಲಸೌಕರ್ಯವಿಲ್ಲ. ಅದೇ ರೀತಿ, ನಿರ್ವಹಣೆಗೆ ಕೂಡ ಸರ್ಕಾರಗಳು ಅಗತ್ಯ ಅನುದಾನವನ್ನು ನೀಡುತ್ತಿಲ್ಲ. ಇದರಿಂದ ಗೋಮಾಳದಲ್ಲಿರುವ ಜಾನುವಾರುಗಳ ಸ್ಥಿತಿ ಶೋಚನೀಯವಾಗಿದೆ. ಅಗತ್ಯ ಪ್ರಮಾಣದಲ್ಲಿ ಆಹಾರ, ಮೇವು ಇಲ್ಲದೆಯೇ ಅನಾರೋಗ್ಯಕ್ಕೆ ತುತ್ತಾಗುತ್ತಿವೆ. ಹಾಗಾಗಿ, ಸರ್ಕಾರವು ಗೋಶಾಲೆಗಳಿಗೆ ನೀಡುತ್ತಿರುವ ಅನುದಾನವನ್ನು ಹೆಚ್ಚಿಸಬೇಕು. ಹೊಸದಾಗಿ ಗೋಶಾಲೆಗಳನ್ನು ಪ್ರಾರಂಭಿಸುವ ಮೊದಲು ಸದ್ಯ ಇರುವ ಗೋಶಾಲೆಗಳಿಗೆ ಸೂಕ್ತ ಮೂಲಸೌಕರ್ಯವನ್ನು ಒದಗಿಸಬೇಕು.



ಪ್ರೀತಿ ಭೀ. ಸೂಳಿಕೇರಿ, ಕನ್ನಡ ವಿಶ್ವವಿದ್ಯಾಲಯ ಹಂಪಿ

‘ಸರ್ಕಾರ ಖರೀದಿಸಲಿ’


ವಯಸ್ಸಾದ ಮತ್ತು ಹಾಲು ನೀಡದ ಗೋವುಗಳನ್ನು ಸಾಕುವ ಶಕ್ತಿ ಬಡ ಕುಟುಂಬಗಳಿಗಿಲ್ಲ. ಮಾರಾಟ ಮಾಡಬೇಕೆಂದರೆ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಕಾಯ್ದೆ ಅಡ್ಡಿಯಾಗಿದೆ. ಹಾಗಾಗಿ, ಸರ್ಕಾರವೇ ಜಾನುವಾರುಗಳನ್ನು ಖರೀದಿಸಿ, ಅವುಗಳನ್ನು ಸಾಕುವ ಕೆಲಸಕ್ಕೆ ಮುಂದಾಗಬೇಕು. ರಾಜ್ಯದ ಎಲ್ಲ ತಾಲ್ಲೂಕು ಕೇಂದ್ರದಲ್ಲಿ ಹಾಗೂ ಪಂಚಾಯಿತಿ ಮಟ್ಟದಲ್ಲಿ ಗೋಶಾಲೆಗಳನ್ನು ತೆಗೆಯಬೇಕು. ಇಲ್ಲವಾದರೆ ಈ ಕಾನೂನು ಉಪಯೋಗವಾಗುವುದಿಲ್ಲ.



ಗೌತಮ್ ಗೌಡರ, ಬಾಗಲಕೋಟೆ

‘ಅಗತ್ಯ ಪ್ರಮಾಣದಲ್ಲಿ ಮೇವು ಒದಗಿಸಲಿ’


ಜಾನುವಾರು ಹತ್ಯೆ ಪ್ರಬಂಧಕ ಮತ್ತು ಸಂರಕ್ಷಣಾ ಕಾಯ್ದೆ ಜಾರಿ ಮಾಡುವ ಮೊದಲು ರಾಜ್ಯ ಸರ್ಕಾರವು ಗೋಶಾಲೆಗಳನ್ನು ಅಭಿವೃದ್ಧಿಪಡಿಸಬೇಕಿತ್ತು. ಬಡ ರೈತರು ಗಂಡು ಕರುವನ್ನು ಸಾಕಲಾಗದೆ ರಸ್ತೆಗೆ ಬಿಡುತ್ತಿದ್ದಾರೆ. ಅವುಗಳು ಆಹಾರವಿಲ್ಲದೆ ಪ್ಲಾಸ್ಟಿಕ್‌ಗಳನ್ನು ತಿಂದು ಸಾಯುತ್ತಿವೆ. ಗೋಮಾಳವನ್ನು ಒತ್ತುವರಿ ಮಾಡಿಕೊಂಡವರ ವಿರುದ್ಧ ಕಾನೂನಿನ ಅಡಿ ಕಠಿಣ ಕ್ರಮ ಜಾರಿಗೊಳಿಸಬೇಕು. ಸರ್ಕಾರ ಬಿಡುಗಡೆ ಮಾಡುವ ಹಣದಿಂದ ಹಸುಗಳ ಹೊಟ್ಟೆ ತುಂಬುತ್ತಿಲ್ಲ. ಅವುಗಳಿಗೆ ಅಗತ್ಯ ಪ್ರಮಾಣದಲ್ಲಿ ಆಹಾರವನ್ನು ಒದಗಿಸಬೇಕು.



ಪರಮ ಕಿತ್ಲಿ, ಹುಬ್ಬಳ್ಳಿ

‘ಅನುಷ್ಠಾನವಾಗದ ಕಾಯ್ದೆ’


ಯಾವುದೇ ಒಂದು ಸರ್ಕಾರವು ಹೊಸ ಯೋಜನೆಗಳು ಅಥವಾ ಕಾಯ್ದೆಗಳನ್ನು ಜಾರಿಗೊಳಿಸುವ ಪೂರ್ವದಲ್ಲಿ ಅದಕ್ಕೆ ಸಂಬಂಧಪಟ್ಟಂತಹ ವ್ಯವಸ್ಥೆ ಮಾಡಿಕೊಂಡಿರಬೇಕು. ಗೋಹತ್ಯೆ ನಿಷೇಧ ಕಾಯ್ದೆ ಜಾರಿಯಾಗಿ ಸುಮಾರು ಎರಡು ತಿಂಗಳಾಯಿತು. ಇನ್ನೂ ಗೋಮಾಳ ಜಾಗದ ಒತ್ತುವರಿ ತೆರವು ನಡೆದಿಲ್ಲ. ವಯಸ್ಸಾದ, ಉಳುಮೆಗೆ ಬಳಸಲಾಗದ, ಸಾಕಲು ಹೊರೆ ಅನ್ನಿಸುವಂತಹ ಗೋವುಗಳ ಖರೀದಿಗೆ ಸರ್ಕಾರ ನಿರ್ಧರಿಸಿಲ್ಲ. ಇದು ಬೇಜವಾಬ್ದಾರಿಗೆ ಹಿಡಿದ ಕೈಗನ್ನಡಿ.



ಮಾರುತಿ ಆರ್., ಚಿತ್ರದುರ್ಗ

‘ರೈತರಿಂದಲೇ ಮೇವು’

ಗೋವುಗಳು ಆಹಾರ ಸಿಗದೆ ಪ್ಲಾಸ್ಟಿಕ್‌ಗಳನ್ನು ತಿಂದು ರೋಗಗ್ರಸ್ತ ಸ್ಥಿತಿಗೆ ತಲುಪುತ್ತಿವೆ. ಜಾನುವಾರುಗಳು ಪೌಷ್ಟಿಕಯುಕ್ತ ಹಾಲನ್ನು ನೀಡಬೇಕೆಂದರೆ ಸರ್ಕಾರವು ಅವುಗಳಿಗೆ ಅಗತ್ಯವಿರುವ ಮೇವನ್ನು ಒದಗಿಸಲು ಕ್ರಮಕೈಗೊಳ್ಳಬೇಕು. ಪ್ರತಿ ಕೆ.ಜಿ. ಹಸಿಮೇವು ಹಾಗೂ ಒಣಮೇವಿಗೆ ಬೆಲೆ ನಿಗದಿಪಡಿಸಿ, ರೈತರಿಂದಲೇ ಖರೀದಿಸುವಂತಾಗಬೇಕು. ಆಯಾ ಜಿಲ್ಲಾ ಘಟಕಗಳಲ್ಲಿ ಖರೀದಿಸಿದ ಮೇವು ಗೋಶಾಲೆಗಳಿಗೆ ತಲುಪುವಂತಾಗಬೇಕು. ಆಗ ಮಾತ್ರ ಗೋಹತ್ಯೆ ನಿಷೇಧ ಕಾಯ್ದೆ ಸಾರ್ಥಕತೆ ಕಾಣಲಿದೆ.



ನಾಗರಾಜ್ ಎಂ.ಎಸ್., ಚನ್ನಗಿರಿ

ಪಶ್ಚಿಮ ಬಂಗಾಳದಲ್ಲಿ ಕಾವೇರುತ್ತಿರುವ ಚುನಾವಣಾ ಪ್ರಚಾರ

ಮೋದಿ–ದೀದಿ ವಾಕ್ಸಮರ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ ಚುನಾವಣೆಯ ಕಾವು ಏರುತ್ತಿದೆ. ಭಾನುವಾರ ಪ್ರಧಾನಿ ನರೇಂದ್ರ ಮೋದಿ ಅವರು ರಾಜ್ಯದಲ್ಲಿ ತಮ್ಮ ಮೊದಲ ಪ್ರಚಾರ ರ‍್ಯಾಲಿ ನಡೆಸಿ, ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹಾಗೂ ಟಿಎಂಸಿ ನೇತೃತ್ವದ ಸರ್ಕಾರವನ್ನು ಟೀಕೆಗೆ ಒಳಪಡಿಸಿದ್ದಾರೆ. ಇನ್ನೊಂದೆಡೆ, 'ಮತದಾರರನ್ನು ಹಾದಿತಪ್ಪಿಸಲು ಮೋದಿ ಸುಳ್ಳುಗಳನ್ನು ಹೆಣೆಯುತ್ತಿದ್ದಾರೆ' ಎಂದು ಮಮತಾ ಆರೋಪಿಸಿದ್ದಾರೆ.

ಬ್ರಿಗೇಡ್ ಪರೇಡ್ ಮೈದಾನದಲ್ಲಿ ಭಾನುವಾರ ಆಯೋಜಿಸಿದ್ದ ರ‍್ಯಾಲಿಯಲ್ಲಿ ಮಾತನಾಡಿದ ಮೋದಿ, 'ಎಡಪಕ್ಷಗಳಿಂದ ಬೇಸತ್ತಿದ್ದ ರಾಜ್ಯದಲ್ಲಿ ಮಮತಾ ಬದಲಾವಣೆ ತರಬಹುದು ಎಂದು ರಾಜ್ಯದ ಜನರು ನಂಬಿದ್ದರು. ಆದರೆ ಮಮತಾ, ಜನರ ವಿಶ್ವಾಸವನ್ನು ನುಚ್ಚುನೂರು ಮಾಡಿದರು. ಜನರ 'ದೀದಿ'ಯಾಗುವ (ಅಕ್ಕ) ಬದಲು ಅಳಿಯನಿಗೆ ಅತ್ತೆಯಾಗುವ ಸಣ್ಣ ಪಾತ್ರವನ್ನಷ್ಟೇ ನಿರ್ವಹಿಸಿದರು' ಎಂದು ಮಮತಾ ವಿರುದ್ಧ ವಾಗ್ದಾಳಿ ನಡೆಸಿದರು.

ಮಮತಾ ಅವರು ತಮ್ಮ ಅಳಿಯ ಅಭಿಷೇಕ್ ಬ್ಯಾನರ್ಜಿ ಅವರನ್ನು ಮುಂದಿನ ಮುಖ್ಯಮಂತ್ರಿಯಾಗಿಸಲು ಪ್ರಯತ್ನಿಸುತ್ತಿದ್ದಾರೆ ಎಂದು ಬಿಜೆಪಿ ಹಲವು ಕಾಲದಿಂದ ಆರೋಪಿಸುತ್ತಾ ಬಂದಿದೆ.

'ಬೆರಳೆಣಿಕೆಯ ತಮ್ಮ ಸ್ನೇಹಿತ ಉದ್ಯಮಿಗಳಿಗೆ ಮೋದಿ ನೆರವು ನೀಡುತ್ತಿದ್ದಾರೆ' ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಹಾಗೂ ಮಮತಾ ಅವರು ಮಾಡುತ್ತಾ ಬಂದಿರುವ ಆರೋಪಕ್ಕೆ ಪ್ರತ್ಯುತ್ತರ ನೀಡಿದ ಮೋದಿ, 'ನಾನು ಸ್ನೇಹವನ್ನು ಗೌರವಿಸುವ ಹಿನ್ನೆಲೆಯಿಂದ ಬಂದವನು. ದೇಶದ 130 ಕೋಟಿ ಜನರೂ ನನ್ನ ಸ್ನೇಹಿತರೇ. ನಾನು ಅವರಿಗಾಗಿ ಕೆಲಸ ಮಾಡುತ್ತೇನೆ. ಬಂಗಾಳದ ನನ್ನ ಸ್ನೇಹಿತರಿಗೆ 90 ಲಕ್ಷ ಅಡುಗೆ ಅನಿಲ ಸಂಪರ್ಕಗಳನ್ನು ಕೊಡಿಸಿದ್ದೇನೆ. ಚಹಾದ ಬಗ್ಗೆ ನನಗೆ ವಿಶೇಷ ಪ್ರೀತಿ ಇದೆ. ಆದ್ದರಿಂದ ಪಶ್ಚಿಮ ಬಂಗಾಳದ ಚಹಾ ತೋಟಗಳಲ್ಲಿ ದುಡಿಯುವವರ ಸಾಮಾಜಿಕ ಭದ್ರತೆಗಾಗಿ ವಿಶೇಷ ಯೋಜನೆ ಜಾರಿ ಮಾಡಿದ್ದೇನೆ' ಎಂದರು.

ಒಳಗಿನವರು (ಬಂಗಾಳದವರು) ಮತ್ತು ಹೊರಗಿನವರು ಎಂಬ ಮಮತಾ ಬ್ಯಾನರ್ಜಿ ಅವರ ಹೇಳಿಕೆಗೆ ಪ್ರತಿಕ್ರಿಯೆ ನೀಡುತ್ತಾ, 'ಮಾರ್ಕ್ಸ್, ಲೆನಿನ್ ಹಾಗೂ ಕಾಂಗ್ರೆಸ್‌ನ ಒಂದು ಶಾಖೆಯಂತಿರುವ ಟಿಎಂಸಿಯಂಥ ಪಕ್ಷವನ್ನು 'ಒಳಗಿನವರು' ಎನ್ನುವುದಾದರೆ, ಶ್ಯಾಮಪ್ರಸಾದ ಮುಖರ್ಜಿಯಂಥವರು ಹಾಕಿದ ಬುನಾದಿಯ ಮೇಲೆ ನಿರ್ಮಾಣವಾಗಿರುವ ಬಿಜೆಪಿ ಹೊರಗಿನ ಪಕ್ಷವಾಗಲು ಹೇಗೆ ಸಾಧ್ಯ? ಪಶ್ಚಿಮ ಬಂಗಾಳದಲ್ಲಿ ನಿಜವಾದ ಪರಿವರ್ತನೆಯನ್ನು ತರಲು ಬಿಜೆಪಿ ಬದ್ಧರಾಗಿದೆ.



ಅಡುಗೆ ಅನಿಲದ ಸಿಲಿಂಡರ್ ಬೆಲೆ ಏರಿಕೆಯನ್ನು ವಿರೋಧಿಸಿ ಮಮತಾ ಬ್ಯಾನರ್ಜಿ ನೇತೃತ್ವದಲ್ಲಿ ಸಿಲಿಗುರಿಯಲ್ಲಿ ಭಾನುವಾರ ರ‍್ಯಾಲಿ ನಡೆಸಲಾಯಿತು



ಬಿಜೆಪಿಗೆ ಸೇರಿದ ನಟ ಮಿಥುನ್ ಚಕ್ರವರ್ತಿ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರು ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡರು – ಪಿಟಿಐ ಚಿತ್ರ

ಎಲ್ಲಾ ವರ್ಗದ ಜನರ ಅಭಿವೃದ್ಧಿಯಾಗಬೇಕು, ಯಾರನ್ನೂ ಓಲೈಸುವ ಕೆಲಸ ಮಾಡುವುದಿಲ್ಲ. ಒಳನುಸುಳುವಿಕೆಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಲಾಗುವುದು' ಎಂದರು.

ಕೇಸರಿಮಯವಾದ ಬ್ರಿಗೇಡ್ ಮೈದಾನ: ಕೋಲ್ಕತ್ತದ ಬ್ರಿಗೇಡ್ ಪರೇಡ್ ಮೈದಾನ ಭಾನುವಾರ ಕೇಸರಿಮಯವಾಗಿತ್ತು. ಚುನಾವಣೆ ಘೋಷಣೆಯಾದ ನಂತರ ಮೋದಿ ಅವರ ಮೊದಲ ಚುನಾವಣಾ ರ‍್ಯಾಲಿಗೆ ಲಕ್ಷಕ್ಕೂ ಹೆಚ್ಚು ಜನರು ಸೇರಿದ್ದರು. ಜೈ ಶ್ರೀರಾಮ್, ಭಾರತ್ ಮಾತಾಕಿ ಜೈ ಘೋಷಣೆಗಳು ಪ್ರತಿಧ್ವನಿಸಿದ್ದವು.

ಬಿಜೆಪಿಗೆ ಸೇರ್ಪಡೆಯಾದ ನಟ ಮಿಥುನ್ ಚಕ್ರವರ್ತಿ ಅವರೂ ಈ ರ‍್ಯಾಲಿಯ ಪ್ರಮುಖ ಆಕರ್ಷಣೆಗಳಲ್ಲಿ ಒಂದಾಗಿದ್ದರು. ಮೋದಿ ಅವರು 'ಅಸೊಲ್ ಪೊರಿಬರ್ತನ್' (ನಿಜವಾದ ಪರಿವರ್ತನೆ) ಘೋಷಣೆ ಕೂಗಿದಾಗ ಸಾವಿರಾರು ಮಂದಿ ಒಟ್ಟಿಗೇ ದನಿಗೂಡಿಸಿದರು.

'ಸುಳ್ಳು ಹೇಳುವುದೇ ಅಭ್ಯಾಸ'

ಅಡುಗೆ ಅನಿಲದ ಬೆಲೆ ಏರಿಕೆಯನ್ನು ಖಂಡಿಸಿ ಕೇಂದ್ರ ಸರ್ಕಾರದ ವಿರುದ್ಧ ಆಯೋಜಿಸಿದ್ದ ರ‍್ಯಾಲಿಯಲ್ಲಿ ಮಾತನಾಡಿದ ಮಮತಾ, 'ಮೋದಿ ಅವರು ಹಲವು ವರ್ಷಗಳಿಂದ ಒಣ ಭರವಸೆಗಳನ್ನು ನೀಡಿದ್ದಾರೆ. ಈಗ ಜನರು ಅವರ ಮೇಲಿನ ವಿಶ್ವಾಸ ಕಳೆದುಕೊಂಡಿದ್ದಾರೆ. ಸುಳ್ಳು ಹೇಳುವುದನ್ನು ಅಭ್ಯಾಸ ಮಾಡಿಕೊಂಡಿರುವ ಅವರಿಗೆ ನಾಚಿಕೆಯಾಗಬೇಕು' ಎಂದರು.

'ಮೋದಿ ಅವರು ಬಂಗಾಳಿ ಭಾಷೆಯಲ್ಲಿ ಭಾಷಣ ಮಾಡುತ್ತಾರೆ. ಆದರೆ, ಅವರ ಭಾಷಣವನ್ನು ಯಾವತ್ತೂ ಗುಜರಾತಿ ಲಿಪಿಯಲ್ಲಿ ಬರೆದು, ಅವರ ಮುಂದೆ ಪಾರದರ್ಶಕ ಗಾಜಿನ ಶೀಟ್ ಅಡಿಯಲ್ಲಿ ಇರಿಸಲಾಗುತ್ತದೆ. ತಮಗೆ ಬಂಗಾಳಿ ಭಾಷೆ ಚೆನ್ನಾಗಿ ಬರುತ್ತದೆ ಎಂದು ಅವರು ನಟಿಸುತ್ತಾರೆ ಅಷ್ಟೇ' ಎಂದು ಟೀಕಿಸಿದರು.

'ನಿಮ್ಮ ಪಕ್ಷ ವಿದ್ಯಾಸಾಗರರ ಪುತ್ಥಳಿಯನ್ನು ನಾಶಪಡಿಸಿದೆ, ಬಿರ್ಸ ಮುಂಡ ಅವರನ್ನು ಅಪಮಾನಿಸಿದೆ, ರವೀಂದ್ರನಾಥ ಟ್ಯಾಗೋರರು ಶಾಂತಿನಿಕೇತನದಲ್ಲಿ ಜನಿಸಿದ್ದರು ಎಂದು ತಪ್ಪಾಗಿ ಹೇಳಿದೆ. ಬಂಗಾಳ ಹಾಗೂ ಅದರ ಸಂಸ್ಕೃತಿಯ ಬಗ್ಗೆ ತಮಗೆ ಇರುವ ಜ್ಞಾನ ಎಷ್ಟು ಎಂಬುದನ್ನು ಇವೆಲ್ಲವೂ ತೋರಿಸುತ್ತವೆ' ಎಂದು ಬಿಜೆಪಿ ವಿರುದ್ಧ ಮಮತಾ ಕಿಡಿ ಕಾರಿದರು.

ಕಾಶ್ಮೀರವಾದರೆ ತಪ್ಪೇನಿದೆ?

'ಪಶ್ಚಿಮ ಬಂಗಾಳದಲ್ಲಿ ಪುನಃ ಟಿಎಂಸಿ ಅಧಿಕಾರಕ್ಕೆ ಬಂದರೆ ರಾಜ್ಯವು ಕಾಶ್ಮೀರವಾಗಲಿದೆ' ಎಂದು ಬಿಜೆಪಿ ಮುಖಂಡ ಸುವೇಂದು ಅಧಿಕಾರಿ ಅವರು ನೀಡಿರುವ ಹೇಳಿಕೆಗೆ, ನ್ಯಾಷನಲ್ ಕಾನ್ಫರೆನ್ಸ್ ಮುಖಂಡ ಒಮರ್ ಅಬ್ದುಲ್ಲಾ ತೀಕ್ಷ್ಣ ಪ್ರತಿಕ್ರಿಯೆ ನೀಡಿದ್ದಾರೆ.

'2019ರ ಆಗಸ್ಟ್ ನಂತರ ಜಮ್ಮು ಕಾಶ್ಮೀರ ಸ್ವರ್ಗವಾಗಿದೆ ಎಂದು ಬಿಜೆಪಿ ಹೇಳುತ್ತಿದೆ. ಹಾಗಿರುವಾಗ, ಪಶ್ಚಿಮ ಬಂಗಾಳ ಕಾಶ್ಮೀರವಾದರೆ ತಪ್ಪೇನು' ಎಂದು ಅವರು ಟ್ವೀಟ್ ಮೂಲಕ ಪ್ರಶ್ನಿಸಿದ್ದಾರೆ.

'ಬಂಗಾಳದವರು ಕಾಶ್ಮೀರವನ್ನು ಪ್ರೀತಿಸುತ್ತಾರೆ ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಕಾಶ್ಮೀರಕ್ಕೆ ಭೇಟಿ ನೀಡುತ್ತಾರೆ. ಆದ್ದರಿಂದ ಈ ಅವಿವೇಕದ ಮತ್ತು ಕೀಳುಮಟ್ಟದ ಹೇಳಿಕೆಗಾಗಿ ನಾವು ನಿಮ್ಮನ್ನು ಕ್ಷಮಿಸುತ್ತೇವೆ' ಎಂದಿದ್ದಾರೆ.

ಟಿಕೆಟ್‌ಗೆ ಪ್ರಫುಲ್ಲ ಕುಮಾರ್ ಮಹಾಂತ ಪರದಾಟ

ಗುವಾಹಟಿ: ಎರಡು ಬಾರಿ ಅಸ್ಸಾಂ ಮುಖ್ಯಮಂತ್ರಿಯಾಗಿದ್ದ ಪ್ರಫುಲ್ಲ ಕುಮಾರ್ ಮಹಾಂತ ಅವರ ಸ್ವಕ್ಷೇತ್ರ ಬಹರಂಪುರವು ಈ ಬಾರಿ ಮಿತ್ರಪಕ್ಷ ಬಿಜೆಪಿಗೆ ಹಂಚಿಕೆಯಾಗಿರುವ ಕಾರಣ, ವಿಧಾನಸಭಾ ಚುನಾವಣೆಯಲ್ಲಿ ಅವರು ಟಿಕೆಟ್‌ಗಾಗಿ ಪರದಾಡಬೇಕಾದ ಸ್ಥಿತಿ ನಿರ್ಮಾಣವಾಗಿದೆ.

ಮಹಾಂತ ಅವರು ಅಸ್ಸಾಂ ಗಣ ಪರಿಷತ್‌ನಿಂದ (ಎಜಿಪಿ) 1991ರಿಂದಲೂ ಇದೇ ಕ್ಷೇತ್ರದಿಂದ ಸತತವಾಗಿ ಆರಿಸಿ ಬಂದಿದ್ದಾರೆ. ಆದರೆ, 2015ರಿಂದ ಅವರು ಸಿಎಎ ವಿರೋಧಿ ನಿಲುವು ತೆಗೆದುಕೊಂಡಿರುವುದರಿಂದ ಅವರಿಗೆ ಟಿಕೆಟ್ ನಿರಾಕರಿಸಲಾಗಿದೆ ಎನ್ನಲಾಗಿದೆ.

2016ರಲ್ಲಿ ಬಿಜೆಪಿ ಜತೆ ಮೈತ್ರಿ ಮಾಡಿಕೊಳ್ಳುವ ಎಜಿಪಿ ಅಧ್ಯಕ್ಷ ಅತುಲ್ ಬೋರಾ ಅವರ ನಿರ್ಧಾರವನ್ನು ಮಹಾಂತ ಖಂಡಿಸಿದ್ದರು. ಸಿಎಎ ವಿರುದ್ಧ ಪ್ರತಿಭಟನಾರ್ಥವಾಗಿ 2019ರ ಲೋಕಸಭಾ ಚುನಾವಣೆಯಲ್ಲಿ ಅವರು ಮತದಾನ ಮಾಡಿರಲಿಲ್ಲ.

ಎಜಿಪಿ ನಿರ್ಧಾರವನ್ನು ಖಂಡಿಸಿ ಮಹಾಂತ ಬೆಂಬಲಿಗರು ಪ್ರತಿಭಟನೆ ನಡೆಸಿದ್ದಾರೆ. ಮಹಾಂತ ಅವರ ಪತ್ನಿ ಜಯಶ್ರೀ ಗೋಸ್ವಾಮಿ ಅವರೂ ಆಕ್ರೋಶ ವ್ಯಕ್ತಪಡಿಸಿದ್ದಾರೆ. 'ಪಕ್ಷವನ್ನು ಕಟ್ಟಿದವರಿಗೆ ಟಿಕೆಟ್ ನಿರಾಕರಿಸುವುದು ಹೇಗೆ. ಮಹಾಂತ ಅವರು ಇತರ ಪಕ್ಷಗಳ ಜೊತೆ ಸಂಪರ್ಕದಲ್ಲಿದ್ದಾರೆ' ಎಂದು ಹೇಳಿದ್ದಾರೆ.

ಅಭ್ಯರ್ಥಿಗಳ ಗೆಲ್ಲುವ ಸಾಮರ್ಥ್ಯ ಆಧರಿಸಿ ಟಿಕೆಟ್ ಹಂಚಿಕೆ ಮಾಡಲಾಗಿದೆ ಎಂದು ಅತುಲ್ ಬೋರಾ ಅವರು ತಮ್ಮ ನಿಲುವನ್ನು ಸಮರ್ಥಿಸಿಕೊಂಡಿದ್ದಾರೆ.

ಟಿಕೆಟ್ ನಿರಾಕರಣೆ: ಕಾಂಗ್ರೆಸ್ ಸೇರಿದ ಸಚಿವ

ಗುವಾಹಟಿ: ಅಸ್ಸಾಂ ವಿಧಾನಸಭಾ ಚುನಾವಣೆ ಟಿಕೆಟ್ ನಿರಾಕರಿಸಿದ್ದರಿಂದ ಬೇಸರಗೊಂಡಿರುವ ಸಚಿವ ಸಮ್ ರೋಂಗ್ಹಾಂಗ್ ಅವರು ಭಾನುವಾರ ಕಾಂಗ್ರೆಸ್ ಸೇರಿದ್ದಾರೆ. ಕಾಂಗ್ರೆಸ್ ಇವರನ್ನು ದಿಫು ಕ್ಷೇತ್ರದಿಂದ ಕಣಕ್ಕಿಳಿಸುವ ಸಾಧ್ಯತೆಯಿದೆ. 'ಪಕ್ಷದ ಕೆಲವರ ಷಡ್ಯಂತ್ರದಿಂದ ಟಿಕೆಟ್ ಸಿಕ್ಕಿಲ್ಲ. ಬಿಜೆಪಿ ಕಾರ್ಯಕಲಾಪಗಳಲ್ಲಿ ಪಾರದರ್ಶಕತೆ ಇಲ್ಲ' ಎಂದು ಅವರು ಕಾಂಗ್ರೆಸ್ ಸೇರ್ಪಡೆ ವೇಳೆ ದೂರಿದ್ದಾರೆ.

ಪುದುಚೇರಿ: ಡಿಎಂಕೆ–ಕಾಂಗ್ರೆಸ್ ಮಾತುಕತೆ

ಚೆನ್ನೈ: ಏಪ್ರಿಲ್ 6ರಂದು ನಡೆಯಲಿರುವ ಪುದುಚೇರಿ ವಿಧಾನಸಭೆ ಚುನಾವಣೆಗೆ ಮೈತ್ರಿ ಮುಂದುವರಿಸಲು ನಿರ್ಧರಿಸಿರುವ ಕಾಂಗ್ರೆಸ್ ಹಾಗೂ ಡಿಎಂಕೆ ಸೀಟು ಹಂಚಿಕೆ ಮಾತುಕತೆಯನ್ನು ಭಾನುವಾರ ಆರಂಭಿಸಿವೆ. ಮಾಜಿ ಮುಖ್ಯಮಂತ್ರಿ ವಿ. ನಾರಾಯಣಸ್ವಾಮಿ, ಪುದುಚೇರಿ ಕಾಂಗ್ರೆಸ್ ಮುಖ್ಯಸ್ಥ ಎ.ವಿ. ಸುಬ್ರಮಣಿಯನ್ ಹಾಗೂ ಇತರರು ಎಸ್.ಪಿ. ಶಿವಕುಮಾರ್ ನೇತೃತ್ವದ ಡಿಎಂಕೆ ನಿಯೋಗದ ಜೊತೆ ಮಾತುಕತೆ ನಡೆಸಿದರು.

2016ರ ಚುನಾವಣೆಯಲ್ಲಿ ಕಾಂಗ್ರೆಸ್ ಹಾಗೂ ಡಿಎಂಕೆ ಕ್ರಮವಾಗಿ 15 ಮತ್ತು 2 ಸೀಟುಗಳನ್ನು ಗೆದ್ದಿದ್ದವು. ಚುನಾವಣೆ ಘೋಷಣೆಗೆ ಕೆಲವೇ ದಿನಗಳಿರುವಾಗ ಐವರು ಕಾಂಗ್ರೆಸ್ ಹಾಗೂ ಒಬ್ಬ ಡಿಎಂಕೆ ಶಾಸಕ ರಾಜೀನಾಮೆ ನೀಡಿದ್ದರಿಂದ ಸರ್ಕಾರ ಪತನವಾಗಿತ್ತು. ಪ್ರತಿಪಕ್ಷ ಎನ್‌ಆರ್ ಕಾಂಗ್ರೆಸ್ ಜೊತೆ ಮೈತ್ರಿಮಾಡಿಕೊಳ್ಳಲು ಬಿಜೆಪಿ ಸಿದ್ಧತೆ ನಡೆಸುತ್ತಿದೆ.

ತಮಿಳುನಾಡು: ಕಾಂಗ್ರೆಸ್ 25 ಕ್ಷೇತ್ರಗಳಲ್ಲಿ ಸ್ಪರ್ಧೆ

ಕಾಂಗ್ರೆಸ್ ಹಾಗೂ ಡಿಎಂಕೆ ಸೀಟು ಹಂಚಿಕೆ ಮಾತುಕತೆಯನ್ನು ಅಂತಿಮಗೊಳಿಸಿದ್ದು, 25 ಕ್ಷೇತ್ರಗಳಲ್ಲಿ ಕಾಂಗ್ರೆಸ್ ತನ್ನ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಿದೆ. ಕಳೆದೊಂದು ವಾರದಿಂದ ಸೀಟು ಹಂಚಿಕೆ ವಿಚಾರ ಕಗ್ಗಂಟಾಗಿ ಪರಿಣಮಿಸಿತ್ತು. ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಡಿಎಂಕೆ ಮುಖ್ಯಸ್ಥ ಸ್ಟಾಲಿನ್ ಜೊತೆ ಶನಿವಾರ ರಾತ್ರಿ ಮಾತುಕತೆ ನಡೆಸಿದರು. ಈ ಮಾತುಕತೆ ವೇಳೆ ಸೀಟು ಹಂಚಿಕೆ ಅಂತಿಮವಾಯಿತು ಎಂದು ಮೂಲಗಳು ತಿಳಿಸಿವೆ.

ಶನಿವಾರ ರಾತ್ರಿ ತಮಿಳುನಾಡು ಎಐಸಿಸಿ ಉಸ್ತುವಾರಿ ದಿನೇಶ್ ಗುಂಡೂರಾವ್ ಮತ್ತು ಡಿಎಂಕೆ ಸಂಸದೆ ಕನಿಮೊಳಿ ಅವರ ನಡುವೆ ನಡೆದ ಸಭೆಯಲ್ಲಿ ಸೌಹಾರ್ದಯುತ ಪರಿಹಾರ ಕಂಡುಬಂದ ನಂತರ ಸೋನಿಯಾ–ಸ್ಟಾಲಿನ್ ಸಂಭಾಷಣೆ ನಡೆಯಿತು.

ಚುನಾವಣೆ ಬಳಿಕ ಕಾಂಗ್ರೆಸ್‌ಗೆ ಒಂದು ರಾಜ್ಯಸಭಾ ಸ್ಥಾನವನ್ನು ನೀಡಲು ಡಿಎಂಕೆ ಒಪ್ಪಿಕೊಂಡಿದೆ. ಜೊತೆಗೆ ಕನ್ಯಾಕುಮಾರಿ ಲೋಕಸಭಾ ಉಪಚುನಾವಣೆಯಲ್ಲೂ ಕಾಂಗ್ರೆಸ್ ಸ್ಪರ್ಧೆ ಮಾಡಲಿದೆ. ಹೀಗಾಗಿ ಕನ್ಯಾಕುಮಾರಿಯಲ್ಲಿ ಕಾಂಗ್ರೆಸ್–ಬಿಜೆಪಿ ನಡುವೆ ಸ್ಪರ್ಧೆ ಏರ್ಪಟ್ಟಿದೆ.

ಕನ್ಯಾಕುಮಾರಿಯಲ್ಲಿ ಅಮಿತ್ ಶಾ ಪ್ರಚಾರ

ಕನ್ಯಾಕುಮಾರಿ ಲೋಕಸಭಾ ಉಪಚುನಾವಣಾಯಲ್ಲಿ ಬಿಜೆಪಿ ಅಭ್ಯರ್ಥಿ ಪೊನ್ ರಾಧಾಕೃಷ್ಣನ್ ಅವರ ಪರ ಕೇಂದ್ರ ಗೃಹಸಚಿವ ಅಮಿತ್ ಶಾ ಭಾನುವಾರ ಪ್ರಚಾರ ನಡೆಸಿದರು.

ಕನ್ಯಾಕುಮಾರಿಯಲ್ಲಿ ರೋಡ್‌ಶೋ ನಡೆಸಿದ ಶಾ ಅವರು, ಕರಪತ್ರ ಹಂಚಿದರು. ಸುಚೀಂದ್ರಂನಲ್ಲಿ ಪ್ರಸಿದ್ಧ ತನುಮಲಯನ್ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದರು. ಎಐಎಡಿಎಂಕೆ–ಬಿಜೆಪಿ–ಪಿಎಂಕೆ ಮೈತ್ರಿಕೂಟವು ತಮಿಳುನಾಡಿನಲ್ಲಿ ಮೇ 2ರಂದು ಸರ್ಕಾರ ರಚಿಸಲಿದೆ ಎಂದು ಶಾ ವಿಶ್ವಾಸ ವ್ಯಕ್ತಪಡಿಸಿದರು.

2014ರಲ್ಲಿ ಇಲ್ಲಿಂದ ಗೆದ್ದಿದ್ದ ರಾಧಾಕೃಷ್ಣನ್ 2019ರಲ್ಲಿ ಸೋತಿದ್ದರು. ಕಾಂಗ್ರೆಸ್‌ನಿಂದ ಗೆದ್ದಿದ್ದ ವಸಂತಕುಮಾರ್ ಅವರ ಸಾವಿನಿಂದ ಕನ್ಯಾಕುಮಾರಿ ಕ್ಷೇತ್ರ ತೆರವಾಗಿದೆ.

ನುಡಿ–ಕಿಡಿ

ಪರಿವರ್ತನೆಗಾಗಿ ಪಶ್ಚಿಮ ಬಂಗಾಳದ ಜನರು ದೀದಿಯನ್ನು ನಂಬಿದ್ದರು. ಆದರೆ, ಆ ವಿಶ್ವಾಸವನ್ನು ಅವರು ಹುಸಿಗೊಳಿಸಿದ್ದಾರೆ. ನಿಜವಾದ ಪರಿವರ್ತನೆಯಲ್ಲಿ ನಿಮಗೆ ವಿಶ್ವಾಸ ಮೂಡಲಿ ಎಂಬ ಕಾರಣಕ್ಕೆ ನಾನು ಇಲ್ಲಿಗೆ ಬಂದಿದ್ದೇನೆ

ನರೇಂದ್ರ ಮೋದಿ, ಪ್ರಧಾನಿ

ಪಶ್ಚಿಮ ಬಂಗಾಳದಲ್ಲಿ ಪರಿವರ್ತನೆ ಆಗುವುದಿಲ್ಲ. ಟಿಎಂಸಿ ಅಧಿಕಾರ ಉಳಿಸಿಕೊಳ್ಳಲಿದೆ. ಆದರೆ, ಕೇಂದ್ರದಲ್ಲಿ ಪರಿವರ್ತನೆ ಆಗಲಿದೆ

ಮಮತಾ ಬ್ಯಾನರ್ಜಿ
ಪಶ್ಚಿಮ ಬಂಗಾಳದ ಮುಖ್ಯಮಂತ್ರಿ

ಒಂದು ಅವಕಾಶ ಕೊಟ್ಟರೆ ಕೇರಳ ನಂ.1: ಅಮಿತ್ ಶಾ

ತಿರುವನಂತಪುರ: ಕಾಂಗ್ರೆಸ್ ನೇತೃತ್ವದ ಯುಡಿಎಫ್ ಹಾಗೂ ಸಿಪಿಎಂ ನೇತೃತ್ವದ ಎಲ್‌ಡಿಎಫ್ ಮೈತ್ರಿಕೂಟಗಳು ವರ್ಷಗಳ ಕಾಲ ಹಗರಣ ನಡೆಸಿವೆಯೇ ಹೊರತು ಕೇರಳದ ಅಭಿವೃದ್ಧಿ ನಡೆಸಿಲ್ಲ ಎಂದು ಕೇಂದ್ರ ಗೃಹಸಚಿವ ಅಮಿತ್ ಶಾ ಭಾನುವಾರ ಆರೋಪಿಸಿದರು. ರಾಜ್ಯದ ಜನರು ಬಿಜೆಪಿಗೆ ಐದು ವರ್ಷ ಅಧಿಕಾರ ನಡೆಸಲು ಅವಕಾಶ ಮಾಡಿ ಕೊಟ್ಟರೆ, ಕೇರಳವನ್ನು ನಂಬರ್ 1 ಮಾಡುತ್ತೇವೆ ಎಂದು ಅವರು ಭರವಸೆಯಿತ್ತರು.

ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಕೆ.ಸುರೇಂದ್ರನ್ ಅವರು ರಾಜ್ಯವ್ಯಾಪಿ ಕೈಗೊಂಡಿರುವ 'ವಿಜಯ ಯಾತ್ರೆ'ಯ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಅವರು, ಕೇರಳಕ್ಕೆ ಕೇಂದ್ರ ಸರ್ಕಾರ ನೀಡಿರುವ ಕೊಡುಗೆಗಳನ್ನು ಪಟ್ಟಿ ಮಾಡಿದರು. ಸ್ವಾವಲಂಬಿ ಹೊಸ ಕೇರಳವನ್ನು ನಿರ್ಮಿಸುವ ಗುರಿಯನ್ನು ಬಿಜೆಪಿ ಹೊಂದಿದ್ದು, ಅವಕಾಶ ನೀಡುವಂತೆ ಮನವಿ ಮಾಡಿದರು.

ಪಕ್ಷಕ್ಕೆ ಇತ್ತೀಚೆಗೆ ಸೇರ್ಪಡೆಯಾಗಿರುವ ಇ.ಶ್ರೀಧರನ್ ಅವರು ತಮ್ಮ ಇಳಿವಯಸ್ಸಿನಲ್ಲಿಯೂ ದೇಶದ ಅಭಿವೃದ್ಧಿ ಯೋಜನೆಗಳನ್ನು ದೃಢಸಂಕಲ್ಪದಿಂದ ಜಾರಿ ಮಾಡಿದ್ದನ್ನು ಶಾ ಸ್ಮರಿಸಿದರು.

ಸಿಪಿಎಂನಲ್ಲಿ ಟಿಕೆಟ್ ನೀಡಿಕೆ ಗೊಂದಲ (ತಿರುವನಂತಪುರ ವರದಿ): ಈ ಬಾರಿಯ ಚುನಾವಣೆಯಲ್ಲಿ ಪಕ್ಷದ ಮುಖಂಡರ ಪತ್ನಿಯರನ್ನು ಕಣಕ್ಕಿಳಿಸುವ ವಿಚಾರ ಹಾಗೂ ಸಚಿವರೂ ಸೇರಿದಂತೆ ಪ್ರಮುಖರಿಗೆ ಟಿಕೆಟ್ ನಿರಾಕರಿಸಿರುವ ವಿಚಾರಗಳು ಸಿಪಿಎಂನಲ್ಲಿ ಕೋಲಾಹಲ ಎಬ್ಬಿಸಿವೆ. ಪ್ರತಿಭಟನೆಗಳು ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಈ ಬಗ್ಗೆ ಟೀಕೆಗಳು ವ್ಯಕ್ತವಾಗಿವೆ.

ಕಾನೂನು ಸಚಿವ ಎ.ಕೆ. ಬಾಲನ್ ಅವರ ಪತ್ನಿ ಪಿ.ಕೆ. ಜಮೀಲಾ ಅವರನ್ನು ತರೂರ್ ಕ್ಷೇತ್ರದಿಂದ ಕಣಕ್ಕಿಳಿಸುವ ನಿರ್ಧಾರಕ್ಕೆ ವ್ಯಾಪಕ ಟೀಕೆ ಎದುರಾಗಿದೆ. ಸಚಿವರಾದ ಥಾಮಸ್ ಐಸಾಕ್, ಜಿ.ಸುಧಾಕರನ್ ಅವರಿಗೆ ಟಿಕೆಟ್ ನೀಡದಿರುವುದು ಗೊಂದಲ ಸೃಷ್ಟಿಸಿದೆ.

ಕೇರಳದಲ್ಲಿ ಡಿಸಿಎಂ ಅಶ್ವತ್ಥನಾರಾಯಣ ಪ್ರವಾಸ

ತಿರುವನಂತಪುರ: ಕೇರಳ ಬಿಜೆಪಿ ಸಹ ಪ್ರಭಾರಿಯೂ ಆಗಿರುವ, ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರು ಭಾನುವಾರ ಕೇರಳದಲ್ಲಿ ಬಿಡುವಿಲ್ಲದ ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದರು.

ದಿನಪೂರ್ತಿ ವಿವಿಧ ಗಣ್ಯರು ಹಾಗೂ ಧರ್ಮ ಗುರುಗಳನ್ನು ಭೇಟಿಯಾದ ಅವರು, ಮುಖ್ಯವಾಗಿ ಬಿಜೆಪಿ ಮುಖಂಡರು ಹಾಗೂ ಮೆಟ್ರೋಮನ್ ಇ. ಶ್ರೀಧರನ್ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು. ರಾಜ್ಯದಲ್ಲಿ ಪ್ರಚಾರ, ಕಾರ್ಯಕ್ರಮಗಳು, ಸಭೆಗಳ ಬಗ್ಗೆ ಡಿಸಿಎಂ ಅವರು ಶ್ರೀಧರನ್ ಜತೆ ಚರ್ಚೆ ನಡೆಸಿದರು.

ನಾರಾಯಣ ಗುರುವಿಗೆ ಗೌರವ: ತಿರುವನಂತಪುರ ಜಿಲ್ಲೆಯ ವರ್ಕಾಲದಲ್ಲಿರುವ ಶ್ರೀ ನಾರಾಯಣ ಗುರು ಅವರ ಸಮಾಧಿ ಇರುವ ಶಿವಗಿರಿ ಮಠ ಮತ್ತು ಸಮೀಪದ ಕಾರ್ಡಿನಲ್ ಕ್ಲೀಮಿಸ್ ಎಮಿನೆನ್ಸ್ ಮಲಂಕರ ಚರ್ಚ್‌ಗೆ ಭೇಟಿ ನೀಡಿದರು.



ಕೇರಳ ಚುನಾವಣೆಯ ಬಿಜೆಪಿ ಸಹ ಪ್ರಭಾರಿಯೂ ಆದ ಕರ್ನಾಟಕದ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಅವರು ಕೇರಳದ ತಿರುವನಂತಪುರ ಜಿಲ್ಲೆಯ ವರ್ಕಾಲದಲ್ಲಿರುವ ಶ್ರೀ ನಾರಾಯಣ ಗುರು ಅವರ ಸಮಾಧಿ ಸ್ಥಳ ಇರುವ ಶಿವಗಿರಿ ಮಠಕ್ಕೆ ಭಾನುವಾರ ಭೇಟಿ ನೀಡಿದರು

ಬಳಿಕ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡುತ್ತಾ, 'ಕೇರಳದ ಜನರು ಪ್ರಗತಿಯನ್ನು ಬಯಸುತ್ತಾರೆ. ಇಲ್ಲಿ ಬಿಜೆಪಿ ಪರ ಅಲೆ ಬೀಸುತ್ತಿದೆ. ಎಲ್‌ಡಿಎಫ್ ಹಾಗೂ ಯುಡಿಎಫ್ ಆಡಳಿತದಿಂದ ಜನರು ಬೇಸತ್ತಿದ್ದಾರೆ' ಎಂದರು.

ಸಂಜೆ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಭಾಗವಹಿಸಿದ್ದ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

ಚಿನ್ನ ವ್ಯಾಪಾರ ಕಂಪನಿ ಮೇಲೆ ದಾಳಿ

₹ 1,000 ಕೋಟಿಗೂ ಅಧಿಕ ಅಘೋಷಿತ ಆದಾಯ ಪತ್ತೆ

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡಿನಲ್ಲಿರುವ ದಕ್ಷಿಣ ಭಾರತದ ಪ್ರಮುಖ ಚಿನ್ನ ವ್ಯಾಪಾರಿಯ ಕಂಪನಿ ಹಾಗೂ ಜುವೆಲ್ಲರಿ ಸಮೂಹಕ್ಕೆ ಸೇರಿದ ಸ್ಥಳಗಳ ಮೇಲೆ ಇತ್ತೀಚೆಗೆ ನಡೆಸಿದ ದಾಳಿ ವೇಳೆ, ಅಘೋಷಿತ ₹ 1,000 ಕೋಟಿಗೂ ಅಧಿಕ ಮೊತ್ತದ ಆದಾಯವನ್ನು ಪತ್ತೆ ಹಚ್ಚಲಾಗಿದೆ ಎಂದು ಕೇಂದ್ರೀಯ ನೇರ ತೆರಿಗೆ ಮಂಡಳಿ (ಸಿಬಿಡಿಟಿ) ಭಾನುವಾರ ತಿಳಿಸಿದೆ.

ಮಾರ್ಚ್ 4ರಂದು ಚೆನ್ನೈ, ಮುಂಬೈ, ಕೊಯಮತ್ತೂರು, ಮದುರೆ, ತಿರುಚಿರಾಪಳ್ಳಿ, ತ್ರಿಶ್ಶೂರ್, ನೆಲ್ಲೂರು, ಜೈಪುರ ಹಾಗೂ ಇಂದೋರ್‌ನಲ್ಲಿರುವ ಈ ಎರಡು ಕಂಪನಿಗಳಿಗೆ ಸೇರಿದ ಸ್ಥಳಗಳಲ್ಲಿ ಶೋಧ ಕಾರ್ಯ ನಡೆದಿತ್ತು.

ಈ ದಾಳಿ ವೇಳೆ ಪತ್ತೆಯಾದ ಲೆಕ್ಕಪತ್ರ ಇಲ್ಲದ ₹ 1.2 ಕೋಟಿ ನಗದನ್ನು ಜಪ್ತಿ ಮಾಡಲಾಗಿದೆ. ಈ ಕಂಪನಿಗಳು ₹ 1,000 ಕೋಟಿಯಷ್ಟು ತೆರಿಗೆ ವಂಚನೆ ಮಾಡಿರುವುದು ಕಂಡು ಬಂದಿದೆ ಎಂದು ಮಂಡಳಿ ತಿಳಿಸಿದೆ.

'ಲೆಕ್ಕಪತ್ರ ಇರದ ನಗದು ವ್ಯವಹಾರ, ಖೊಟ್ಟಿ ಕ್ಯಾಶ್ ಕ್ರೆಡಿಟ್, ನೋಟು ರದ್ದತಿ ವೇಳೆ ಮಾಡಲಾದ ಠೇವಣಿಗಳು ಸೇರಿದಂತೆ ಲೆಕ್ಕಪತ್ರ ಇಲ್ಲದ ವ್ಯವಹಾರಗಳ ಬಗ್ಗೆ ಸಾಕಷ್ಟು ಸಾಕ್ಷ್ಯಗಳನ್ನು ದಾಳಿ ವೇಳೆ ಸಂಗ್ರಹಿಸಲಾಗಿದೆ' ಎಂದು ಕೇಂದ್ರೀಯ ನೇರ ತೆರಿಗೆ ಮಂಡಳಿ (ಸಿಬಿಡಿಟಿ) ಪ್ರಕಟಣೆ ತಿಳಿಸಿದೆ.

'ಚಿನ್ನದ ವ್ಯಾಪಾರಿ ಖರೀದಿಸಿರುವ ಚಿನ್ನದ ಗಟ್ಟಿಗಳಿಗೆ ಸಂಬಂಧಿಸಿದಂತೆ ಲೆಕ್ಕಪತ್ರ ಇಲ್ಲ. ಆದರೆ, ಹಳೆ ಚಿನ್ನವನ್ನು ಬಳಸಿ, ಆಭರಣಗಳನ್ನು ಮಾಡುವಾಗ ನಷ್ಟವಾಗಿರುವ ಹಾಗೂ ಸಾಲ ಹೊಂದಿರುವ ಬಗ್ಗೆ ಸುಳ್ಳು ಮಾಹಿತಿ ನೀಡಿರುವುದು ಸಹ ಪತ್ತೆಯಾಗಿದೆ' ಎಂದೂ ಪ್ರಕಟಣೆ ತಿಳಿಸಿದೆ.

'ಜುವೆಲ್ಲರಿ ವರ್ತಕ ಸ್ಥಳೀಯ ಲೇವಾದೇವಿದಾರರ ಬಳಿ ಸಾಲ ಪಡೆದು, ಅದನ್ನುಮರಳಿಸಿದ್ದಾರೆ.ಅಲ್ಲದೇ,ಬಿಲ್ಡರ್‌ಗಳಿಗೆ ನಗದು ಸಾಲ ನೀಡಿದ್ದಲ್ಲದೇ, ರಿಯಲ್ ಎಸ್ಟೇಟ್‌ನಲ್ಲಿ ಹಣ ಹೂಡಿಕೆ ಮಾಡಿರುವುದು ದಾಳಿ ವೇಳೆ ನಡೆಸಿದ ಪರಿಶೀಲನೆಯಿಂದ ತಿಳಿದು ಬಂದಿದೆ' ಎಂದು ಮಂಡಳಿ ಹೇಳಿದೆ.

ಟಿಬೆಟ್‌ಗೆ ಬುಲೆಟ್ ರೈಲು: ಚೀನಾ ನಿರ್ಧಾರ

ಬೀಜಿಂಗ್ (ಪಿಟಿಐ): 'ಈ ವರ್ಷ ಜುಲೈ ತಿಂಗಳಲ್ಲಿ ಚೀನಾವು ಅರುಣಾಚಲ ಪ್ರದೇಶದ ಗಡಿ ಸಮೀಪವಿರುವ ಟಿಬೆಟ್‌ಗೆ ಬುಲೆಟ್ ರೈಲು ಪ್ರಾರಂಭಿಸಲಿದೆ. ಚೀನಾವು ಪ್ರಾಂತೀಯ ಮಟ್ಟದ ಎಲ್ಲಾ ಪ್ರದೇಶಗಳಿಗೆ ಬುಲೆಟ್ ರೈಲು ಸೇವೆಯನ್ನು ಆರಂಭಿಸಲು ನಿರ್ಧರಿಸಿದೆ' ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

'ಲಾಸಾಗೆ 435 ಕಿ.ಮೀ ದೂರದ ವರೆಗೆ ಸಂಪರ್ಕ ಕಲ್ಪಿಸುವ ಹೈ ಸ್ಪೀಡ್ ಟ್ರೈನ್ ಪ್ರಾರಂಭಿಸಲಾಗುವುದು. ಈ ರೈಲು, ಇಂಧನ ಮತ್ತು ವಿದ್ಯುತ್ ಚಾಲಿತ ರೈಲು ಆಗಿದೆ' ಎಂದು 'ಚೀನಾ ಸ್ಟೇಟ್ ರೈಲ್ವೆ ಗ್ರೂಪ್ ಕಂಪನಿ ಲಿಮಿಟೆಡ್'ನ ಅಧ್ಯಕ್ಷ ಲು ಡುಂಗ್ಫು ಹೇಳಿದರು.

ಉತ್ತರಾಖಂಡ: ಸರ್ಕಾರದಲ್ಲಿ ಬದಲಾವಣೆ ಸಾಧ್ಯತೆ

ಡೆಹ್ರಾಡೂನ್ (ಪಿಟಿಐ): ಉತ್ತರಾಖಂಡ ಬಿಜೆಪಿಯ ಘಟಕದ ಕೋರ್ ಕಮಿಟಿ ಸಭೆ ದಿಢೀರ್ ನಡೆದಿದ್ದು, ಸರ್ಕಾರದಲ್ಲಿ ಮಹತ್ವದ ಬದಲಾವಣೆಗಳಾಗಬಹುದು ಎಂದು ನಿರೀಕ್ಷಿಸಲಾಗಿದೆ.

ರಾಜ್ಯದಲ್ಲಿ ನಾಯಕತ್ವದ ಬದಲಾವಣೆಯಾಗಬಹುದು ಅಥವಾ ಸಚಿವ ಸಂಪುಟ ವಿಸ್ತರಣೆಯಾಗಬಹುದು ಎನ್ನುವ ವರದಿಗಳು ದಟ್ಟವಾಗಿವೆ.

ಶನಿವಾರ ಸಂಜೆ ಬಿಜೆಪಿ ರಾಷ್ಟ್ರೀಯ ಉಪಾಧ್ಯಕ್ಷ ಮತ್ತು ಛತ್ತೀಸಗಡ ಮಾಜಿ ಮುಖ್ಯಮಂತ್ರಿ ರಮಣ್ ಸಿಂಗ್ ಅವರ ಅಧ್ಯಕ್ಷತೆಯಲ್ಲಿ ಕೋರ್ ಕಮಿಟಿ ಸಭೆ ನಡೆಯಿತು. ರಾಜ್ಯ ಬಿಜೆಪಿ ಉಸ್ತುವಾರಿ ದುಷ್ಯಂತ್ ಕುಮಾರ್ ಗೌತಮ್ ಸಹ ಈ ಸಂದರ್ಭದಲ್ಲಿ ಹಾಜರಿದ್ದರು.

ಗೈರಸೈನ್ ನಗರದಲ್ಲಿ ಬಜೆಟ್ ಅಧಿವೇಶನ ನಡೆಯುತ್ತಿರುವ ಸಂದರ್ಭದಲ್ಲೇ ಈ ಸಭೆ ನಡೆಸಿರುವುರಿಂದ ಮಹತ್ವ ಪಡೆದಿದೆ. ಕೋರ್ ಕಮಿಟಿ ಸಭೆಗಾಗಿ ಬಿಜೆಪಿ ಶಾಸಕರನ್ನು ಗೈರಸೈನ್‌ನಿಂದ ಡೆಹ್ರಾಡೂನ್‌ಗೆ ಕರೆಯಿಸಿಕೊಳ್ಳಲಾಯಿತು. ಮುಖ್ಯಮಂತ್ರಿ ತ್ರಿವೇಂದ್ರ ಸಿಂಗ್ ರಾವತ್ ಕೂಡ ಅವಸರದಲ್ಲೇ ದೌಡಾಯಿಸಿ ಡೆಹ್ರಾಡೂನ್‌ಗೆ ಬಂದರು.

ಕೋರ್ ಕಮಿಟಿ ಸದಸ್ಯರ ಜತೆ ಪ್ರತ್ಯೇಕವಾಗಿ ರಮಣ್ ಸಿಂಗ್ ಮಾತುಕತೆ ನಡೆಸಿ ಅಭಿಪ್ರಾಯಗಳನ್ನು ಪಡೆದರು.

ಈ ಬೆಳವಣಿಗೆಗಳ ಬಗ್ಗೆ ಪ್ರತಿಕ್ರಿಯಿಸಿರುವ ರಾಜ್ಯ ಬಿಜೆಪಿ ಅಧ್ಯಕ್ಷ ಬನ್ಸಿಧಾರ್ ಭಾಗತ್, 'ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಇಲ್ಲ ಮತ್ತು ಶಾಸಕರಲ್ಲಿ ಯಾವುದೇ ರೀತಿಯ ಅಸಮಾಧಾನ ಇಲ್ಲ' ಎಂದು ಹೇಳಿದ್ದಾರೆ.

ಹರಿಯಾಣ: 10ಕ್ಕೆ ವಿಶ್ವಾಸಮತ ಯಾಚಿಸಲಿರುವ ಬಿಜೆಪಿ–ಜೆಜೆಪಿ ಸರ್ಕಾರ

ಚಂಡೀಗಡ(ಪಿಟಿಐ): ರಾಜ್ಯ ವಿಧಾನಸಭೆಯಲ್ಲಿ ಮಾರ್ಚ್ 10ರಂದು ಬಿಜೆಪಿ–ಜೆಜೆಪಿ ಸರ್ಕಾರ ವಿಶ್ವಾಸಮತ ಯಾಚಿಸಲಿದೆ.

ಅವಿಶ್ವಾಸ ನಿಲುವಳಿ ಪರ ಮತ ಚಲಾಯಿಸುವಂತೆ ಆಡಳಿತಾರೂಢ ಬಿಜೆಪಿ–ಜೆಜೆಪಿ ಶಾಸಕರಿಗೆ ಒತ್ತಡ ಹೇರಬೇಕು ಎಂದು ಸಂಯುಕ್ತ ಕಿಸಾನ್ ಮೋರ್ಚಾ ಜನರಿಗೆ ಮನವಿ ಮಾಡಿದೆ.

ಕೇಂದ್ರ ಸರ್ಕಾರದ ಹೊಸ ಕೃಷಿ ಕಾನೂನುಗಳನ್ನು ರದ್ದುಗೊಳಿಸುವಂತೆ ಒತ್ತಾಯಿಸಿ ಸಂಯುಕ್ತ ಕಿಸಾನ್ ಮೋರ್ಚಾ ಹೋರಾಟ ನಡೆಸುತ್ತಿದೆ.

'ಕೇಂದ್ರ ಸರ್ಕಾರ ರೈತರ ಬೇಡಿಕೆಗಳಿಗೆ ಸ್ಪಂದಿಸುತ್ತಿಲ್ಲ. ಸರ್ಕಾರ ಮೌನವಹಿಸಿದೆ. ಹೀಗಾಗಿ, ರೈತರು ಮತ್ತು ನಾಗರಿಕರು ಬಿಜೆಪಿ ಮತ್ತು ಜೆಜೆಪಿ ಶಾಸಕರನ್ನು ಭೇಟಿಯಾಗಿ ಅವಿಶ್ವಾಸ ಪರ ಮತ ಚಲಾಯಿಸುವಂತೆ ಮನವೊಲಿಸುವ ಪ್ರಯತ್ನ ಮಾಡಬೇಕು. ಈ ಮೂಲಕ ಸರ್ಕಾರಕ್ಕೆ ಪಾಠ ಕಲಿಸಬೇಕು' ಎಂದು ಸಂಯುಕ್ತ ಕಿಸಾನ್ ಮೋರ್ಚಾ ನಾಯಕ ಡಾ. ದರ್ಶನ್ ಪಾಲ್ ಕೋರಿದ್ದಾರೆ.

'ಚೀನಾ–ಭಾರತ ಪರಸ್ಪರ ಸಂಶಯ ಬೇಡ'

ಬೀಜಿಂಗ್ (ಪಿಟಿಐ): ಚೀನಾ ಮತ್ತು ಭಾರತ ಪರಸ್ಪರರನ್ನು ಸಂಶಯದಿಂದ ನೋಡುವ, ದುರ್ಬಲಗೊಳಿಸುವುದನ್ನು ನಿಲ್ಲಿಸಬೇಕು. ಗಡಿ ಬಿಕ್ಕಟ್ಟನ್ನು ಶಮನಗೊಳಿಸುವ ಸಂಬಂಧ ಎರಡೂ ದೇಶಗಳು ದ್ವಿಪಕ್ಷೀಯ ಸಹಕಾರವನ್ನು ವಿಸ್ತರಿಸುವುದು ಅಗತ್ಯ ಎಂದು ಚೀನಾ ವಿದೇಶಾಂಗ ಸಚಿವ ವಾಂಗ್ ಯಿ ಭಾನುವಾರ ಹೇಳಿದರು.



ವಾಂಗ್ ಯಿ

ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಚೀನಾ ಮತ್ತು ಭಾರತದ ನಡುವಿನ ಬಾಂಧವ್ಯವನ್ನು ಗಡಿ ಬಿಕ್ಕಟ್ಟಿಗೆ ಸೀಮಿತಗೊಳಿಸಬಾರದು. ಎರಡೂ ದೇಶಗಳು ನಡುವಿನ ಸ್ನೇಹವೂ ಗಟ್ಟಿಯಾಗಿದೆ' ಎಂದು ಹೇಳಿದರು.

ಪೂರ್ವ ಲಡಾಖ್ ಗಡಿಯಲ್ಲಿ ಸಂಘರ್ಷ ಉದ್ಭವಿಸಿದಾಗಿನಿಂದ ಉಭಯ ದೇಶಗಳ ನಡುವಿನ ಬಾಂಧವ್ಯವನ್ನು ಚೀನಾ ಹೇಗೆ ಅರ್ಥೈಸುತ್ತಿದೆ ಎಂಬ ಪತ್ರಕರ್ತರ ಪ್ರಶ್ನೆಗೆ, 'ಗಡಿ ಬಿಕ್ಕಟ್ಟನ್ನು ಎರಡೂ ದೇಶಗಳು ಸಮರ್ಪಕವಾಗಿಯೇ ನಿರ್ವಹಿಸಿವೆ. ದ್ವಿಪಕ್ಷೀಯ ಸಹಕಾರವನ್ನೂ ವಿಸ್ತರಿಸಿವೆ' ಎಂದರು.


ಮೈಸೂರು 'ಮಹಾರಾಜ'ರ ಒಡೆತನದ 1561 ಎಕರೆ ಭೂಮಿ

ಸುಪ್ರೀಂ ಕೋರ್ಟ್ ಮೊರೆ ಹೋದ ರಾಜ್ಯ ಸರ್ಕಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಮೈಸೂರಿನಲ್ಲಿರುವ ಅಪಾರ ಪ್ರಮಾಣದ ಜಮೀನಿನ ಒಡೆತನಕ್ಕೆ ಸಂಬಂಧಿಸಿದಂತೆ ರಾಜ್ಯ ಹೈಕೋರ್ಟ್ ಇತ್ತೀಚೆಗೆ ನೀಡಿರುವ ಆದೇಶವನ್ನು ಪ್ರಶ್ನಿಸಿ ರಾಜ್ಯ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ವಿಶೇಷ ಮೇಲ್ಮನವಿ ಸಲ್ಲಿಸಿದೆ.

1950ರ ವಿಲೀನ ಒಪ್ಪಂದದ ಪ್ರಕಾರ ಮೈಸೂರಿನಲ್ಲಿರುವ 1561.31 ಎಕರೆ ಜಮೀನಿನ ಒಡೆತನ 'ಮೈಸೂರು ಮಹಾರಾಜ'ರಿಗೆ ಸೇರಿದ್ದು ಎಂದು 2020ರ ಡಿಸೆಂಬರ್ 19ರಂದು ಹೈಕೋರ್ಟ್‌ನ ವಿಭಾಗೀಯ ಪೀಠ ನೀಡಿರುವ ಆದೇಶದ ಸಿಂಧುತ್ವವನ್ನು ರಾಜ್ಯ ಸರ್ಕಾರ ಪ್ರಶ್ನಿಸಿದೆ.



ಬ್ರಿಟಿಷ್ ಸರ್ಕಾರವು ಈ ಜಮೀನನ್ನು ಖರಾಬ್ ಜಮೀನು (ಸಾರ್ವಜನಿಕ ಆಸ್ತಿ) ಎಂದು ಸತತ ಎರಡು ವರ್ಷ ಸಮೀಕ್ಷೆ ನಡೆಸಿ 1883ರಲ್ಲಿಯೇ ಘೋಷಿಸಿದೆ. 1921ರಲ್ಲಿ ಇದನ್ನು 'ಖರಾಬ್ ಜಮೀನು' ಎಂದು ವರ್ಗೀಕರಿಸಿ ಆದೇಶಿಸಿದೆ. ಆದರೂ, ಕೇಂದ್ರ ಸರ್ಕಾರದ 1950ರ ವಿಲೀನ ಒಪ್ಪಂದದ ಪ್ರಕಾರ ಮೈಸೂರು ಮಹಾರಾಜರ ಒಡೆತನಕ್ಕೆ ಈ ಜಮೀನನ್ನು ನೀಡಲಾಗಿದೆ. ಖರಾಬ್ ಜಮೀನು ಮತ್ತು ಒಡೆತನ ಕುರಿತ ವ್ಯಾಖ್ಯಾನವನ್ನು ಹೈಕೋರ್ಟ್ ತಪ್ಪಾಗಿ ಅರ್ಥೈಸಿಕೊಂಡಿದೆ ಎಂದು ಅರ್ಜಿಯಲ್ಲಿ ದೂರಲಾಗಿದೆ.

ಖರಾಬ್ ಜಮೀನನ್ನು ಒಡೆತನದೊಂದಿಗೆ ವರ್ಗೀಕರಿಸುವ ನಿಟ್ಟಿನಲ್ಲಿ ತಪ್ಪಾದ ಆದೇಶ ರವಾನಿಸಿರುವ ಹೈಕೋರ್ಟ್ ಗಂಭೀರ ಪ್ರಮಾದ ಎಸಗಿದೆ ಎಂದು ದೂರಲಾಗಿದೆ. ಅಲ್ಲದೆ, ವಿವಾದಿತ ಜಮೀನಿನ ಪೈಕಿ 600 ಎಕರೆ ಜನವಸತಿ ಪ್ರದೇಶ ಹಾಗೂ ಸಾರ್ವಜನಿಕ ಬಳಕೆಗೆ ಮೀಸಲಾಗಿದೆ ಎಂದು ಅರ್ಜಿಯಲ್ಲಿ ತಿಳಿಸಲಾಗಿದೆ.

1950ರ ಜನವರಿ 23ರಂದು ಏರ್ಪಟ್ಟಿರುವ ಒಪ್ಪಂದಕ್ಕೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ಮೂರು ವಾರಗಳೊಳಗೆ ಸಲ್ಲಿಸುವಂತೆ ರಾಜ್ಯ ಸರ್ಕಾರದ ಪರ ವಕೀಲ ಹರೀಶ್ ಸಾಳ್ವೆ ಅವರಿಗೆ ಸೂಚಿಸಿರುವ ನ್ಯಾಯಮೂರ್ತಿ ಯು.ಯು. ಲಲಿತ್ ನೇತೃತ್ವದ ಪೀಠವು ಏಪ್ರಿಲ್ 12ರಂದು ವಿಚಾರಣೆ ನಿಗದಿಪಡಿಸಿದೆ.

ರೈತ ಪ್ರತಿಭಟನೆಗೆ ಮಹಿಳಾ ದಿನದ ಬೆಡಗು

ನವದೆಹಲಿ/ಭೋಪಾಲ್ (ಪಿಟಿಐ): ಕೇಂದ್ರದ ಮೂರು ಕೃಷಿ ಕಾಯ್ದೆಗಳ ವಿರುದ್ಧ ದೆಹಲಿಯ ಗಡಿಯ ಸಿಂಘು, ಟಿಕ್ರಿ ಮತ್ತು ಗಾಜಿಪುರದಲ್ಲಿ ರೈತರು ನಡೆಸುತ್ತಿರುವ ಪ್ರತಿಭಟನೆ ಸೋಮವಾರ ವಿಶಿಷ್ಟವಾಗಿರಲಿದೆ. ಮಹಿಳಾ ದಿನದ ಅಂಗವಾಗಿ ಅಂದು ವೇದಿಕೆ ನಿರ್ವಹಣೆ, ಆಹಾರ ಪೂರೈಕೆ ಮತ್ತು ಭದ್ರತೆಯ ಎಲ್ಲ ಹೊಣೆಯನ್ನು ಮಹಿಳೆಯರೇ ನಿರ್ವಹಿಸಲಿದ್ದಾರೆ. ಸಾವಿರಾರು ಮಹಿಳಾ ರೈತರು, ವಿದ್ಯಾರ್ಥಿಗಳು ಮತ್ತು ಹೋರಾಟಗಾರರು ಈ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ.

ದೇಶದ ಕೃಷಿ ಕ್ಷೇತ್ರಕ್ಕೆ ಮಹಿಳೆಯರು ನೀಡಿರುವ ಗಣನೀಯ ಕೊಡುಗೆಯನ್ನು ಗಮನದಲ್ಲಿ ಇರಿಸಿಕೊಂಡು ಮಹಿಳಾ ದಿನವನ್ನು ವಿಶಿಷ್ಟವಾಗಿ ಆಚರಿಸುವ ಯೋಜನೆಯನ್ನು ರೈತ ಸಂಘಟನೆಗಳು ರೂಪಿಸಿವೆ. ಮುಖ್ಯವಾಗಿ ಪಂಜಾಬ್ ಮತ್ತು ಹರಿಯಾಣದ ಸಾವಿರಾರು ಮಹಿಳೆಯರು ದೆಹಲಿಯ ಗಡಿಗಳಲ್ಲಿ ಸೋಮವಾರ ಜಮಾವಣೆಗೊಳ್ಳಲಿದ್ದಾರೆ. ಅವರು ತಮ್ಮ ಹಕ್ಕುಗಳ ಬಗ್ಗೆ, ಹೋರಾಟಗಳ ಬಗ್ಗೆ ಮತ್ತು ಚಳವಳಿಯ ಮಹತ್ವದ ಬಗ್ಗೆ ಮಾತನಾಡಲಿದ್ದಾರೆ.

ವೇದಿಕೆ ಕಾರ್ಯಕ್ರಮದ ನಿರ್ವಹಣೆ ಜತೆಗೆ ಭಾಷಣಕಾರರು ಕೂಡ ಮಹಿಳೆಯರೇ ಇರಲಿದ್ದಾರೆ. ಸಿಂಘು ಗಡಿಯಲ್ಲಿ ಸಣ್ಣದೊಂದು ರ‍್ಯಾಲಿ ಕೂಡ ನಡೆಯಲಿದೆ ಎಂದು ರೈತ ನಾಯಕಿ ಕವಿತಾ ಕುರುಗಂಟಿ ಹೇಳಿದ್ದಾರೆ.

'ಮಹಿಳೆಯರು ಕೃಷಿಕ ಸಮುದಾಯದ ಬಹುದೊಡ್ಡ ಭಾಗ. ಆದರೆ, ಅವರಿಗೆ ಮಾನ್ಯತೆ ಇಲ್ಲ. ವಾಸ್ತವದಲ್ಲಿ ಕೃಷಿಯ ಕೆಲಸಗಳನ್ನು ಪುರುಷರಿಗಿಂತ ಹೆಚ್ಚು ಮಹಿಳೆಯರೇ ಮಾಡುತ್ತಾರೆ. ಸೋಮವಾರದ ಕಾರ್ಯಕ್ರಮದಲ್ಲಿ 10ರಿಂದ 15 ಸಾವಿರ ಮಹಿಳೆಯರು ಭಾಗಿಯಾಗುವ ನಿರೀಕ್ಷೆ ಇದೆ' ಎಂದು ರೈತ ಮುಖಂಡ ಕುಲ್ವಂತ್ ಸಿಂಗ್ ಸಂಧು ತಿಳಿಸಿದ್ದಾರೆ.

ಮಹಿಳಾ ದಿನದಂದು ಪಂಜಾಬ್ ಮತ್ತು ಹರಿಯಾಣದ ವಿವಿಧೆಡೆ ನಡೆಯಲಿರುವ ಪ್ರತಿಭಟನೆಗಳಲ್ಲಿಯೂ ಮಹಿಳೆಯರು ಭಾಗವಹಿಸಬೇಕು ಎಂದು ಅವರು ಕರೆಕೊಟ್ಟಿದ್ದಾರೆ.

ಮಧ್ಯ ಪ್ರದೇಶದಲ್ಲಿ ರ‍್ಯಾಲಿ: ರೈತರ ಪ್ರತಿಭಟನೆಗೆ ಬೆಂಬಲ ಕ್ರೋಡೀಕರಣದ ಭಾಗವಾಗಿ ಮಧ್ಯ ಪ್ರದೇಶದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಭಾರತೀಯ ಕಿಸಾನ್ ಯೂನಿಯನ್ (ಬಿಕೆಯು) ನಾಯಕ ರಾಕೇಶ್ ಸಿಂಗ್ ಟಿಕಾಯತ್ ಅವರು ಮಧ್ಯ ಪ್ರದೇಶದಲ್ಲಿ ಮೂರು ರ‍್ಯಾಲಿ ನಡೆಸಲಿದ್ದಾರೆ. ಮೊದಲನೇ ರ‍್ಯಾಲಿ ಸೋಮವಾರ ಶಿವಪುರದಲ್ಲಿ ನಡೆಯಲಿದೆ. ಇದೇ 14ರಂದು (ಭಾನುವಾರ) ರೇವಾ ಮತ್ತು 15ರಂದು (ಸೋಮವಾರ) ಜಬಲ್ಪುರದಲ್ಲಿ ಸಮಾವೇಶ ಹಮ್ಮಿಕೊಳ್ಳಲಾಗಿದೆ.

ಇನ್ನಷ್ಟು ಕಾರ್ಯಕ್ರಮಗಳನ್ನು ಆಯೋಜಿಸುವ ಬಗ್ಗೆ ಮುಂದೆ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಬಿಕೆಯುನ ಮಧ್ಯ ಪ್ರದೇಶ ಘಟಕದ ಪ್ರಧಾನ ಕಾರ್ಯದರ್ಶಿ ಅನಿಲ್ ಯಾದವ್ ತಿಳಿಸಿದ್ದಾರೆ.

ಟಿಕಾಯತ್ ಅವರು ಮಧ್ಯ ಪ್ರದೇಶ, ಉತ್ತರಾಖಂಡ, ರಾಜಸ್ಥಾನ, ಕರ್ನಾಟಕ ಮತ್ತು ತೆಲಂಗಾಣದಲ್ಲಿ ಪ್ರವಾಸ ನಡೆಸಿ, ರೈತರ ಜತೆಗೆ ಸಂವಾದ ಕೈಗೊಳ್ಳಲಿದ್ದಾರೆ. ಕೇಂದ್ರದ ಕಾಯ್ದೆಗಳ ವಿರುದ್ಧದ ಪ್ರತಿಭಟನೆಯನ್ನು ಇನ್ನಷ್ಟು ತೀವ್ರಗೊಳಿಸಲಿದ್ದಾರೆ ಎಂದು ಯಾದವ್ ಹೇಳಿದ್ದಾರೆ.



ದೆಹಲಿಯಲ್ಲಿ ನಡೆಯುತ್ತಿರುವ ರೈತರ ಪ್ರತಿಭಟನೆಯಲ್ಲಿ ಭಾಗಿಯಾದ ಕೇರಳದ 'ಚೆಂಡೆ ಮೇಳ' ತಂಡದ ಜತೆ ರಾಕೇಶ್ ಟಿಕಾಯತ್ –ಪಿಟಿಐ ಚಿತ್ರ

ಟಿಕಾಯತ್ ವಿರುದ್ಧ ಬಂಧನ ವಾರಂಟ್

ಮಧ್ಯ ಪ್ರದೇಶದ ಅನೂಪ್‌ಪುರ ಜಿಲ್ಲೆಯಲ್ಲಿ 2012ರಲ್ಲಿ ನಡೆದ ಕೊಲೆ ಯತ್ನ ಮತ್ತು ಗಲಭೆ ಪ್ರಕರಣದಲ್ಲಿ ಟಿಕಾಯತ್ ವಿರುದ್ಧದ ಬಂಧನ ವಾರಂಟ್ ಬಾಕಿ ಇದೆ ಎಂದು ಪೊಲೀಸರು ತಿಳಿಸಿದ್ದಾರೆ. ಜೈತಹರಿ ಪ್ರದೇಶದಲ್ಲಿ ವಿದ್ಯುತ್ ಘಟಕದ ಸ್ಥಾಪನೆಯ ವಿರುದ್ಧ ಬಿಕೆಯು ಪ್ರತಿಭಟನೆ ನಡೆಸಿತ್ತು. ಈ ಪ್ರತಿಭಟನೆ ಹಿಂಸೆಗೆ ತಿರುಗಿ ಪೊಲೀಸರು ಸೇರಿ ಹಲವರು ಗಾಯಗೊಂಡಿದ್ದರು. ಹಲವು ವಾಹನಗಳಿಗೆ ಬೆಂಕಿ ಹಚ್ಚಲಾಗಿತ್ತು ಎಂದು ಅಧಿಕಾರಿಗಳು ಹೇಳಿದ್ದಾರೆ.

ಟಿಕಾಯತ್ ಸೇರಿ ನೂರಕ್ಕೂ ಹೆಚ್ಚು ಮಂದಿಯ ವಿರುದ್ಧ ಪ್ರಕರಣ ದಾಖಲಾಗಿತ್ತು. ಬಂಧನಕ್ಕೆ ಒಳಗಾಗಿದ್ದ ಟಿಕಾಯತ್ ಅವರು 2012ರಲ್ಲಿ ಜಾಮೀನಿನಲ್ಲಿ ಬಿಡುಗಡೆ ಆಗಿದ್ದರು. ಆದರೆ, ನಂತರ ವಿಚಾರಣೆಗೆ ಹಾಜರಾಗಿರಲಿಲ್ಲ. ಹಾಗಾಗಿ 2016ರಲ್ಲಿಯೇ ಅವರ ವಿರುದ್ಧ ಬಂಧನ ವಾರಂಟ್ ಹೊರಡಿಸಲಾಗಿತ್ತು. ಈಗ ಅವರು ಮಧ್ಯ ಪ್ರದೇಶಕ್ಕೆ ಭೇಟಿ ಕೊಟ್ಟಾಗ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಅನೂಪ್‌ಪುರ ಪೊಲೀಸ್ ವರಿಷ್ಠಾಧಿಕಾರಿ ಮಂಗಿಲಾಲ್ ಸೋಲಂಕಿ ಹೇಳಿದ್ದಾರೆ.

ಮತ್ತೊಬ್ಬ ರೈತ ಆತ್ಮಹತ್ಯೆ

ಹರಿಯಾಣದ ಹಿಸಾರ್ ಜಿಲ್ಲೆಯ ರೈತ ರಾಜಬೀರ್ (49) ಟಿಕ್ರಿ ಗಡಿಯಿಂದ ಏಳು ಕಿ.ಮೀ. ದೂರದ ಸ್ಥಳವೊಂದರಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ. ರೈತರ ಪ್ರತಿಭಟನೆಗೆ ಬೆಂಬಲ ನೀಡಿದ್ದ ಅವರು ಮರಣಪತ್ರವನ್ನೂ ಬರೆದಿಟ್ಟಿದ್ದಾರೆ.

ಕೇಂದ್ರದ ಮೂರು ಕೃಷಿ ಕಾಯ್ದೆಗಳೇ ತಮ್ಮ ಆತ್ಮಹತ್ಯೆಗೆ ಕಾರಣ. ಈ ಕಾಯ್ದೆಗಳನ್ನು ರದ್ದುಪಡಿಸಿ ತಮ್ಮ ಕೊನೆಯಾಸೆಯನ್ನು ಕೇಂದ್ರ ಸರ್ಕಾರ ಈಡೇರಿಸಬೇಕು ಎಂದು ಅವರು ಪತ್ರದಲ್ಲಿ ಹೇಳಿದ್ದಾರೆ. ಹರಿಯಾಣದ ಇನ್ನೊಬ್ಬ ರೈತ ಟಿಕ್ರಿ ಗಡಿಯಲ್ಲಿ ಇತ್ತೀಚೆಗೆ ವಿಷ ಕುಡಿದಿದ್ದರು. ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದರು.

ಕಳೆದ ಡಿಸೆಂಬರ್‌ನಲ್ಲಿ ಪಂಜಾಬ್‌ನ ವಕೀಲರೊಬ್ಬರು ಟಿಕ್ರಿ ಗಡಿಯಿಂದ ಕೆಲ ಕಿಲೋಮೀಟರ್ ದೂರದಲ್ಲಿ ಮತ್ತು ಸಿಖ್ ಧರ್ಮಬೋಧಕ ಸಂತ ರಾಮ ಸಿಂಗ್ ಅವರು ಸಿಂಘು ಗಡಿ ಸಮೀಪ ಆತ್ಮಹತ್ಯೆ ಮಾಡಿಕೊಂಡಿದ್ದರು.

'ಸಾರ್ವಜನಿಕ ಸ್ಥಳ ಈಗಲೂ ಮಹಿಳೆಯರಿಗೆ ಸುರಕ್ಷಿತವಲ್ಲ'

ಮಹಿಳಾ ದಿನದ ಅಂಗವಾಗಿ 'ಲೋಕಲ್ ಸರ್ಕಲ್ಸ್' ಸಮೀಕ್ಷೆ


• ಶೆಮಿನ್ ಜಾಯ್

ನವದೆಹಲಿ: ಸಾರ್ವಜನಿಕ ಸ್ಥಳಗಳು ಮಹಿಳೆಯರಿಗೆ ಈಗಲೂ ಸುರಕ್ಷಿತವಲ್ಲ ಎಂದು ಲೋಕಲ್ ಸರ್ಕಲ್ಸ್ ನಡೆಸಿದ ಸಮೀಕ್ಷೆಯಲ್ಲಿ ಕಂಡುಬಂದಿದೆ. ಮಹಿಳಾ ದಿನಾಚರಣೆ ಅಂಗವಾಗಿ ನಡೆಸಿದ ಸಮೀಕ್ಷೆಯಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ಶೇ 29ರಷ್ಟು ಮಹಿಳೆಯರು ಕನಿಷ್ಠ ಒಮ್ಮೆಯಾದರೂ ಹಿಂಸೆ ಅಥವಾ ಲೈಂಗಿಕ ಕಿರುಕುಳವನ್ನು ಎದುರಿಸಿದ್ದಾರೆ ಎಂಬ ಅಂಶ ತಿಳಿದು ಬಂದಿದೆ. ಶೇ 9ರಷ್ಟು ಮಹಿಳೆಯರು ಈ ಸ್ಥಳಗಳಲ್ಲಿ ಹಲವು ಬಾರಿ ಇಂತಹ ಘಟನೆಗಳಿಗೆ ಮುಖಾಮುಖಿಯಾಗಿದ್ದಾರೆ. ಇಂತಹ ನಾಲ್ಕರಲ್ಲಿ ಒಂದು ಪ್ರಕರಣದಲ್ಲಿ ಮಾತ್ರ ತಪ್ಪಿತಸ್ಥರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಸಮೀಕ್ಷೆಯಲ್ಲಿ ಭಾಗಿಯಾಗಿದ್ದ 8,347 ಮಂದಿಯ ಪೈಕಿ ಶೇ 20ರಷ್ಟು ಮಹಿಳೆಯರು 'ನಾನು ಮತ್ತು ನನ್ನ ಕುಟುಂಬ ಸದಸ್ಯರಲ್ಲಿ ಒಬ್ಬರು ಒಮ್ಮೆ ಅಥವಾ ಎರಡು ಬಾರಿ ಇದನ್ನು ಅನುಭವಿಸಿದ್ದೇವೆ' ಎಂದು ಹೇಳಿದ್ದಾರೆ. ಆದರೆ ಶೇ 9ರಷ್ಟು ಮಂದಿ 'ಹಲವು ಬಾರಿ' ಇಂಥ ಘಟನೆ ಎದುರಿಸಿದ್ದೇವೆ ಎಂದು ಹೇಳಿಕೆ ನೀಡಿದ್ದಾರೆ.

ಸಾರ್ವಜನಿಕ ಸ್ಥಳಗಳಲ್ಲಿ ಲೈಂಗಿಕ ಕಿರುಕುಳ ಎದುರಿಸುತ್ತಿರುವ ಮಹಿಳೆಯರ ನೈಜ ಸಂಖ್ಯೆ ಹೆಚ್ಚೇ ಇದೆ. ಏಕೆಂದರೆ, ಅನೇಕ ಮಹಿಳೆಯರು ಇಂತಹ ಘಟನೆಗಳನ್ನು ಕುಟುಂಬದವರ ಜೊತೆ ಹೇಳಿಕೊಳ್ಳದಿರಬಹುದು ಎಂದು ಸಮೀಕ್ಷೆ ಅಭಿಪ್ರಾಯಪಟ್ಟಿದೆ. ಹಿಂಸೆ ಎದುರಿಸುವವರ ಸಂಖ್ಯೆ ಹೆಚ್ಚಿದ್ದರೂ ಪೊಲೀಸ್ ಠಾಣೆಗಳಲ್ಲಿ ದೂರು ದಾಖಲಾಗುವ ಪ್ರಮಾಣ ಕಡಿಮೆ ಎಂದು ವರದಿ ತಿಳಿಸಿದೆ.

ಲೈಂಗಿಕ ಕಿರುಕುಳ ನಡೆಯುವ ಮುಖ್ಯ ಸಾರ್ವಜನಿಕ ಸ್ಥಳಗಳು



ಕಿರುಕುಳ ಹೆಚ್ಚು; ದೂರು ಕಡಿಮೆ

17% ತಮ್ಮ ಕುಟುಂಬದ ಮಹಿಳೆಯರು ಲೈಂಗಿಕ ಕಿರುಕುಳ ಎದುರಿಸಿದ್ದಾರೆಯೇ ಎಂದು ಖಚಿತವಾಗಿ ತಿಳಿದಿಲ್ಲ ಎಂದು ಪ್ರತಿಕ್ರಿಯಿಸಿದವರ ಪ್ರಮಾಣ



23% ಲೈಂಗಿಕ ಕಿರುಕುಳ ಎದುರಿಸಿದವರ ಪೈಕಿ ಪೊಲೀಸ್ ಠಾಣೆಗೆ ದೂರು ನೀಡಿದವರ ಪ್ರಮಾಣ




15% ಎಫ್‌ಐಆರ್ ದಾಖಲಿಸಲು ಯತ್ನಿಸಿದರೂ ತನಿಖಾಧಿಕಾರಿಗಳು ನೋಂದಾಯಿಸಲಿಲ್ಲ ಅಥವಾ ಯಾವುದೇ ಕ್ರಮ ಕೈಗೊಂಡಿಲ್ಲ ಎಂದವರ ಪ್ರಮಾಣ



3% ಎಫ್‌ಐಆರ್ ಅಥವಾ ದೂರನ್ನು ಪೊಲೀಸರು ದಾಖಲಿಸಲಿಲ್ಲ. ಆದರೆ ದುಷ್ಕರ್ಮಿಗಳನ್ನು ಪೊಲೀಸರು ಥಳಿಸಿದರು ಎಂದು ಹೇಳಿಕೆ ನೀಡಿದವರು

3% ನನ್ನ ಸುತ್ತಲಿನ ಸಾರ್ವಜನಿಕರು ದುಷ್ಕರ್ಮಿಗಳನ್ನು ಅಟ್ಟಿಸಿಕೊಂಡು ಹೋದರು. ಆದರೆ ಯಾವುದೇ ದೂರು ಅಥವಾ ಎಫ್‌ಐಆರ್ ದಾಖಲಿಸಲಾಗಿಲ್ಲ ಎಂದು ಹೇಳಿದವರು



18% ದುಷ್ಕರ್ಮಿಗಳನ್ನು ಜನರು ಸ್ಥಳದಲ್ಲೇ ಥಳಿಸಿದರು. ಆದರೆ ದೂರು ಅಥವಾ ಎಫ್‌ಐಆರ್ ದಾಖಲಿಸಲಿಲ್ಲ ಎಂದು ಹೇಳಿದವರು

ಹಿಂದೇಟಿಗೆ ಹಲವು ಕಾರಣ

ಇಂಡಿಯನ್ ನ್ಯಾಷನಲ್ ಬಾರ್ ಅಸೋಸಿಯೇಷನ್ ಬಹಿರಂಗಪಡಿಸಿದ 2018ರ ಸಮೀಕ್ಷೆಯ ಪ್ರಕಾರ, ಲೈಂಗಿಕ ಕಿರುಕುಳಕ್ಕೆ ಒಳಗಾದವರಲ್ಲಿ ಶೇ 68ರಷ್ಟು ಜನರು ಇಂತಹ ಘಟನೆಗಳನ್ನು ಹೇಳಿಕೊಳ್ಳುವುದೇ ಇಲ್ಲ. ಬಹುತೇಕರು ಇಂತಹ ಘಟನೆಗಳನ್ನು ಸಹಿಸಿಕೊಳ್ಳುತ್ತಾರೆ. ಲೈಂಗಿಕ ಕಿರುಕುಳಕ್ಕೆ ಒಳಗಾಗುವುದನ್ನು ಕ್ಷುಲ್ಲಕ ಸಮಸ್ಯೆ ಎಂದುಕೊಳ್ಳುತ್ತಾರೆ. ದೂರು ನೀಡಿದರೆ ಪೊಲೀಸ್ ಠಾಣೆ ಅಥವಾ ಕೋರ್ಟ್‌ಗೆ ಅಲೆದಾಡಬೇಕು, ಸಾಮಾಜಿಕವಾಗಿ ಅಪಮಾನ ಎದರಿಸಬೇಕು, ದುಷ್ಕರ್ಮಿಗಳು ಸೇಡು ತೀರಿಸಿಕೊಳ್ಳುತ್ತಾರೆ ಎಂಬಿತ್ಯಾದಿ ಕಾರಣಗಳಿಂದ ಬಹುತೇಕರು ಇಂತಹ ಘಟನೆಗಳನ್ನು ಅಲ್ಲಿಗೇ ಕೈಬಿಡುತ್ತಾರೆ ಎಂದು ವರದಿ ಅಭಿಪ್ರಾಯಪಟ್ಟಿತ್ತು.

ಇಂದಿನಿಂದ ಸಂಸತ್ ಬಜೆಟ್ ಅಧಿವೇಶನದ ಮುಂದುವರಿದ ಭಾಗ

ನವದೆಹಲಿ (ಪಿಟಿಐ): ಸಂಸತ್‌ನ ಬಜೆಟ್ ಅಧಿವೇಶನದ ಮುಂದುವರಿದ ಭಾಗ ಸೋಮವಾರದಿಂದ ಆರಂಭವಾಗಲಿದೆ. ಈ ಅಧಿವೇಶನ ಒಂದು ತಿಂಗಳು ನಡೆಯಲಿದ್ದು, ಇದೇ ವೇಳೆಯಲ್ಲಿ ನಾಲ್ಕು ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಪ್ರದೇಶದಲ್ಲಿ ವಿಧಾನಸಭಾ ಚುನಾವಣೆಯೂ ಜರುಗಲಿದೆ.

ಈ ಅಧಿವೇಶನದ ಅವಧಿಯಲ್ಲಿ ಸರ್ಕಾರ 2021-22ನೇ ಸಾಲಿನ ಅನುದಾನಕ್ಕಾಗಿ ವಿವಿಧ ಬೇಡಿಕೆಗಳನ್ನು ಹಣಕಾಸು ಮಸೂದೆಯೊಂದಿಗೆ ಅಂಗೀಕರಿಸುವುದಕ್ಕೆ ಒತ್ತು ನೀಡಲಿದೆ.

ಏಪ್ರಿಲ್ 8ಕ್ಕೆ ಮುಕ್ತಾಯವಾಗುವ ಈ ಅಧಿವೇಶನದಲ್ಲಿ ವಿವಿಧ ಮಸೂದೆಗಳನ್ನು ಮಂಡಿಸಿ, ಅಂಗೀಕಾರ ಪಡೆಯಲು ಕೇಂದ್ರ ಸರ್ಕಾರ ಉತ್ಸುಕವಾಗಿದೆ. ಸರ್ಕಾರ ಪಟ್ಟಿ ಮಾಡಿರುವ ಕೆಲವು ಮಸೂದೆಗಳಲ್ಲಿ, ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಮಸೂದೆ, ಮೂಲಸೌಕರ್ಯ ಮತ್ತು ಅಭಿವೃದ್ಧಿಗಾಗಿ ರಾಷ್ಟ್ರೀಯ ಬ್ಯಾಂಕ್ ಕುರಿತ ಮಸೂದೆ, ವಿದ್ಯುತ್ (ತಿದ್ದುಪಡಿ) ಮಸೂದೆ, ಕ್ರಿಪ್ಟೊ ಕರೆನ್ಸಿ ಮತ್ತು ಅಧಿಕೃತ ಡಿಜಿಟಲ್ ಕರೆನ್ಸಿ ಮಸೂದೆಯ ನಿಯಂತ್ರಣ ಸೇರಿವೆ.



ಇದೇ ಅವಧಿಯಲ್ಲಿ ಪಶ್ಚಿಮ ಬಂಗಾಳ, ತಮಿಳುನಾಡು, ಅಸ್ಸಾಂ, ಕೇರಳ ಮತ್ತು ಪುದುಚೇರಿಯಲ್ಲಿ ವಿಧಾನಸಭಾ ಚುನಾವಣೆ ನಡೆಯಲಿವೆ. ಚುನಾವಣೆಯತ್ತ ಗಮನ ಹರಿಸುವ ಇಲ್ಲಿನ ಪ್ರಾದೇಶಿಕ ಪಕ್ಷಗಳ ಹಿರಿಯ ನಾಯಕರು ಉಭಯ ಸದನಗಳ ಅಧಿವೇಶನಕ್ಕೆ ಗೈರಾಗುವ ಸಾಧ್ಯತೆ ಹೆಚ್ಚಿದೆ.

'ಹರ್ ಸರ್ಕಲ್' ವೇದಿಕೆಗೆ ಚಾಲನೆ

ನವದೆಹಲಿ: ರಿಲಯನ್ಸ್ ಫೌಂಡೇಷನ್ ಮುಖ್ಯಸ್ಥೆ ನೀತಾ ಮುಕೇಶ್ ಅಂಬಾನಿ ಭಾನುವಾರ 'ಹರ್ ಸರ್ಕಲ್' (Her Circle) ಸಾಮಾಜಿಕ ಮಾಧ್ಯಮ ವೇದಿಕೆಗೆ ಚಾಲನೆ ನೀಡಿದ್ದಾರೆ.

ಮಹಿಳೆಯರಿಗೆ ಸಂಬಂಧಿಸಿದ ಎಲ್ಲ ವಿಷಯಗಳನ್ನು ಒಂದೇ ವೇದಿಕೆಯಲ್ಲಿ ನೀಡುವ ಪ್ರಯತ್ನ ಮಾಡಲಾಗುತ್ತಿದೆ. ಮಹಿಳೆಯ ಸಬಲೀಕರಣ, ಉನ್ನತಿಯ ಗುರಿಯೊಂದಿಗೆ ಈ ಸಾಮಾಜಿಕ ವೇದಿಕೆಗೆ ಆರಂಭಿಸಲಾಗಿದೆ.



ನೀತಾ ಅಂಬಾನಿ

'ಹರ್‌ಸರ್ಕಲ್ ಡಾಟ್ ಇನ್ (hercircle.in) ಮೂಲಕ ಲಕ್ಷಾಂತರ ಮಹಿಳೆಯರನ್ನು ಬೆಂಬಲಿಸುವ ಮತ್ತು ಒಗ್ಗಟ್ಟಿನ ಕಾರ್ಯಕ್ಷೇತ್ರವನ್ನು ರೂಪಿಸುವುದು ಸಾಧ್ಯವಾಗಲಿದೆ, ಈ ಡಿಜಿಟಲ್ ಪ್ಲಾಟ್‌ಫಾರ್ಮ್‌ಗೆ ಸೇರ್ಪಡೆಯಾಗಲು ಪ್ರತಿ ಮಹಿಳೆಯನ್ನು ಆಹ್ವಾನಿಸುತ್ತದೆ... ' ಎಂದು ನೀತಾ ಅಂಬಾನಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹರ್ ಸರ್ಕಲ್ ಎಲ್ಲ ಸಂಸ್ಕೃತಿ-ಸಮುದಾಯಗಳು ಹಾಗೂ ರಾಷ್ಟ್ರಗಳಿಂದ ಮಹಿಳೆಯರ ಅಭಿಯಾನಗಳು, ಯೋಜನೆಗಳನ್ನು ಆಹ್ವಾನಿಸಿದೆ. ಈ ವೇದಿಕೆಯಲ್ಲಿ ಸೋದರಿತ್ವ ಮತ್ತು ಸಮಾನತೆಯು ನಮ್ಮ ಸಂಪರ್ಕಿತ ವಿಷಯವಾಗಲಿವೆ ಎಂದಿದ್ದಾರೆ.

ಅಂಬಾನಿ ಮನೆ ಬಳಿ ಪತ್ತೆಯಾದ ಕಾರು, ಜಿಲೆಟಿನ್ ಕಡ್ಡಿಗಳು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ

ಮುಂಬೈ (ಪಿಟಿಐ): ಉದ್ಯಮಿ ಮುಕೇಶ್ ಅಂಬಾನಿ ಅವರ ಐಷಾರಾಮಿ ನಿವಾಸದ ಬಳಿ ಇತ್ತೀಚೆಗೆ ಪತ್ತೆಯಾಗಿದ್ದ ಎಸ್‌ಯುವಿ ಮತ್ತು ಅದರಲ್ಲಿದ್ದ ಜಿಲೆಟಿನ್ ಕಡ್ಡಿಗಳನ್ನು ವಿಧಿವಿಜ್ಞಾನ ವಿಶ್ಲೇಷಣೆಗಾಗಿ ಕಳುಹಿಸಿರುವುದಾಗಿ ಮುಂಬೈ ಪೊಲೀಸರು ತಿಳಿಸಿದ್ದಾರೆ.

ಮುಂಬೈನ ಕಲಿನಾದಲ್ಲಿ ಇರುವ ಫೊರೆನ್ಸಿಕ್ ಸೈನ್ಸ್ ಲ್ಯಾಬ್‌ಗೆ (ಎಫ್‌ಎಸ್‌ಎಲ್) ಇವುಗಳನ್ನು ಕಳುಹಿಸಲಾಗಿದೆ. ಕಾರಿನಲ್ಲಿ ರಕ್ತದ ಕಲೆ, ಕೂದಲು ಅಥವಾ ಕುರುಹು ಪತ್ತೆಯಾದರೆ, ಈ ಕಾರನ್ನು ಚಲಾಯಿಸಿಕೊಂಡು ಬಂದ ವ್ಯಕ್ತಿಯನ್ನು ಗುರುತಿಸಲು ಸಹಾಯವಾಗುತ್ತದೆ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಈ ಕಡ್ಡಿಗಳಲ್ಲಿನ ಜಿಲೆಟಿನ್‌ನ ಶೇಕಡಾವಾರು ಪ್ರಮಾಣವನ್ನು ಎಫ್‌ಎಸ್‌ಎಲ್ ಪತ್ತೆ ಮಾಡಲಿದೆ. ಅಲ್ಲದೆ ವಾಹನದ ಚಾಸಿ ಸಂಖ್ಯೆ ಬದಲಾಗಿದೆಯೇ ಎಂಬುದನ್ನು ಗುರುತಿಸಲಿದೆ. ಇದಾದರೆ ವಾಹನದ ನಿಜವಾದ ಮಾಲೀಕ ಯಾರು ಎಂಬುದು ಗೊತ್ತಾಗುತ್ತದೆ ಎಂದು ಪೊಲೀಸರು ಹೇಳಿದ್ದಾರೆ.

ವರವರ ರಾವ್ ಆಸ್ಪತ್ರೆಯಿಂದ ಮನೆಗೆ

ಮುಂಬೈ: ಎಲ್ಗಾರ್ ಪರಿಷತ್ ಪ್ರಕರಣ, ಮಾವೋವಾದಿಗಳೊಂದಿಗೆ ನಂಟು ಹೊಂದಿರುವ ಆರೋಪ ಎದುರಿಸುತ್ತಿರುವ ಕವಿ, ಹೋರಾಟಗಾರ ವರವರ ರಾವ್ ಅವರು ನಾನಾವತಿ ಆಸ್ಪತ್ರೆಯಿಂದ ಶನಿವಾರ ರಾತ್ರಿ ಮನೆಗೆ ತೆರಳಿದ್ದಾರೆ.

82 ವರ್ಷದ ರಾವ್ ಅವರಿಗೆ ಫೆಬ್ರುವರಿ 22ರಂದು ವೈದ್ಯಕೀಯ ಕಾರಣಗಳಿಗಾಗಿ ಬಾಂಬೆ ಹೈಕೋರ್ಟ್ ಮಧ್ಯಂತರ ಜಾಮೀನು ನೀಡಿತ್ತು.

ಸೂಕ್ತ ಜಾಮೀನುದಾರರು ದೊರೆಯುವವರೆಗೂ ನಗದು ಜಾಮೀನು ನೀಡಲು ಅವಕಾಶ ನೀಡಬೇಕು ಎಂದು ಅವರು ನ್ಯಾಯಾಲಯಕ್ಕೆ ಮನವಿ ಮಾಡಿದ್ದರು. ಇದಕ್ಕೆ ಕಳೆದ ಸೋಮವಾರ ನ್ಯಾಯಾಲಯ ಅನುಮತಿ ನೀಡಿತ್ತು.

ಆಸ್ಪತ್ರೆಯಿಂದ ಬಿಡುಗಡೆಯಾದ ಕೂಡಲೇ ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಬೇಕು ಎಂದು ನ್ಯಾಯಾಲಯವು ಆದೇಶಿಸಿತ್ತು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಕೊಕೇನ್ ಮಾದಕವಸ್ತು ಪ್ರಕರಣದಲ್ಲಿ ಜೈಲಿಗೆ ಹೋಗಿರುವ ಭಾರತೀಯ ಜನತಾ ಯುವ ಮೋರ್ಚಾದ ಅಧ್ಯಕ್ಷೆ ಪಮೇಲಾ ಗೋಸ್ವಾಮಿ ಅವರು ಪ್ರಧಾನಿ ನರೇಂದ್ರ ಮೋದಿ ಅವರ ಜೊತೆ ಸೈಕಲ್ ಸವಾರಿ ನಡೆಸಿರುವ ಚಿತ್ರ ಇದೀಗ ಎಲ್ಲೆಡೆ ವೈರಲ್ ಆಗಿದೆ. ಫೇಸ್‌ಬುಕ್‌ನಲ್ಲಿ ಸಾವಿರಾರು ಜನರು ಈ ಚಿತ್ರವನ್ನು ಹಂಚಿಕೊಂಡಿದ್ದಾರೆ. 'ಕೊಕೇನ್ ಪ್ರಿಯ ವ್ಯಕ್ತಿಯ ಜೊತೆ ಫೋಟೊ ಪ್ರಿಯ ವ್ಯಕ್ತಿ' ಎಂಬ ಅರ್ಥದ ಕಮೆಂಟ್‌ಗಳು ಹರಿದಾಡುತ್ತಿವೆ.



ಲಾಜಿಕಲ್ ಇಂಡಿಯನ್ಸ್ ಫ್ಯಾಕ್ಟ್ ಚೆಕ್ ವಿಭಾಗ ಪರಿಶೀಲಿಸಿದಾಗ, ಇದೊಂದು ತಿರುಚಿದ ಚಿತ್ರ ಎಂಬುದು ಕಂಡುಬಂದಿದೆ. 2017ರ ಜೂನ್‌ನಲ್ಲಿ ಡಚ್ ಪ್ರಧಾನಿ ಮಾರ್ಕ್ ರುಟ್ಟೆ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸೈಕಲ್ ಉಡುಗೊರೆ ನೀಡಿದ್ದರು. ಸೈಕಲ್ ಮೇಲೆ ಪ್ರಧಾನಿ ಕುಳಿತಿರುವ ಚಿತ್ರ ಆಗ ಪ್ರಕಟವಾಗಿತ್ತು. ಇದರಲ್ಲಿ ಮೋದಿ ಸೈಕಲ್ ಏರಿರುವ ಭಾಗವನ್ನಷ್ಟೇ ಕಟ್ ಮಾಡಿಕೊಂಡು, ಪಮೇಲಾ ಅವರು ಸೈಕಲ್‌ನಲ್ಲಿ ಹೋಗುತ್ತಿರುವ ಚಿತ್ರದ ಜೊತೆ ಅಂಟಿಸಲಾಗಿದೆ. ಪಮೇಲಾ ಅವರು ಫೇಸ್‌ಬುಕ್‌ನಲ್ಲಿ ಪ್ರಕಟಿಸಿರುವ ಮೂಲ ಚಿತ್ರದಲ್ಲಿ ಪ್ರಧಾನಿ ಇಲ್ಲ.

ಗುಂಡಣ್ಣ



ಬೆರಗಿನ ಬೆಳಕು



ಗುರುರಾಜ ಕರಜಗಿ

ಸತ್ಯದ ಅಂಶಗಳು

ಕನಸು ದಿಟ, ನೆನಸು ದಿಟ, ತನುವೊಳಿಹ ಚೇತನವ |
ಕನಲಿಸುವ ಕುಣಿಸುವಾ ಹಬೆಗಳೆಲ್ಲ ದಿಟ ||
ಇನಿತನಿತು ದಿಟಗಳಿವು – ತುಂಬುದಿಟದಂಶಗಳು |
ಗಣನೀಯವವು ಬಾಳ್ಗೆ – ಮಂಕುತಿಮ್ಮ || 394 ||

ಪದ-ಅರ್ಥ: ದಿಟ = ಸತ್ಯ, ನೆನಸು = ನೆನಪು, ತನುವೊಳಿಹ = ತನುವೊಳು (ದೇಹದಲ್ಲಿರುವ) + ಇಹ(ಇರುವ), ಕನಲಿಸುವ = ಕೆರಳಿಸುವ, ಹಬೆ = ಆವಿ, ಪ್ರಚೋದನೆಗಳು, ಇನಿತನಿತು = ಸ್ವಲ್ಪ ಸ್ವಲ್ಪ, ತುಂಬುದಿಟದಂಶಗಳು = ತುಂಬುದಿಟದ (ಸಂಪೂರ್ಣಸತ್ಯದ) + ಅಂಶಗಳು, ಗಣನೀಯ = ಮುಖ್ಯ.

ವಾಚ್ಯಾರ್ಥ: ನಾವು ಕಾಣುವ ಕನಸುಗಳು, ನೆನಪುಗಳು, ದೇಹದಲ್ಲಿರುವ ಚೇತನವನ್ನು ಕೆರಳಿಸಿ, ಕುಣಿಸುವ ಪ್ರಚೋದನೆಗಳೆಲ್ಲ ಸತ್ಯವೇ. ಇಂತಹ ಸಣ್ಣ ಸಣ್ಣ ಸತ್ಯಗಳು, ಸಂಪೂರ್ಣಸತ್ಯದ ಅಂಶಗಳು. ಅವು ನಮ್ಮ ಬಾಳಿಗೆ ಮುಖ್ಯವಾದವುಗಳು.

ವಿವರಣೆ: ಬದುಕಿನಲ್ಲಿ ಬರುವ ಅನೇಕ ಸಂಗತಿಗಳು, ಘಟನೆಗಳು ನಮಗರಿವಿಲ್ಲದಂತೆ ನಮ್ಮನ್ನು ಮಾಗಿಸುತ್ತವೆ. ನಾವು ಕಂಡ ಕನಸುಗಳು, ಕೆದಕಿದಾಗ ಬರುವ ಹಳೆಯ ನೆನಪುಗಳು, ನಮ್ಮ ಬದುಕಿನ ಚೇತನವನ್ನು ಸತತವಾಗಿ ಪ್ರಚೋದಿಸುವ, ಕೆರಳಿಸುವ, ಹಣ್ಣು ಮಾಡುವ ಎಲ್ಲವೂ ಸತ್ಯಗಳೇ. ಇವುಗಳನ್ನು ನಾವು ಅನುಭವಿಸುವುದು ನಮ್ಮ ಮನಸ್ಸಿನಿಂದ ಮತ್ತು ಅದು ಹೊರಡಿಸುವ ಭಾವನೆಗಳಿಂದ. ಕಪ್ಪು, ಬಿಳುಪು, ಕಠಿಣ, ಮೃದು, ಸಿಹಿ, ಕಹಿ, ವಾಸನೆ, ಸಪ್ಪಳ ಇವೆಲ್ಲ ನಮ್ಮ ಇಂದ್ರಿಯ ಭಾವನೆಗಳು. ಸುಖ, ದು:ಖ, ಆಸೆ, ನಿರಾಸೆ,ಧೈರ್ಯ, ಉತ್ಸಾಹ, ಹೆದರಿಕೆ ಇವೆಲ್ಲ ಮಾನಸಿಕ ಭಾವನೆಗಳು. ಇವುಗಳನ್ನು ಮಾಯೆಯೆಂದು ಮರೆಯಲಾಗುತ್ತದೆಯೆ? ಪಾರಮಾರ್ಥಿಕದ ಅಂತಿಮ ಹಂತದಲ್ಲಿ ವಿಶ್ವವೆಲ್ಲ ಚಿನ್ಮಯವೆಂದು ಒಪ್ಪಿದರೂ ಜಾಗರದ ವಸ್ತುಗಳು ಸತ್ಯವೇ ಎಂದು ನಂಬಬೇಕಾಗುತ್ತದೆ.

ಪರಮ ಬ್ರಹ್ಮವನ್ನು ತಿಳಿದವನಿಗೆ ಜಾಗರದ ವಸ್ತುಗಳೂ ಕನಸಿನ ವಸ್ತುಗಳಂತೆ ಕಲ್ಪನೆಗಳೇ. ಆ ಜ್ಞಾನಿಗೆ ಜಾಗರದ ಎಚ್ಚರದ ಕನಸು. ಆದರೆ ಸಾಮಾನ್ಯರಿಗೆ ಈ ಪ್ರಪಂಚ ಸತ್ಯ, ಅದು ನೀಡುವ ಅನುಭವಗಳೆಲ್ಲ ಸತ್ಯ. ಈ ಅನುಭವ ಸಾಪೇಕ್ಷವಾದದ್ದು, ಪ್ರತಿಯೊಬ್ಬ ವ್ಯಕ್ತಿಗೂ ವಿಶಿಷ್ಟವಾದದ್ದು. ಒಬ್ಬೊಬ್ಬರದು ಒಂದೊಂದು ಅನುಭವ. ನಮಗೆ ಅನುಭವ ದೊರೆಯುವುದು ಇಂದ್ರಿಯಗಳಿಂದ. ಒಂದು ಇಂದ್ರಿಯ ತಿಳಿಸಿದ್ದನ್ನು ಮತ್ತೊಂದು ಇಂದ್ರಿಯ ತಿಳಿಯಲಾರದು. ಬಣ್ಣವನ್ನು ತಿಳಿಸುವ ಕಣ್ಣು ಶಬ್ದವನ್ನು ಗ್ರಹಿಸಲಾರದು. ಕಿವಿಗೆ ತಾಗುವ ಶಬ್ದವನ್ನು ಮೂಗು ತಿಳಿಯಲಾರದು. ಮೂಗು ಕಂಡು ಹಿಡಿಯುವ ವಾಸನೆಯನ್ನು ನಾಲಗೆ ಗುರುತಿಸಲಾರದು. ಆದರೆ ಅವೆಲ್ಲ ತಂದು ಹಾಕುವ ವಿವರಗಳಿಂದ ಮನಸ್ಸು ಒಂದು ಗ್ರಹಿಕೆಯನ್ನು ಮಾಡುತ್ತದೆ. ಅದು ಅನುಭವವಾಗುತ್ತದೆ. ಕಗ್ಗದ ಸಂದೇಶ ಇದು. ಪ್ರಪಂಚವೇ ಮಾಯೆ ಇರಬಹುದೇನೋ. ಆದರೆ ನಮಗೆ ದೊರಕುವ ಅನುಭವ ಒಂದು ಸತ್ಯ. ಹೀಗೆ ಬದುಕಿನಲ್ಲಿ ಬರುವ ಸಾವಿರಾರು ಅನುಭವಗಳೆಲ್ಲ ಪುಟ್ಟ ಪುಟ್ಟ ಸತ್ಯಗಳು. ಇವೆಲ್ಲವುಗಳನ್ನು ಮೀರಿದ, ಇವೆಲ್ಲವುಗಳನ್ನು ಒಳಗೊಂಡ ಪರಮಸತ್ಯವೊಂದಿದೆ. ನಮ್ಮ ಅನುಭವಗಳು ಆ ಪರಮಸತ್ಯದ ಅಂಶಗಳು. ಈ ಅನುಭವಗಳೇ ನಮ್ಮ ಬಾಳಿಗೆ ಮುಖ್ಯವಾದವುಗಳು. ❖

ದಿನ ಭವಿಷ್ಯ

ಸೋಮವಾರ 8 ಮಾರ್ಚ್ 2021

ಶಾರ್ವರಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ಮಾಘ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಪೂರ್ವಾಭಾದ್ರ ದಶಮೀ ಗಂ. 27-25 (ಸಾ. 5-37) ಸೋಮವಾರ ನಿತ್ಯ ನಕ್ಷತ್ರ ಪೂರ್ವಾಷಾಢ ಗಂ. 39-28 (ರಾ. 10-26) ವ್ಯತೀಪಾತ ನಾಮ ಯೋಗ ಗಂ. 22-52 ಭದ್ರೆ ಕರಣ ಗಂ. 27-25 ವಿಷ. ಗಂ. 5-10 ಪುನರ್ವಿಷ ಗಂ. 58-47 ಅಮೃತ ಗಂ. 28-21 : ರಾಹುಕಾಲ: ಬೆ. ಗಂ. 7-30 ರಿಂದ 9-00 ಗುಳಿಕ ಮ. ಕಾಲ ಗಂ 1-30 ರಿಂದ 3-00 ಯಮಗಂಡ ಕಾಲ ಬೆ. ಗಂ 10-30 ರಿಂದ 12-00 ಸೂರ್ಯೋದಯ: 6-36 ಸೂರ್ಯಾಸ್ತ: 6-26 ಅದೃಷ್ಟ ಸಂಖ್ಯೆ 5 8

ಮೇಷ: ಭೂವ್ಯವಹಾರದಲ್ಲಿ ಅಧಿಕ ಲಾಭದ ನಿರೀಕ್ಷೆ. ರಾಜಕೀಯ ರಂಗದಲ್ಲಿರುವವರಿಗೆ ಉನ್ನತ ಹುದ್ದೆ. ನೀಡಿದ ಸಾಲಗಳು ಮರುಪಾವತಿಯಾಗುವವು. ವಿದ್ಯಾರ್ಥಿಗಳು ಯಶಸ್ಸಿನ ಉತ್ತುಂಗ ಪ್ರಾಪ್ತಿ.

ವೃಷಭ: ಸ್ತ್ರೀ ವರ್ಗದವರಿಗೆ ಅತ್ಯಂತ ಸಂತೋಷಕರ ವಾತಾವರಣ ಮೂಡಲಿದೆ. ಮದುವೆ ಮುಂಜಿ ಸಮಾರಂಭಗಳಲ್ಲಿ ಭಾಗಿ. ಬಂಧು ಬಾಂಧವರ ಸಮಾಗಮ ಸಾಧ್ಯತೆ. ನವ ಚೈತನ್ಯ ಧುಮ್ಮಿಕ್ಕಲಿದೆ.

ಮಿಥುನ: ಪಿತ್ರಾರ್ಜಿತ ಆಸ್ತಿಯು ನಿಮ್ಮ ಪಾಲಿಗೆ ಬಂದೊದಗಲಿದೆ. ಹಿರಿಯರ ಆಶೀರ್ವಾದದಿಂದಾಗಿ ಆದಾಯದ ಮೂಲಗಳು ಗೋಚರ. ಕುಟುಂಬವರ್ಗದವರಿಂದ ಸ್ಥಾನ ಮಾನಗಳು ಲಭ್ಯ. ಮಿತ್ರರಿಂದ ಪ್ರಶಂಸೆಯ ಮಹಾಪೂರ.

ಕರ್ಕಾಟಕ: ಅಧಿಕಾರಿಗಳಿಂದ ಉಂಟಾಗಿದ್ದ ಭಯದ ನಿವಾರಣೆ. ವಿದ್ಯಾರ್ಥಿಗಳಿಗೆ ಯಶಸ್ಸಿನ ದಿನ. ದಿನಸಿ ವ್ಯಾಪಾರಿಗಳಿಗೆ ಸ್ವಲ್ಪ ಮಟ್ಟಿನ ನಷ್ಟ ಸಾಧ್ಯತೆ. ವಕೀಲ ವೃತ್ತಿಯಲ್ಲಿರುವವರಿಗೆ ಅಭಿವೃದ್ಧಿ. ವಾಹನ ಯೋಗ.

ಸಿಂಹ: ಸಂದುನೋವು, ಬೆನ್ನು ನೋವಿನಿಂದ ಬಳಲುವ ಸಾಧ್ಯತೆ. ಹಿರಿಯರ ಮಾತುಗಳಿಗೆ ಮನ್ನಣೆ ನೀಡಿ. ವಿವಾಹಾಕಾಂಕ್ಷಿಗಳಿಗೆ ಸ್ವಲ್ಪ ಮಟ್ಟಿನ ಹಿನ್ನಡೆ. ವೈದ್ಯಕೀಯ ರಂಗದಲ್ಲಿರುವವರಿಗೆ ಉತ್ತಮ ಆದಾಯದ ನಿರೀಕ್ಷೆ.

ಕನ್ಯಾ: ನಿಮ್ಮ ಎಲ್ಲ ಕೆಲಸ ಕಾರ್ಯಗಳು ಸುಗಮವಾಗಿ ಕೈಗೂಡಲಿವೆ. ವಿದ್ಯಾರ್ಥಿಗಳ ಉನ್ನತ ವ್ಯಾಸಂಗದ ದಾರಿ ಸುಗಮವಾಗಲಿದೆ. ವಿವಾಹಾಕಾಂಕ್ಷಿಗಳಿಗೆ ಕಂಕಣ ಭಾಗ್ಯ. ರಾಜಕೀಯ ರಂಗದವರಿಗೆ ಉತ್ತಮ ಫಲ.

ತುಲಾ: ಭೂ ವಿವಾದದಲ್ಲಿ ಸಿಕ್ಕಿಹಾಕಿಕೊಳ್ಳುವ ಸಾಧ್ಯತೆ. ಅತಿಯಾದ ಕಾರ್ಯ ಒತ್ತಡದಿಂದಾಗಿ ಗೊಂದಲಮಯ ಪರಿಸ್ಥಿತಿ ನಿರ್ಮಾಣ. ಸಕಾಲಿಕ ಚಿಂತನೆಯಿಂದಾಗಿ ಮಾನಸಿಕ ಶಾಂತಿ. ಸಂಗಾತಿಯಿಂದ ಸಿಹಿ ಸುದ್ದಿ.

ವೃಶ್ಚಿಕ: ದಿನದ ಮಟ್ಟಿಗೆ ಎಲ್ಲ ವಿಧಗಳಲ್ಲೂ ಕಷ್ಟನಷ್ಟ ಅನುಭವಿಸುವ ಸಾಧ್ಯತೆ; ಜಾಗರೂಕರಾಗಿರುವುದು ಉತ್ತಮ. ಅಪಾಯಕಾರಿ ಕೆಲಸ ಮತ್ತು ವಾಹನಗಳಿಂದ ದೂರವಿರುವುದು ಶ್ರೇಯಸ್ಕರ.

ಧನು: ಕೋರ್ಟ್‌ನ ವ್ಯವಹಾರಗಳಲ್ಲಿ ಉತ್ತಮ ಫಲಿತಾಂಶ. ಹೊಸ ಮನೆ, ಜಮೀನು ಪ್ರಾಪ್ತವಾಗುವ ಯೋಗ. ಸಾಂಸಾರಿಕ ಸುಖ ಅನುಭವಿಸಲಿದ್ದೀರಿ. ಕೃಷಿ ಬದುಕಿನವರಿಗೆ ಸ್ವಲ್ಪ ಮಟ್ಟಿನ ಬಿಡುವು. ದೂರ ಪ್ರಯಾಣ ಸಾಧ್ಯತೆ.

ಮಕರ: ಸ್ವಯಂ ಉದ್ಯೋಗಿಗಳಿಗೆ ಉತ್ತಮ ಆದಾಯ. ಕೊಡುಕೊಳ್ಳುವಿಕೆಯಲ್ಲಿ ಎಚ್ಚರಿಕೆ ಅಗತ್ಯ. ಮೋಸಹೋಗುವ ಸಾಧ್ಯತೆ. ಉದ್ಯೋಗದಲ್ಲಿ ಬದಲಾವಣೆಗಳು ಸಂಭವಿಸಬಹುದು.

ಕುಂಭ: ಸ್ಥಿರಾಸ್ತಿ ಪ್ರಾಪ್ತವಾಗುವ ಸಾಧ್ಯತೆಯಿದ್ದು, ಭೂ ಖರೀದಿಗೆ ಯೋಗ್ಯ ದಿನವಾಗಿದೆ. ವಿದೇಶ ಪ್ರಯಾಣದ ಕನಸು ಗರಿಗೆದರುವ ಸಾಧ್ಯತೆ. ಹೊಸ ಮನೆ, ಸಂತಾನ ಭಾಗ್ಯ ದೊರಕಿ ಸಂತಸದ ವಾತಾವರಣ.

ಮೀನ: ಚೋರ ಭಯ ನಿಮ್ಮನ್ನು ಕಾಡಬಹುದು. ಬೆಲೆಬಾಳುವ ವಸ್ತುಗಳ ಬಗ್ಗೆ ಎಚ್ಚರಿಕೆ ಅಗತ್ಯ. ಮಿತ್ರರೊಂದಿಗೆ ಮನಃಸ್ತಾಪ ಉಂಟಾಗುವ ಸಾಧ್ಯತೆ. ಸಂಗಾತಿಯಿಂದ ವಿಶೇಷ ಕೊಡುಗೆ ಪ್ರಾಪ್ತಿ. ಬಂಧುಗಳ ಆಗಮನದಿಂದ ಸಂತಸ.

ನಿಮ್ಮ ಜನ್ಮದಿನ 8-ಮಾರ್ಚ್ ಈ ದಿನವು ಅತ್ಯಂತ ಶುಭಕರವಾಗಿದ್ದು, ವಿದ್ಯಾರ್ಥಿಗಳಿಗೆ ಈ ವರ್ಷ ಬಹಳ ಮಹತ್ವದ ವರ್ಷವಾಗಲಿದೆ. ನಿಮ್ಮ ನಡೆ ನುಡಿಗಳಿಂದ ಆಕರ್ಷಕ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವಿರಿ. ಆಕರ್ಷಕ ಮಾತುಗಳಿಂದ ಇತರರನ್ನು ಕಟ್ಟಿಹಾಕುವ ಚಾಕಚಕ್ಯತೆ ನಿಮ್ಮದಾಗಲಿದೆ.


ಪದಬಂಧ 4530 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ (3)

1.ದೇಶದ ಒಂದು ವಿಭಾಗ (3)
3.ದೈನ್ಯಕ್ಕೆ ಒಳಗಾಗಿರುವೆನೆಂಬ ಭಾವ (4)
6.ನೂರು ವರ್ಷದ ಅವಧಿ (4)
7.ರಜದಲ್ಲಿ ಖರೀದಿಸಿದ ಬೆಳ್ಳಿ (3)
10.ಬಿಡದಿ ಹತ್ತಿರವಿರುವ ಹೆಂಡತಿ (3)
12.ಇದಿನ್ನೂ ಎಳೆ ಮಗು (4)
15. ಶ್ರೀಗಂಧ ಇಲ್ಲಿದೆ (4)
16.ಕತ್ತು ಮೇಲಿತ್ತಿ ನೋಡಿ! ಪಿತ್ತಕೋಶ ಕಂಡೀತು! (3)

ಮೇಲಿಂದ ಕೆಳಕ್ಕೆ

1.ವೇದಗಳಿಂದ ಸಂಗ್ರಹಿಸಿದ ಭಾಗ
2.ಹೊಳೆಯ ದಡವಿದು (4)
4.ಅಧೀನತೆಗೊಳಪಟ್ಟಿದ್ದು (2)
5.ಅತ್ರಿ ಮಹರ್ಷಿಯ ಹೆಂಡತಿ (4)
8.ಕನ್ನಡ ಸಂಸ್ಕೃತಗಳೆರಡಕ್ಕೂ ಸಮಾನವಾದ ಶಬ್ದ (3)
9.ಮರದೊಳಗೆ ಚಲುವಾದುದು ಕಂಡಿದೆಯಲ್ಲಾ? (4)
11.ಎಲ್ಲದಿಕ್ಕುಗಳಲ್ಲಿನ ರಾಜ್ಯಗಳನ್ನು ಗೆಲ್ಲುವುದು (4)
13.ಸುಗಮವಾಗಿ ಕಿತ್ತಿರುವ ಹೂವು (2)
14.ಪ್ರಾಮಾಣಿಕತೆ ಇಲ್ಲಿ ಕಾಣುತ್ತಿದೆ (3)



4529ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಅವಭೃಥಸ್ನಾನ 4.ಗುಣಮುಖ 5.ಸನದು 7.ಬುದ್ಬುದ 10.ರಿವಾಜು 11.ಕಲಹ 13.ನಳಪಾಕ 15.ವಿಚಾರವೇದಿಕೆ

ಮೇಲಿಂದ ಕೆಳಕ್ಕೆ: 1.ಅಗಸ 2.ನಗು 3.ನಖಹತಿ 6.ದುರಾಚಾರಿ 7.ಬುರುಜು 8.ದಣಾಯಕ 9.ಬಡನಡು 12.ಹರಕೆ 14.ಕವಿ

ಸುಡೊಕು 4916

1				2			8	4
	6	7			9		5	2
	8			4				
2							6	
		4		3				1
5								3
		5		9			7	6
7			2		6	8		
9	4			7				5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4915 ಸುಡೊಕು

9	4	1	5	6	7	2	3	8
6	7	8	2	3	9	1	4	5
5	3	2	4	1	8	9	6	7
2	8	5	1	9	6	4	7	3
1	6	4	7	5	3	8	2	9
3	9	7	8	2	4	6	5	1
4	1	3	9	7	2	5	8	6
8	5	6	3	4	1	7	9	2
7	2	9	6	8	5	3	1	4





ಕೋರ್ಸ್ ಆಯ್ಕೆ, ಪ್ರಬಲ ಕೌಶಲಕ್ಕೆ ಇರಲಿ ಆದ್ಯತೆ

ಅರ್ಜುನ್ ಶೆಣೈ

'ಈ ಕ್ಷೇತ್ರಕ್ಕೆ ಸ್ಕೋಪ್ ಇದೆಯಾ?', 'ಈ ಪದವಿ ಪಡೆದರೆ ಸುಲಭವಾಗಿ ಕೆಲಸ ಸಿಗುತ್ತಾ?', 'ಈ ಕೆಲಸಕ್ಕೆ ಸೇರಿದರೆ ಐದು ವರ್ಷಗಳಲ್ಲಿ ಸಾಕಷ್ಟು ಹಣ ಸಂಪಾದಿಸಬಹುದಾ?'– ಉಪನ್ಯಾಸಕರಿಗೆ ವಿದ್ಯಾರ್ಥಿಗಳಿಂದ ಎದುರಾಗುವ ಸಾಮಾನ್ಯ ಪ್ರಶ್ನೆಗಳಿವು. ಪಿಯುಸಿಯ ವ್ಯಾಸಂಗ ಮುಗಿಯುತ್ತಲೇ ಮನದೊಳಗೆ ಮುಗಿಬೀಳುವ ಇಂತಹ ಪ್ರಶ್ನೆಗಳನ್ನು ವಿದ್ಯಾರ್ಥಿಗಳು ಉಪನ್ಯಾಸಕರೆದುರು ಇಡುವುದು ಸಾಮಾನ್ಯ ಸಂಗತಿ ಎನಿಸಿದರೂ ಕೂಡ ಇವುಗಳಿಗೆ ಉತ್ತರ ನೀಡುವುದು ಮಾತ್ರ ಕಠಿಣ ಸಾಧ್ಯ.

> 'ಸ್ಕೋಪ್' ಎನ್ನುವುದು ಯಾವ ಕ್ಷೇತ್ರದ ಸೊತ್ತಲ್ಲ. ಆಯ್ಕೆಯಲ್ಲಿ ಸ್ಪಷ್ಟತೆ ಮತ್ತು ಕೌಶಲಗಳು ಜೊತೆಗಿದ್ದರೆ ವೃತ್ತಿಬದುಕಿನಲ್ಲಿ ಯಶಸ್ಸು ಕಟ್ಟಿಟ್ಟ ಬುತ್ತಿ.

ಅಷ್ಟಕ್ಕೂ 'ಸ್ಕೋಪ್' ಎಂದರೇನು?

ಯಾವುದೋ ಒಂದು ನಿರ್ದಿಷ್ಟ ಕ್ಷೇತ್ರದ ಭವಿಷ್ಯವನ್ನು ಅಂದಾಜಿಸಿ, ನಿರ್ಣಯಿಸಿ, ತೀರ್ಪು ನೀಡುವುದು ಅಷ್ಟೊಂದು ಯೋಗ್ಯವಾದುದು, ಹಿತಕರವಾದುದು ಅಲ್ಲವೇ ಅಲ್ಲ. ಅದು ಅಷ್ಟೊಂದು ಸರಳ ವಿಚಾರವೂ ಅಲ್ಲ. ಒಂದು ದೃಷ್ಟಿಕೋನದಲ್ಲಿ ಸ್ಕೋಪ್ ಎನ್ನುವುದು ಭ್ರಾಂತಿ ಎಂದರೂ ತಪ್ಪಿಲ್ಲ. ಯಾಕೆಂದರೆ ಯಾವೊಂದು ಕ್ಷೇತ್ರವನ್ನು ಉತ್ಕೃಷ್ಟ ಎಂದಾಗಲಿ ನಿಕೃಷ್ಟ ಎಂದಾಗಲಿ ವಿಂಗಡಿಸಲಾಗದು. ಎಲ್ಲವೂ ಸಂಪೂರ್ಣವಾಗಿ ಅವಲಂಬಿತವಾಗಿರುವುದು ಆ ಹುದ್ದೆಯ ಆಕಾಂಕ್ಷಿಯ, ಆತನ ಆಯ್ಕೆಯ ಮೇಲೆ! ಅಷ್ಟಕ್ಕೂ ವಿದ್ಯಾರ್ಥಿಯ ಆಯ್ಕೆಯಲ್ಲಿ ದೋಷವಿರದೇ, ಅಗತ್ಯ ಕೌಶಲಗಳು ಇದ್ದರೆ ಖಂಡಿತಾ ಯಾವ ಕ್ಷೇತ್ರವೂ ಕೈಗೆಟುಕದ್ದೇನೂ ಅಲ್ಲ. ಹಾಗಾದರೆ ವಿದ್ಯಾರ್ಥಿಗಳು ಎಡವುವುದೆಲ್ಲಿ ಮತ್ತು ವಿದ್ಯಾರ್ಥಿಯೊಬ್ಬ ಯಾವುದಾದರೊಂದು ಕ್ಷೇತ್ರದಲ್ಲಿ ಗೆಲುವು ಸಾಧಿಸಬೇಕೆಂದರೆ ಆತನಲ್ಲಿರಬೇಕಾದ ಅಗತ್ಯ ಅಂಶಗಳು ಯಾವುವು?

ಯಾವ ಕ್ಷೇತ್ರ? ಆಯ್ಕೆ ಹೇಗೆ?

ಅನೇಕ ವಿದ್ಯಾರ್ಥಿಗಳಲ್ಲಿ, ಅಷ್ಟೇ ಯಾಕೆ ನಮ್ಮ ಸಮಾಜದಲ್ಲಿ ಒಂದು ಭ್ರಾಂತಿಯಿದೆ, ಅಂತಿಮ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದರೆ ವಿಜ್ಞಾನ, ಸಾಧಾರಣ ಅಂಕ ಗಳಿಸಿದರೆ ವಾಣಿಜ್ಯ ಮತ್ತು ಅತಿ ಕಡಿಮೆ ಅಂಕ ಗಳಿಸಿದರೆ ಕಲಾವಿಭಾಗ ಆಯ್ದುಕೊಳ್ಳುವುದು ಎಂದು! ಆದರೆ ಆಸಕ್ತಿದಾಯಕ ವಿಷಯವನ್ನು ಆಯ್ದುಕೊಳ್ಳುವ ಮುಕ್ತ ಸ್ವಾತಂತ್ರ್ಯ ವಿದ್ಯಾರ್ಥಿಗಿದ್ದೇ ಇದೆ. ಇಚ್ಛೆಯ ಕ್ಷೇತ್ರದಲ್ಲೇ ಓದು ಮುಂದುವರಿಸುವುದರಿಂದ ಭವಿಷ್ಯದಲ್ಲಿ ಯಾವುದೇ ವ್ಯಥೆ ಇರಲಾರದು! ಇಂದು ಅನೇಕ ವಿದ್ಯಾರ್ಥಿಗಳು ಪಿಯುಸಿಯ ಹಂತದಲ್ಲಿ ಆಯ್ದುಕೊಳ್ಳುವ ಕಾಂಬಿನೇಶನ್‌ನಲ್ಲೂ ತಪ್ಪು ಮಾಡುತ್ತಾರೆ. ಎರಡು ವರ್ಷ ಬಯಾಲಜಿ ಓದಿ ಬಳಿಕ ಕಂಪ್ಯೂಟರ್‌ನಲ್ಲಿ ಎಂಜಿನಿಯರಿಂಗ್ ಮಾಡುವ ಅನೇಕ ವಿದ್ಯಾರ್ಥಿಗಳಲ್ಲಿ ಎರಡು ವರ್ಷ ಬಯಾಲಜಿಯ ಬದಲು ಕಂಪ್ಯೂಟ್ ಅನ್ನೇ ಆಯ್ದುಕೊಂಡಿದ್ದರೆ ಪದವಿ ಮತ್ತಷ್ಟು ಸುಲಭವಾಗುತ್ತಿತ್ತು ಎಂಬ ಹಳಹಳಿಕೆ ಮೂಡುವುದಿದೆ. ಹೀಗಾಗದಂತೆ ಎಚ್ಚರ ವಹಿಸಬೇಕು. ಆ ನಿಮಿತ್ತ ಮೊದಲೇ ತಾನು ಸಾಗಬೇಕಾದ ದಾರಿಯಲ್ಲಿ ಸ್ಪಷ್ಟತೆಯನ್ನು ಕಂಡುಕೊಳ್ಳುವುದು ಒಳಿತು.

ಕೇವಲ ಓದಷ್ಟೇ ಸಾಕೆ?

ಕೇವಲ ಓದು ಮಾತ್ರವಲ್ಲದೇ ಪದವಿಗೆ ತಕ್ಕ ಕೌಶಲ ಇರಬೇಕಾಗಿರುವುದು ಇಂದಿನ ತುರ್ತು. ಪಿಯುಸಿಯವರೆಗೂ ಶಿಕ್ಷಣದಲ್ಲಿ ಅಂಕಗಳಿಗೇ ಪ್ರಾಧಾನ್ಯತೆ ಇರುವುದಾದರೂ ಪದವಿಯಲ್ಲಿ ಕನಿಷ್ಠ ಅಂಕದ ಜೊತೆಗೆ ವೃತ್ತಿಪರ ಕೌಶಲವುಳ್ಳವರಿಗೆ ಪ್ರಥಮ ಆದ್ಯತೆ ನೀಡಲಾಗುತ್ತದೆ. ಉದಾಹರಣೆಗೆ ಗಣಕಯಂತ್ರ ವಿಭಾಗದಲ್ಲಿ ಪದವಿ ಗಳಿಸುತ್ತಿರುವ ವಿದ್ಯಾರ್ಥಿಗೆ ತಂತ್ರಜ್ಞಾನದ ಹೊಸ ಆಗುಹೋಗುಗಳ ಸಾಮಾನ್ಯ ಅರಿವು ಇರಲೇಬೇಕಾಗುತ್ತದೆ. ಇದು ಪದವಿಯ ಜೊತೆಗೆ ಕೌಶಲವನ್ನು ಬೆಳೆಸುತ್ತದೆ. ಕೌಶಲ ನಿಮ್ಮನ್ನು ಅಸಾಮಾನ್ಯ ಮತ್ತು ಅಸಾಧಾರಣ ಎಂದು ಇತರರೊಂದಿಗೆ ಪ್ರತ್ಯೇಕಿಸುತ್ತದೆ. ಇಂದು ಕಲಿಕೆ ಕಷ್ಟಕರವೇನಲ್ಲ. ಸಾಕಷ್ಟು ಆನ್‌ಲೈನ್ ಸಂಸ್ಥೆಗಳು ಕಡಿಮೆ ವೆಚ್ಚದಲ್ಲಿ ಪ್ರಾಯೋಗಿಕ ಶಿಕ್ಷಣ ದೊರಕಿಸುತ್ತವೆ. ಪದವಿಯ ಹಂತದಲ್ಲಿ ಒಂದಲ್ಲ ಒಂದು ವಿಷಯದಲ್ಲಿ ನಿರಂತರ ಅಧ್ಯಯನ ಮಾಡುತ್ತಲಿದ್ದರೆ ಭವಿಷ್ಯದಲ್ಲೆಂದೋ ಅದು ಉಪಯೋಗಕ್ಕೆ ಬಂದೀತು. ಹೀಗಾಗಿ ಜ್ಞಾನದ ಹಸಿವು ಮತ್ತು ಕಲಿಕೆಯ ಚಪಲ ತೀರಾ ಹಿತಕರ.

ಸಂವಹನ ಕಲೆ

ನಿಮ್ಮ ಅಂಕಪಟ್ಟಿ ಎಷ್ಟೇ ಅಂಕಗಳಿಂದ ತುಂಬಿರಲಿ, ನಿಮ್ಮ ಪದವಿ ಎಷ್ಟೇ ಉತ್ಕೃಷ್ಟವಾಗಿರಲಿ, ಆದರೆ ಅಷ್ಟೇ ಮಜಬೂತು ಸಂವಹನ ಶೈಲಿಯಲ್ಲೂ ಇರಲೇಬೇಕು. ಬಹುತೇಕ ಎಲ್ಲ ಕಾರ್ಯಕ್ಷೇತ್ರದಲ್ಲೂ ಆಂಗ್ಲಭಾಷೆಯೇ ವ್ಯಾವಹಾರಿಕ ಭಾಷೆಯಾಗಿರುವುದರಿಂದ ಭಾಷೆಯ ಮೇಲಿನ ಹಿಡಿತ, ಜ್ಞಾನ ಕೂಡಾ ಅಷ್ಟೇ ಅನಿವಾರ್ಯ. ಕೆಲವೊಂದು ನಿರ್ದಿಷ್ಟ ಹುದ್ದೆಗಳಲ್ಲಿ ಬರವಣಿಗೆಯಲ್ಲಿಯೂ ಉತ್ಕೃಷ್ಟತೆಯನ್ನು ಅಪೇಕ್ಷಿಸಲಾಗುತ್ತದೆ. ಹೀಗಾಗಿ ಪದಬಳಕೆ, ಸ್ಪೆಲ್ಲಿಂಗ್, ವ್ಯಾಕರಣಗಳು ಕೂಡ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತವೆ. ಭಾಷಾಹಿಡಿತ ಸಾಕಷ್ಟು ಆತ್ಮಸ್ಥೈರ್ಯವನ್ನು ತುಂಬುತ್ತದೆ.

ಸೂತ್ರಗಳ ಬಳಕೆಯ ಸುಲಭ ವಿಧಾನ

ಶ್ರೀಲತ ಎಸ್.

ವಿದ್ಯಾರ್ಥಿಗಳು ಸಾಮಾನ್ಯವಾಗಿ ಎದುರಾಗುವ ಕೆಲವು ಸಂದೇಹಗಳನ್ನು ಸುಲಭ ರೀತಿಯಲ್ಲಿ, ತಪ್ಪಿಲ್ಲದೆ ಮಾಡಲು ಕೆಲವು ಉಪಾಯಗಳನ್ನು ಬಳಸಿಕೊಳ್ಳಬಹುದು. ಯಾವುದೇ ಸೂತ್ರವನ್ನು ಸರಿಯಾಗಿ ಉಪಯೋಗಿಸಿದ ಹೊರತು ಸರಿಯಾದ ಉತ್ತರ ದೊರೆಯುವುದಿಲ್ಲ. ಆದರೆ ಎಷ್ಟೆಂದು ಸೂತ್ರಗಳನ್ನು ನೆನಪಿನಲ್ಲಿ ಇಟ್ಟುಕೊಳ್ಳಲು ಸಾಧ್ಯ! ಅದರ ಅಂತರಾಳ, ಏತಕ್ಕಾಗಿ ಹೇಗೆ ಈ ಸೂತ್ರವನ್ನು ಬಳಸಬೇಕು ಎನ್ನುವ ಅರಿವಿದ್ದರೆ ಯಾವುದೇ ತಪ್ಪಿಲ್ಲದೆ ನಿಖರವಾಗಿ ಸಮಸ್ಯೆ ಬಿಡಿಸಬಹುದು. ಅದಕ್ಕಾಗಿ ಕೆಲವು ಸುಲಭ ಉಪಾಯಗಳು ಇಲ್ಲಿವೆ.


1. (ಎ) ಸರಣಿ ಜೋಡಣೆಯ ಒಟ್ಟು ರೋಧವು ಪ್ರತಿ ರೋಧಕಗಳ ರೋಧದ ಮೊತ್ತಕ್ಕೆ ಸಮ.

ಪ್ರತಿಯೊಂದು ರೋಧಕದ ರೋಧವು ಒಂದೇ ಆಗಿದ್ದಲ್ಲಿ ಒಟ್ಟು ರೋಧವು--------nR

(ಬಿ) ಸಮನಾಂತರ ಜೋಡಣೆಯ ಒಟ್ಟು ರೋಧವು ಪ್ರತಿ ರೋಧಕಗಳ ರೋಧದ ವಿಲೋಮದ ಮೊತ್ತವಾಗಿರುತ್ತದೆ.


$1/R_p = 1/R_1 + 1/R_2 + 1/R_3$

ಪ್ರತಿಯೊಂದು ರೋಧಕದ ರೋಧವು ಒಂದೇ ಆಗಿದ್ದಲ್ಲಿ ಒಟ್ಟು ರೋಧವು----------R/n.



2. **ಫ್ಲೆಮಿಂಗ್‌ನ ಎಡಗೈ ನಿಯಮ:** ಎಡಗೈನ ತೋರುಬೆರಳು, ಮಧ್ಯದ ಬೆರಳು ಹಾಗೂ ಹೆಬ್ಬೆರಳುಗಳನ್ನು ಪರಸ್ಪರ ಲಂಬವಾಗಿರಿಸಿದಾಗ, ತೋರುಬೆರಳು ಕಾಂತಕ್ಷೇತ್ರದ ದಿಕ್ಕನ್ನು, ಮಧ್ಯದ ಬೆರಳು ವಿದ್ಯುತ್ ಪ್ರವಾಹದ ದಿಕ್ಕನ್ನು ಹಾಗೂ ಹೆಬ್ಬೆರಳು ವಾಹಕವು ಅನುಭವಿಸಿದ ಬಲವನ್ನು ಸೂಚಿಸುತ್ತದೆ.


ಈ ಪಾಠದಲ್ಲಿ ಪ್ರಶ್ನೆಗಳನ್ನು ಕೇಳಿದಾಗ ಉತ್ತರ ಹುಡುಕಲು ಸ್ವಲ್ಪ ಗೊಂದಲ ಉಂಟಾಗುತ್ತದೆ.



ಈ ಮೇಲಿನ ಚಿತ್ರದಲ್ಲಿ ನಮೂದಿಸಿರುವಂತೆ ನಿಮ್ಮ ಮಧ್ಯದ ಬೆರಳು ಮತ್ತು ತೋರುಬೆರಳುಗಳನ್ನು ಪೆನ್ಸಿಲ್ ಬಾಕ್ಸ್‌ನ ಪಕ್ಕಗಳಿಗೆ ಅಳವಡಿಸಿಕೊಳ್ಳಿ. ಹೆಬ್ಬೆರಳಿಗೆ ಬದಲಾಗಿ ಒಂದು ಪೆನ್ಸಿಲ್ ಅನ್ನು ಎರಡು ಪಕ್ಕಕ್ಕೂ ಲಂಬವಾಗಿರುವಂತೆ ಅನುಗೊಳಿಸಿ. ನಂತರ ಪ್ರಶ್ನೆಗೆ ಅನುಸಾರವಾಗಿ ಪೆನ್ಸಿಲ್ ಬಾಕ್ಸ್ ತಿರುಗಿಸಿ. ಆಗ ಪ್ರಶ್ನೆಯಲ್ಲಿ ಕೊಟ್ಟಿರುವ ಎರಡರ ದಿಕ್ಕುಗಳನ್ನು ಉಪಯೋಗಿಸಿಕೊಂಡು, ಮೂರನೆಯದನ್ನು ಸುಲಭವಾಗಿ ಕಂಡುಹಿಡಿಯಬಹುದು.

3. ಈ ಕೆಳಗಿನ ತ್ರಿಭುಜವನ್ನು ಗಮನಿಸಿ. ಮೇಲಿನ (ಕೋಣೆಯ) ಭಾಗದ ಮೌಲ್ಯವು ಕೆಳಗಿರುವ ಒಂದೇ ಸಾಲಿನಲ್ಲಿರುವ ಮೌಲ್ಯಗಳ ಗುಣಲಬ್ಧಕ್ಕೆ ಸಮವಾಗಿರುತ್ತದೆ. ಈ ಸೂತ್ರಗಳನ್ನು ಬಳಸಿಕೊಂಡು ಯಾವುದೇ ಸಮಸ್ಯೆಯನ್ನು ಸುಲಭವಾಗಿ, ಏಕಮಾನದ ಸಹಿತವಾಗಿ ಬಿಡಿಸಬಹುದು. ಉದಾಹರಣೆಗೆ W = QV, W = I2Rt.

ಈಗ ಈ ತ್ರಿಭುಜದ ಮನೆಗಳನ್ನು ಸೂತ್ರಗಳಿಗೆ ಅನುಸಾರವಾಗಿ ಹೆಚ್ಚಿಸುತ್ತಾ ಹೋಗಬಹುದು. ಆಗ ಎಲ್ಲಾ ಸೂತ್ರಗಳೂ ತನ್ನಿಂದತಾನೇ ವಿದಿತವಾಗುತ್ತವೆ. ಹಾಗಾಗಿ ಕೇವಲ ಒಂದೆರಡು ಸೂತ್ರಗಳನ್ನು ಅರಿತುಕೊಂಡರೆ ಉಳಿದದ್ದನ್ನು ಸುಲಭವಾಗಿ ಹೊರತೆಗೆಯಬಹುದು.



ಕೆಲವು ನಿಯತಾಂಕಗಳು (ಪ್ಯಾರಮೀಟರ್ಸ್) ನೇರ ಅನುಪಾತದಲ್ಲೂ ಕೆಲವು ವಿಲೋಮ ಅನುಪಾತದಲ್ಲೂ ಇರುತ್ತವೆ. ಉದಾಹರಣೆಗೆ ಕರೆಂಟ್ (ಆಂಪಿಯರ್) ರೋಧ (ರೆಸಿಸ್ಟನ್ಸ್) ಗೆ ವಿಲೋಮ ಅನುಪಾತದಲ್ಲಿದ್ದರೆ ವೋಲ್ಟ್‌ಗೆ ನೇರ ಅನುಪಾತದಲ್ಲಿರುತ್ತದೆ. ಇದನ್ನು ಅರಿತಿದ್ದರೆ ಸೂತ್ರವನ್ನು ಬಳಸುವಾಗ ಯಾವುದನ್ನು ನ್ಯೂಮರೇಟರ್ ಅಥವಾ ಡಿನಾಮಿನೇಟರ್ ಮಾಡಬೇಕು ಎನ್ನುವುದು ವೇದ್ಯವಾಗುತ್ತದೆ. ಇದೊಂದು 'ಚಮತ್ಕಾರಿ ತ್ರಿಭುಜ' ದಂತೆ ಭಾಸವಾಗುತ್ತದೆ.

4. ಒಂದು ನಾಣ್ಯವನ್ನು ನೀರಿನಲ್ಲಿ ಹಾಕಿದರೆ ಅದು ಪಾತ್ರೆಯ ನಿಜವಾದ ಆಳದಲ್ಲಿರುವುದಕ್ಕಿಂತ ಬಹಳ ಮೇಲೆ ಇರುವಂತೆ ಭ್ರಮೆಯಾಗುತ್ತದೆ. ವಕ್ರೀಭವನದ ಸೂಚ್ಯಾಂಕವು ತಿಳಿದಿದ್ದರೆ ಮಾಧ್ಯಮದ ಆಳವನ್ನು ತಿಳಿಯಬಹುದು.

ವಕ್ರೀಭವನದ ಸೂಚ್ಯಾಂಕ* ಗೋಚರವಾಗುವ ಆಳ = ಮಾಧ್ಯಮದ ಆಳ

5. ವಿವಿಧ ತರಂಗಾಂತರಗಳ (ಬಣ್ಣಗಳ) ಬೆಳಕು ಪಟ್ಟಕದ ಮೂಲಕ ಹಾದು ಹೋಗುವಾಗ ಬೇರೆ ಬೇರೆ ಪ್ರಮಾಣದಲ್ಲಿ ವಿಚಲನೆಗೆ ಒಳಗಾಗುತ್ತವೆ. ಕೆಂಪು ಕಡಿಮೆ, ಅತಿ ನೇರಳೆ-ಹೆಚ್ಚು. ಇದೇ ಕಾರಣ ಕಾಮನಬಿಲ್ಲಿನಲ್ಲಿ ನಮಗೆ ಕೆಂಪು ಬಣ್ಣ ಮೇಲುಗಡೆಯೂ, ಅತಿ ನೇರಳೆ ಬಣ್ಣ ಕೆಳಗೂ ಗೋಚರಿಸುತ್ತದೆ.

6. ಸಮೀಪದೃಷ್ಟಿ ದೋಷ (ಮಯೋಪಿಯ) ವಿರುವವರಿಗೆ ಹತ್ತಿರದ್ದು ಕಾಣಿಸುತ್ತದೆ. ದೂರದ ವಸ್ತುಗಳು ಸ್ಪಷ್ಟವಾಗಿ ಗೋಚರಿಸುವುದಿಲ್ಲ. ಇವರ ಸ್ಪಷ್ಟದೃಷ್ಟಿಯ ಅನಂತ (ಫಾರ್ ಪಾಯಿಂಟ್) ಬಿಂದುವು '∞' ಗೆ ಬದಲಾಗಿ ಅದಕ್ಕಿಂತ ಕಡಿಮೆ ಇರುತ್ತದೆ.

ದೂರದೃಷ್ಟಿ ದೋಷ (ಹೈಪರ್ ಮೆಟ್ರೋಪಿಯ) ವಿರುವವರಿಗೆ ದೂರದ್ದು ಕಾಣಿಸುತ್ತದೆ. ಹತ್ತಿರದ ವಸ್ತುಗಳು ಸ್ಪಷ್ಟವಾಗಿ ಗೋಚರಿಸುವುದಿಲ್ಲ. ಇವರ ಸ್ಪಷ್ಟದೃಷ್ಟಿಯ ಕನಿಷ್ಠ (ನೀಯರ್ ಪಾಯಿಂಟ್) ಬಿಂದುವು '25 ಸೆಂ.ಮೀ' ಗೆ ಬದಲಾಗಿ ಅದಕ್ಕಿಂತ ಹೆಚ್ಚು ಇರುತ್ತದೆ.

ಪ್ರಶ್ನೆ-ಒಬ್ಬ ವ್ಯಕ್ತಿಗೆ 50 ಸೆಂ.ಮೀ ಗಿಂತ ದೂರದ ವಸ್ತುಗಳನ್ನು ನೋಡಲು ಅಸಮರ್ಥನಾಗಿದ್ದರೆ, ಇನ್ನೊಬ್ಬ ವ್ಯಕ್ತಿಗೆ 50 ಸೆಂ.ಮೀ ಗಿಂತ ಹತ್ತಿರದ ವಸುಗಳನ್ನು ನೋಡಲು ಅಸಮರ್ಥನಾಗಿದ್ದಾನೆ. ಈ ಸಂದರ್ಭಗಳಲ್ಲಿ ಕನ್ನಡಕಕ್ಕೆ ಅಗತ್ಯವಿರುವ ಮಸೂರದ ಸ್ವಭಾವ, ಸಂಗಮ ದೂರ ಹಾಗೂ ಸಾಮರ್ಥ್ಯವನ್ನು ಕಂಡುಹಿಡಿಯಿರಿ.

ಈ ತರಹದ ಸಮಸ್ಯೆಗಳು ಸ್ವಲ್ಪ ಗೊಂದಲ ಉಂಟು ಮಾಡುತ್ತವೆ. ಸಮೀಪ ದೃಷ್ಟಿ ದೋಷವಿರುವವರಿಗೆ ನಿಮ್ನ (ಕಾನ್‌ಕೇವ್ ಲೆನ್ಸ್) ಮಸೂರವನ್ನೂ ಹಾಗೂ ದೂರ ದೃಷ್ಟಿ ದೋಷವಿರುವರಿಗೆ ಪೀನ (ಕಾನ್ವೆಕ್ಸ್ ಲೆನ್ಸ್) ಮಸೂರವನ್ನೂ ಬಳಸಬೇಕು ಎನ್ನುವುದು ಮನಸ್ಸಿನಲ್ಲಿ ದೃಢವಾಗಿರಬೇಕು. ಅದರಂತೆಯೇ ಕಾನ್ವೆಕ್ಸ್ ಲೆನ್ಸ್ ನ ಸಾಮರ್ಥ್ಯದ ಚಿಹ್ನೆ "+" ಹಾಗೂ ಕಾನ್‌ಕೇವ್ ಲೆನ್ಸ್ ಸಾಮರ್ಥ್ಯದ ಚಿಹ್ನೆ "-" ಎಂಬುದೂ ಮನದಟ್ಟಾಗಿರಬೇಕು. ಆಗ ಮಸೂರದ ಸೂತ್ರದಲ್ಲಿ ಯಾವುದು 'u'ಯಾವುದು 'v' ಎನ್ನುವ ಅನುಮಾನ ಉಂಟಾಗುವುದಿಲ್ಲ.

ವಿದ್ಯಾರ್ಥಿ ವೇತನ ಕೈಪಿಡಿ

ಐಐಟಿ ರೂರ್ಕಿ ಡಿಪಾರ್ಟ್‌ಮೆಂಟ್ ಆಫ್ ಕೆಮಿಸ್ಟ್ರಿ ಪೋಸ್ಟ್-ಡಾಕ್ಟರಲ್ ಫೆಲೋಶಿಪ್ 2021

ವಿವರ: ರೂರ್ಕಿಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ರಸಾಯನಶಾಸ್ತ್ರ ವಿಭಾಗವು ಪಿಎಚ್‌ಡಿ ಪದವಿ ಪಡೆದವರಿಂದ ಪೋಸ್ಟ್ ಡಾಕ್ಟರಲ್ ಫೆಲೋಶಿಪ್‌ಗೆ ಅರ್ಜಿ ಆಹ್ವಾನಿಸಿದೆ.

ಅರ್ಹತೆ: ಫಿಸಿಕಲ್ ಕೆಮಿಸ್ಟ್ರಿ/ಫಿಸಿಕ್ಸ್‌ನಲ್ಲಿ ಪಿಎಚ್‌ಡಿ ಪಡೆದ ಲೇಸರ್ ಸ್ಪೆಕ್ಟ್ರೋಸ್ಕೋಪಿ, ಮ್ಯಾಟ್‌ಲ್ಯಾಬ್ ಮತ್ತು ಲ್ಯಾಬ್ ವೀವ್ ಅನುಭವವಿರುವ ಅಭ್ಯರ್ಥಿಗಳು ಈ ಫೆಲೋಶಿಪ್‌ಗೆ ಅರ್ಹರು. ಇತ್ತೀಚೆಗೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಕೂಡ ಅರ್ಹರು. ಇತ್ತೀಚೆಗೆ ಥೀಸಿಸ್ ಸಲ್ಲಿಸಿದವರೂ ಸಹ ಅರ್ಜಿ ಸಲ್ಲಿಸಬಹುದು.

ಆರ್ಥಿಕ ಸಹಾಯ: ₹ 60,000 ಪ್ರತಿ ತಿಂಗಳಿಗೆ ಜೊತೆಗೆ ಅನಿರೀಕ್ಷಿತ ವೆಚ್ಚಗಳಿಗಾಗಿ ವಾರ್ಷಿಕ ₹ 50,000.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 15 ಮಾರ್ಚ್, 2021

ಅರ್ಜಿ ಸಲ್ಲಿಸುವ ವಿಧಾನ:
ಇ-ಮೇಲ್ ಅಥವಾ ಅಂಚೆ ಮೂಲಕ ಕಳುಹಿಸಬಹುದು. ಪ್ರೊಫೆಸರ್ ಮತ್ತು ಕೆಮಿಸ್ಟ್ರಿ ವಿಭಾಗದ ಮುಖ್ಯಸ್ಥರು, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ರೂರ್ಕಿ, ಉತ್ತರಾಖಂಡ್ - 247667

ಹೆಚ್ಚಿನ ಮಾಹಿತಿಗೆ: www.b4s.in/praja/RDC6

ಎಂಜಿನಿಯರಿಂಗ್ ವಿದ್ಯಾರ್ಥಿನಿಯರಿಗೆ ರೋಲ್ಸ್ ರಾಯ್ಸ್ ಉನ್ನತಿ ಸ್ಕಾಲರ್‌ಶಿಪ್ 2021

ವಿವರ: ರೋಲ್ಸ್ ರಾಯ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಪ್ರಥಮ, ದ್ವಿತೀಯ ಹಾಗೂ ತೃತೀಯ ವರ್ಷದ ಎಂಜಿನಿಯರಿಂಗ್ ಓದುತ್ತಿರುವ ಹೆಣ್ಣುಮಕ್ಕಳಿಂದ ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನಿಸಿದೆ.

ಅರ್ಹತೆ: ಅರ್ಜಿದಾರರು ಭಾರತದ ಎಐಸಿಟಿಇ ಮಾನ್ಯತೆ ಪಡೆದ ಸಂಸ್ಥೆಯಿಂದ ಏರೋಸ್ಪೇಸ್, ಕಂಪ್ಯೂಟರ್, ಎಲೆಕ್ಟ್ರಾನಿಕ್ಸ್, ಮರೈನ್ ಮುಂತಾದ ವಿಷಯಗಳಲ್ಲಿ ಎಂಜಿನಿಯರಿಂಗ್ ಓದುತ್ತಿರಬೇಕು. ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಬೋರ್ಡ್ ಪರೀಕ್ಷೆಗಳಲ್ಲಿ ಶೇ 60 ಕ್ಕಿಂತ ಹೆಚ್ಚು ಅಂಕ ಗಳಿಸಿರಬೇಕು.

ಆರ್ಥಿಕ ಸಹಾಯ: ₹ 35,000

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 31, ಮಾರ್ಚ್ 2021

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್ ಮೂಲಕ ಅರ್ಜಿ

ಹೆಚ್ಚಿನ ಮಾಹಿತಿಗೆ: www.b4s.in/praja/UNS2

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಹೊಸ ಕಾರ್ಟೆಸಿಯನ್ ಸಾಂಪ್ರದಾಯಿಕ ಸಂಕೇತಗಳು (ಮುಂದುವರಿದ ಭಾಗ)


ಎಸ್ಸೆಸ್ಸೆಲ್ಸಿ

ಭೌತಶಾಸ್ತ್ರ

- ದರ್ಪಣದ ಧ್ರುವ (p) ಯನ್ನು ಮೂಲ ಬಿಂದುವಾಗಿ ತೆಗೆದುಕೊಳ್ಳಲಾಗುತ್ತದೆ.
- ವಸ್ತುವನ್ನು ಯಾವಾಗಲೂ ದರ್ಪಣದ ಎಡಭಾಗದಲ್ಲಿ ಇಡಲಾಗುತ್ತದೆ. ದರ್ಪಣದ ಮೇಲೆ ವಸ್ತುವಿನಿಂದ ಬೀಳುವ ಬೆಳಕು ಎಡಗಡೆಯಿಂದ ಬೀಳುತ್ತದೆ ಎಂದು ಸೂಚಿಸುತ್ತದೆ.
- ಪ್ರಧಾನ ಅಕ್ಷಕ್ಕೆ ಸಮಾಂತರವಾಗಿರುವ ಎಲ್ಲಾ ದೂರಗಳನ್ನು ದರ್ಪಣದ ಧ್ರುವದಿಂದ ಅಳೆಯಲಾಗುತ್ತದೆ.
- ಮೂಲ ಬಿಂದುವಿನ ಬಲಭಾಗದಲ್ಲಿ (+X -ಅಕ್ಷದ ಉದ್ದಕ್ಕೂ) ಅಳೆಯಲಾದ ಎಲ್ಲಾ ದೂರಗಳನ್ನು ಧನಾತ್ಮಕವಾಗಿಯೂ ಮತ್ತು ಮೂಲ ಬಿಂದುವಿನ ಎಡಭಾಗದಲ್ಲಿ (- X -ಅಕ್ಷದ ಉದ್ದಕ್ಕೂ) ಅಳೆಯಲಾದ ದೂರಗಳನ್ನು ಋಣಾತ್ಮಕವಾಗಿ ತೆಗೆದುಕೊಳ್ಳಲಾಗುತ್ತದೆ.
- ಪ್ರಧಾನ ಅಕ್ಷಕ್ಕೆ ಲಂಬವಾಗಿ ಮೇಲಿನ ಕಡೆಗೆ (+Y -ಅಕ್ಷದ ಉದ್ದಕ್ಕೂ) ಅಳೆಯಲಾದ ದೂರಗಳನ್ನು ಧನಾತ್ಮಕವಾಗಿಯೂ ಮತ್ತು ಪ್ರಧಾನ ಅಕ್ಷಕ್ಕೆ ಲಂಬವಾಗಿ ಕೆಳಗಿನ ಬದಿಯ ಕಡೆಗೆ (-Y- ಅಕ್ಷದ ಉದ್ದಕ್ಕೂ) ಅಳೆಯಲಾದ ದೂರಗಳನ್ನು ಋಣಾತ್ಮಕವಾಗಿಯೂ ತೆಗದುಕೊಳ್ಳಲಾಗುತ್ತದೆ.

(ಚಿತ್ರಕ್ಕಾಗಿ ದರ್ಪಣ ಸೂತ್ರ ಮತ್ತು ವರ್ಧನೆಯಲ್ಲಿ ಕೊಟ್ಟಿರುವ ಚಿತ್ರವನ್ನು ಅನುಕರಿಸಿ)

ದರ್ಪಣ ಸೂತ್ರ ಮತ್ತು ವರ್ಧನೆ



ಗೋಳೀಯ ದರ್ಪಣದಲ್ಲಿ,

- ದರ್ಪಣದ ಧ್ರುವದಿಂದ ವಸ್ತುವಿಗೆ ಇರುವ ದೂರವನ್ನು ವಸ್ತು ದೂರ (u) ಎನ್ನುವರು
- ದರ್ಪಣದ ಧ್ರುವದಿಂದ ಪ್ರತಿಬಿಂಬಕ್ಕೆ ಇರುವ ದೂರವನ್ನು ಪ್ರತಿಬಿಂಬ ದೂರ(v) ಎನ್ನುವರು.

ಸಂಗಮದೂರ (f) , ವಸ್ತುದೂರ (u) ಮತ್ತು ಪ್ರತಿಬಿಂಬ ದೂರ (v) ನಡುವಿನ ಸಂಬಂಧ

$$\frac{1}{v}+\frac{1}{u}-=\frac{1}{f}$$

ಈ ಮೇಲಿನ ಸಮೀಕರಣವನ್ನು ದರ್ಪಣ ಸೂತ್ರ ಎನ್ನುವರು.

ವರ್ಧನೆ (m)

ವರ್ಧನೆಯು ಸಾಪೇಕ್ಷವಾಗಿ ಗೋಳೀಯ ದರ್ಪಣದಿಂದ ಉಂಟಾದ ಪ್ರತಿಬಿಂಬವು ವಸ್ತುವಿನ ಗಾತ್ರಕ್ಕಿಂತ ಎಷ್ಟು ವರ್ಧನೆಯಾಗಿದೆ ಎಂಬುದನ್ನು ತಿಳಿಸುತ್ತದೆ.
ವಸ್ತುವಿನ ಎತ್ತರ h ಹಾಗೂ ಪ್ರತಿಬಿಂಬದ ಎತ್ತರ h^1 ಆದರೆ ವರ್ಧನೆ m ಯು

$$m = \frac{\text{ಪ್ರತಿಬಿಂಬದ ಎತ್ತರ } (h^1)}{\text{ವಸ್ತುವಿನ ಎತ್ತರ } h}$$

ಅಥವಾ

$$m = \frac{h^1}{h}$$

ಅಥವಾ

$$\text{ವರ್ಧನೆ} \quad (m) = \frac{h^1}{h} = -\frac{v}{u}$$

ಇಲ್ಲಿ ವಸ್ತುವಿನ ಎತ್ತರವನ್ನು ಧನಾತ್ಮಕವಾಗಿ, ಮಿಥ್ಯ ಪ್ರತಿಬಿಂಬವನ್ನು ಧನಾತ್ಮಕವಾಗಿಯೂ ಮತ್ತು ಸತ್ಯ ಪ್ರತಿಬಿಂಬವನ್ನು ಋಣಾತ್ಮಕವಾಗಿಯೂ ತೆಗೆದುಕೊಳ್ಳಲಾಗುತ್ತದೆ.

ಬೆಳಕಿನ ವಕ್ರೀಭವನ

ಬೆಳಕು ಒಂದು ಸಾಂದ್ರತೆಯ ಮಾಧ್ಯಮದಿಂದ ಇನ್ನೊಂದು ಸಾಂದ್ರತೆಯ ಮಾಧ್ಯಮಕ್ಕೆ ಓರೆಯಾಗಿ ಚಲಿಸುವಾಗ ಎರಡನೇ ಮಾಧ್ಯಮದಲ್ಲಿ ಪ್ರಸರಣ ದಿಕ್ಕು ಬದಲಾಗುವ ಪ್ರಕ್ರಿಯೆಯನ್ನು ಬೆಳಕಿನ ವಕ್ರೀಭವನ ಎನ್ನುವರು.

ಬೆಳಕಿನ ವಕ್ರೀಭವನ ನಿಯಮಗಳು

1) ಪತನ ಕಿರಣ, ವಕ್ರೀಭವನ ಕಿರಣ ಮತ್ತು ಎರಡು ಮಾಧ್ಯಮಗಳ ಸಂಪರ್ಕ ಮೇಲ್ಮೈಗೆ ಪತನ ಬಿಂದುವಿನಲ್ಲಿ ಎಳೆದ ಲಂಬ ಎಲ್ಲವೂ ಒಂದೇ ಸಮತಲದಲ್ಲಿರುತ್ತದೆ.

2) ಸ್ನೆಲ್ಸ್‌ನ ವಕ್ರೀಭವನ ನಿಯಮ

ಕೊಟ್ಟಿರುವ ಬೆಳಕಿನ ನಿರ್ದಿಷ್ಟ ಬಣ್ಣ ಮತ್ತು ನೀಡಿರುವ ಜೋಡಿ ಮಾಧ್ಯಮಗಳಿಗೆ ಪತನಕೋನದ ಸೈನು ಮತ್ತು ವಕ್ರಿಮ ಕೋನದ ಸೈನುಗಳ ಅನುಪಾತ ಸ್ಥಿರವಾಗಿರುತ್ತದೆ.

$\frac{\sin i}{\sin r}$ =ಸ್ಥಿರಾಂಕ ಇಲ್ಲಿ i ಪತನ ಕೋನ
r ವಕ್ರೀಭವನ ಕೋನ

ಪ್ರಜಾವಾಣಿ ನೋಡಿಯೊ

ಹತ್ತನೇ ತರಗತಿ ಆಂಗ್ಲ ಮಾಧ್ಯಮದ ಜೀವಶಾಸ್ತ್ರ ವಿಭಾಗದ 'ಕಂಟ್ರೋಲ್ ಅಂಡ್ ಕೋಆರ್ಡಿನೇಷನ್' ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.


https://bit.ly/38kQ7a2

p-n ಸಂಧಿ (ರಚನೆ) (ಮುಂದುವರಿದ ಭಾಗ)

ದ್ವಿತೀಯ ಪಿಯುಸಿ

ಭೌತಶಾಸ್ತ್ರ


ತೆಳುವಾದ p-ಬಗೆಯ ಸಿಲಿಕಾನ್ ಅರೆವಾಹಕ ಬಿಲ್ಲೆಗೆ ಸ್ವಲ್ಪ ಪ್ರಮಾಣದ ಪಂಚವೇಲೆಂಟ್ ಅಶುದ್ಧತೆಯನ್ನು ಸೇರಿಸಿದರೆ ಬಿಲ್ಲೆಯ ಒಂದು ಭಾಗ p-ವಲಯವಾಗಿ ಮತ್ತು ಬಿಲ್ಲೆಯ ಇನ್ನೊಂದು ಭಾಗ n-ವಲಯವಾಗಿ ರೂಪುಗೊಳ್ಳುತ್ತದೆ. ಇದರಿಂದ p ವಲಯ ಮತ್ತು n-ವಲಯಗಳ ನಡುವೆ ಲೋಹೋದ್ಧಾರಣ ಸಂಧಿಯು ಏರ್ಪಟ್ಟು ಇದನ್ನು p-n ಸಂಧಿ ಎನ್ನುವರು. p-n ಸಂಧಿಯ ರಚನೆಯ ಸಮಯದಲ್ಲಿ ಎಲೆಕ್ಟ್ರಾನ್ ಸಾರತೆ ಹೆಚ್ಚಿರುವ n-ಬದಿಯಿಂದ ಎಲೆಕ್ಟ್ರಾನ್‌ಗಳು p-ಬದಿಗೂ ಮತ್ತು ರಂಧ್ರಗಳ ಸಾರತೆ ಹೆಚ್ಚಿರುವ p- ಕಡೆಯಿಂದ ರಂಧ್ರಗಳು n-ಬದಿಗೂ ವಿಸರಣಗೊಳ್ಳುತ್ತವೆ.



ಎಲೆಕ್ಟ್ರಾನ್ ಒಂದು n ನಿಂದ p ಗೆ ವಿಸರಣಗೊಂಡಾಗ ತನ್ನ ಹಿಂಬದಿಯ n ವಲಯದಲ್ಲಿ ಅಯಾನಿಕರಣಗೊಂಡ ದಾನಿ(+) n, ರಂಧ್ರವೊಂದು p- ಯಿಂದ n ಗೆ ವಿಸರಣಗೊಂಡಾಗ ತನ್ನ ಹಿಂಬದಿಯ p- ವಲಯದಲ್ಲಿ ಸ್ವೀಕಾರಿ (-) ಬಿಟ್ಟು ಬರುತ್ತವೆ. ಇವು ಅಚಲನ ಸ್ಥಿತಿಯಲ್ಲಿದ್ದು ಸಂಧಿಯ n- ಬದಿಯಲ್ಲಿ ಧನಾವೇಶದ ಪದರ ಮತ್ತು ಸಂಧಿಯ p- ಬದಿಯಲ್ಲಿ ಋಣಾವೇಶದ ಪದರವನ್ನು ಉಂಟು ಮಾಡುತ್ತವೆ. ಈ ಆವೇಶ ವ್ಯೋಮ ವಲಯವನ್ನು 'ಬರಿದಾದ ಸ್ತರ' ಅಥವಾ 'ಬರಿದಾದ ವಲಯ' ಎನ್ನುವರು. ಇದರ ದಪ್ಪವು ಸರಿ ಸುಮಾರು ಮೈಕ್ರೋಮೀಟರಿನಲ್ಲಿರುತ್ತದೆ.


ವಿದ್ಯುತ್ ಕ್ಷೇತ್ರದ ಪ್ರಭಾವದಿಂದ ಉಂಟಾದ ಆವೇಶ ವಾಹಕತೆಗಳ ಚಲನೆಯ 'ಅಲೆತ' ಎನ್ನುತ್ತಾರೆ ಮತ್ತು ಇದು ವಿಸರಣದ ಪ್ರವಾಹದ ವಿರುದ್ಧ ದಿಕ್ಕಿನಲ್ಲಿರುತ್ತದೆ. ವಿಸರಣದ ಪ್ರವಾಹವು ಅಲೆತ ಪ್ರವಾಹಕ್ಕೆ ಸಮನಾದಾಗ p-n ಸಂಧಿಯ ರಚನೆಯಾಗುತ್ತದೆ ಮತ್ತು ಸಂಧಿಯ ಸಮತೋಲನ ಸ್ಥಿತಿಯಲ್ಲಿರುವಾಗ ಅದರಲ್ಲಿ ಯಾವುದೇ ನಿವ್ವಳ ಪ್ರವಾಹವಿರುವುದಿಲ್ಲ. ಈ ಸಂದರ್ಭದಲ್ಲಿ ಸಂಧಿಯಲ್ಲಿ ವಿಭವಾಂತರ (v0)ಏರ್ಪಟ್ಟು ವಿಭವದ ಧ್ರುವಗಳು ಆವೇಶಗಳ ಚಲನೆಯನ್ನು ವಿರೋಧಿಸುತ್ತವೆ.

ಅರೆವಾಹಕ ಡಯೋಡು




ಇದು ಮೂಲತಃ ಒಂದು p-n ಸಂಧಿಯಾಗಿದ್ದು ಬಾಹ್ಯ ವೋಲ್ವತೆಯನ್ನು ಅನ್ವಯಿಸುವುದಕ್ಕೆ ಅದರ ಎರಡು ಬದಿಗೆ ಲೋಹ ಜೋಡಣೆಯನ್ನು ಬೆಸೆಯಲಾಗುತ್ತದೆ.

p-n ಸಂಧಿ ಡಯೋಡು ನೇರ ಪಕ್ಷಪಾತದಲ್ಲಿ :



ಬ್ಯಾಟರಿಯ ಧನ ತುದಿಯನ್ನು ಡಯೋಡಿನ p-ಬದಿಗೆ ಮತ್ತು ಬ್ಯಾಟರಿಯ ಋಣ ತುದಿಯನ್ನು ಡಯೋಡಿನ n-ಬದಿಗೆ ಜೋಡಿಸುವುದನ್ನು ಡಯೋಡಿನ ನೇರಪಕ್ಷಪಾತ ಜೋಡಣೆ ಎನ್ನುವರು. ಈ ಸಂದರ್ಭದಲ್ಲಿ ಅನ್ವಯಿತ ವೋಲ್ಟೇಜ್‌ಗೆ ದಿಕ್ಕು ನಿರ್ಮಿತ ವಿಭವನ (V0) ದಿಕ್ಕಿಗೆ ವಿರುದ್ಧವಾಗಿದ್ದು ಇದರ ಫಲವಾಗಿ ಅನ್ವಯಿತ ವಿಭವವನ್ನು ಹೆಚ್ಚಿಸಿದಂತೆ ಬರಿದಾದ ಸ್ತರದ ಅಗಲ ಮತ್ತು ಸೀಮಾ ಎತ್ತರ ಕ್ಷೀಣಿಸುತ್ತಾ ಹೋಗುತ್ತದೆ. ಇಲ್ಲಿ ಸೀಮಾ ಎತ್ತರ (V0 - V) ಆಗಿರುತ್ತದೆ. ಯಾವಾಗ ಅನ್ವಯಿತ ವಿಭವ ನಿರ್ಮಿತ ವಿಭವವನ್ನು ಜಯಿಸುತ್ತದೆಯೋ ಆಗ n- ಬದಿಯಿಂದ ಒಂದ ಎಲೆಕ್ಟ್ರಾನ್‌ಗಳು ಬರಿದಾದ ಸ್ತರವನ್ನು ದಾಟಿ p- ಬದಿಗೆ ಒಂದು ತಲುಪುತ್ತವೆ ಮತ್ತು p- ಬದಿಯಿಂದ ಬಂಧ ರಂಧ್ರಗಳು ಬರಿದಾದ ಸ್ಥರವನ್ನು ದಾಟಿ n- ಬದಿಗೆ ತಲುಪುತ್ತವೆ. ಈ ಪ್ರಕ್ರಿಯೆಯನ್ನು 'ಅಲ್ಪ ಸಂಖ್ಯಾ ವಾಹಕಗಳ ಚುಚ್ಚುವಿಕೆ' ಎನ್ನುವರು. ಇದರಿಂದ ಆವೇಶಗಳು ಎರಡು ಬದಿಗೆ ಚಲಿಸುವುದರಿಂದ ವಿದ್ಯುತ್ ಪ್ರವಾಹ ಉಂಟಾಗುತ್ತದೆ. ಇದು ಸಾಮಾನ್ಯವಾಗಿ mA ನಲ್ಲಿರುತ್ತದೆ.

p-n ಸಂಧಿ ಡಯೋಡು ವಿಪರ್ಯಾಯ ಪಕ್ಷಪಾತದಲ್ಲಿ



ಬಾಹ್ಯ ವೋಲ್ಟಜ್‌ನ ಬ್ಯಾಟರಿಯ ಧನ ತುದಿಯನ್ನು ಡಯೋಡಿನ n- ಬದಿಗೆ ಮತ್ತು ಬ್ಯಾಟರಿಯ ಋಣ ತುದಿಯನ್ನು ಡಯೋಡಿನ p- ಬದಿಗೆ ಜೋಡಿಸುವುದನ್ನು ಡಯೋಡಿನ ವಿಪರ್ಯಾಯ ಪಕ್ಷಪಾತ ಜೋಡಣೆ ಎನ್ನುವರು.

ಈ ಸಂದರ್ಭದಲ್ಲಿ ಅನ್ವಯಿತ ವೋಲ್ಟಜ್ ಮತ್ತು ಸೀಮಾ ವಿಭವದ ದಿಕ್ಕು ಒಂದೇ ಆಗಿರುವುದರಿಂದ ಅನ್ವಯಿತ ವಿಭವವನ್ನು ಹೆಚ್ಚಿಸಿದಂತೆ ಸೀಮಾ ಎತ್ತರವು ಹೆಚ್ಚಾಗುತ್ತಾ ಹೋಗುತ್ತದೆ. ಇದರಿಂದ ಬರಿದಾದ ವಲಯ ವಿಸ್ತಾರಗೊಳ್ಳುತ್ತಾ ಹೋಗುತ್ತದೆ. ಇಲ್ಲಿ ಸೀಮಾ ಎತ್ತರ (V0 + V) ಆಗಿದ್ದು, ಇದು ಎಲೆಕ್ಟ್ರಾನ್‌ಗಳನ್ನು n- ನಿಂದ p-ಕಡೆಗೆ ಮತ್ತು ರಂಧ್ರಗಳನ್ನು p-ನಿಂದ n- ಕಡೆಗೆ ಹರಿಯುವುದನ್ನು ಕುಗ್ಗಿಸುತ್ತದೆ. ಇಲ್ಲಿ ಅಲ್ಪ ಆವೇಶಗಳು ಯಾದೃಚ್ಛಿಕ ಚಲನೆಯಲ್ಲಿ ಸಂಧಿಗೆ ಸಮೀಪವಿರುವುದರಿಂದ ಇವು ತಮ್ಮ-ತಮ್ಮ ವಲಯಗಳಿಗೆ ಸೆಳೆಯಲ್ಪಟ್ಟಿರುವುತ್ತವೆ. ಈ ವಾಹಕತೆಗಳ ಪ್ರವಾಹವು ನಷ್ಟಿರುತ್ತದೆ.

(ಪಾಠಗಳ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ಭೌತಶಾಸ್ತ್ರ ವಿಭಾಗದ 'ಮ್ಯಾಗ್ನೆಟಿಸಂ ಅಂಡ್ ಮ್ಯಾಟರ್' ಪಾಠವನ್ನು ಇಂಗ್ಲಿಷ್‌ನಲ್ಲಿ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

https://bit.ly/3kQs1Jx



ಸುಭಾಷಿತ

ಮಹಿಳೆಯರು ಪ್ರಕೃತಿಯ ಪರವಾಗಿದ್ದು, ಶಾಂತಿಯುತ ಬದುಕಿಗೆ ಮಾರ್ಗದರ್ಶಕರಾದಾಗ ಮಾತ್ರ ನಮಗೆ ಉತ್ತಮ ಭವಿಷ್ಯ ಇರಬಲ್ಲದು. ಇಲ್ಲದಿದ್ದರೆ ಮಾನವ ಸಂತತಿಗೆ ಭವಿಷ್ಯವೆಂಬುದೇ ಇರುವುದಿಲ್ಲ. –ವಂದನಾ ಶಿವ

ಸಮಾನತೆಯ ಹಾದಿಯಲ್ಲಿ ನಡಿಗೆ ಸ್ತ್ರೀವಾದದ ತಾತ್ವಿಕತೆಯ ದೀವಿಗೆ

ಶಿಕ್ಷಣ ಹಾಗೂ ಸಂವಹನ ಕ್ಷೇತ್ರದಲ್ಲಿ ಉಂಟಾಗಿರುವ ಅಸಾಧಾರಣ ಬದಲಾವಣೆಯು ಮಹಿಳೆಯ ಬದುಕಿನಲ್ಲೂ ಕ್ರಾಂತಿಕಾರಕ ಬದಲಾವಣೆ ತಂದಿದೆಯೇ ಎಂದು ಗಮನಿಸಿದರೆ ನಿರಾಶೆಯಾಗುತ್ತದೆ. ಸ್ತ್ರೀ ಸಮಾನತೆಯ ಬಹುತೇಕ ಆಶಯ ಮತ್ತು ಕಾರ್ಯಕ್ರಮಗಳ ಫಲಶ್ರುತಿಯು ಮಾತು ಹಾಗೂ ಬರವಣಿಗೆಯಲ್ಲಷ್ಟೇ ಎದ್ದುಕಾಣುತ್ತಿದೆ. ಲಿಂಗತಾರತಮ್ಯ ನಿವಾರಣೆಯ ದಿಸೆಯಲ್ಲಿ ಪ್ರಗತಿ ಆಗಿರುವುದನ್ನು ಒಪ್ಪಿಕೊಂಡರೂ, ಮಹಿಳಾ ಶೋಷಣೆಯ ಸ್ವರೂಪ ಬೇರೆ ಬೇರೆ ರೂಪಗಳಲ್ಲಿ ನಡೆಯುತ್ತಿದೆ ಹಾಗೂ ಅದರ ಪ್ರಮಾಣ ಆತಂಕ ಹುಟ್ಟಿಸುವಷ್ಟು ಇದೆ ಎಂಬುದನ್ನು ಅಲ್ಲಗಳೆಯಲಾಗದು. ಹೆಣ್ಣಿನ ಬಗೆಗಿನ ಪೂರ್ವಗ್ರಹಗಳಿಂದ ಹೊರಬರುವುದು ಜನಸಾಮಾನ್ಯರಿಗೆ ಮಾತ್ರವಲ್ಲ, ಸಮಾಜದಲ್ಲಿ ಉನ್ನತ ಸ್ಥಾನದಲ್ಲಿ ಇರುವವರಿಗೂ ಸಾಧ್ಯವಾಗಿಲ್ಲ. ದೈಹಿಕ ಹಾಗೂ ಬೌದ್ಧಿಕ ಸಾಮರ್ಥ್ಯದಲ್ಲಿ ಪುರುಷನಿಗೆ ಹೆಣ್ಣು ಸಮನಲ್ಲ ಎನ್ನುವ ಯೋಚನೆ 'ಪ್ರಗತಿಪರ' ಎನ್ನಿಸಿಕೊಂಡ ಕೆಲವರ ಮನಸ್ಸಿನಲ್ಲೂ ಅದು ಹೇಗೋ ಗಟ್ಟಿಯಾಗಿ ಕೂತುಬಿಟ್ಟಿದೆ. ರಾಜಕಾರಣಿಗಳು, ಅಧಿಕಾರಿಗಳು ಹಾಗೂ ಸಮಾಜದ ಬೇರೆ ಬೇರೆ ವರ್ಗಗಳ ಪ್ರಜ್ಞಾವಂತರು ಕೂಡ ಹೆಣ್ಣಿನ ಸಾಮರ್ಥ್ಯವನ್ನು ಕಡಿಮೆ ಅಂದಾಜು ಮಾಡುವ ಮಾತುಗಳನ್ನಾಡುತ್ತಾರೆ. ಸಮಾನತೆಯ ಹೋರಾಟದಲ್ಲಿ ಹೆಣ್ಣು ಎದುರಿಸಬೇಕಾದುದು ಎರಡು ಬಗೆಯ ಸವಾಲು. ಮೊದಲನೆಯದು, ತನ್ನ ದುಡಿಮೆ ಅಥವಾ ಚಿಂತನೆಯ ಸಾಮರ್ಥ್ಯವು ಗಂಡಿಗಿಂತಲೂ ಕಡಿಮೆಯದಲ್ಲ ಎಂದು ಮತ್ತೆ ಮತ್ತೆ ಸಾಬೀತುಪಡಿಸಬೇಕಾಗಿರುವುದು. ಮತ್ತೊಂದು, ದೇಹದ ಕಾರಣಕ್ಕಾಗಿ ಎದುರಿಸಬೇಕಾದ ಆತಂಕಗಳನ್ನು ಮೆಟ್ಟಿ ನಿಲ್ಲುವುದು. ಹೆಣ್ಣಿನ ದೇಹ ಹಾಗೂ ಮನಸ್ಸು ಎರಡನ್ನೂ ಗಾಸಿಗೊಳಿಸುವ ಕೆಲಸ ಮನೆಯೊಳಗೆ ಹಾಗೂ ಹೊರಗೆ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ನಡೆಯುತ್ತಲೇ ಇದೆ. ಉದ್ಯೋಗದ ಸ್ಥಳದಲ್ಲಿ ಗಂಡಿಗೆ ಸಹಜವಾಗಿ ದೊರೆಯುವ ಅವಕಾಶ ಮತ್ತು ಆರ್ಥಿಕ ಸವಲತ್ತುಗಳು ಹೆಣ್ಣಿಗೆ ದೊರಕುತ್ತವೆಂದು ಹೇಳುವುದು ಕಷ್ಟ. ಮಹಿಳಾ ಉದ್ಯೋಗಿಗಳ ನೇಮಕಕ್ಕೆ ಈಗಲೂ ಹಿಂಜರಿಯುವ ಔದ್ಯಮಿಕ ಕ್ಷೇತ್ರಗಳಿವೆ. ಕಾನೂನುಬದ್ಧವಾದ ಹೆರಿಗೆ ರಜೆ ನೀಡಲು ಚೌಕಾಸಿ ಮಾಡುವ ಅಧಿಕಾರಿಗಳೂ ಇದ್ದಾರೆ. ರಾಜಕೀಯವಾಗಿಯೂ ಹೆಣ್ಣು ಕಡೆಗಣನೆಗೆ ಒಳಗಾಗಿರುವುದಕ್ಕೆ ಶಾಸನಸಭೆಗಳು ಹಾಗೂ ಸಚಿವ ಸಂಪುಟಗಳು ಜೀವಂತ ಉದಾಹರಣೆಗಳಾಗಿವೆ. ಅಧಿಕಾರ ಸ್ಥಾನಗಳಲ್ಲಿನ ಸ್ತ್ರೀ ಪ್ರಾತಿನಿಧ್ಯದ ಕೊರತೆಯು ಲಿಂಗಭೇದ ಧೋರಣೆ ಹೆಚ್ಚಾಗುವುದಕ್ಕೆ ಪ್ರಮುಖ ಕಾರಣಗಳಲ್ಲೊಂದಾಗಿದೆ.



ಲಿಂಗಭೇದವನ್ನು ಚಿವುಟುವ ಕೆಲಸ ಮನೆಗಳಲ್ಲಿ ಮತ್ತು ಶಾಲೆಗಳಲ್ಲಿ ನಿರಂತರವಾಗಿ ನಡೆಯಬೇಕಾಗಿದೆ

ಗಂಡು– ಹೆಣ್ಣಿನ ಸಮಾನತೆಯ ನಮ್ಮ ಪರಿಕಲ್ಪನೆಗಳು ಮನೆಕೆಲಸ, ದುಡಿಮೆಯ ಸಮಾನ ಅವಕಾಶಗಳು, ಆಸ್ತಿಯ ಹಕ್ಕುಗಳ ಸುತ್ತಲೇ ಗಿರಕಿ ಹೊಡೆಯುತ್ತವೆ. ಸ್ತ್ರೀ ಸಬಲೀಕರಣಕ್ಕೆ ಇವೆಲ್ಲ ಅಗತ್ಯ. ಆದರೆ, ಇವೆಲ್ಲಕ್ಕೂ ಮಿಗಿಲಾದುದು ಹೆಣ್ಣಿನ ಬಗೆಗೆ ಸಮಾಜದ ಯೋಚನಾವಿಧಾನದಲ್ಲಿ ಆಗಬೇಕಿರುವ ಬದಲಾವಣೆ. ಸುಶಿಕ್ಷಿತ ವರ್ಗದಲ್ಲೂ ವರದಕ್ಷಿಣೆ ಕಿರುಕುಳ ಪ್ರಕರಣಗಳು ವರದಿಯಾಗುತ್ತಿವೆ. ಲಿಂಗಸಂವೇದನೆಯ ಸೂಕ್ಷ್ಮಗಳ ಬಗ್ಗೆ ಸಮಾಜದಲ್ಲಿ ಜಾಗೃತಿ ಮೂಡಿಸಬೇಕಾದವರು ಲಿಂಗತಾರತಮ್ಯದ ಮಾತುಗಳನ್ನು ಎಗ್ಗಿಲ್ಲದೆ ಆಡುತ್ತಿದ್ದಾರೆ. ಅತ್ಯಾಚಾರ ಪ್ರಕರಣಗಳ ಕ್ರೌರ್ಯ ನಾಗರಿಕ ಜಗತ್ತನ್ನು ಬೆಚ್ಚಿಬೀಳಿಸುವಂತಿದೆ. ಇಂಥ ಮಾತು, ನಡವಳಿಕೆಗಳು ಸಮಾಜದಲ್ಲಿ ಆಳವಾಗಿ ಬೇರೂರಿರುವ ಪುರುಷ ಯಜಮಾನಿಕೆಯ ಅಹಂಕಾರದ ಉದಾಹರಣೆಗಳಾಗಿವೆ. ಈ ಪುರುಷ ಪೂರ್ವಗ್ರಹಕ್ಕೆ ಉತ್ತರದ ರೂಪದಲ್ಲಿ 'ಸ್ತ್ರೀವಾದ'ದ ತಾತ್ವಿಕತೆ ಸಮಾಜದಲ್ಲಿ ಹಾಸುಹೊಕ್ಕಾಗಬೇಕಾಗಿದೆ. ಸ್ತ್ರೀವಾದ ಎನ್ನುವುದು ಕೆಲವರ ಪಾಲಿಗೆ ವಿನೋದದ ಹಾಗೂ ಉಡಾಫೆಯ ಸಂಗತಿಯಾಗಿದೆ. ಸಮಾಜದಲ್ಲಿ ಹೆಣ್ಣಿಗೆ ಸಮಾನ ಹಕ್ಕುಗಳು ಮತ್ತು ಗೌರವವನ್ನು ಬಯಸುವ ಸಿದ್ಧಾಂತದ ರೂಪದಲ್ಲಿ ಸ್ತ್ರೀವಾದವನ್ನು ಅರ್ಥೈಸಲಾಗುತ್ತದೆ. ಇಂದಿನ ಸ್ತ್ರೀವಾದದ ತಾತ್ವಿಕತೆ ವಿಶಾಲವಾಗಿದ್ದು, ಅದು ಸಾಮಾಜಿಕ ತಾರತಮ್ಯಗಳನ್ನು ಶಮನಗೊಳಿಸುವ ಉದಾತ್ತತೆಯನ್ನು ಒಳಗೊಂಡಿದೆ. ಸಮಾನತೆಯನ್ನು ಬಯಸುವವರ ಪಾಲಿಗೆ ಸ್ತ್ರೀವಾದ ಹಾಗೂ ಮಾನವತಾವಾದ ಒಂದೇ ನಾಣ್ಯದ ಎರಡು ಮುಖಗಳು. ಮಹಿಳೆಯರು ಮಾತ್ರವಲ್ಲ, ಗಂಡಸರು ಕೂಡ ಸ್ತ್ರೀವಾದದ ದಾರಿಯಲ್ಲಿ ನಡೆಯುವುದು ಇಂದಿನ ಅಗತ್ಯ. ಏಕೆಂದರೆ, ಸಮಾಜದಲ್ಲಿ ಆಳವಾಗಿ ಬೇರುಬಿಟ್ಟ ಲಿಂಗಾಧಾರಿತ ಶ್ರೇಣೀಕರಣವನ್ನು ಬದಲಿಸುವುದು ಬರೀ ಹೆಣ್ಣಿನ ಹೊಣೆಗಾರಿಕೆಯಲ್ಲ. ತಾರತಮ್ಯಕ್ಕೆ ಕಾರಣನಾದ ಗಂಡು, ಅದರ ನಿವಾರಣೆಯ ಪ್ರಯತ್ನದಲ್ಲೂ ಮುಂಚೂಣಿಯಲ್ಲಿ ನಿಲ್ಲುವ ನೈತಿಕ ಹೊಣೆಗಾರಿಕೆಯನ್ನು ಪ್ರದರ್ಶಿಸಬೇಕಾಗಿದೆ. ಲಿಂಗಭೇದವನ್ನು ಚಿವುಟುವ ಕೆಲಸ ಮನೆಗಳಲ್ಲಿ ಮತ್ತು ಶಾಲೆಗಳಲ್ಲಿ ನಿರಂತರವಾಗಿ ನಡೆಯುವುದರ ಜೊತೆಗೆ, 'ಮಹಿಳಾ ದಿನ' ಎನ್ನುವುದು ವಾರ್ಷಿಕ ಆಚರಣೆಯಾಗಿ ಸೀಮಿತಗೊಳ್ಳದೆ ದೈನಿಕ ಜೀವನದಲ್ಲಿ ಅನುಷ್ಠಾನಕ್ಕೆ ಬರುವಂತಾಗಬೇಕು. ಆಗಷ್ಟೇ ಆರೋಗ್ಯಕರ ಸಮಾಜದ ಕನಸು ನನಸಾಗುವ ಪ್ರಯತ್ನಕ್ಕೆ ವೇಗ ದೊರೆತೀತು.

ದಿನದ ಟ್ವೀಟ್

ಕೀಳರಿಮೆ ಯಾಕೆ?



ನಾಲ್ಕು ವರ್ಷದ ನನ್ನ ಮಗ ಇಲ್ಲಿ ಟೊರಾಂಟೊದಲ್ಲಿ ಜೂನಿಯರ್ ಕೆ.ಜಿ ಆನ್‌ಲೈನ್ ತರಗತಿಯಲ್ಲಿ ಎಲ್ಲರಿಗೂ ಕನ್ನಡವನ್ನು ಪರಿಚಯಿಸಿದ ಮತ್ತು ನಮಸ್ಕಾರ ಎಂದು ಹೇಳುವುದನ್ನು ಕಲಿಸಿದ. ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಖುಷಿಯಿಂದ ಅದನ್ನು ಪುನರುಚ್ಚರಿಸಿದರು. ಬೆಂಗಳೂರಿನಲ್ಲಿರುವ ಅನೇಕ ಸಿಬಿಎಸ್‌ಇ/ ಕೇಂದ್ರೀಯ ವಿದ್ಯಾಲಯ ಶಾಲೆಗಳು ತರಗತಿಯಲ್ಲಿ ಒಂದೇ ಒಂದು ಕನ್ನಡ ಪದ ಬಳಸುವುದನ್ನು ಸಹ ಕೀಳರಿಮೆ ಎಂದು ಪರಿಗಣಿಸಿವೆ.

ಪ್ರಸನ್ನ ಮಂಜುನಾಥ, ಕೆನಡಾದಲ್ಲಿ ನೆಲೆಸಿರುವ ಕನ್ನಡಿಗ

ಆಯ್ಕೆಗೆ ಅವಕಾಶವಿಲ್ಲ



ನಿಮ್ಮ ಹೇಳಿಕೆಗೆ ನನ್ನ ಸಂಪೂರ್ಣ ಸಹಮತ ಇದೆ ಪ್ರಸನ್ನ ಅವರೆ... ನಮ್ಮ ಬರ್ಲಿಂಗ್ಟನ್ ನಗರಸಭೆಯ ವೆಬ್‌ಸೈಟ್‌ನಲ್ಲಿ ಸಹ ಕನ್ನಡವನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶ ಇದೆ. ಆದರೆ ನಮ್ಮದೇ ಭಾರತೀಯ ಸರ್ಕಾರದ ವೆಬ್‌ಸೈಟ್‌ಗಳಲ್ಲಿ ಕನ್ನಡದ ಆಯ್ಕೆಗೆ ಅವಕಾಶವಿಲ್ಲ. ವೆಬ್‌ಸೈಟ್‌ಗಳ ಅಡ್ಮಿನ್‌ಗಳು ಮತ್ತು ಸಚಿವರಿಗೆ ಹಲವಾರು ಬಾರಿ ಇ ಮೇಲ್ ಮೂಲಕ ಮನವಿ ಮಾಡಿಕೊಂಡಿದ್ದರೂ ಪ್ರಯೋಜನವಾಗಿಲ್ಲ.

ನಿರಂಜನ್ ಚಂದ್ರಯ್ಯ, ಕೆನಡಾದಲ್ಲಿ ನೆಲೆಸಿರುವ ಕನ್ನಡಿಗ

25 ವರ್ಷಗಳ ಹಿಂದೆ

ಶುಕ್ರವಾರ, 8-3-1996

- **2ನೇ ದಿನವೂ ನಿಲ್ಲದ ಗದ್ದಲ ಸಂಸತ್ ಕಲಾಪಕ್ಕೆ ಅಡ್ಡಿ**

ನವದೆಹಲಿ, ಮಾರ್ಚ್ 7 (ಪಿಟಿಐ)– ಹವಾಲ ಹಗರಣ ಕುರಿತಂತೆ ಸುಪ್ರೀಂ ಕೋರ್ಟ್ ನಿರ್ದೇಶನದ ಹಿನ್ನೆಲೆಯಲ್ಲಿ ಪ್ರಧಾನಿ ಪಿ.ವಿ.ನರಸಿಂಹ ರಾವ್ ರಾಜೀನಾಮೆ ಕೊಡಬೇಕು ಎಂದು ಪಟ್ಟುಬಿಡದ ಪ್ರತಿಪಕ್ಷಗಳು ಸತತ ಎರಡನೇ ದಿನವಾದ ಇಂದೂ ಸಂಸತ್ತಿನಲ್ಲಿ ಬಲವಾಗಿ ಒತ್ತಾಯಿಸಿ ಕಲಾಪಕ್ಕೆ ಅವಕಾಶವನ್ನೇ ನೀಡಲಿಲ್ಲ. ಇದರಿಂದಾಗಿ ಎರಡೂ ಸದನಗಳನ್ನು ನಾಳೆಗೆ ಮುಂದೂಡಬೇಕಾಯಿತು.

- **ರೈತರ 215 ಕೋಟಿ ರೂ. ನೀರಾವರಿ ದಂಡ ಮನ್ನಾ**

ಬೆಂಗಳೂರು, ಮಾರ್ಚ್ 7– ರೈತರಿಗೆ ವಿಧಿಸಿರುವ ನೀರಾವರಿ ಕರದ ಮೇಲಿನ ದಂಡ ಶುಲ್ಕ ರೂ. 215 ಕೋಟಿಯನ್ನು ಮನ್ನಾ ಮಾಡುವುದಾಗಿ ಮುಖ್ಯಮಂತ್ರಿ ಎಚ್.ಡಿ.ದೇವೇಗೌಡ ಅವರು ವಿಧಾನ ಪರಿಷತ್ತಿನಲ್ಲಿ ಇಂದು ಘೋಷಿಸಿದರು.

50 ವರ್ಷಗಳ ಹಿಂದೆ

ಸೋಮವಾರ, 8-3-1971

- **ಲೋಕಸಭೆ ಚುನಾವಣೆ ಶಾಂತಿಯುತ**

ಬೆಂಗಳೂರು, ಮಾರ್ಚ್ 7– ರಾಜ್ಯದ 14 ಕ್ಷೇತ್ರಗಳಲ್ಲಿ ಮತದಾನ ಇಂದು ಶಾಂತ ರೀತಿಯಿಂದ ಮುಗಿಯಿತು. ಒಟ್ಟು 27 ಲೋಕಸಭಾ ಕ್ಷೇತ್ರಗಳಲ್ಲೂ ಮಧ್ಯಂತರ ಚುನಾವಣೆಯ ಫಲಿತಾಂಶಕ್ಕಾಗಿ ಕಾಯುವ ತವಕದ ವಾತಾವರಣ ಆವರಿಸಿದೆ.

- **ವಿದ್ಯಾವಂತರ ವಿಶೇಷ ಆಸ್ಥೆ**

ಬೆಂಗಳೂರು, ಮಾರ್ಚ್ 7– ಕೇಂದ್ರದ ಸಚಿವ ಶ್ರೀ ಕೆ.ಹನುಮಂತಯ್ಯ ಹಾಗೂ ಪ್ರೊ. ಗೋಪಾಲಕೃಷ್ಣ ಅಡಿಗರಲ್ಲಿ ಬೆಂಗಳೂರು ಕ್ಷೇತ್ರದ ಮತದಾರರು ಯಾರನ್ನು ಆರಿಸಿದ್ದಾರೆ ಎಂದು ಹೇಳುವುದು ಕಷ್ಟವಾಗಿದೆ.

ವಿದ್ಯಾವಂತ ಮತದಾರರಲ್ಲಿ ಬಹು ಮಂದಿ ಇಂದು ಮತಗಟ್ಟೆಗೆ ಬಂದ ಕಾರಣ 'ನಮ್ಮ ಅಭ್ಯರ್ಥಿ ಅಡಿಗರು ಗೆಲ್ಲುವರು' ಎಂಬ ಆಶಯ ಜನಸಂಘಕ್ಕೆ ಮೂಡಿದೆ.

ಪ್ರಭುತ್ವದ ಒತ್ತಡ, ಜಾತಿ ಸಂಘರ್ಷ, ಭ್ರಷ್ಟಾಚಾರದಲ್ಲಿ ನಲುಗುತ್ತಿದೆ ಗ್ರಾಮೀಣ ಸ್ವಯಂ ಆಡಳಿತ

ಪಂಜರದ ಒಳಗಿನ ಪಂಚಾಯಿತಿ!



ವಿಶ್ಲೇಷಣೆ

ಕೇಶವ ಎಚ್.ಕೊರ್ಸೆ

ಮಲೆನಾಡಿನ ಹಳ್ಳಿಯೊಂದರ ಗ್ರಾಮ ಪಂಚಾಯಿತಿ ಅಧ್ಯಕ್ಷೆಯಾಗಿ ಆಯ್ಕೆಯಾಗಿರುವ ನನ್ನ ಹಳೆಯ ವಿದ್ಯಾರ್ಥಿನಿಯೊಬ್ಬಳು, ಸಂಭ್ರಮ ಹಂಚಿಕೊಳ್ಳಲು ಇತ್ತೀಚೆಗೆ ದೂರವಾಣಿ ಕರೆ ಮಾಡಿದ್ದಳು. ಕಳೆದ ವರ್ಷಾಂತ್ಯಕ್ಕೆ ಜರುಗಿದ ಪಂಚಾಯಿತಿ ಚುನಾವಣೆಯ ಎಡಗೈ ಹೆಬ್ಬೆರಳಿನ ಶಾಯಿಯ ಗುರುತು ಮಾಸುವ ಮುನ್ನವೇ ತೇಲಿಬಂದ ಸಂತಸಭರಿತ ಆಶ್ಚರ್ಯವದಾಗಿತ್ತು.

ಹಳೆಯ ವಿದ್ಯಾರ್ಥಿಗಳ ಯಾವ ಸಾಧನೆಯೂ ಮನ ಹಿಗ್ಗಿಸುವ ಸಂಗತಿಯೇ ಆಗಿರುವಾಗ, ಕೆಳಮಧ್ಯಮ ವರ್ಗದ ಕುಟುಂಬದ ಈ ವಿದ್ಯಾವಂತ ಮಹಿಳೆ ಜನಾಧಿಕಾರದ ಸೂತ್ರ ಹಿಡಿದದ್ದು, ಕೊಂಚ ಹೆಚ್ಚೇ ಸಂಭ್ರಮ ತಂದಿತು. ಆ ಉದ್ವೇಗದಲ್ಲಿ, ಗಾಂಧೀ ಕಲ್ಪನೆಯ ಗ್ರಾಮ ಸ್ವರಾಜ್ಯ ಹಾಗೂ ನಾಗರಿಕ ಸ್ವಯಂ ಆಡಳಿತದ ಆಶಯಗಳನ್ನು ಮರುಕಟ್ಟಬೇಕಾದ ಕುರಿತಂತೆಲ್ಲ ಒಂದೇ ಉಸಿರಿನಲ್ಲಿ ಇನ್ನೇನು ಉಪದೇಶಿಸಲಿದ್ದೆ! ಆದರೆ ಆ ಕ್ಷಣಕ್ಕೆ, ಪಂಚಾಯಿತಿ ಆಡಳಿತ ತತ್ವದ ಆಚಾರ್ಯರೆಂದೇ ಗೌರವಿಸಲ್ಪಡುವ ಡಾ. ಬಿ.ಎಸ್.ಭಾರ್ಗವ ಅವರು ಸುಮಾರು ಎರಡು ದಶಕಗಳ ಹಿಂದೆಯೇ ಬಲವಾಗಿ ಪ್ರತಿಪಾದಿಸುತ್ತಿದ್ದ ಮಾತೊಂದು ನೆನಪಾಯಿತು. 'ಪಂಚಾಯತಕ್ಕೆ ಪ್ರಭುತ್ವದ ಲಗಾಮು ಹಾಗೂ ಪರಿಣತರ ಉಪದೇಶವೇ ಉರುಳಾಗಬಾರದು. ಸ್ವತಂತ್ರವಾಗಿ ಕೆಲಸ ಮಾಡುವ ಅದರ ಹಕ್ಕನ್ನು ಮೊದಲು ಹಿಂತಿರುಗಿಸಬೇಕು!' ಈಗ ಆಕೆಯ ಮೇಲಿರಬಹುದಾದ ಬೆಟ್ಟದಷ್ಟು ನಿರೀಕ್ಷೆಗಳ ಅರಿವಾಗಿ, ಶುಭ ಹಾರೈಸಿ ಮಾತು ಮುಗಿಸಿದೆ.

ಸುಮಾರು ಐದೂ ಮುಕ್ಕಾಲು ಸಾವಿರ ಗ್ರಾಮ ಪಂಚಾಯಿತಿಗಳಲ್ಲಿ ಮೊನ್ನೆ ಆರಿಸಿಬಂದ ಹೊಸ ಪ್ರತಿನಿಧಿಗಳ ಮೇಲೆ ಜನಸಾಮಾನ್ಯರ ನಿರೀಕ್ಷೆಯ ಅಂಥ ಭಾರವಿದೆ. ಸಂವಿಧಾನ ಸಾಧಿಸಿದ ಸಾಮಾಜಿಕನ್ಯಾಯ ತತ್ವದಿಂದಾಗಿ, ಸಮಾಜದ ಬಹುಪಾಲು ಸ್ತರಗಳ ಪ್ರಾತಿನಿಧ್ಯ ಸಾಧ್ಯವಾಗಿರುವ ಕಾಲವಿದು. ಸಂವಿಧಾನದ 1993ರ 73ನೇ ತಿದ್ದುಪಡಿಯು ದೇಶದೆಲ್ಲೆಡೆ ಜಾರಿಗೆ ಬಂದ ಪಂಚಾಯಿತಿ ವ್ಯವಸ್ಥೆಗಿಂತ ಮೊದಲೇ ಪ್ರಜಾಪ್ರಭುತ್ವದ ವಿಕೇಂದ್ರೀಕರಣಕ್ಕೆ ಮುಂದಡಿಯಿಟ್ಟ ಹೆಮ್ಮೆ ಕರ್ನಾಟಕದ್ದು.

ಮೂರೂವರೆ ದಶಕಗಳಿಗೂ ಹೆಚ್ಚಿನ ಕಾಲದ ಈ ಗ್ರಾಮಾಡಳಿತದ ಅನುಭವ ನಾಡಿನ ಜನರಿಗಿದೆ. ಹೀಗಾಗಿ, ಒಂದು ಹಂತಕ್ಕೆ ಮಾಗಿರುವ ಪಂಚಾಯಿತಿ ವ್ಯವಸ್ಥೆಯ ಪ್ರಸಕ್ತ ಸಾಮರ್ಥ್ಯ ಹಾಗೂ ಮಿತಿಗಳನ್ನು ಅರ್ಥೈಸಿಕೊಳ್ಳಲೇಬೇಕಾದ ಅಗತ್ಯವಿದೆ ಈಗ. ಕನಿಷ್ಠ, ಮುಂದಿನ ಐದು ವರ್ಷದ ಆಡಳಿತವನ್ನು ಪರಿಣಾಮಕಾರಿಯಾಗಿಸುವ ಸೀಮಿತ ಉದ್ದೇಶಕ್ಕಾದರೂ ಅಂಥದ್ದೊಂದು ಆತ್ಮಾವಲೋಕನ ಬೇಕಲ್ಲವೇ?

ಕೇಂದ್ರೀಯ ಹಣಕಾಸು ಆಯೋಗಗಳ ಸತತ ನಿರ್ದೇಶನದಿಂದಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಗ್ರಾಮ ಪಂಚಾಯಿತಿಗಳಿಗೆ ಹರಿದು ಬರುವ ಅನುದಾನ ಪ್ರತಿವರ್ಷ ಹೆಚ್ಚಾಗುತ್ತಿದೆ. ಹಳ್ಳಿಗಳ ಮಹಿಳೆಯರು, ದೀನರು ಸಹ ಚುನಾಯಿತರಾಗಿ ಅಧಿಕಾರ ರಾಜಕಾರಣದ ಮುನ್ನೆಲೆಗೆ ಬಂದಿರುವುದನ್ನು, ಪಂಚಾಯಿತಿ ಸಬಲೀಕರಣವೆಂದು ರಾಜಕೀಯ ಪಕ್ಷಗಳು ನಿರೂಪಿಸುತ್ತಿವೆ. ಹೆಚ್ಚುತ್ತಿರುವ ಅನುದಾನದ ಗಾತ್ರ ಹಾಗೂ ಯೋಜನೆಗಳ ವೈವಿಧ್ಯ ಕಂಡು, ಪಂಚಾಯಿತಿಗಳ ಬಲವರ್ಧನೆಯಾಗುತ್ತಿದೆ ಎಂದು ಹಲವಾರು ತಜ್ಞರು ನಂಬಲು ಬಯಸುತ್ತಾರೆ. ಆದರೆ, ತಳಮಟ್ಟದ ಅಧ್ಯಯನಗಳು ಮಾತ್ರ ಭಿನ್ನ ವಾಸ್ತವವನ್ನೇ ತೆರೆದಿಡುತ್ತಿವೆ.

ವ್ಯಾಪಕವಾಗುತ್ತಿರುವ ಚುನಾವಣಾ ಅಪರಾಧ, ಸರ್ಕಾರಿ ಅನುದಾನದ ಭಾರಿ ದುರುಪಯೋಗ, ಕಳಪೆ ಕಾಮಗಾರಿಗಳು, ಸರ್ಕಾರದ ಆಸರೆ ಬೇಕಿರುವ ನೈಜ ಅರ್ಹರನ್ನು ತಲುಪದ ಯೋಜನೆಗಳು- ಇವೆಲ್ಲ, ಗ್ರಾಮ ಪಂಚಾಯಿತಿಗಳು ಹಣ-ಜಾತಿಗಳ ಪ್ರಭಾವದಲ್ಲಿ ಕರಗಿ ಪ್ರಜಾಪ್ರಭುತ್ವದ ಕಾವು ಕಳೆದುಕೊಳ್ಳುತ್ತಿರುವುದರ ಸ್ಪಷ್ಟ ಸಂಕೇತ ನೀಡುತ್ತಿವೆ.

ಪಂಚಾಯಿತಿ ವ್ಯವಸ್ಥೆಯನ್ನು ಬಳಲಿಸುತ್ತಿರುವ ನಾಲ್ಕು ಬಗೆಯ ಸಂಕೋಲೆಗಳನ್ನು ಗುರುತಿಸಬಹುದು. ಒಂದು, ಅತಿಯಾಗುತ್ತಿರುವ ಪಕ್ಷರಾಜಕೀಯ. ಗ್ರಾಮ ಪಂಚಾಯಿತಿಗಳು ಇದರಿಂದ ಮುಕ್ತವಿರಬೇಕೆಂಬುದು ನೀತಿಯಾಗಿದ್ದರೂ ಚುನಾವಣೆಗಳಿಂದ ಮೊದಲ್ಗೊಂಡು ಪ್ರತಿಕಾರ್ಯವೂ ರಾಜಕೀಯ ಪಕ್ಷಗಳ ನೀತಿ-ನಿರ್ದೇಶನದ ಅನ್ವಯವೇ ಸಾಗುತ್ತಿರುವುದು ಸತ್ಯವಲ್ಲವೇ? ಶಾಸಕರು, ಸಂಸದರು ಹಾಗೂ ಸಚಿವರನ್ನೊಳಗೊಂಡಂತೆ, ಮೇಲುಸ್ತರದ ಶಾಸಕಾಂಗದ ಆಣತಿಗನುಗುಣವಾಗಿಯೇ ಸಾಗಬೇಕಿರುವ ಅನಿವಾರ್ಯದಿಂದಾಗಿ, ನಿಜಕ್ಕೂ ಇಂದು ವಿಕೇಂದ್ರೀಕರಣವಾಗಿರುವುದು ಅಧಿಕಾರ ರಾಜಕಾರಣದ ಸಂಸ್ಕೃತಿ ಮಾತ್ರ.

ಎರಡನೆಯದು, ಅಧಿಕಾರವನ್ನು ಬಿಟ್ಟುಕೊಡಲು ಒಪ್ಪದ ಕಾರ್ಯಾಂಗ. ಪ್ರತಿದಿನವೂ ಒಂದಲ್ಲ ಒಂದು ಸುತ್ತೋಲೆಯನ್ನು ಹೊರಡಿಸುತ್ತ, ಪಂಚಾಯಿತಿಗಳು ಸ್ವತಂತ್ರವಾಗಿ ಚಿಂತಿಸುವ ಹಾಗೂ ಕೆಲಸ ಮಾಡುವ ಸಾಧ್ಯತೆಗಳನ್ನೇ ನಿರಾಕರಿಸುತ್ತಿದೆ. ಮೂರನೆಯದು, ನೀಡಿದ ಅನುದಾನವನ್ನು ಖರ್ಚು ಮಾಡುವುದೇ 'ಸಾಧನೆ' ಎಂಬ ಸರ್ಕಾರಿ ಅಳತೆಗೋಲನ್ನು ಪಂಚಾಯಿತಿಗಳ ಮೇಲೂ ಹೇರಿರುವುದು. ತಮ್ಮೂರಿನ ನಿಜವಾದ ಅಗತ್ಯಗಳನ್ನು ಗುರುತಿಸಿ, ಸೂಕ್ತ ಯೋಜನೆಗಳನ್ನು ರೂಪಿಸಿ ಅನುದಾನ ಕ್ರೋಡೀಕರಿಸುವ ಬದಲು, ಮೇಲಿಂದ ಹರಿದುಬರುವ ಹಣದ ಧಾರೆಗೆ ಇಲ್ಲಿ ಯೋಜನೆಗಳನ್ನು ಜೋಡಿಸುವ ವಿಕೃತಿ ವಿಪರೀತವಾಗುತ್ತಿದೆ. ಕೊನೆಯದಾಗಿ, ನೈಜ ಜನಾಧಿಕಾರ ಹಾಗೂ ಸ್ವಯಂ ಆಡಳಿತದ ಆಶಯಗಳೇ ಕಮರಿರುವುದು.



ನಿಯಮಿತವಾಗಿ ಗ್ರಾಮಸಭೆಗಳು ಜರುಗಿ, ಸಮುದಾಯದ ಆಶೋತ್ತರಗಳಿಗೆ ಸ್ವತಂತ್ರವಾಗಿ ಸ್ಪಂದಿಸಬೇಕಾದದ್ದು ಪಂಚಾಯಿತಿಗಳ ಅಂತಃಸತ್ವವಾಗಬೇಕಿತ್ತು. ಆದರೆ, ಪಂಚಾಯಿತಿಗಳ ಗ್ರಾಮಸಭೆ, ಮಾಸಿಕಸಭೆ, ಸ್ಥಾಯಿ ಸಮಿತಿಗಳ ಕಾರ್ಯವಿಧಾನ, ಅಭಿವೃದ್ಧಿ ಯೋಜನೆಗಳ ಅನುಷ್ಠಾನ- ಎಲ್ಲೆಲ್ಲೂ ತಳಮಟ್ಟದ ಜನಧ್ವನಿಗೆ ಆಸ್ಪದ ಇಲ್ಲವಾಗುತ್ತಿದೆ. ಅಧಿಕಾರ ರಾಜಕಾರಣದ ಚಹರೆಗಳನ್ನೆಲ್ಲ ಆಹ್ವಾನಿಸಿಕೊಂಡು, ಅಧಿಕಾರ ಕೇಂದ್ರಗಳ ಆದೇಶ ಪಾಲಿಸಲು ಕಾದಿರುವ ಶಾಖೆಗಳಂತೆ ಪಂಚಾಯಿತಿಗಳು ತೋರುತ್ತಿವೆ!

ಪರಿಣಾಮವೇನಾಗುತ್ತಿದೆ? ಗ್ರಾಮ ಪಂಚಾಯಿತಿಗೆ ಒಮ್ಮೆ ಭೇಟಿ ನೀಡಿದರೆ ಅರಿವಾಗುತ್ತದೆ. ವಾಸ್ತವ್ಯದ ಮನೆ, ಕುಡಿಯುವ ನೀರು, ರಸ್ತೆ ಸಂಪರ್ಕ ಇತ್ಯಾದಿ ಪ್ರಾಥಮಿಕ ಅಗತ್ಯಗಳಿಗೂ ಅರ್ಹರು ವರ್ಷಾನುಕಾಲ ಅಲೆಯಬೇಕು. ಕಾಡು, ಕೆರೆಯಂಗಳ, ಗೋಮಾಳ ಇತ್ಯಾದಿ ಸಮುದಾಯ ಆಸ್ತಿಗಳ ಅತಿಕ್ರಮಣ, ಕೆರೆ-ಬಾವಿ, ಹೊಳೆಗಳ ಮಾಲಿನ್ಯ ಇತ್ಯಾದಿಗಳಿಗೆ ಪಂಚಾಯಿತಿಗಳು ಕುರುಡಾಗುತ್ತಿವೆ. ಗ್ರಾಮಸ್ಥರ ಸುಸ್ಥಿರ ಜೀವನೋಪಾಯ ಸಾಧಿಸುವ ಸಂಜೀವಿನಿಯಾಗಬೇಕಿದ್ದ ನರೇಗಾದಂಥ ಯೋಜನೆಯು ತಳಮಟ್ಟದ ಭ್ರಷ್ಟಾಚಾರಕ್ಕೆ ರೂಪಕವಾಗುತ್ತಿದೆ! ಅಭಿವೃದ್ಧಿಯ ಹೆಸರಿನಲ್ಲಿ ಮೇಲಿನಿಂದ ಹೇರಲ್ಪಡುತ್ತಿರುವ ಭಾರಿ ಹಣ ಬೇಡುವ ಯೋಜನೆಗಳು ತಮಗೆ ಬೇಕೇ ಬೇಡವೇ ಎಂದು ನಿರ್ಧರಿಸುವ ಸ್ವಾತಂತ್ರ್ಯವನ್ನೂ ಪಂಚಾಯಿತಿಗಳು ಕಳೆದುಕೊಳ್ಳುತ್ತಿವೆ. ಅಧಿಕಾರಸ್ಥರ ಕೃಪೆಯಿಂದಾಗಿ ದೊರಕುವ ತುಂಡು ಕಾಮಗಾರಿಗಳ ಗುತ್ತಿಗೆ ಪಡೆಯಲೆಂದೇ ಕಾದಿರುವ ಹೊಸ ಉದ್ಯಮವರ್ಗವೊಂದು ಪ್ರತೀ ಪಂಚಾಯಿತಿಯಲ್ಲೂ ಸೃಷ್ಟಿಯಾಗುತ್ತಿದೆ. ಈ ಹೊಸ ವರ್ಗವೇ ಪಂಚಾಯಿತಿಗಳ ಸ್ವರೂಪ ಹಾಗೂ ಕಾರ್ಯವಿಧಾನಗಳನ್ನು ನಿರ್ಧರಿಸುವಷ್ಟು ಶಕ್ತಿಶಾಲಿಯಾಗುತ್ತಿದೆ. ಪ್ರಜಾಪ್ರಭುತ್ವದ ಮೂಲಮೌಲ್ಯಗಳನ್ನೇ ಅಣಕಿಸುತ್ತಿರುವ ಈ ಕಟುವಾಸ್ತವವು ವಿಷಾದದ ಸಂಗತಿಯಲ್ಲದೆ ಇನ್ನೇನು?

ಸ್ವಾತಂತ್ರ್ಯೋತ್ತರ ಕಾಲದ ಪ್ರಮುಖ ಗಾಂಧಿವಾದಿ ಚಿಂತಕರಾದ ಧರ್ಮಪಾಲರ ಜನ್ಮಶತಾಬ್ದಿ ವರ್ಷವಿದು. ವಸಾಹತುಪೂರ್ವದಲ್ಲಿ ದೇಶದಲ್ಲಿದ್ದ ಸಶಕ್ತ ಪಂಚಾಯಿತಿ ವ್ಯವಸ್ಥೆಯನ್ನು ಬ್ರಿಟಿಷ್ ಆಡಳಿತ ಹೇಗೆ ಹಂತಹಂತವಾಗಿ ಸಾಯಿಸಿತು ಎಂಬುದನ್ನು ಲಂಡನ್ನಿನ ಅಂಕಿ-ಅಂಶಗಳ ಮೂಲಕವೇ ಜಗದ ಮುಂದಿಟ್ಟ ಅವರ ಕೃತಿಗಳ ಮರುಓದಿಗೆ ಪ್ರೇರೇಪಿಸುವ ಅಗತ್ಯ ಕಾಣುತ್ತಿದೆ. ಏಕೆಂದರೆ, ಪ್ರಜಾಪ್ರಭುತ್ವವೇ ರೂಪಿಸಿರುವ ಇಂದಿನ ದೇಶಿ ಸರ್ಕಾರಗಳು ಇಂಗ್ಲಿಷರ ಆಡಳಿತ ವೈಖರಿಯನ್ನೂ ನಾಚಿಸುವ ರೀತಿಯಲ್ಲಿ ತಮ್ಮದೇ ಜನರ ಸ್ಥಳೀಯ ಸರ್ಕಾರಗಳ ಸ್ವಯಂ ಆಡಳಿತ ಸಾಮರ್ಥ್ಯವನ್ನು ಕರಗಿಸುತ್ತಿವೆ; ಅವನ್ನು ತಮ್ಮ ಅಡಿಯಾಳಾಗಿಸಿಕೊಳ್ಳುತ್ತಿವೆ!

ವರ್ತಮಾನದ ಸವಾಲುಗಳನ್ನೆಲ್ಲ ಮೀರಿ ನಿಂತು, ತಮ್ಮ ಕಾರ್ಯಕ್ಷಮತೆ ಹಾಗೂ ಜನಪರತೆ ಮೂಲಕವೇ ಸರ್ವರ ಸುಸ್ಥಿರ ಅಭಿವೃದ್ಧಿ ಸಾಧಿಸುವ ಹೊಣೆಗಾರಿಕೆಯು ಈಗಷ್ಟೇ ಗ್ರಾಮ ಪಂಚಾಯಿತಿಗಳ ಅಧಿಕಾರಸೂತ್ರ ಹಿಡಿದಿರುವ ಮಲೆನಾಡಿನ ಆ ಮಹಿಳೆಯಂಥ ಸಾವಿರಾರು ಯುವ ಜನಪ್ರತಿನಿಧಿಗಳ ಮೇಲಿದೆ. ಯಾವಾಗಲೂ ಮುಂದಿನ ತಲೆಮಾರು ಹೆಚ್ಚು ಸಮರ್ಥವಿರಬಲ್ಲದೆಂಬ ಲಾಗಾಯ್ತಿನ ಮಾತಿನಲ್ಲಿ ನಂಬಿಕೆ ಇಡೋಣವೇ?

ಲೇಖಕ: ನಿರ್ದೇಶಕ, ಸಂರಕ್ಷಣಾ ಜೀವಶಾಸ್ತ್ರ ಮತ್ತು ಸುಸ್ಥಿರ ಅಭಿವೃದ್ಧಿ ಅಧ್ಯಯನ ಕೇಂದ್ರ, ಶಿರಸಿ

ಚುರುಮುರಿ



ಮಹಿಳಾ ದಿನಾಚರಣೆ

• ಸುಮಂಗಲಾ

ಬೆಳಗ್ಗೆ ಎದ್ದು ಬರುತ್ತಿದ್ದಂತೆ ಕೈಗೊಂದು ಗುಲಾಬಿ ತುರುಕಿದ ಬೆಕ್ಕಣ್ಣ 'ಹ್ಯಾಪಿ ವುಮನ್ಸ್ ಡೇ' ಎಂದು ಕಕ್ಕುಲಾತಿಯಿಂದ ವಿಶ್ ಮಾಡಿತು.

'ವರ್ಷಕ್ಕೊಮ್ಮೆ ವುಮನ್ಸ್ ಡೇ ಮಾಡಿ ಕೈತೊಳ್ಕೊಂಡ್ರಾತೇನು... ಇಡೀ ವರ್ಷ ನಿಮ್ಮದೇ ಇರ್ತದ' ನಾನು ಕುಟುಕಿದೆ.

'ಎಲ್ಲಿ ನಮ್ಮದಿರ್ತದ... ಮಕ್ಕಳ ದಿನಾಚರಣೆಯಿಂದ ಹಿಡಿದು ಮದರ್ಸ್ ಡೇ, ಫಾದರ್ಸ್ ಡೇವರೆಗೆ ಎಲ್ಲಾರಿಗೂ ಒಂದೊಂದು ದಿನ ಸೆಲೆಬ್ರೇಟ್ ಮಾಡತೀರಿ. ಪಾಪ... ಗಂಡಸರಿಗಿ ಮೆನ್ಸ್ ಡೇ ಅಂತ ಎಲ್ಲೈತಿ? ಒಮ್ಮೆಯಾದ್ರೂ ನೀವು ಹೆಣಮಕ್ಕಳು ಮೆನ್ಸ್ ಡೇ ಆಚರಣೆ ಮಾಡಿ, ಗುಲಾಬಿ ಕೊಟ್ಟೀರೇನ್... ವರ್ಷಿಡೀ ಅವರಿಗಿ ಬ್ಯಾರೆಯವ್ರ ದಿನಾಚರಣೆ ಆಚರಿಸೂದೆ ಆಗತದ' ಬೆಕ್ಕಣ್ಣ ಸಮಸ್ತ ಪುರುಷಮಣಿಗಳ ಪರವಾಗಿ ವಾದ ಶುರು ಮಾಡಿತು.

'ಆಚರಿಸೂದೇನ್ ಮಣ್ಣಾಂಗಟ್ಟಿ. ನ್ಯಾಷನಲ್ ಕ್ರೈಮ್ ದಾಖಲೆ ನೋಡೀಯಿಲ್ಲೋ... ದಿನದಿಂದ ದಿನಕ್ಕ ಹೆಣಮಕ್ಕಳ ಮ್ಯಾಗೆ ದೌರ್ಜನ್ಯ, ಅತ್ಯಾಚಾರ ಹೆಚ್ಚಾಗ್ತಲೇ ಹೋಗ್ಯೆತಿ, ಎಲ್ಲಾ ದಿನಗೋಳು ಮೆನ್ಸ್ ಡೇ ಅಂತ ಅವರು ಅಟ್ಟಹಾಸ ಮಾಡಿದಂಗೆ ಆತಿಲ್ಲೋ'.

'ನೀ ಹಂಗ ಸಾರಾಸಗಟಾಗಿ ಎಲ್ಲಾ ಗುಡಿಸಿ ಹಾಕಬ್ಯಾಡ ನೋಡು'.

'ಇನ್ನೇನ್ ಮತ್ತ, ಪ್ರಗತಿ ಚಕ್ರ ಮುಂದ್ ಅಲ್ಲ, ಭಾಳ ಹಿಂದ ಹೋಗಾಕೆಹತ್ತೈತಿ ಅಂತರ್ಥ...'

'ಎಲ್ಲಾ ವಿಚಾರದಾಗೆ ಚಕ್ರ ಹಿಂದ್ ಹೋಗಾಕೆ ಹತ್ತಿಲ್ಲ. ದೆಹಲಿವಳಗ ರೈತ ಚಳವಳಿಯಿಂದ ಹಿಡಿದು ಮಂಗಳನ ಮ್ಯಾಗೆ ಇಳಿಸಿದ ಪರ್ಸಿವಿಯರೆನ್ಸ್ ನೌಕೆಯ ಪಥ ನಿಯಂತ್ರಣದವರೆಗೆ ಎಲ್ಲದರಾಗೆ ಮಹಿಳೆಯರೇ ಮುಖ್ಯ ಪಾತ್ರ ವಹಿಸ್ಯಾರೆ. ಈಗ ಜಗಳಾ ಎದಕ್ಕ... ಇವತ್ ನಾನೇ ಚಾ ಮಾಡಿಕೊಡ್ತೀನಿ' ಜಾಣ ಬೆಕ್ಕಣ್ಣ ಮಾತು ಬದಲಿಸಿ ಅಡುಗೆ ಮನೆಗೆ ಓಡಿತು!

ಸಂಗತ

ಕತ್ತಲ ಲೋಕದ ಗೌರವಾರ್ಹರು

ಮಹಿಳಾ ದಿನದಂದು ನಾವು ನಿಜವಾಗಿ ನೆನಪು ಮಾಡಿಕೊಳ್ಳಬೇಕಾದುದು, ದನಿಯಿಲ್ಲದ, ಸಮಾಜದ ಮುಖ್ಯವಾಹಿನಿಯನ್ನು ಇನ್ನೂ ತಲುಪದ ಲೈಂಗಿಕ ಕಾರ್ಯಕರ್ತೆಯರನ್ನು

• ಡಾ. ಜ್ಯೋತಿ

ವಿಶ್ವ ಮಹಿಳಾ ದಿನದ ನೆಪದಲ್ಲಿ, ಈ ಆಚರಣೆ ಮತ್ತು ಅರಿವಿನ ಪರಿಧಿಯೊಳಗೆ ಯಾವೆಲ್ಲಾ ವರ್ಗದ ಮಹಿಳೆಯರಿದ್ದಾರೆ ಮತ್ತು ಹೊರಗೆ ಇನ್ನೂ ಎಷ್ಟು ಜನರಿದ್ದಾರೆಂದು ಕಾಲಕಾಲಕ್ಕೆ ವಿಶ್ಲೇಷಿಸುವ ಅಗತ್ಯವಿದೆ. ಸಾವಿರಾರು ವರ್ಷಗಳಿಂದಲೂ ನಡೆದು ಬಂದಿರುವ ಪದ್ಧತಿಯಂತೆ, ಮಹಿಳಾ ಹಕ್ಕುಗಳ ಚೌಕಟ್ಟಿನ ಹೊರಗಿದ್ದು, ಹಗಲಲ್ಲಿ ಅಸ್ಪೃಶ್ಯರಂತೆ ಪರಿಗಣಿಸಲ್ಪಟ್ಟ, ಆದರೆ ಕತ್ತಲ ಜಗತ್ತಿನ ಅನಿವಾರ್ಯ ಭಾಗವಾಗಿರುವ ಒಂದು ವರ್ಗದ ಮಹಿಳೆಯರೆಂದರೆ, ಲೈಂಗಿಕ ಕಾರ್ಯಕರ್ತೆಯರು.

ಈ ಅನಿಷ್ಟ ವೃತ್ತಿಯನ್ನು ಕೊನೆಗಾಣಿಸುವ ಯಾವುದೇ ಮುನ್ಸೂಚನೆಯಂತೂ ಕಾಣಿಸುತ್ತಿಲ್ಲ. ಆದರೆ, ಕಾನೂನಿನ ಪರಿಧಿಯೊಳಗೆ ತರುವ ಪ್ರಯತ್ನಗಳು ನಡೆಯುತ್ತಿವೆ. ಮಹಿಳಾ ಸಬಲೀಕರಣದ ದೃಷ್ಟಿಯಿಂದ ಇದೊಂದು ಗುಣಾತ್ಮಕ ಬೆಳವಣಿಗೆಯೇನಲ್ಲ. ಮಹಿಳೆಯ ದೇಹವನ್ನು ಭೋಗದ ವಸ್ತುವಾಗಿ ಪರಿಗಣಿಸುವ ಈ ವೃತ್ತಿಗೆ ಕಾನೂನಿನ ಬೆಂಬಲ ಕೊಡುವ ಬದಲಾಗಿ, ಸಂಪೂರ್ಣವಾಗಿ ಕೊನೆಗಾಣಿಸಬೇಕಾದ ಅಗತ್ಯವಿದೆ.

ಮೊದಲನೆಯದಾಗಿ, ಲೈಂಗಿಕ ಕಾರ್ಯಕರ್ತೆಯರಿಲ್ಲದ ಸಮಾಜವಿಲ್ಲವೆಂದು ಹೇಳಬಹುದು. ಆದರೆ, ಅವರದ್ದು ಯಾವಾಗಲೂ ಕತ್ತಲಿನ, ಮೌನದ ಪ್ರಪಂಚ. ಅವಳ ನಿಯಂತ್ರಣ ಸಂಪೂರ್ಣ ತಪ್ಪಿದ, ಮನುಷ್ಯ ಸಂಬಂಧಗಳ ಆಚೆಯ ಮತ್ತು ಸಮಾಜದ ಪರಿಧಿಯ ಹೊರಗಿನ ಅಸ್ತಿತ್ವವಿದು. ಇಲ್ಲಿ ಹೆಣ್ಣು ಕೇವಲ ಆಸೆ ಪೂರೈಸುವ ವಸ್ತುವಾಗುತ್ತಾಳೆ. ಅವಳ ದೇಹದೊಂದಿಗೆ ನಡೆಯುವ ಕ್ರಿಯೆಗೆ, ಮನಸ್ಸು ಬೆರೆತು ಹೋಗದಂತೆ ಎಚ್ಚರ ಕಾಯ್ದುಕೊಳ್ಳುವುದು ಅವಳ ಜವಾಬ್ದಾರಿ. ಮನಸ್ಸು ಒಪ್ಪಿಸಿಬಿಟ್ಟರೆ, ದೇಹದ ವ್ಯಾಪಾರ ಹೇಗೆ ಸಾಧ್ಯವಾಗುತ್ತದೆ?

ಹೆಚ್ಚಾಗಿ ಪುರುಷ ಕೊಡುವ ಸಮಜಾಯಿಷಿಯೆಂದರೆ, ತನ್ನ ಸಂಗಾತಿಯಿಂದ ದೊರಕದ ವಿಚಿತ್ರ ಆಸೆಗಳನ್ನು ತೀರಿಸಿಕೊಳ್ಳಲು ಹಣ ಚೆಲ್ಲಿ ಪಡೆಯುವ ವ್ಯಾಪಾರವಿದು. ದುಡ್ಡಿನ ಅಹಂಕಾರವೂ ಸೇರಿರುವುದರಿಂದ, ಇಲ್ಲಿ ಹೆಣ್ಣಿನ ದೇಹಕ್ಕಾಗುವ ದೈಹಿಕ ಮತ್ತು ಮಾನಸಿಕ ಗಾಸಿಗೆ ಬೆಲೆಯಿಲ್ಲ. ಬೆಡ್‌ರೂಮಿನಲ್ಲಿ ಸಿಗದ ಆಪ್ತತೆ ಮತ್ತು ಪ್ರೀತಿ ಇಲ್ಲಿ ಸಿಗುತ್ತದೆಯೆನ್ನುವ ಭ್ರಮೆಯಲ್ಲಿ ಇಲ್ಲಿಗೆ ಭೇಟಿ ನೀಡುವುದನ್ನು ಸಮರ್ಥಿಸುವ ಗಂಡಸರನ್ನು ನಾವು ಕಾಣುತ್ತೇವೆ.

ವಿಚಿತ್ರವೆಂದರೆ, ಲೈಂಗಿಕ ಕಾರ್ಯಕರ್ತೆಯ ಆಪ್ತ ನಡವಳಿಕೆ ಸಹಜವಲ್ಲ, ಭಯ ಮತ್ತು ತರಬೇತಿಯಿಂದ ಸೃಷ್ಟಿಯಾದುದು. ಇಲ್ಲಿ ಮುಖಾಮುಖಿಯಾಗುವ ಹೆಣ್ಣಿನ ಮನಸ್ಸು ಎಂದೋ ಕಲ್ಲಾಗಿ ಹೋಗಿದೆ. ಮಾತ್ರವಲ್ಲ, ಹೆಣ್ಣಿನ ಸಹಜ ಸ್ಥಿತಿ, ಮುಕ್ತ ಪರಿಸರದಲ್ಲಷ್ಟೇ ಕಾಣ ಸಿಗುತ್ತದೆ, ಇಂತಹ ನಿಯಂತ್ರಣದ ವಾತಾವರಣದಲ್ಲಲ್ಲ ಎನ್ನುವ ಸತ್ಯ ಅರಿವಿಗೆ ಬರುವುದಿಲ್ಲ.

ದುಡ್ಡಿನ ಅಹಂಕಾರದ ಮೂಲಕ ಹೆಣ್ಣಿನ ದೇಹದ ಒಡೆತನ ಪಡೆಯುವುದು ತನ್ನ ಹಕ್ಕೆಂದು ಪರಿಭಾವಿಸುವ ಪುರುಷನಿಗೆ, ಸೆಕ್ಸ್ ಒಂದು ದೈಹಿಕ ಕ್ರಿಯೆಯಾಗಿಯಷ್ಟೇ ಕಾಣಿಸುತ್ತದೆ. ಇಲ್ಲಿ ಮುಖಾಮುಖಿಯಾಗುವ ಹೆಣ್ಣಿಗೆ ಮನಸ್ಸೊಂದಿದೆ, ಬಹುಶಃ ಇದು ಅವಳ ಇಷ್ಟದ ವೃತ್ತಿಯಾಗಿರಲಿಕ್ಕಿಲ್ಲ, ಜೊತೆಗೆ, ಅವಳು ತನ್ನ ದೈಹಿಕ ಗ್ರಾಹಕರೆದುರು ಪ್ರದರ್ಶಿಸುವ ನಗು, ಒಲವು ಅಥವಾ ಹಾಸ್ಯಪ್ರಜ್ಞೆ ಸ್ವಂತದ್ದಲ್ಲ, ಬದಲಾಗಿ, ಅವಳನ್ನು ನಿಯಂತ್ರಿಸುವ ಶಕ್ತಿಗಳ ಹಿಡಿತದಲ್ಲಿದೆಯೆನ್ನುವುದು ಗಮನಕ್ಕೆ ಬಾರದೇ ಹೋಗಬಹುದು.

2020ರ ಅಂಕಿಅಂಶದ ಪ್ರಕಾರ, ಭಾರತದಲ್ಲಿ ಸುಮಾರು 8 ಲಕ್ಷ ಲೈಂಗಿಕ ಕಾರ್ಯಕರ್ತೆಯರಿದ್ದಾರೆ. ಗಣತಿಗೆ ಸಿಗದ ಸಂಖ್ಯೆ ಇನ್ನೂ ದೊಡ್ಡದಿದೆ. ಇವರಲ್ಲಿ ಶೇ 95ರಷ್ಟು ಮಹಿಳೆಯರು ಬಲವಂತವಾಗಿ ಈ ವೃತ್ತಿಗೆ ತಳ್ಳಲ್ಪಟ್ಟವರು. ಮಾನಸಿಕ ಸ್ಥಿತಪ್ರಜ್ಞೆ ಮತ್ತು ಸ್ವಅರಿವು ಕಂಡುಕೊಂಡ ಯಾವ ಹೆಣ್ಣುಮಕ್ಕಳೂ ಈ ವೃತ್ತಿಯನ್ನು ಆಯ್ಕೆ ಮಾಡಿಕೊಳ್ಳಲಾರರು. ಹೆಚ್ಚಿನ ಯುವತಿಯರನ್ನು ದೂರದ ಹಳ್ಳಿಗಳಿಂದ ಹಣದ, ಪ್ರೀತಿಯ, ಕೆಲಸದ ಆಸೆ ತೋರಿಸಿ ಈ ಖೆಡ್ಡಾಕ್ಕೆ ಬೀಳಿಸಲಾಗುತ್ತದೆ. ಅದಕ್ಕೆ ಮುನ್ನ ನಾನಾ ರೀತಿಯ ದೈಹಿಕ, ಮಾನಸಿಕ ಚಿತ್ರಹಿಂಸೆ ಕೊಟ್ಟು, ಹಸಿವೆಗೆ ತಳ್ಳಿ, ಭಾವನೆಗಳನ್ನು ಮುರಿದು, ವೃತ್ತಿಗೆ ಸಾಕಷ್ಟು ತರಬೇತಿ ಕೊಟ್ಟು ಸಿದ್ಧಪಡಿಸಲಾಗುತ್ತದೆ.



ಹೊರಜಗತ್ತಿನ ಹೆಣ್ಣುಮಕ್ಕಳಿಗೆ ಲೈಂಗಿಕ ಶೋಷಣೆಯಾದರೆ ದೂರು ಕೊಡಲು ಪೊಲೀಸ್ ಠಾಣೆಯಿದೆ. ಆದರೆ, ಲೈಂಗಿಕ ಕಾರ್ಯಕರ್ತೆಯರಿಗೆ ಆಗುವ ದೈಹಿಕ ಮತ್ತು ಮಾನಸಿಕ ಶೋಷಣೆ ಇನ್ನೂ ಕಾನೂನಿನ ಪರಿಧಿಯೊಳಗೆ ಬಂದಿಲ್ಲ. ಅವಳ ದೇಹವನ್ನು ಸಾರ್ವಜನಿಕರು ದುಡ್ಡು ಕೊಟ್ಟು ಉಪಯೋಗಿಸಬಹುದಾದ ವಸ್ತುವೆಂದು ಪರಿಗಣಿಸಲ್ಪಟ್ಟ ಮೇಲೆ, ಇಲ್ಲಿ ಗ್ರಾಹಕನೇ ರಾಜನಾಗುತ್ತಾನೆ ಹೊರತು ಅವಳ ಪ್ರತಿಭಟನೆಗೆ ಬೆಲೆಯಿಲ್ಲ.

ಎಲ್ಲಿಯವರೆಗೆ ಗ್ರಾಹಕರ ಲಭ್ಯತೆಯಿರುತ್ತದೋ ಅಲ್ಲಿಯವರೆಗೆ ಈ ದಂಧೆಗೆ ಹೆಣ್ಣುಮಕ್ಕಳನ್ನು ಹಿಂಸಿಸಿ ಸೇರಿಸಲಾಗುತ್ತದೆ. ಆದ್ದರಿಂದ, ಇದನ್ನು ಕೊನೆಗಾಣಿಸುವ ಜವಾಬ್ದಾರಿ ಮುಖ್ಯವಾಗಿ ಗಂಡಸಿನದ್ದು. ಮಹಿಳೆಯ ದೇಹವೆಂಬ ಉದ್ಯಮದ ಸೂತ್ರಧಾರರು ನಮ್ಮ ತಿರಸ್ಕಾರಕ್ಕೆ ಅರ್ಹರು. ಆದರೆ, ನಮ್ಮ ವ್ಯವಸ್ಥೆಯಲ್ಲಿ ಅವರಾರಿಗೂ ಶಿಕ್ಷೆಯಾಗುವುದಿಲ್ಲ.

ಮಹಿಳಾ ದಿನದಂದು ನಿಜವಾಗಿ ನೆನಪನ್ನು ಮಾಡಿಕೊಳ್ಳಬೇಕಾದುದು, ಈ ದನಿಯಿಲ್ಲದ, ಕತ್ತಲಲ್ಲಿ ಬದುಕುವ ಮತ್ತು ಸಮಾಜದ ಮುಖ್ಯವಾಹಿನಿಯನ್ನು ಇನ್ನೂ ತಲುಪದ ಲೈಂಗಿಕ ಕಾರ್ಯಕರ್ತೆಯರನ್ನು. ಅವರು ಗೌರವದ ಬಾಳಿಗೆ ಅರ್ಹರು.

ಸೆಕ್ಸ್ ಎನ್ನುವುದು ಬರೀ ದೇಹಗಳ ನಡುವೆ ನಡೆಯುವ ಯಾಂತ್ರಿಕ ಕ್ರಿಯೆಯಲ್ಲ, ಮನಸ್ಸುಗಳ ಮಿಲನ ಅಗತ್ಯ. ಜೊತೆಗೆ, ಇದೊಂದು ಹಣದಿಂದ ಖರೀದಿಸಬಹುದಾದ ವಸ್ತುವಲ್ಲ ಎನ್ನುವ ಅರಿವು ಜಾಗೃತಗೊಂಡಲ್ಲಿ, ಮಹಿಳೆ ವಸ್ತುವಾಗುವುದು ತಪ್ಪುತ್ತದೆ.

ವಾಚಕರ ವಾಣಿ

ಅಷ್ಟಾಂಗಮಾರ್ಗ ದಾರಿದೀಪವಾಗಲಿ

'ರಾವಣ ಎಂಬ ಮಹಾನ್ ರೂಪಕ' ಎಂಬ ಸಬಿತಾ ಬನ್ನಾಡಿಯವರ ಲೇಖನ (ಪ್ರ.ವಾ., ಮಾರ್ಚ್ 5) ಪ್ರಸ್ತುತ ಪ್ರಪಂಚವು ನಾಗಾಲೋಟದಲ್ಲಿ ಧಾವಿಸುತ್ತಿರುವ, ಇದೇ ಜೀವನವೆಂಬ ಹುಸಿ ಭ್ರಮೆಗಳಿಗೆ ಒಳಗಾಗಿರುವುದಕ್ಕೆ ಹಿಡಿದ ಕನ್ನಡಿಯಾಗಿದೆ. ಸುಸ್ಥಿರ ಅಭಿವೃದ್ಧಿ, ಸರ್ವಜೀವಜಾಲದ ಸುಖ ಸಮೃದ್ಧಿ ಬಯಸಿದ ಬುದ್ಧ, ಬಸವ, ಗಾಂಧಿ, ವಿವೇಕಾನಂದ, ಈಗಿನ ಮೇಧಾ ಪಾಟ್ಕರ್, ಸುಂದರಲಾಲ್ ಬಹುಗುಣ, ಗ್ರೇಟಾ ಥನ್‌ಬರ್ಗ್, ವಂದನಾ ಶಿವ ಅವರಂತಹವರ ಬುದ್ಧಿಮಾತಿನ ಕೊಳಲಗಾನ, ಹಿತಧ್ವನಿ ಹೃದಯಗಳಿಗೆ ನಾಟುತ್ತಿಲ್ಲ. ಹೋಲಿಕೆ ಮತ್ತು ಸ್ಪರ್ಧೆಗಳ ಮೇಲಾಟದಲ್ಲಿ ಪರಿಸರನಾಶ, ಮೌಲ್ಯಗಳ ವಿನಾಶ, ಭೂಮಿ, ಹೆಣ್ಣಿನ ಮೇಲಿನ ಶೋಷಣೆ, ಅತ್ಯಾಚಾರ, ಅಧಿಕಾರದಾಹದಿಂದ ಜೀವಜಾಲವೇ ನಲುಗುತ್ತಿದೆ.

ಬುದ್ಧನ ಅಷ್ಟಾಂಗಮಾರ್ಗಗಳಾದ ಸರಿಯಾದ ದೃಷ್ಟಿ, ಸಂಕಲ್ಪ, ಮಾತು, ಕಾರ್ಯ, ಉದ್ಯೋಗ, ಪ್ರಯತ್ನ, ಗಮನ, ಏಕಾಗ್ರತೆ ನಮಗೆಲ್ಲ ದಾರಿದೀಪವಾಗಬೇಕಿದೆ. ಬುದ್ಧ ತಿಳಿಸಿದ ಜೀವಪರ, ಜನಪರ, ಪರಿಸರಪರ ಉದ್ಯೋಗಗಳನ್ನಷ್ಟೇ ನಾವು ಕೈಗೊಂಡರೆ ಭೂಮಿ, ಜೀವಜಾಲ ಉಳಿದೀತು.

ಶಿವನಕೆರೆ ಬಸವಲಿಂಗಪ್ಪ, ದಾವಣಗೆರೆ

ಸಚಿವ ಖಾತೆ ಕುಟುಂಬದ ಆಸ್ತಿಯಲ್ಲ

ರಮೇಶ ಜಾರಕಿಹೊಳಿ ಅವರು ಲೈಂಗಿಕ ಹಗರಣದಲ್ಲಿ ತಮ್ಮ ವಿರುದ್ಧ ಆರೋಪ ಕೇಳಿಬಂದ ಬಳಿಕ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದು ಸ್ವಾಗತಾರ್ಹ. ಆದರೆ, ಅವರು ಹೊಂದಿದ್ದ ಜಲಸಂಪನ್ಮೂಲ ಖಾತೆಯನ್ನು ಅವರ ಕುಟುಂಬದ ಸದಸ್ಯರಿಗೆ ಅಥವಾ ಅವರಿಗೆ ಆಪ್ತರಾಗಿ ಇರುವವರಿಗೇ ನೀಡಬೇಕೆಂಬ ಮತ್ತು ಆರೋಪ ಮುಕ್ತರಾದೊಡನೆ ಪುನಃ ಅದೇ ಖಾತೆಯನ್ನು ಅವರಿಗೆ ನೀಡಬೇಕೆಂಬ ಬೇಡಿಕೆ ಇಟ್ಟಿದ್ದಾರೆ ಎಂದು ಕೆಲವು ಪತ್ರಿಕೆಗಳಲ್ಲಿ ವರದಿಯಾಗಿದೆ.

ಇದು ನಿಜವೇ ಆಗಿದ್ದರೆ ಆಶ್ಚರ್ಯಕರ. ಸರ್ಕಾರದ ಜವಾಬ್ದಾರಿಗಳು, ಖಾತೆಗಳು ರಾಜ್ಯದ ಜನರ ಒಳಿತಿಗಾಗಿ ಇರುತ್ತವೇ ಹೊರತು ಸ್ವಹಿತಾಸಕ್ತಿಗೆ ಬಳಸಿಕೊಳ್ಳಲು ಅಲ್ಲ. ಖಾತೆಗಳನ್ನು ಬಸ್ಸಿನಲ್ಲಿ ಸೀಟು ಹಿಡಿಯಲು ಹಾಕುವ ಕರವಸ್ತ್ರದಂತೆ ಬಳಕೆ ಮಾಡಿಕೊಳ್ಳದೆ, ಜನರ ಶ್ರೇಯೋಭಿವೃದ್ಧಿಗೆ ಪೂರಕವಾಗುವಂತೆ ನೋಡಿಕೊಳ್ಳಬೇಕು. ಅಧಿಕಾರವನ್ನು ದಕ್ಷತೆ, ಜ್ಞಾನ ಮತ್ತು ಅನುಭವದ ಆಧಾರದ ಮೇಲೆ ಹಂಚಿಕೆ ಮಾಡಬೇಕು.

ಮಹಾಂತೇಶ ಮಾಗನೂರ, ಬೆಂಗಳೂರು

ಒಕ್ಕೂಟ ತತ್ವಕ್ಕೆ ಅಪಾಯ

ರಾಜ್ಯಗಳು ಮತ್ತು ಒಕ್ಕೂಟ ಸರ್ಕಾರದ ನಡುವಣ ಅತ್ಯಂತ ಸೂಕ್ಷ್ಮವಾದ ಹಣಕಾಸು ಸಂಬಂಧದಲ್ಲಿ 15ನೇ ಹಣಕಾಸು ಆಯೋಗದ ಶಿಫಾರಸಿನಿಂದ ಮತ್ತು ಭಾರತ ಸರ್ಕಾರವು ಸಂವಿಧಾನದತ್ತ ಒಕ್ಕೂಟ ತತ್ವವನ್ನು ನಿರ್ಲಕ್ಷಿಸುತ್ತಿರುವುದರಿಂದ ಅಸಮತೋಲನ ಉಂಟಾಗಿದೆ. ಆಯೋಗದ ಅಧ್ಯಕ್ಷ ಎನ್.ಕೆ.ಸಿಂಗ್ ಅವರ ಪ್ರಕಾರ, 2021-22ರಿಂದ 2025-26ರ ಒಕ್ಕೂಟ ಸರ್ಕಾರದ ತೆರಿಗೆ ರಾಶಿ ಅಂದಾಜು ₹ 135.2 ಲಕ್ಷ ಕೋಟಿ. ಇದರಲ್ಲಿ ಹಂಚಬಹುದಾದ ಮೊತ್ತ ₹ 103 ಲಕ್ಷ ಕೋಟಿ (ಪ್ರ.ವಾ., ಮಾರ್ಚ್ 7). ಏಕೆಂದರೆ ಒಕ್ಕೂಟ ತೆರಿಗೆ ಮೊತ್ತದಲ್ಲಿ ಸೆಸ್ ಮತ್ತು ಸರ್‌ಚಾರ್ಜ್‌ಗಳ ಬಾಬ್ತು ಹಂಚಬಹುದಾದ ರಾಶಿಯಲ್ಲಿ ಸೇರುವುದಿಲ್ಲ. ಅಂದರೆ ಒಕ್ಕೂಟದ ತೆರಿಗೆ ರಾಶಿಯಾದ ₹ 135.2 ಲಕ್ಷ ಕೋಟಿಯಲ್ಲಿ ರಾಜ್ಯಗಳಿಗೆ ₹ 55.43 ಲಕ್ಷ ಕೋಟಿ ದೊರೆಯಬೇಕಾಗಿತ್ತು (ಶೇ 41). ಆದರೆ ಈಗ ದೊರೆಯುತ್ತಿರುವುದು ಕೇವಲ ₹ 42.2 ಲಕ್ಷ ಕೋಟಿ. ಒಕ್ಕೂಟದ ತೆರಿಗೆ ರಾಶಿಯಲ್ಲಿ ಸೆಸ್ ಮತ್ತು ಸರ್‌ಚಾರ್ಜ್‌ಗಳ ಪ್ರಮಾಣ 2011-12ರಲ್ಲಿ ಶೇ 10.4ರಷ್ಟಿದ್ದುದು 2020-21ರಲ್ಲಿ ಶೇ 20ಕ್ಕೇರಿದೆ.

ಒಕ್ಕೂಟ ಸರ್ಕಾರದ ಹಂಚಬಹುದಾದ ತೆರಿಗೆ ರಾಶಿಯಲ್ಲಿ 14ನೇ ಹಣಕಾಸು ಆಯೋಗವು ಕರ್ನಾಟಕಕ್ಕೆ ಶೇ 4.71ರಷ್ಟನ್ನು ಶಿಫಾರಸು ಮಾಡಿದ್ದರೆ 15ನೇ ಹಣಕಾಸು ಆಯೋಗವು ಶೇ 3.64ರಷ್ಟನ್ನು ಶಿಫಾರಸು ಮಾಡಿದೆ. ಅಂದರೆ ಮುಂದಿನ ಐದು ವರ್ಷಗಳಲ್ಲಿ (2021-22ರಿಂದ 2025-26) ಒಕ್ಕೂಟ ತೆರಿಗೆ ರಾಶಿಯಲ್ಲಿ (₹ 103 ಲಕ್ಷ ಕೋಟಿ) ಕರ್ನಾಟಕದ ಪಾಲು ವಾರ್ಷಿಕ ₹ 75,000 ಕೋಟಿ. ಒಂದು ಅಧ್ಯಯನದ ಪ್ರಕಾರ, 2017ರಲ್ಲಿ ಕರ್ನಾಟಕವು ಒಕ್ಕೂಟಕ್ಕೆ (ಕೇಂದ್ರಕ್ಕೆ) ನೀಡಿದ ಪ್ರತೀ ₹ 100 ಮೊತ್ತದ ತೆರಿಗೆಗೆ ಪ್ರತಿಯಾಗಿ ತೆರಿಗೆಯ ವರ್ಗಾವಣೆ ಮೂಲಕ ರಾಜ್ಯ ಪಡೆದ ಮೊತ್ತ ಕೇವಲ ₹ 36. ಮೇಲಾಗಿ ತೈಲದ ಮೇಲೆ ಒಕ್ಕೂಟ ವಿಧಿಸುವ ತೆರಿಗೆ ಸಹ ಹಂಚಬಹುದಾದ ತೆರಿಗೆ ರಾಶಿಯಲ್ಲಿ ಸೇರುವುದಿಲ್ಲ. ಏಕೆಂದರೆ ಇದು ಜಿಎಸ್‌ಟಿ ಭಾಗವಲ್ಲ. ಈ ಅಸಮತೋಲನವನ್ನು ಶೀಘ್ರ ಸರಿಪಡಿಸದಿದ್ದರೆ ಒಕ್ಕೂಟ ಮತ್ತು ರಾಜ್ಯಗಳ ನಡುವಣ ಸಂಬಂಧ ವಿವಾದಾತ್ಮಕವಾಗುವ ಸಾಧ್ಯತೆಯಿದೆ.

ಟಿ.ಆರ್.ಚಂದ್ರಶೇಖರ, ಬೆಂಗಳೂರು

ಜುಗುಪ್ಸೆ ತರುವ ದುರ್ನಡತೆ

ಈಚೆಗೆ ಒಂದು ಮುಂಜಾನೆ ಓಣಿಯಲ್ಲೊಂದು ಜೋರಾದ ಜಗಳ ನಡೆಯುತ್ತಿತ್ತು. ಹಳ್ಳಿಗರು ಮಾಡುವ ಇಂತಹ ಜಗಳಗಳಲ್ಲಿ ಕೆಲವು ವಿಶಿಷ್ಟ ಪದಗಳು ಹೇರಳವಾಗಿ ಸಿಗುತ್ತವೆ! ಅದರಲ್ಲೂ ಜಗಳ ಮಾಡುತ್ತಿರುವವರು ಅನಕ್ಷರಸ್ಥರಾದಷ್ಟೂ ಬೈಗುಳಗಳ ಪದಬಳಕೆಯ ರುಚಿ ಹೆಚ್ಚು. ಅದಕ್ಕಾಗಿ ಆ ಜಗಳಕ್ಕೆ ಕಿವಿಗೊಟ್ಟೆ.

ಪೋಷಕರಿಗೆ ತಿಳಿಯದಂತೆ ಮೊಬೈಲ್ ಬಳಸುವ, ಹಣ ಪೋಲು ಮಾಡುವ ಮತ್ತು ಸುಳ್ಳು ಹೇಳುವ ಮಗನ ಕುರಿತು ತಾರಕ ಸ್ವರದಲ್ಲಿ ಅವನ ತಂದೆ ಹೇಳುತ್ತಿದ್ದರು, 'ಹೀಗೇ ಬಿಟ್ರೆ ನೀನು ಮುಂದೊಂದು ದಿನ ದೊಡ್ಡ ಕ್ರಿಮಿನಲ್ ರಾಜಕಾರಣಿ ಆಗ್ತೀಯ. ಆಮೇಲೆ ನೀನು ಮಾಡೋ ಘನಂದಾರಿ ಕೆಲಸಾನ ಟೀವಿಲಿ ನೋಡಿ ನಾವ್ ಹೆತ್ತೋರು ಎದೆ ಒಡ್ಕೊಂಡು ಸಾಯಬೇಕು'. ಜಗಳದಲ್ಲಿ ಈವರೆಗೆ ಇಂಥ ಪದಗಳನ್ನು ಬಳಸಿದ್ದನ್ನು ನಾನು ಕೇಳಿರಲಿಲ್ಲ. ಅಂದರೆ ಪ್ರಸ್ತುತ ರಾಜಕಾರಣಿಗಳು ಮಾಡುತ್ತಿರುವ ಕೆಲಸಗಳು ಜನರ ಮನಸ್ಸಿನಲ್ಲಿ ಎಂತಹ ಭಾವನೆಗಳನ್ನು ಹುಟ್ಟುಹಾಕುತ್ತಿವೆ ಅಲ್ಲವೇ?

ರಾಜಕಾರಣವೆಂದರೆ ಜನ ಅಸಹ್ಯ ಪಟ್ಟುಕೊಳ್ಳುವಷ್ಟರ ಮಟ್ಟಿಗೆ ಇಂದಿನ ರಾಜಕಾರಣಿಗಳಿದ್ದಾರೆ. ಒಂದು ಕಾಲದಲ್ಲಿ ರಾಜಕೀಯವೆಂಬುದು ಸಮಾಜದ ಏಳಿಗೆಗಾಗಿ ಇರುವ ಪುಣ್ಯಕ್ಷೇತ್ರವೆಂಬ ಪ್ರತೀತಿ ಇತ್ತು. ಆದರೆ ಇಂದಿನ ರಾಜಕಾರಣಿಗಳ ದುರ್ನಡತೆ ಜನರಲ್ಲಿ ಜುಗುಪ್ಸೆ ಮೂಡಿಸುತ್ತಿದೆ.

ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ರಾಜಕೀಯ ಕ್ಷೇತ್ರಗಳಲ್ಲಿ ಮಹಿಳೆಯರ ಸಾಧನೆಗಳನ್ನು ಜಾಗತಿಕ ಮಟ್ಟದಲ್ಲಿ ಸಂಭ್ರಮಿಸುವ ದಿನ ಮತ್ತೆ ಬಂದಿದೆ. ಹಾಗೆಯೇ ಲಿಂಗ ಅಸಮಾನತೆ, ಪಕ್ಷಪಾತವನ್ನು ಪ್ರಶ್ನಿಸಿ ತೊಡೆದು ಹಾಕುವ ಸವಾಲೂ ನಮ್ಮ ಮುಂದಿದೆ. ಆರ್ಥಿಕ ಮುಗ್ಗಟ್ಟನಂತಹ ಸವಾಲನ್ನು ಎದುರಿಸಿದ ಕೆಲವು ಯುವತಿಯರು ತಾವು ಮಾಡಿದ ಸಾಧನೆಯನ್ನು ಈ ವಿಶ್ವ ಮಹಿಳಾ ದಿನದ ಸಂದರ್ಭದಲ್ಲಿ ನಿರೂಪಿಸಿಕೊಂಡಿದ್ದಾರೆ..

ಪ್ರಜಾವಾಣಿ
ಸೋಮವಾರ • ಮಾರ್ಚ್ 8, 2021

ಇಂದು ವಿಶ್ವ ಮಹಿಳಾ ದಿನ

ಸ್ತ್ರೀ
ಸವಾಲು
ಸಾಧನೆ

‘ಬನಶ್ರೀ’ ಕಟ್ಟಿದ ಭೂಮಿಕಾ



ಭೂಮಿಕಾ ಪ್ರಕಾಶ್

ದಾವಣಗೆರೆ: ನಾಲ್ಕನೇ ತರಗತಿಯಲ್ಲಿರುವಾಗಲೇ ಹೊಲಿಗೆ ಕಲಿತ ಕೈಗಳು ಈಗ ನೂರಾರು ಬಡ ಮಹಿಳೆಯರಿಗೆ ದುಡಿಮೆಯ ದಾರಿ ತೋರಿವೆ. ದಾವಣಗೆರೆಯ ‘ಬನಶ್ರೀ ಗಾರ್ಮೆಂಟ್ಸ್’ನ ಒಡತಿ ಭೂಮಿಕಾ ಪ್ರಕಾಶ್ ಅವರ ಪರಿಶ್ರಮದ ಕಥೆ ನಾರಿಯರಿಗೆ ಸ್ಫೂರ್ತಿಯ ಚಿಲುಮೆ.

ಚನ್ನಗಿರಿಯವಳಾದ ನಾನು ಪಿಯುವರೆಗೆ ಶಿಕ್ಷಣ ಮುಗಿಸಿದಾಗ ಮನೆಯಲ್ಲಿ ಬಡತನದ ಬೇಗೆ. ಹೀಗಾಗಿ ಶಿವಮೊಗ್ಗದಲ್ಲಿ ಆಗ್ರೊ ಸೀಡ್ಸ್ ಕಂಪನಿಯಲ್ಲಿ ಉದ್ಯೋಗಕ್ಕೆ ಸೇರಿ ಸಂಜೆಯ ವೇಳೆ ಓದಿ, ಎಟಿಎನ್‌ಸಿಸಿ ಕಾಲೇಜಿನಲ್ಲಿ ಬಿ.ಕಾಂ ಮಾಡಿದೆ. ಅಂಗಡಿಗಳ ಲೆಕ್ಕ ಬರೆದು ಅಷ್ಟಿಷ್ಟು ಹಣ ಗಳಿಸಿದೆ. ಅಳಿದುಳಿದ ಸಮಯದಲ್ಲೂ ಹೊಲಿಗೆ ನನ್ನ ಕೈಹಿಡಿಯಿತು.

2007ರಲ್ಲಿ ಅಕ್ಕಿ ವ್ಯಾಪಾರಿ ಪ್ರಕಾಶ್ ಕೆ.ಪಿ. ಅವರೊಂದಿಗೆ ವಿವಾಹವಾಗಿ ದಾವಣಗೆರೆಗೆ ಕಾಲಿಟ್ಟೆ. ಮೊದಲು ಸ್ಥಾಪಿಸಿದ್ದು ‘ಬನಶ್ರೀ ಮಹಿಳಾ ಸಂಸ್ಥೆ’. ಹೊಲಿಗೆ, ಹಪ್ಪಳ, ಸಂಡಿಗೆ, ಮೇಣದಬತ್ತಿ ತಯಾರಿಕೆ ಆರಂಭವಾದವು. 2012ರಲ್ಲಿ 5 ಹೊಲಿಗೆ ಯಂತ್ರಗಳನ್ನು ತಂದು ಗಾರ್ಮೆಂಟ್ಸ್ ಘಟಕ ಆರಂಭಿಸಿದೆ. 2015ರಲ್ಲಿ ಪುರುಷರ ಶರ್ಟ್‌ಗಳನ್ನು ‘ಸಾಲಿಡಿಟಿ ಲೈವ್ ಕನೆಕ್ಟ್ ಸ್ಟಿಚ್ ಆ್ಯಂಡ್ ಸ್ಟೈಲ್’ ಬ್ರ್ಯಾಂಡ್‌ನೇಮ್‌ನೊಂದಿಗೆ ಹೊಲಿಯಲು ಆರಂಭಿಸಿದೆವು. 2016ರಲ್ಲಿ ನನ್ನ ಸಾಧನೆಗೆ ‘ವಿನ್ನಿಂಗ್ ಆಫ್ ದಿ ವುಮನ್’ ಪ್ರಶಸ್ತಿ ಸಿಕ್ಕಿತು. ಕೆನರಾ ಬ್ಯಾಂಕ್‌ನಿಂದ ₹ 1 ಕೋಟಿ ಸಾಲ ಪಡೆದು 50 ಹೊಲಿಗೆ ಯಂತ್ರಗಳನ್ನು ಖರೀದಿಸಿ, ಗಾರ್ಮೆಂಟ್ಸ್ ಘಟಕಗಳಿಗೆ ಕಟ್ಟಡವೂ ಸಿದ್ಧವಾಯಿತು. ಈಗ ನಗರದ ಎಸ್.ಎಸ್. ಲೇಔಟ್ ಹಾಗೂ ಬಂಬೂ ಬಜಾರ್‌ಗಳಲ್ಲಿ ‘ಬನಶ್ರೀ ಗಾರ್ಮೆಂಟ್ಸ್’ನ ಎರಡು ಘಟಕಗಳು ಕಾರ್ಯನಿರ್ವಹಿಸುತ್ತಿವೆ. 70–80 ಮಹಿಳೆಯರು ಈ ಗಾರ್ಮೆಂಟ್ಸ್ ಘಟಕಗಳಲ್ಲಿ ದುಡಿಯುತ್ತಿದ್ದಾರೆ. ಪುರುಷರ ಶರ್ಟ್, ಪ್ಯಾಂಟ್, ಮಕ್ಕಳ ಶರ್ಟ್, ಪ್ಯಾಂಟ್‌ಗಳು ಇಲ್ಲಿ ಸಿದ್ಧವಾಗುತ್ತವೆ. ಕೋವಿಡ್ ಸಂದರ್ಭದಲ್ಲಿ 7000–8000 ಮಾಸ್ಕ್‌ಗಳನ್ನು ಹೊಲಿದು ವಿತರಿಸಿದೆವು. ಬಡ ಕುಟುಂಬಗಳಿಗೆ ಅಕ್ಕಿ- ರೇಷನ್ ಸಹ ವಿತರಿಸಿದೆವು.

‘ಬನಶ್ರೀ ಮಹಿಳಾ ಸಂಸ್ಥೆ’ಯ ಅಡಿ ಈಗ 350 ಮಹಿಳಾ ಸ್ವಸಹಾಯ ಸಂಘಗಳು ಇವೆ. 4,000 ಸದಸ್ಯೆಯರು ಇದ್ದಾರೆ. ಮಹಿಳೆಯರಿಗೆ ಕೌಶಲ ತರಬೇತಿ ನೀಡಿ, ಮಾರ್ಕೆಟಿಂಗ್ ಹೇಳಿಕೊಡುತ್ತೇವೆ. ಪತಿ ಪ್ರಕಾಶ್, ಸಹೋದರರಾದ ವೀರೇಶ್, ವಿಷ್ಣು ನನಗೆ ಸಹಾಯ ಮಾಡಿದ್ದಾರೆ.

ನಿರೂಪಣೆ: ಸ್ಮಿತಾ ಶಿರೂರ

ಪ್ರಜ್ಞಾ: ಪ್ರತಿಭೆಯ ಪ್ರಭೆ

ಶಿರಸಿ: ಆರ್ಥಿಕ ಮುಗ್ಗಟ್ಟು, ಕೋಚಿಂಗ್ ಸೌಲಭ್ಯವಿಲ್ಲದ ಚಿಕ್ಕ ಊರು, ಸಿ.ಎ. ಬಗ್ಗೆ ಏನೂ ಗೊತ್ತೇ ಇರದಿದ್ದ ಕುಟುಂಬ... ಇಂತಹ ಸವಾಲುಗಳನ್ನೆಲ್ಲ ಎದುರಿಸಿ ಚಿಕ್ಕ ವಯಸ್ಸಿನಲ್ಲೇ ಸಿ.ಎ. ಪಾಸ್ ಮಾಡಿದವರು ಪ್ರಜ್ಞಾ ಕಾಕಡೆ.

ನನಗೆ ಸಿ.ಎ. ಬಗ್ಗೆ ಏನೂ ಗೊತ್ತಿರಲಿಲ್ಲ. ಎಸ್‌ಎಸ್‌ಎಲ್‌ಸಿಯಲ್ಲಿ ಶೇ 97ರಷ್ಟು ಅಂಕ ಗಳಿಸಿದೆ. ದ್ವಿತೀಯ ಪಿಯುನಲ್ಲೂ ಉತ್ತರ ಕನ್ನಡ ಜಿಲ್ಲೆಗೆ ರ‍್ಯಾಂಕ್ ಬಂತು. ಆಗ ನಾನು ಓದುತ್ತಿದ್ದ ಮಾರಿಕಾಂಬ ಸರ್ಕಾರಿ ಕಾಲೇಜಿನ ಪ್ರಾಂಶುಪಾಲರು ‘ಮುಂದೆ ಸಿ.ಎ. ಓದು, ಒಳ್ಳೆಯ ಅವಕಾಶಗಳಿವೆ’ ಎಂದರು. ಬಿ.ಕಾಂ. ಮೊದಲ ವರ್ಷದಲ್ಲಿದ್ದಾಗಲೇ ಫೌಂಡೇಷನ್ ಪರೀಕ್ಷೆಗೆ ಕೂತು ಪಾಸಾದೆ. ಬಿ.ಕಾಂ. ಮುಗಿಯುವ ಹೊತ್ತಿಗಾಗಲೇ ಸಿ.ಎ. ಇಂಟರ್ ಪಾಸ್ ಮಾಡಿದೆ. ಬಿ.ಕಾಂ.ನಲ್ಲೂ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಐದನೇ ರ‍್ಯಾಂಕ್. ಕಳೆದ ನವೆಂಬರ್‌ನಲ್ಲಿ ಸಿ.ಎ. ಫೈನಲ್ ಪರೀಕ್ಷೆ ಕೂಡ ಪಾಸ್ ಆಯಿತು.

ಓದಿದ್ದೆಲ್ಲ ಸರ್ಕಾರಿ ಶಾಲೆ– ಕಾಲೇಜಿನಲ್ಲಿ. ಅಪ್ಪ ಗಣೇಶ ಕಾಕಡೆ ಮತ್ತು ಅಮ್ಮ ಕಲಾವತಿ ಬೀದಿ ಬದಿಯಲ್ಲಿ ಬಟ್ಟೆ ಮಾರಾಟ ಮಾಡುತ್ತಾರೆ. ಎಸ್‌ಎಸ್‌ಎಲ್‌ಸಿ, ಪಿಯುನಲ್ಲಿ ಸುಮಾರು ಕಡೆಯಿಂದ ಬೇರೆ ಬೇರೆ ಸ್ಕಾಲರ್‌ಶಿಪ್‌ಗಳು ಸಿಕ್ಕಿದವು. ನಾನು ಆ ಸ್ಕಾಲರ್‌ಶಿಪ್ ದುಡ್ಡನ್ನೆಲ್ಲ ಜೋಪಾನ ಮಾಡಿದ್ದೆ. ಬಿ.ಕಾಂ. ಓದುತ್ತಿರುವಾಗಲೇ ಎರಡೂವರೆ ವರ್ಷಗಳ ಕಾಲ ಒಂದರಿಂದ 10ನೇ ತರಗತಿಯವರೆಗಿನ ಮಕ್ಕಳಿಗೆ ಮನೆಪಾಠ ಮಾಡಿ ದುಡ್ಡು ಗಳಿಸಿದೆ. ಮತ್ತೆ ಅಮ್ಮ ಒಂದಿಷ್ಟು ಸಾಲ ಮಾಡಿ ಹಣ ಕೊಟ್ಟರು. ಇದನ್ನೆಲ್ಲ ಸಿ.ಎ. ಓದಿಗೆ ಬಳಸಿಕೊಂಡೆ.

ಆರ್ಟಿಕಲ್‌ಶಿಪ್ ಅನ್ನು ಶಿರಸಿಯ ಲೆಕ್ಕ ಪರಿಶೋಧಕ ಎಸ್.ಜಿ. ಹೆಗಡೆ ಸರ್ ಅವರಲ್ಲಿ ಮಾಡಿದೆ. ಅವರೇ ಎಲ್ಲಾ ಮಾರ್ಗದರ್ಶನ ನೀಡಿದರು. ಈಗಲೂ ಅಲ್ಲೇ ಕೆಲಸ ಮಾಡುತ್ತಿದ್ದು, ಮುಂದೆ ಶಿರಸಿಯಲ್ಲೇ ಇದ್ದು ಪ್ರ್ಯಾಕ್ಟೀಸ್ ಮಾಡಬೇಕು ಎಂದುಕೊಂಡಿದ್ದೇನೆ. ಇದರಿಂದ ಬೇರೆಯವರಿಗೂ ಉದ್ಯೋಗ ಕೊಡಬಹುದು. ಹಾಗೆಯೇ ಬೇರೆ ದೇಶಗಳ ಔಟ್‌ಸೋರ್ಸ್ ಕೂಡ ತಗೋಬಹುದು. ಇಷ್ಟು ಬೇಗ ಸಿ.ಎ. ಪಾಸ್ ಮಾಡಿದ್ದಕ್ಕೆ ಕಾರಣ ಹಾರ್ಡ್‌ವರ್ಕ್ ಮತ್ತು ಡೆಡಿಕೇಶನ್. ಇದರ ಜೊತೆಗೆ ಪ್ಯಾಶನ್ ಕೂಡ ಇದ್ದರೆ ಯಾರು ಬೇಕಾದರೂ ಸಿ.ಎ. ಮಾಡಬಹುದು. ಇದರಲ್ಲಿ ಉದ್ಯೋಗಾವಕಾಶ ಸಾಕಷ್ಟಿವೆ.

ನಿರೂಪಣೆ: ಎಸ್ಸೆಚ್



ಸಹೋದರಿಯರ ಯುಗಳ ಗೀತೆ

ಬೆಂಗಳೂರು: ಶಾಸ್ತ್ರೀಯ ಸಂಗೀತದ ಗಂಧ ಗಾಳಿಯೇ ಇರದಿದ್ದ, ಸಣ್ಣ ಊರಿನ ಕುಟುಂಬದಿಂದ ಬಂದ ರೇಷ್ಮಾ ಹಾಗೂ ರಮ್ಯಾ ಸಹೋದರಿಯರು ಇಂದು ಹಿಂದೂಸ್ತಾನಿ ಸಂಗೀತ ಯುಗಳ ಗಾಯನದಲ್ಲಿ ಎತ್ತಿದ ಕೈ.

ನಾವು ಉತ್ತರಕನ್ನಡ ಜಿಲ್ಲೆ ಕುಮಟಾ ತಾಲ್ಲೂಕಿನ ಸಣ್ಣ ಹಳ್ಳಿ ಮುರೂರಿನವರು. ಸಂಗೀತದ ಗಂಧವಿರುವ ಎಲ್ಲರ ಮನೆಗಳಲ್ಲಿ ಸಾಮಾನ್ಯವಾಗಿ ತಂದೆ–ತಾಯಿಯರು ಮಕ್ಕಳ ಸಂಗೀತ ಕಲಿಕೆಗೆ ಪ್ರೋತ್ಸಾಹಿಸುತ್ತಾರೆ. ಆದರೆ ನಮ್ಮ ಮನೆಯಲ್ಲಿ ಹಿರಿಯರು ಯಾರೂ ಸಂಗೀತವನ್ನು ಶಾಸ್ತ್ರೀಯವಾಗಿ ಕಲಿತಿರಲಿಲ್ಲ. ಜೊತೆಗೆ ಹೆಚ್ಚು ಅವಕಾಶಗಳಿಲ್ಲದ ಸಣ್ಣ ಊರು. ನಮ್ಮ ಸಂಗೀತಾಸಕ್ತಿ ಕಂಡು ತಂದೆ ಸಂಗೀತ ಗುರುಗಳ ಬಳಿ ಸೇರಿಸಿ ಕಲಿಸಿದರು. ನಾವು ರಿಯಾಜ್ ಮಾಡುವುದು ನೋಡಿ ಅಪ್ಪ ಅಮ್ಮನಿಗೂ ಎಲ್ಲಿಲ್ಲದ ಸಂಗೀತಾಸಕ್ತಿ ಬಂತು. ಅವರೂ ನಮ್ಮೊಂದಿಗೆ ಶಾಸ್ತ್ರೀಯ ಸಂಗೀತ ಕಲಿಯಲಾರಂಭಿಸಿದರು. ಕರ್ನಾಟಕ ಪ್ರೌಢಶಿಕ್ಷಣ ಮಂಡಳಿ ನಡೆಸುವ ಸಂಗೀತದ ಜೂನಿಯರ್ ಗ್ರೇಡ್ ಪರೀಕ್ಷೆಯನ್ನು ನಮ್ಮಿಬ್ಬರ ಜೊತೆಗೆ ಅಪ್ಪ ರಾಮಚಂದ್ರ ಭಟ್ ಹಾಗೂ ಅಮ್ಮ ಆಶಾ ಭಟ್ ಸಹ ಬರೆದಿದ್ದರು.

ಪೋಷಕರು ನಮ್ಮನ್ನು ಹಿಂದೂಸ್ತಾನಿ ಗಾಯಕ ಅಶೋಕ ಹುಗ್ಗಣ್ಣನವರ್ ಅವರ ಬಳಿ ಸಂಗೀತ ಕಲಿಕೆಗೆ ಸೇರಿಸಿದರು. ಮುಂದೆ ನಾವಿಬ್ಬರೂ ಕೋಲ್ಕತ್ತದ ಐಟಿಸಿ ಸಂಗೀತ ರಿಸರ್ಚ್ ಅಕಾಡೆಮಿಯಲ್ಲಿ ವಿದುಷಿ ಶುಭ್ರ ಗುಹಾ ಅವರ ಮಾರ್ಗದರ್ಶನವನ್ನೂ ಪಡೆದೆವು.

ಸತತ ಪರಿಶ್ರಮದಿಂದ ಸಂಗೀತ ಕಲಿತು ನಾನು (ರೇಷ್ಮಾ) ಆಕಾಶವಾಣಿಯ ‘ಎ’ ಶ್ರೇಣಿ ಕಲಾವಿದೆಯಾದೆ. ಧಾರವಾಡ ಆಕಾಶವಾಣಿಯಲ್ಲಿ ನಿರಂತರವಾಗಿ ಶಾಸ್ತ್ರೀಯ, ಲಘು ಸಂಗೀತ ಕಛೇರಿ ನೀಡುತ್ತಲೇ ಬಂದಿದ್ದೇವೆ. ನಾನು ಓದಿದ್ದು ಕಂಪ್ಯೂಟರ್ ಸೈನ್ಸ್‌ನಲ್ಲಿ ಎಂಜಿನಿಯರಿಂಗ್, ಎಂ.ಟೆಕ್ ಪದವಿ. ತಂಗಿ ರಮ್ಯಾ ಓದಿದ್ದು ಇನ್‌ಸ್ಟ್ರುಮೆಂಟೇಶನ್ ಟೆಕ್ನಾಲಜಿಯಲ್ಲಿ ಎಂಜಿನಿಯರಿಂಗ್ ಪದವಿ. ಆದರೆ ನಮ್ಮಿಬ್ಬರ ಒಲವು ಸಾಂಪ್ರದಾಯಿಕ ಸಂಗೀತ ಕಲೆಯತ್ತಲೇ.

ಹಲವು ಸಂಗೀತ ಪ್ರಶಸ್ತಿ, ಪುರಸ್ಕಾರಗಳೂ ನಮಗೆ ಸಿಕ್ಕಿವೆ. ಧಾರವಾಡದ ಡಾ. ಮಲ್ಲಿಕಾರ್ಜುನ ಮನ್ಸೂರ್ ರಾಷ್ಟ್ರೀಯ ಯುವ ಪುರಸ್ಕಾರ, ಮಂಗಳೂರಿನ ಸಂಗೀತ ಭಾರತಿ ಪ್ರತಿಷ್ಠಾನದಿಂದ ಗಾನ ಜ್ಯೋತಿ ಪುರಸ್ಕಾರ, ಕಲಬುರ್ಗಿಯ ಮಹಾಂತ ಜ್ಯೋತಿ ಪ್ರತಿಷ್ಠಾನದಿಂದ ಕಲಾ ಜ್ಯೋತಿ ಪುರಸ್ಕಾರ ಮುಂತಾದವು ಹಾಗೂ ರಮ್ಯಾಳಿಗೆ ಹುಬ್ಬಳ್ಳಿಯ ಗಂಗೂಬಾಯಿ ಹಾನಗಲ್ ಪ್ರತಿಷ್ಠಾನದ ಪ್ರಶಸ್ತಿ, ಕಲಾ ಪ್ರತಿಭೋತ್ಸವದಲ್ಲಿ ಸತತವಾಗಿ ಪ್ರಥಮ ಬಹುಮಾನ ಲಭಿಸಿದೆ. ಕೆಲವಾರು ಸಂಗೀತದ ಆಲ್ಬಂಗಳನ್ನೂ ಹೊರತಂದಿದ್ದೇವೆ.

ಸಂಗೀತ ಕಲಿಕೆ ನಮಗೆಷ್ಟು ಸವಾಲಾಗಿತ್ತು ಎಂದರೆ, ಶಾಲಾ– ಕಾಲೇಜು ದಿನಗಳಲ್ಲಿ ಪರೀಕ್ಷೆಯ ದಿನಗಳಲ್ಲೂ ನಾವು ನಮ್ಮ ರಿಯಾಜ್ ಬಿಡುವಂತಿರಲಿಲ್ಲ. ಯೂಟ್ಯೂಬ್‌ನಲ್ಲಿ ಮರಾಠಿ ಅಭಂಗಗಳನ್ನು ಕೇಳಿಕೇಳಿ ಕಲಿತೆವು. ಹೊಸದನ್ನು ಕಲಿಯುವುದು, ಆಸ್ವಾದಿಸುವುದು, ಹಾಡುವುದು ನಮಗೆ ಎಂದಿಗೂ ಇಷ್ಟ.

ನಿರೂಪಣೆ: ಉಮಾ ಅನಂತ್



ರೇಷ್ಮಾ ಹಾಗೂ ರಮ್ಯಾ ಸಹೋದರಿಯರು

ಕರುಣೆಯ ‘ಕಾವೇರಿ’ ರಾಧಿಕಾ

ಮಂಗಳೂರು: ಇಲ್ಲಿಯ ‘ಕಾವೇರಿ ಆಂಬುಲೆನ್ಸ್’ ಅಂದರೆ ಗೊತ್ತಿಲ್ಲದವರಿಲ್ಲ. ಈ ಸೇವೆಯ ರೂವಾರಿ ಕುಳಾಯಿಗುಡ್ಡದ ರಾಧಿಕಾ ಸಿ.ಎಸ್. ನಿತ್ಯದ ತುತ್ತಿಗಾಗಿ ಆಂಬುಲೆನ್ಸ್ ಓಡಿಸುತ್ತಿದ್ದ ಅವರು, ಈಗ 10 ಆಂಬುಲೆನ್ಸ್‌ಗಳ ಮಾಲೀಕರು.

ಮೃದು ಮನದ ಮಹಿಳೆಯರಿಗೆ ಆಂಬುಲೆನ್ಸ್ ಓಡಿಸುವುದು ಸುಲಭದ ಮಾತಲ್ಲ. ಆಂಬುಲೆನ್ಸ್ ವಾಹನದ ಚಾಲನಾ ಸೀಟಿನಲ್ಲಿ ಮಹಿಳೆ ಕುಳಿತಳೆಂದರೆ ಕುಹಕದಿಂದ ನೋಡುವ ಕಣ್ಣುಗಳು ನೂರಾರು. ಈ ವಕ್ರದೃಷ್ಟಿಯ ನೋಟವೇ ನನ್ನಲ್ಲಿ ಆತ್ಮವಿಶ್ವಾಸದ ಕಿಚ್ಚು ಹಚ್ಚಿ, ಬದುಕಿನ ದಿಕ್ಕನ್ನೇ ಬದಲಿಸಿತು.

ಲೆಕ್ಕವಿಲ್ಲದಷ್ಟು ಸಂಖ್ಯೆಯ ರೋಗಿಗಳನ್ನು ಆಂಬುಲೆನ್ಸ್‌ನಲ್ಲಿ ಕರೆದೊಯ್ದಿದ್ದೇನೆ. ಒಮ್ಮೆ ಬಳ್ಳಾರಿಗೆ ಹೋಗಿ ಬಂದಿದ್ದು ಮಾತ್ರ ಮಾಸದ ಸ್ಮರಣೆ. ಪುಟ್ಟ ಮಗುವಿನ ಶವ, ಅದರೊಂದಿಗಿದ್ದ ಹಸಿ ಮನಸ್ಸಿನ ತಾಯಿಯನ್ನು ಕುಳ್ಳಿರಿಸಿಕೊಂಡು 200 ಕಿ.ಮೀ ಗಾಡಿ ಓಡಿಸಿ, ಬಳ್ಳಾರಿ ತಲುಪಿದೆ. ಇನ್ನೇನು ಊರು ಪ್ರವೇಶಿಸುವ ಹೊತ್ತಿಗೆ, ಗ್ರಾಮಸ್ಥರು ದಾರಿಗೆ ತಡೆ ಒಡ್ಡಿದರು. ಕೌಟುಂಬಿಕ ಜಗಳದಲ್ಲಿ ಶವ ಅನಾಥವಾಯಿತು. ಅಧಿಕಾರಿಗಳು, ಅವರಿವರಿಗೆಲ್ಲ ಫೋನಾಯಿಸಿದ್ದೂ ಫಲ ನೀಡಲಿಲ್ಲ. ಆಂಬುಲೆನ್ಸ್ ಅನ್ನು ಪುನಃ ಊರ ಕಡೆಗೆ ತಿರುಗಿಸಿ, ಆ ಮಗುವಿನ ಅಂತ್ಯಕ್ರಿಯೆಯನ್ನು ನಮ್ಮೂರಿನಲ್ಲಿ ನಡೆಸಿದೆ. ಮಗುವನ್ನು ಕಳೆದುಕೊಂಡು ದುಃಖದ ಮಡುವಿನಲ್ಲಿದ್ದ ಆ ತಾಯಿಗೆ ನಮ್ಮ ಮನೆಯಲ್ಲೇ ಆಸರೆ ನೀಡಿ, ಅವಳಿಗೊಂದು ಉದ್ಯೋಗವನ್ನು ಕೊಡಿಸಿದೆ.

ನನಗೆ ಡ್ರೈವಿಂಗ್ ಇಷ್ಟದ ಕೆಲಸವೇನಲ್ಲ. ಆಂಬುಲೆನ್ಸ್ ಚಾಲಕರಾಗಿದ್ದ ಪತಿ ಸುರೇಶ್, ಒತ್ತಾಯದಿಂದ ಡ್ರೈವಿಂಗ್ ಕಲಿಸಿದರು. ಪತಿ ಅಕಾಲಿಕವಾಗಿ ನಿಧನರಾದರು. ಆಗ ಅವರ ಬಳಿಯಿದ್ದ ‘ಕಾವೇರಿ’ ನನಗೆ ಜೀವದಾಯಿನಿಯಾದಳು. ಜೀವನೋಪಾಯಕ್ಕೆ ಆಂಬುಲೆನ್ಸ್ ಅನ್ನು ಹಿಡಿದು ರೋಗಿಗಳ ಸೇವೆ ಶುರು ಮಾಡಿದೆ.

ಆಂಬುಲೆನ್ಸ್ ಅಂದರೆ, ಅದರೊಳಗೆ ತುಂಬಿರುವುದೆಲ್ಲ ರೋದನ, ಆಕ್ರಂದನ, ಹತಾಶೆ ಇವೇ. ಆರ್ದ್ರವಾಗುವ ಹೃದಯವನ್ನು ತಹಬಂದಿಗೆ ತಂದು, ರೋಗಿಗಳ ಜೀವ ರಕ್ಷಣೆ ಮೊದಲ ಕರ್ತವ್ಯ ಎಂದು ನನಗೆ ನಾನೇ ಸಾಂತ್ವನ ಹೇಳಿಕೊಂಡು ಡ್ರೈವಿಂಗ್ ಮಾಡುತ್ತಿದ್ದೆ. ನಿರಂತರ ಆರೆಂಟು ವರ್ಷ ಆಂಬುಲೆನ್ಸ್ ಅನ್ನು ಸ್ವತಃ ಚಲಾಯಿಸಿ, ಸಾವಿರಾರು ರೋಗಿಗಳ ಜೀವ ಉಳಿಸಿದ ಸಮಾಧಾನವಿದೆ.

ಈಗ, ಸಹೋದರರಂತಿರುವ ಚಾಲಕರು ಜೊತೆಯಾಗಿದ್ದಾರೆ. ತುರ್ತು ಸಂದರ್ಭದಲ್ಲಿ ನಾನೇ ವಾಹನ ಓಡಿಸುತ್ತೇನೆ. ಮಹಿಳೆಗೆ ನಿರ್ಬಂಧಿತ ಎನ್ನಬಹುದಾದ ಸೇವೆಯಲ್ಲಿ ತೊಡಗಿಕೊಂಡು ಯಶಸ್ಸು ಪಡೆದ ಹೆಮ್ಮೆ ನನ್ನದು.

ನಿರೂಪಣೆ: ಸಂಧ್ಯಾ ಹೆಗಡೆ



ಆಂಬುಲೆನ್ಸ್ ಚಾಲನೆಯಲ್ಲಿ ರಾಧಿಕಾ

‘ಬಂಗಾರ’ದ ಪವರ್ ಲಿಫ್ಟರ್

ಬೆಂಗಳೂರು: ಮದುವೆ, ಮಕ್ಕಳಾದ ನಂತರ ಪವರ್ ಲಿಫ್ಟಿಂಗ್‌ನಲ್ಲಿ ತೊಡಗಿಸಿಕೊಂಡಿರುವ ಅಪರೂಪದ ಮಹಿಳೆ ಲತಾ ನಟರಾಜ್. ಸಂಸಾರದ ನಿರ್ವಹಣೆ ಜೊತೆಯಲ್ಲೇ ಕ್ರೀಡೆಗೆ ಬೇಕಾಗುವಂತಹ ಕಟ್ಟುಮಸ್ತಾದ ದೇಹವನ್ನೂ ಕಾಪಾಡಿಕೊಂಡಿದ್ದಾರೆ. ಸಾಧನೆಗೆ ವಯಸ್ಸಿನ ಮಿತಿಯಿಲ್ಲ ಎಂಬುದನ್ನೂ ಸಾಬೀತು ಮಾಡಿದ್ದಾರೆ.

ಬೊಜ್ಜು ಬೆಳೆದು ದೇಹದ ತೂಕ ಹೆಚ್ಚಾಗಿತ್ತು. ಅದನ್ನು ಕಡಿಮೆ ಮಾಡಿಕೊಳ್ಳಲು ಜಿಮ್‌ಗೆ ಹೋಗಲಾರಂಭಿಸಿದೆ. ಅಲ್ಲಿಯೇ ಪವರ್ ಲಿಫ್ಟಿಂಗ್ ಬಗ್ಗೆ ಆಸಕ್ತಿ ಬಂತು. ಇದೀಗ ಅದೇ ಕ್ಷೇತ್ರದಲ್ಲಿ ಮುಂದುವರಿದು, ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದೇನೆ. ರಾಜ್ಯ ಹಾಗೂ ರಾಷ್ಟ್ರವನ್ನು ಪ್ರತಿನಿಧಿಸುವ ಕನಸಿದೆ. ನಾನು ಪವರ್ ಲಿಫ್ಟಿಂಗ್ ಕೋಚ್ ಸಹ.

ಕರ್ನಾಟಕ ಪವರ್ ಲಿಫ್ಟಿಂಗ್ ಸಂಸ್ಥೆ ವತಿಯಿಂದ ಸಾಲಿಗ್ರಾಮದಲ್ಲಿ ಇತ್ತೀಚೆಗೆ ಆಯೋಜಿಸಿದ್ದ ‘ಪವರ್ ಲಿಫ್ಟಿಂಗ್’ ಸ್ಪರ್ಧೆಯಲ್ಲಿ ಭಾಗವಹಿಸಿ ಬಂಗಾರದ ಪದಕ ಪಡೆದಿದ್ದೇನೆ. 2019ರಲ್ಲಿ ಮಂಗಳೂರಿನಲ್ಲಿ ಆಯೋಜಿಸಿದ್ದ ಸ್ಪರ್ಧೆಯಲ್ಲೂ ಬಂಗಾರದ ಪದಕ ಪಡೆದಿದ್ದು, 2020ರಲ್ಲಿ ನಡೆದಿದ್ದ ಹಿರಿಯರ ಸ್ಪರ್ಧೆಯಲ್ಲಿ ಕಂಚಿನ ಪದಕ ಸಿಕ್ಕಿದೆ.

2018ರಲ್ಲಿ ಭದ್ರಾವತಿಯಲ್ಲಿ ನಡೆದ ಸ್ಪರ್ಧೆಯಲ್ಲಿ ಮೊದಲ ಬಾರಿ ಭಾಗವಹಿಸಿದ್ದೆ. ಅಲ್ಲಿ ನಾಲ್ಕನೇ ಸ್ಥಾನ ಸಿಕ್ಕಿತು. ಇನ್ನಷ್ಟು ಕಷ್ಟಪಟ್ಟರೆ ಮೂರನೇ ಅಥವಾ ಎರಡನೇ ಸ್ಥಾನ ಸಿಗಬಹುದೆಂದು ವ್ಯಾಯಾಮ ಮುಂದುವರಿಸಿದೆ.

ಬಾಲ್ಯದಿಂದಲೇ ಪಾಠಕ್ಕಿಂತ ಆಟದಲ್ಲಿ ಆಸಕ್ತಿ ಇತ್ತು. ಈ ಹಿಂದೆ ಆಕ್ಸೆಂಚರ್ ಹಾಗೂ ಬಿಜಿಎಸ್ ಆಸ್ಪತ್ರೆಗಳಲ್ಲಿ ಕೆಲಸ ಮಾಡಿದ್ದೇನೆ. ಇದೀಗ ಸಂಸಾರ ಹಾಗೂ ವ್ಯಾಯಾಮಕ್ಕೆ ಮಾತ್ರ ಸೀಮಿತಳಾಗಿದ್ದೇನೆ.

ಪವರ್ ಲಿಫ್ಟಿಂಗ್‌ನಿಂದಾಗಿ ನನಗೆ ಧೈರ್ಯ ಬಂದಿದೆ. ಮಹಿಳೆಯರು ಯಾವುದಕ್ಕೂ ಹೆದರದೆ ಯಾವುದೇ ಕೆಲಸವಾದರೂ ಧೈರ್ಯದಿಂದ ಮುನ್ನುಗ್ಗಬೇಕು. ಆರಂಭದಲ್ಲಿ ತೆಗಳುವವರೇ ಹೆಚ್ಚು, ಯಶಸ್ಸು ಸಾಧಿಸಿದ ಮೇಲೆ ಎಲ್ಲರೂ ನಿಮ್ಮನ್ನು ಹೊಗಳುತ್ತಾರೆ.

ನಿರೂಪಣೆ: ಸಂತೋಷ್ ಜಿಗಳಿಕೊಪ್ಪ



ಲತಾ ನಟರಾಜ್

ಪರಿಸರಸ್ನೇಹಿ ‘ಪ್ಯಾಡ್ ವುಮನ್’

ಕೊಪ್ಪಳ: ಋತುಚಕ್ರದ ಸಮಯದಲ್ಲಿ ಬಳಸುವ ಪ್ಯಾಡ್ ತಯಾರಿಸಿ ಜಾಗೃತಿ, ಸೇವೆ, ಮಾರಾಟದ ಮೂಲಕ ‘ಪ್ಯಾಡ್ ವುಮನ್’ ಎಂದೇ ಪರಿಚಿತರು ಕೊಪ್ಪಳ ತಾಲ್ಲೂಕಿನ ಮುನಿರಾಬಾದ್‌ನ ಭಾರತಿ ಬಸವರಾಜ ಗುಡ್ಲಾನೂರ. ಗ್ರಾಮೀಣ ಪ್ರದೇಶದಲ್ಲಿ ಹೆಣ್ಣುಮಕ್ಕಳಿಗೆ ಪ್ಯಾಡ್ ಬಳಕೆ ಬಗ್ಗೆ ತಿಳಿವಳಿಕೆ ನೀಡಿ ಅವರ ಆರೋಗ್ಯ ರಕ್ಷಣೆಯ ಕಾರಣೀಭೂತರು.

ನನಗೆ ಮುಂಚಿನಿಂದಲೂ ಸಮಾಜಕ್ಕೆ ಏನಾದರೂ ಕೊಡುಗೆ ನೀಡಬೇಕು ಎಂಬ ಆಸೆಯಿತ್ತು. ಒಮ್ಮೆ ಟಿ.ವಿ ಮುಂದೆ ಕುಳಿತಾಗ ಅಕ್ಷಯ್ ಕುಮಾರ್ ಅವರ ‘ಪ್ಯಾಡ್ ಮ್ಯಾನ್’ ಸಿನಿಮಾ ಗಮನ ಸೆಳೆಯಿತು. ಹಿಂದುಳಿದ ಭಾಗದ ಜಿಲ್ಲೆಯವಳಾಗಿ ಇಲ್ಲಿಯ ಮಹಿಳೆಯರ ಮುಟ್ಟಿನ ಸಂಕಟ ಕೂಡಾ ಕಣ್ಮುಂದೆ ಹಾದು ಹೋಯಿತು. ಅದೇ ನನಗೆ ಪ್ಯಾಡ್ ತಯಾರಿಕೆಗೆ ಸ್ಫೂರ್ತಿ.

ನನ್ನ ಬಳಿ ಹಣವಿರಲಿಲ್ಲ. ಮಹಿಳೆಯರ ಸಬಲೀಕರಣಕ್ಕಾಗಿ ಇರುವ ಸರ್ಕಾರದ ಎಲ್ಲ ಯೋಜನೆಗಳನ್ನು ತಲಾಶ್ ಮಾಡಿದೆ. ಇದಕ್ಕಾಗಿ ಬ್ಯಾಂಕುಗಳಿಗೆ ಅಲೆದೆ. ನನ್ನಲ್ಲಿರುವ ಉತ್ಸಾಹ ಗುರುತಿಸಿ ₹ 3 ಲಕ್ಷ ಸಾಲ ನೀಡಿದರು. ‘ಪ್ರಕೃತಿ ಸೇವಾ ಸಂಸ್ಥೆ’ ಸ್ಥಾಪಿಸಿ ‘ಸಂಘಿನಿ’ ಎಂಬ ಹೆಸರಿನಲ್ಲಿ ಪ್ಯಾಡ್ ತಯಾರಿಕೆ ಶುರು ಮಾಡಿದ್ದು, ಈಗ ವಾರ್ಷಿಕ ₹ 35 ಲಕ್ಷ ವಹಿವಾಟು ನಡೆಸುವಷ್ಟರ ಮಟ್ಟಿಗೆ ಬೆಳೆದಿದ್ದೇನೆ. ಉಪಯೋಗಿಸಿದ ನಂತರ ಮಣ್ಣಲ್ಲಿ ಬೆರೆತು ಗೊಬ್ಬರವಾಗುವ ಪರಿಸರಸ್ನೇಹಿ ಪ್ಯಾಡ್‌ಗಳಿವು.

ಮುಟ್ಟಿನ ಕುರಿತು ಅಧ್ಯಯನ ನಡೆಸುತ್ತಾ ಹೋದಾಗ ಧಾರ್ಮಿಕ, ಸಾಮಾಜಿಕ, ಧರ್ಮಸೂಕ್ಷ್ಮ ಹಿಂಜರಿಕೆ, ಹಳೆ ಬಟ್ಟೆಯ ಉಪಯೋಗ, ಕೆಲವು ಗ್ರಾಮಗಳಲ್ಲಿ ಎಲೆ, ಮಣ್ಣುಗಳನ್ನು ಹಚ್ಚಿಕೊಳ್ಳುವುದು, ಕರ್ತವ್ಯದಲ್ಲಿದ್ದ ಮಹಿಳಾ ಪೊಲೀಸ್ ಸಿಬ್ಬಂದಿಯ ಕಷ್ಟ, ಅರಿವಿನ ಕೊರತೆ ಇರುವ ತಾಂಡಾದ ಹೆಣ್ಣುಮಕ್ಕಳು ಅನುಭವಿಸುವ ನೋವು ಗಮನಕ್ಕೆ ಬಂದವು. ಮೈಮೇಲೆ ಪುರುಷರ ರೀತಿ ಕೂದಲು ಬೆಳೆಯುವುದು ಪ್ಯಾಡ್‌ನ ಸತತ ಬಳಕೆಯಿಂದ ತಪ್ಪಿದೆ, ರಕ್ತಸ್ರಾವ ನಿಂತಿದೆ ಎಂದು ಮಹಿಳೆಯರು, ತಜ್ಞ ವೈದ್ಯರು ಹೇಳಿದಾಗ ಏನೋ ಸಾಧಿಸಿದ ಸಂತೃಪ್ತಭಾವ.

ಕೊಪ್ಪಳ ಜಿಲ್ಲೆಯ ಮಹಿಳೆಯರ ಸರ್ಕಾರಿ ಕಾಲೇಜು, ಜಿಲ್ಲಾಡಳಿತ ಭವನ, ಮಹಿಳಾ ಪೊಲೀಸ್ ಸ್ಟೇಶನ್ ಸೇರಿದಂತೆ 12 ಕಡೆಗಳಲ್ಲಿ ಆಟೊಮ್ಯಾಟಿಕ್ ಪ್ಯಾಡ್ ಡಿಸ್ಪೆನ್ಸರ್‌ಗಳನ್ನು ಅಳವಡಿಸಿದ್ದೇನೆ. 30 ಪ್ಯಾಡ್‌ಗೆ ಸ್ಥಳಾವಕಾಶ ಇರುವ ಮಷೀನ್‌ಗೆ ₹ 5ರ ನಾಣ್ಯ ಹಾಕಿ 1 ಪ್ಯಾಡ್ ಪಡೆಯಬಹುದು.

ಈಗ ನನ್ನ ಈ ಉದ್ಯಮ ಮಂಡ್ಯ, ಹೈದರಾಬಾದ್‌ಗೂ ವಿಸ್ತರಣೆಯಾಗಿದೆ. ನಿತ್ಯ 10 ಸಾವಿರ ಪ್ಯಾಡ್ ತಯಾರಿಸುತ್ತಿದ್ದೇನೆ. 20ಕ್ಕೂ ಹೆಚ್ಚು ಮಹಿಳೆಯರಿಗೆ ಕೆಲಸ ನೀಡಿದ್ದೇನೆ. ಪ್ಯಾಡ್ ಬಳಕೆ ಕುರಿತು ಜಾಗೃತಿ ಮೂಡಿಸಲು 12 ಮಂದಿ ಹದಿಹರೆಯದ ಹೆಣ್ಣುಮಕ್ಕಳನ್ನು ಒಳಗೊಂಡ 15 ಸಂಘಗಳನ್ನು ರಚಿಸಿದ್ದೇನೆ. ತಾಲ್ಲೂಕಿನ ಹನುಮನಹಳ್ಳಿ ಗ್ರಾಮದ ಮಹಿಳೆಯರಲ್ಲಿ ಜಾಗೃತಿ ಮೂಡಿಸುತ್ತಿದ್ದೇನೆ ಮತ್ತು ಅವರಿಗೆ ಉಚಿತವಾಗಿ ಪ್ಯಾಡ್ ವಿತರಿಸುತ್ತಿದ್ದೇನೆ. ಲಾಭ ಹೆಚ್ಚಿದರೆ ಯೋಜನೆಯನ್ನು ಇನ್ನೂ 100 ಹಳ್ಳಿಗಳಿಗೆ ವಿಸ್ತರಿಸುವ ಗುರಿ ಇದೆ.

ನಿರೂಪಣೆ: ಸಿದ್ಧನಗೌಡ ಪಾಟೀಲ



ಭಾರತಿ ಗುಡ್ಲಾನೂರ

ಜೀವನ್ಮುಖಿ ಪಯಣ

ಮಂಗಳೂರು: ಬೆಳ್ತಂಗಡಿ ತಾಲ್ಲೂಕಿನ ಗರ್ಡಾಡಿಯ ಸಬಿತಾ ಮೋನಿಸ್ ‘ಚೈತನ್ಯದ ಚಿಲುಮೆ’ಗೆ ಇನ್ನೊಂದು ಹೆಸರು. ಹುಟ್ಟುವಾಗಲೇ ಕೈಗಳಿಲ್ಲದೆ ಇದ್ದರೂ ಕೈಗಳು ಇರುವವರಿಗಿಂತಲೂ ಒಂದು ಕೈ ಹೆಚ್ಚಿನದೇ ಸಾಧನೆ ಅವರದು.

ಆತ್ಮಬಲವೇ ಮನುಷ್ಯನ ದೊಡ್ಡ ಹೂಡಿಕೆ. ಅಂತಃಶಕ್ತಿ ಸಶಕ್ತವಾಗಿದ್ದರೆ, ಅಸಾಧ್ಯ ಅಂದುಕೊಂಡಿದ್ದೆಲ್ಲ ಮಂಜು ಕರಗಿ ನೀರಾದಷ್ಟೇ ಸುಲಭದಲ್ಲಿ ಸಾಧ್ಯವಾಗುತ್ತಾ ಹೋಗುತ್ತದೆ. ನನ್ನೊಳಗಿನ ಚೇತನ ಯಾವತ್ತಿಗೂ ‘ನೀನು ಸಬಲೆ’ ಎನ್ನುತ್ತಲೇ ನನ್ನನ್ನು ಮುನ್ನಡೆಸಿದೆ.

ನಾನೇನೋ ವಿಶೇಷ ಸಾಧನೆ ಮಾಡಿದೆನೆಂಬ ಹಮ್ಮು ನನ್ನನ್ನು ಕಾಡಲೇ ಇಲ್ಲ. ಎಲ್ಲರಂತೆ ಸಹಜವಾಗಿರುವ ವ್ಯಕ್ತಿ ನಾನು ಎಂತಲೇ ಅಂದುಕೊಳ್ಳುತ್ತೇನೆ. ಎಲ್ಲರೂ ಕೈಯಲ್ಲಿ ಮಾಡುವ ಕೆಲಸಗಳನ್ನು ನಾನು ಕಾಲಿನಲ್ಲಿ ಮಾಡುವುದನ್ನು ರೂಢಿಸಿಕೊಂಡಿದ್ದೇನೆ. ಅಕ್ಕ–ತಮ್ಮಂದಿರು ಶಾಲೆಗೆ ಹೋಗಿ ಬಂದು, ಮನೆಯಲ್ಲಿ ಹೋಂವರ್ಕ್ ಮಾಡುತ್ತಿದ್ದರು. ಅದನ್ನು ಕಂಡು, ಬರೆಯಬೇಕು, ಓದಬೇಕು ಎನ್ನುವ ತುಡಿತ ನನ್ನೊಳಗೆ ಇಮ್ಮಡಿಸಿತು. ಕಾಲಿನ ಹೆಬ್ಬೆರಳು–ಉಂಗುರ ಬೆರಳುಗಳ ನಡುವೆ ಪೆನ್ನು ಹಿಡಿದು, ಬರೆಯಲಾರಂಭಿಸಿದೆ. ಎಂದಿನಿಂದ ಬರೆಯಲು ಶುರು ಮಾಡಿದೆ ಎಂಬುದೇ ನೆನಪಾಗುತ್ತಿಲ್ಲ. ಅಮ್ಮ–ಅಪ್ಪ ಹೇಳುವ ಹಾಗೆ, 4–5 ವರ್ಷದವಳಿರುವಾಗಲೇ ಕಾಲಿನಿಂದ ಸ್ಫುಟವಾಗಿ ಬರೆಯುತ್ತಿದ್ದೆ. ಪ್ರಸ್ತುತ ಮೂಡುಬಿದಿರೆ ಆಳ್ವಾಸ್ ಶಿಕ್ಷಣ ಸಂಸ್ಥೆಯಲ್ಲಿ ವಿದ್ಯಾರ್ಥಿ ಕಲ್ಯಾಣ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ.

ಎಸ್‌ಎಸ್‌ಎಲ್‌ಸಿಯಲ್ಲಿ ಶೇ 71 ಅಂಕ ಪಡೆದೆ. ಆಳ್ವಾಸ್ ಶಿಕ್ಷಣ ಸಂಸ್ಥೆಯಲ್ಲಿ ಪದವಿಗೆ ಹೆಸರು ನೋಂದಾಯಿಸಿದಾಗ, ಸಂಸ್ಥೆಯ ಅಧ್ಯಕ್ಷ ಡಾ. ಮೋಹನ್ ಆಳ್ವ ಶೈಕ್ಷಣಿಕ ಶುಲ್ಕವನ್ನು ಮನ್ನಾ ಮಾಡಿದರು. ಇದೇ ಸಂಸ್ಥೆಯಲ್ಲಿ ಎಂ.ಎಸ್.ಡಬ್ಲ್ಯು ಓದಿ, ಕುವೆಂಪು ಮುಕ್ತ ವಿಶ್ವವಿದ್ಯಾಲಯದಲ್ಲಿ ಸಮಾಜಶಾಸ್ತ್ರದಲ್ಲಿ ಎಂ.ಎ ಪೂರೈಸಿದ್ದೇನೆ.

ಊಟ ಮಾಡುವುದು, ಲೋಟವನ್ನೆತ್ತಿ ನೀರು ಕುಡಿಯುವುದು ಎಲ್ಲವನ್ನೂ ನಾನೇ ಕಲಿತೆ. ಅನಿವಾರ್ಯತೆ ಅಮ್ಮನ ಕೆಲಸ ಮಾಡಿತು. ಶಾಲೆಯಲ್ಲಿ ಶಿಕ್ಷಕರು, ಸ್ನೇಹಿತೆಯರು ನನ್ನನ್ನು ಭಿನ್ನವಾಗಿ ಗುರುತಿಸಲೇ ಇಲ್ಲ. ಇವೆಲ್ಲ ನನ್ನನ್ನು ಇನ್ನಷ್ಟು ಸದೃಢಳನ್ನಾಗಿ ಮಾಡಿದವು. ಒಬ್ಬಳೇ ಬಸ್ಸಿನಲ್ಲಿ ಕಾಲೇಜಿಗೆ ಹೋಗಿ ಬರುತ್ತಿದ್ದೆ. ಮೊದಲ ಬಾರಿ ನನ್ನನ್ನು ಕಂಡವರು ಪ್ರೋತ್ಸಾಹಿಸಿದರೆ ಖುಷಿ, ಕನಿಕರ ತೋರುವುದು ನನಗೆ ಇಷ್ಟವಾಗದ ಸಂಗತಿ. ಈಗಲೂ ಶಿಕ್ಷಣ ಸಂಸ್ಥೆಯ ಬಸ್‌ನಲ್ಲಿ ನಿತ್ಯ 25 ಕಿ.ಮೀ ಪ್ರಯಾಣಿಸುತ್ತೇನೆ. ಕೈಗಳು ಮಾಡುವ ಕೆಲಸಗಳನ್ನೆಲ್ಲ ಸುಲಲಿತವಾಗಿ ಮಾಡುವ ಕಾಲು, ಎಂದೂ ತನಗೆ ಹೊರೆಯಾಯಿತೆಂದು ಮುನಿಸಿಕೊಂಡೇ ಇಲ್ಲ.

ನಿರೂಪಣೆ: ಸಂಧ್ಯಾ ಹೆಗಡೆ



ಸಬಿತಾ ಮೋನಿಸ್

ಹೀಗಂತಾರೆ..



ಗಂಡಿನ ಜೀವನಕ್ಕೆ ಹೆಣ್ಣಿನ ಕೊಡುಗೆ ಅಪಾರ. ಜನ್ಮ ಅವಳಿಂದ, ಬದುಕು ಅವಳಿಂದ, ಬದುಕು ಪೂರ್ತಿಗೊಳ್ಳುವುದೂ ಅವಳಿಂದ. ಗಂಡಿನ ಜತೆಗೆ ಎಲ್ಲೆಡೆಯೂ ಹೆಣ್ಣು ಇರುವಾಗ ಯಾಕೆ ಅವಳು ಹಿಂದಿರಬೇಕು? ಅವಳ ಬೆಳವಣಿಗೆಯು ಸಮಾಜದ ಒಳಿತಿಗೆ ಪೂರಕವಾದದ್ದು.

–ವಸಿಷ್ಠ ಸಿಂಹ, ನಟ



ಹೆಣ್ಣು, ಗಂಡಿಗೆ ಸಮಾನ ಅಲ್ಲ; ಗಂಡಿಗಿಂತ ಯಾವತ್ತೂ ಮೇಲೆಯೇ. ಅವನಿಗಿಂತ ಹೆಚ್ಚೇ ಕೆಲಸ ಮಾಡುತ್ತಾಳೆ. ಅಹಂ ತುಂಬಿದ ಗಂಡಿನಿಂದಾಗಿ ಆಕೆ ಶತಮಾನಗಳಿಂದ ಶೋಷಣೆಗೊಳಗಾಗಿ ನೋವು ಸಹಿಸಿಕೊಂಡಿದ್ದಾಳೆ. ಆ ಸಹಿಸುವಿಕೆಯೇ ಆಕೆಗಿಂದು ದೊಡ್ಡ ಶಕ್ತಿ. ಮುಂದೊಂದು ದಿನ ಹೆಣ್ಣು, ಗಂಡನ್ನೂ ಮೀರಿ ಬೆಳೆಯುತ್ತಾಳೆ.

–ವಾಸುಕಿ ವೈಭವ್, ಸಂಗೀತ ನಿರ್ದೇಶಕ



ಕೆಲ ಕ್ಷೇತ್ರಗಳಲ್ಲಿ ಪುರುಷರಿಗಿಂತ ಹೆಣ್ಣುಮಕ್ಕಳೇ ಮುಂಚೂಣಿಯಲ್ಲಿದ್ದಾರೆ. ಸೇನೆಯಲ್ಲೂ ಹೆಣ್ಣುಮಕ್ಕಳಿದ್ದಾರೆ. ಈಗಿನ ಕಾಲದ ಹೆಣ್ಣು ಬುದ್ಧಿವಂತೆ ಮಾತ್ರವಲ್ಲ, ಅವಳಿಗೆ ತನ್ನ ಹಕ್ಕುಗಳ ಅರಿವೂ ಇದೆ. ಇದು ಒಳ್ಳೆಯ ಬೆಳವಣಿಗೆ.

–ಧರ್ಮೇಂದರ್ ಕುಮಾರ್ ಮೀನಾ, ಡಿಸಿಪಿ, ಬೆಂಗಳೂರು ಉತ್ತರ ವಿಭಾಗ



ಸಾಮಾಜಿಕವಾಗಿ, ಆರ್ಥಿಕವಾಗಿ ಮಹಿಳೆಯರನ್ನು ಸದೃಢಗೊಳಿಸುವ ಜವಾಬ್ದಾರಿ ಈ ದೇಶದ ಪುರುಷರ ಮೇಲಿದೆ. ಶಿಕ್ಷಣದಿಂದ ಮಾತ್ರ ಈ ಸಮಾಜವನ್ನು ಸಮಾನತೆಯ ಕಡೆಗೆ ಕೊಂಡೊಯ್ಯಬಹುದು. ಹೆಣ್ಣುಮಕ್ಕಳಿಗೆ ಶೇ 33ರಷ್ಟು ಮೀಸಲಾತಿ ಮಸೂದೆಯನ್ನು ಅಂಗೀಕರಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಕಾರ್ಯೋನ್ಮುಖವಾಗಲಿ.

–ಪ್ರಜ್ವಲ್ ರೇವಣ್ಣ, ಸಂಸದ



ಪ್ರತಿಯೊಬ್ಬರ ಬದುಕು ರೂಪಿಸುವಲ್ಲಿ ಮಹಿಳೆ ವಿಭಿನ್ನ ರೂಪದಲ್ಲಿ ನೆರವಾಗುತ್ತಾಳೆ. ತಾಯಿ, ಅಕ್ಕ–ತಂಗಿ, ಪತ್ನಿ ಮುಂತಾದ ಪಾತ್ರಗಳನ್ನು ಸಮರ್ಥವಾಗಿ ನಿಭಾಯಿಸುವ ಮಹಿಳೆ ಕಠಿಣ ಪ್ರಯತ್ನದ ಮೂಲಕ ತಮ್ಮವರ ಉನ್ನತಿಗಾಗಿ ನೆರವಾಗುತ್ತಾಳೆ. ನಾನು ವೃತ್ತಿ ಬದುಕಿನಲ್ಲಿ ಸಾಧನೆ ಮಾಡಲು ತಂದೆಯಂತೆಯೇ ತಾಯಿಯೂ ಪ್ರೇರಣೆಯಾಗಿದ್ದಾರೆ. ತಂದೆಯ ಶ್ರಮ ಮತ್ತು ತಾಯಿಯ ತ್ಯಾಗವನ್ನು ಮರೆಯಲು ಸಾಧ್ಯವಿಲ್ಲ.

- ಶ್ರೀಹರಿ ನಟರಾಜ್, ಅಂತರರಾಷ್ಟ್ರೀಯ ಈಜುಪಟು

ನಿರ್ವಹಣೆ: ಸುಧಾ ಹೆಗಡೆ, ನೀಳಾ ಎಂ.ಎಚ್.

ಅಭಿಪ್ರಾಯ ಸಂಗ್ರಹ: ಮಂಜುಶ್ರೀ ಎಂ. ಕಡಕೋಳ, ವಿಕ್ರಂ ಕಾಂತಿಕೆರೆ

ಐಪಿಒ ಹೂಡಿಕೆಯ ಸುಗ್ಗಿಕಾಲ



ಹಣಕಾಸು ಸಾಕ್ಷರತೆ

ಪ್ರಮೋದ್ ಬಿ.ಪಿ.

2017ರ ಮಾರ್ಚ್ 8ರಂದು ಅವೆನ್ಯೂ ಸೂಪರ್ ಮಾರ್ಕೆಟ್ಸ್ ಅರ್ಥಾತ್ ಡಿ-ಮಾರ್ಟ್ ಕಂಪನಿಯ ಐಪಿಒ (ಆರಂಭಿಕ ಸಾರ್ವಜನಿಕ ಹೂಡಿಕೆ) ಆರಂಭವಾದಾಗ ಪ್ರತಿ ಷೇರಿನ ಬೆಲೆ ₹ 299 ಇತ್ತು. ಈಗ ಅದೇ ಷೇರಿನ ಬೆಲೆ ₹ 3,286ಕ್ಕೆ ಏರಿಕೆಯಾಗಿದೆ. ಅಂದರೆ, ನಾಲ್ಕು ವರ್ಷಗಳ ಅಂತರದಲ್ಲಿ ಹೂಡಿಕೆಯ ಮೊತ್ತ 11 ಪಟ್ಟು ಹೆಚ್ಚಳವಾಗಿದೆ.

ಒಳ್ಳೆಯ ಐಪಿಒಗಳಲ್ಲಿ ಹೂಡಿಕೆ ಮಾಡಿದರೆ ಎಷ್ಟು ಲಾಭ ಸಿಗುತ್ತದೆ ಎನ್ನುವುದಕ್ಕೆ ಇದೊಂದು ಉತ್ತಮ ಉದಾಹರಣೆ. 2021ರಲ್ಲೂ ಸಾಲು ಸಾಲು ಐಪಿಒಗಳು ಬರುತ್ತಿವೆ. ಅಳೆದು–ತೂಗಿ ಒಳ್ಳೆಯ ಐಪಿಒಗಳಲ್ಲಿ ಹೂಡಿಕೆ ಮಾಡಿದರೆ ದುಡ್ಡು ಬೆಳೆಸುವ ನಿಮ್ಮ ಕನಸು ನನಸಾಗುತ್ತದೆ. ಈವರೆಗಿನ ಐಪಿಒಗಳು ಕೊಟ್ಟಿರುವ ಫಲಿತಾಂಶದ ವಿಶ್ಲೇಷಣೆ ಇಲ್ಲಿದೆ.

ಐಪಿಒ ಎಂದರೇನು?: ಇನಿಷಿಯಲ್ ಪಬ್ಲಿಕ್ ಆಫರಿಂಗ್ 'ಐಪಿಒ'ದ ವಿಸ್ತೃತ ರೂಪ. ಖಾಸಗಿ ಕಂಪನಿಯೊಂದು ಮೊದಲ ಬಾರಿಗೆ ತನ್ನ ಷೇರುಗಳನ್ನು ಸಾರ್ವಜನಿಕರಿಗೆ ಮಾರಾಟ ಮಾಡಿ, ಬಂಡವಾಳ ಸಂಗ್ರಹ ಮಾಡುವ ಪ್ರಕ್ರಿಯೆಗೆ 'ಐಪಿಒ' ಎನ್ನುತ್ತಾರೆ. 'ಐಪಿಒ' ಪ್ರಕ್ರಿಯೆ ಬಳಿಕ ಆ ನಿರ್ದಿಷ್ಟ ಕಂಪನಿಯ ಷೇರು ಮಾರುಕಟ್ಟೆಯಲ್ಲಿ ಸ್ಥಾನ (ಲಿಸ್ಟಿಂಗ್) ಪಡೆದುಕೊಳ್ಳುತ್ತದೆ.

2021ರಲ್ಲಿ ಯಾವ ಐಪಿಒ ಎಷ್ಟು ಲಾಭ ಕೊಟ್ಟಿದೆ?
(ಮಾರ್ಚ್ 5, 2021 ರ ಅಂಕಿ-ಅಂಶ)

ಕಂಪನಿ ಹೆಸರು	ಐಪಿಒ ವೇಳೆ ನಿಗದಿಯಾಗಿದ್ದ ಷೇರಿನ ಬೆಲೆ	ಷೇರಿನ ಪ್ರಸ್ತುತ ಬೆಲೆ	ಷೇರುಪೇಟೆಗೆ ಸೇರ್ಪಡೆಗೊಂಡ ದಿನದ ಲಾಭ ಗಳಿಕೆ
ಆಂಟನಿ ವೇಸ್ಟ್ ಹ್ಯಾಂಡ್ಲಿಂಗ್	₹315	₹297	29.29%
ಐಆರ್‌ಎಫ್‌ಸಿ	₹26	₹24.95	(-)4.42%
ಇಂಡಿಗೋ ಪೇಂಟ್ಸ್	₹1,490	₹2,525	109.31%
ಹೋಮ್ ಫಸ್ಟ್ ಫೈನಾನ್ಸ್	₹518	₹530	1.81%
ಸ್ಟವ್ ಕ್ರಾಫ್ಟ್	₹385	₹503	15.83%
ಬ್ರೂಕ್ ಫೀಲ್ಡ್ ರಿಯಲ್ ಎಸ್ಟೇಟ್	₹275	₹246.59	(-)1.83%
ನ್ಯೂರೇಕಾ	₹400	₹626	61.44%
ರೇಲ್ ಟೆಲ್	₹94	₹159	29.15%
ಹೆರನ್ಬಾ	₹627	₹812	29.60%

(ಗಮನಿಸಿ: ಇದು ಹೂಡಿಕೆ ಶಿಫಾರಸು ಅಲ್ಲ. ಮಾಹಿತಿಯ ಉದ್ದೇಶಕ್ಕಾಗಿ ಮಾತ್ರ ಈ ವಿವರ ನೀಡಲಾಗಿದೆ)

2021ರ ಐಪಿಒಗಳ ಒಳನೋಟ: ಈ ವರ್ಷದ ಜನವರಿಯಿಂದ ಇಲ್ಲಿಯ ತನಕ ಒಂಭತ್ತು ಕಂಪನಿಗಳು ಐಪಿಒ ನಡೆಸಿ ಷೇರು ಮಾರುಕಟ್ಟೆ ಪ್ರವೇಶಿಸಿವೆ. ಒಟ್ಟು ಒಂಭತ್ತು ಕಂಪನಿಗಳ ಪೈಕಿ ಸದ್ಯ ಮೂರು ಕಂಪನಿಗಳ ಫಲಿತಾಂಶ ನಕಾರಾತ್ಮಕವಾಗಿದೆ. ಇನ್ನುಳಿದ ಆರು ಕಂಪನಿಗಳು ಹೂಡಿಕೆದಾರರಿಗೆ ಲಾಭ ತಂದುಕೊಟ್ಟಿವೆ. ಷೇರುಪೇಟೆಗೆ ಸೇರ್ಪಡೆಗೊಂಡ ದಿನ ಶೇಕಡ 29.29ರಷ್ಟು ಲಾಭ ಕೊಟ್ಟಿದ್ದ ಆಂಟನಿ ವೇಸ್ಟ್ ಹ್ಯಾಂಡ್ಲಿಂಗ್5 ಷೇರಿನ ಬೆಲೆ ₹ 315ರಿಂದ ಈಗ ₹ 297ಕ್ಕೆ ಇಳಿದಿದೆ.

ಷೇರುಪೇಟೆ ಪ್ರವೇಶಿಸಿದ ದಿನ ಶೇ (-)4.42ರಷ್ಟು ನಕಾರಾತ್ಮಕ ಗಳಿಕೆ ಕೊಟ್ಟ ಐಆರ್‌ಎಫ್‌ಸಿ ಷೇರಿನ ಪ್ರಸ್ತುತ ಬೆಲೆ ₹ 26ರಿಂದ ₹ 24.95ಕ್ಕೆ ತಗ್ಗಿದೆ. ಮಾರುಕಟ್ಟೆಗೆ ಬಂದ ಮೊದಲ ದಿನ ಶೇ 109.31ರಷ್ಟು ಲಾಭಾಂಶ ಕೊಟ್ಟ ಇಂಡಿಗೋ ಪೇಂಟ್ಸ್‌ನ ಬೆಲೆ ಈಗ ₹ 2,525 ಇದೆ. ಐಪಿಒ ವೇಳೆ ಹೋಮ್ ಫಸ್ಟ್ ಫೈನಾನ್ಸ್‌ನ ಪ್ರತಿ ಷೇರಿನ ಬೆಲೆ ₹ 518 ಇತ್ತು, ಈಗ ಅದರ ಬೆಲೆ ₹ 530 ಆಗಿದೆ. ಸ್ಟವ್ ಕ್ರಾಫ್ಟ್ ಐಪಿಒ ಷೇರಿನ ಬೆಲೆ ₹ 385 ಇತ್ತು, ಈಗ ಅದು ₹ 503ಕ್ಕೆ ಏರಿದೆ. ಬ್ರೂಕ್ ಫೀಲ್ಡ್ ಐಪಿಒ ಷೇರಿನ ಬೆಲೆ ₹ 275 ಇದ್ದದ್ದು ಈಗ ₹ 246ಕ್ಕೆ ಕುಸಿದಿದೆ. ನ್ಯೂರೇಕಾ ಷೇರಿನ ಬೆಲೆ ₹ 626ಕ್ಕೆ ಹೆಚ್ಚಳವಾಗಿದೆ. ರೇಲ್ ಟೆಲ್ ಷೇರಿನ ಬೆಲೆ ₹ 94ರಿಂದ ₹ 159 ಆಗಿದೆ. ಹೆರನ್ಬಾ ಷೇರು ₹ 627ರಿಂದ ₹ 812ಕ್ಕೆ ಜಿಗಿದಿದೆ.

ಮಾರ್ಚ್‌ನಲ್ಲಿ ಸಂಭಾವ್ಯ ಐಪಿಒ: ಈಸ್ ಮೈ ಟ್ರಿಪ್, ಕ್ರಾಫ್ಟ್ಸ್‌ಮೆನ್ ಆಟೋಮೇಷನ್, ಕಲ್ಯಾಣ್ ಜ್ಯುವೆಲರ್ಸ್, ಬರ್ಬಿಕ್ಯೂ ನೇಷನ್, ಅನುಪಂ ರಾಸಾಯನ್ ಇಂಡಿಯಾ ಲಿ., ಲಕ್ಷ್ಮಿ ಆರ್ಗ್ಯಾನಿಕ್ ಇಂಡಸ್ಟ್ರೀಸ್, ಸೂರ್ಯೋದಯ ಸ್ಮಾಲ್ ಫೈನಾನ್ಸ್ ಬ್ಯಾಂಕ್, ಅಪಿಜೇ ಸುರೇಂದ್ರ ಪಾರ್ಕ್ ಹೊಟೇಲ್ಸ್, ಆಧಾರ್ ಹೌಸಿಂಗ್ ಫೈನಾನ್ಸ್.

(ಲೇಖಕ: ಸುವಿಷನ್ ಹೋಲ್ಡಿಂಗ್ಸ್ ಪ್ರೈ. ಲಿ.,ನ ಸಂಶೋಧನಾ ವಿಭಾಗದ ಮುಖ್ಯಸ್ಥ)



ಬಿದ್ದು ಎದ್ದ ಪೇಟೆಗೆ ಜಾಗತಿಕ ಅಡೆತಡೆಗಳು

ಸತತ ಎರಡು ವಾರಗಳ ಕಾಲ ಕುಸಿತ ಕಂಡಿದ್ದ ಷೇರುಪೇಟೆ ಮಾರ್ಚ್ 5ಕ್ಕೆ ಕೊನೆಗೊಂಡ ವಾರದಲ್ಲಿ ಏರಿಕೆ ದಾಖಲಿಸಿದೆ. 50,405 ಅಂಶಗಳಲ್ಲಿ ವಹಿವಾಟು ಮುಗಿಸಿರುವ ಸೆನ್ಸೆಕ್ಸ್ ಶೇ 2.6ರಷ್ಟು ಗಳಿಕೆ ಕಂಡಿದ್ದರೆ, 14,938 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 2.8ರಷ್ಟು ಏರಿಕೆ ದಾಖಲಿಸಿದೆ. ಬಿಎಸ್‌ಇ (ಸೆನ್ಸೆಕ್ಸ್) ಲಾರ್ಜ್, ಸ್ಮಾಲ್ ಮತ್ತು ಮಿಡ್ ಕ್ಯಾಪ್ ಸೂಚ್ಯಂಕಗಳು ಕ್ರಮವಾಗಿ ಶೇ 3, ಶೇ 4 ಮತ್ತು ಶೇ 3ರಷ್ಟು ಜಿಗಿದಿವೆ.

ವಲಯವಾರು ಪ್ರಗತಿಯಲ್ಲಿ, ನಿಫ್ಟಿ ಮಾಧ್ಯಮ ಸೂಚ್ಯಂಕ ಶೇ 6.5ರಷ್ಟು, ಮಾಹಿತಿ ತಂತ್ರಜ್ಞಾನ ಶೇ 3.8ರಷ್ಟು, ವಾಹನ ಉತ್ಪಾದನೆ ಶೇ 3.5ರಷ್ಟು ಮತ್ತು ಮೂಲಸೌಕರ್ಯ ಶೇ 3.2ರಷ್ಟು ಹೆಚ್ಚಳ ಕಂಡಿವೆ. ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 2ರಷ್ಟು ಇಳಿಕೆಯಾಗಿದೆ. ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 2,199.74 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ದೇಶಿ ಹೂಡಿಕೆದಾರರು ₹ 2635.39 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಏರಿಕೆ-ಇಳಿಕೆ: ಮಾರ್ಚ್ 1ರಿಂದ 5ರವರೆಗಿನ ಐದು ದಿನಗಳ ವಹಿವಾಟಿನಲ್ಲಿ ನಿಫ್ಟಿಯಲ್ಲಿ ಗ್ರಾಸಿಮ್ ಶೇ 11.54ರಷ್ಟು, ಅಲ್ಟ್ರಾ ಟೆಕ್ ಸಿಮೆಂಟ್ ಶೇ 11.37ರಷ್ಟು, ಅದಾನಿ ಪೋರ್ಟ್ಸ್ ಶೇ 10.81ರಷ್ಟು, ಕೋಟಕ್ ಮಹೀಂದ್ರ ಬ್ಯಾಂಕ್ ಶೇ 1.31ರಷ್ಟು ಮತ್ತು ಹೀರೊ ಮೋಟೋಕಾರ್ಪ್ ಶೇ 7.37ರಷ್ಟು ಗಳಿಸಿಕೊಂಡಿವೆ. ಏರ್‌ಟೆಲ್ ಶೇ 1.92ರಷ್ಟು, ಇಂಡಸ್ ಇಂಡ್ ಬ್ಯಾಂಕ್ ಶೇ 4.77ರಷ್ಟು ಎಸ್‌ಬಿಐ ಶೇ 4.13ರಷ್ಟು, ಕೋಲ್ ಇಂಡಿಯಾ ಶೇ 0.72ರಷ್ಟು ಮತ್ತು ಹಿಂಡಾಲ್ಕೋ ಶೇ 3.32ರಷ್ಟು ಕುಸಿತ ದಾಖಲಿಸಿವೆ.

ಮುನ್ನೋಟ: ವಾಹನ ಉತ್ಪಾದನಾ ವಲಯದಲ್ಲಿನ ಸಕಾರಾತ್ಮಕತೆ, ಅರ್ಥ ವ್ಯವಸ್ಥೆಯಲ್ಲಿನ ಚೇತರಿಕೆಯಿಂದ ಮಾರುಕಟ್ಟೆಯಲ್ಲಿ ಹೂಡಿಕೆದಾರರ ಉತ್ಸಾಹ ಹೆಚ್ಚಾಗಿದ್ದರೂ ಬಾಂಡ್ ಮೇಲಿನ ಗಳಿಕೆ ಹೆಚ್ಚಳ ಮತ್ತು ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬರುತ್ತಿರುವ ನಕಾರಾತ್ಮಕತೆ ಸೂಚ್ಯಂಕಗಳ ಓಟಕ್ಕೆ ತಡೆ ಒಡ್ಡಿವೆ. ಸದ್ಯದ ಸ್ಥಿತಿಯಲ್ಲಿ ಜಾಗತಿಕ ಮಾರುಕಟ್ಟೆಗಳ ವರ್ತನೆ ನೇರವಾಗಿ ದೇಶೀಯ ಮಾರುಕಟ್ಟೆಯ ಮೇಲೆ ಹೆಚ್ಚು ಪರಿಣಾಮ ಬೀರಲಿದೆ. ಇದರ ಜತೆ ದೇಶೀಯವಾಗಿ ಗ್ರಾಹಕ ಬೆಲೆ ಸೂಚ್ಯಂಕ, ಸಗಟು ದರ ಸೂಚ್ಯಂಕ, ಕೈಗಾರಿಕೆ ಉತ್ಪಾದನೆ ದತ್ತಾಂಶಗಳ ಮೇಲೆ ಹೂಡಿಕೆದಾರರ ಗಮನವಿರಲಿದೆ.

ಸಂಕ್ಷಿಪ್ತ ಸುದ್ದಿ

ಹಳೆ ವಾಹನ ಗುಜರಿಗೆ ಹಾಕಿದರೆ ಹೊಸ ವಾಹನಕ್ಕೆ ರಿಯಾಯಿತಿ

ನವದೆಹಲಿ (ಪಿಟಿಐ): ಹಳೆಯ ವಾಹನ ಗುಜರಿಗೆ ಹಾಕಿ, ಹೊಸ ವಾಹನ ಖರೀದಿಸಲು ಆಲೋಚಿಸುತ್ತಿರುವವರಿಗೆ ಒಳ್ಳೆಯ ಸುದ್ದಿಯೊಂದು ಇಲ್ಲಿದೆ. ಗುಜರಿ ನೀತಿಯ ಅಡಿಯಲ್ಲಿ, ಹಳೆಯ ವಾಹನ ಗುಜರಿಗೆ ಹಾಕಿ ಹೊಸ ವಾಹನ ಖರೀದಿ ಮಾಡುವವರಿಗೆ ಆಟೊಮೊಬೈಲ್ ಕಂಪನಿಗಳು ಶೇಕಡ 5ರಷ್ಟು ರಿಯಾಯಿತಿ ನೀಡಲಿವೆ ಎಂದು ಕೇಂದ್ರ ರಸ್ತೆ ಸಾರಿಗೆ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ.

ವಾಹನಗಳನ್ನು ಸ್ವಇಚ್ಛೆಯಿಂದ ಗುಜರಿಗೆ ಹಾಕುವ ನೀತಿಯನ್ನು ಈ ಬಾರಿಯ ಬಜೆಟ್‌ನಲ್ಲಿ ಪ್ರಕಟಿಸಲಾಗಿದೆ. ಈ ನೀತಿಯು ದೇಶದ ಆಟೊಮೊಬೈಲ್ ಉದ್ಯಮದ ಪಾಲಿಗೆ ವರವಾಗಿ ಪರಿಣಮಿಸಲಿದೆ, ಇದು ದೇಶದ ಅತ್ಯಂತ ಲಾಭದಾಯಕ ಉದ್ಯಮ ವಲಯಗಳಲ್ಲಿ ಒಂದಾಗಲಿದೆ, ಇದರಿಂದಾಗಿ ದೊಡ್ಡ ಪ್ರಮಾಣದಲ್ಲಿ ಉದ್ಯೋಗ ಸೃಷ್ಟಿ ಆಗುತ್ತದೆ ಎಂದೂ ಗಡ್ಕರಿ ಹೇಳಿದ್ದಾರೆ.

ಆಟೊಮೊಬೈಲ್ ಉದ್ಯಮದ ವಾರ್ಷಿಕ ವಹಿವಾಟು ಈಗ ₹ 4.5 ಲಕ್ಷ ಕೋಟಿ ಇದ್ದು, ಈ ನೀತಿಯ ಕಾರಣದಿಂದ ಮುಂದಿನ ವರ್ಷಗಳಲ್ಲಿ ವಹಿವಾಟಿನ ಮೊತ್ತ ₹ 10 ಲಕ್ಷ ಕೋಟಿಗೆ ಹೆಚ್ಚಳ ಆಗಬಹುದು ಎಂದು ಸಚಿವರು ಅಂದಾಜಿಸಿದ್ದಾರೆ.

ಹೊಸ ನೀತಿಯಿಂದಾಗಿ ₹ 10 ಸಾವಿರ ಕೋಟಿಯಷ್ಟು ಹೂಡಿಕೆ ಆಗಲಿದೆ, 50 ಸಾವಿರ ಉದ್ಯೋಗ ಸೃಷ್ಟಿ ಕೂಡ ಆಗಲಿದೆ ಎಂದು ಅಂದಾಜು ಮಾಡಿದ್ದಾರೆ.

₹ 16,306 ಕೋಟಿ ಮೌಲ್ಯದ ಷೇರು ಮಾರಿದ ಎಂಎಫ್

ನವದೆಹಲಿ (ಪಿಟಿಐ): ದೇಶದ ಮ್ಯೂಚುವಲ್ ಫಂಡ್ (ಎಂಎಫ್) ಸಂಸ್ಥೆಗಳು ಲಾಭ ಗಳಿಸಿಕೊಳ್ಳುವ ಉದ್ದೇಶದಿಂದ ಫೆಬ್ರುವರಿಯಲ್ಲಿ ₹ 16,306 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿವೆ. ಇದರಿಂದಾಗಿ ಮ್ಯೂಚುವಲ್ ಫಂಡ್ ಸಂಸ್ಥೆಗಳಿಂದ ಸತತ 9ನೇ ತಿಂಗಳಿನಲ್ಲಿಯೂ ಬಂಡವಾಳ ಹಿಂತೆಗೆತ ನಡೆದಂತಾಗಿದೆ.

'ಷೇರುಪೇಟೆಯ ಏರುಮುಖ ಚಲನೆ ಕಡಿಮೆ ಆಗುವವರೆಗೂ, ಅದು ಸ್ಥಿರತೆಯತ್ತ ಬರುವವರೆಗೂ ಬಂಡವಾಳ ಹಿಂತೆಗೆತ ಮುಂದುವರಿಯುವ ಸಾಧ್ಯತೆ ಇದೆ' ಎಂದು ಫೈಯರ್ಸ್‌ನ ಸಂಶೋಧನಾ ಮುಖ್ಯಸ್ಥ ಗೋಪಾಲ್ ಕಾವಲಿರೆಡ್ಡಿ ತಿಳಿಸಿದ್ದಾರೆ.

'ಅತಿದೊಡ್ಡ ಕುಸಿತದ ಬಳಿಕ ಯಾವಾಗ ಮಾರುಕಟ್ಟೆಯು ಏರಿಕೆ ಕಾಣುತ್ತದೆಯೋ ಆಗ ಹೂಡಿಕೆದಾರರು ಬಂಡವಾಳ ಹಿಂದಕ್ಕೆ ಪಡೆಯುತ್ತಾರೆ. ಕೋವಿಡ್‌ಗೂ ಮೊದಲು 2ವರ್ಷಗಳವರೆಗೆ ನಷ್ಟ ಅನುಭವಿಸಿದ್ದ ಹೂಡಿಕೆದಾರರು ಕೆಲವು ತಿಂಗಳುಗಳಿಂದ ಲಾಭ ಗಳಿಸಿಕೊಳ್ಳುತ್ತಿದ್ದಾರೆ. ಪರಿಣಾಮವಾಗಿ ಬಂಡವಾಳ ಹಿಂತೆಗೆತ ಆಗುತ್ತಿದೆ' ಎಂದು ಗ್ರೀನ್ ಪೋರ್ಟ್‌ಫೋಲಿಯೊದ ಸಹ ಸ್ಥಾಪಕ ದಿವಮ್ ಶರ್ಮಾ ಅವರು ಹೇಳಿದ್ದಾರೆ.

ಉದ್ಯಮದ ಬದಲಾಗುತ್ತಿರುವ ಆದ್ಯತೆ

ಬೌನ್ಸ್: 130 ಸಿಬ್ಬಂದಿ ಮನೆಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉದ್ಯಮದ ಬದಲಾಗುತ್ತಿರುವ ಆದ್ಯತೆಗಳಿಗೆ ಅನುಗುಣವಾಗಿ ಫೆಬ್ರುವರಿಯಲ್ಲಿ ಗರಿಷ್ಠ 130 ಜನರನ್ನು ಕೆಲಸದಿಂದ ತೆಗೆಯಲಾಗಿದೆ. ಇದರಿಂದ ಒಟ್ಟಾರೆ ಸಿಬ್ಬಂದಿ ಸಂಖ್ಯೆ 270ಕ್ಕೆ ತಗ್ಗಿದೆ' ಎಂದು ದ್ವಿಚಕ್ರ ವಾಹನಗಳನ್ನು ಬಾಡಿಗೆ ಆಧಾರದಲ್ಲಿ ನೀಡುವ ನವೋದ್ಯಮ 'ಬೌನ್ಸ್' ತಿಳಿಸಿದೆ.

'ಪ್ರಜಾವಾಣಿ' ಜೊತೆ ಮಾತನಾಡಿದ ಬೌನ್ಸ್ ಸಹ ಸ್ಥಾಪಕ ಮತ್ತು ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ವಿವೇಕಾನಂದ ಹಳ್ಳೆಕೆರೆ, 'ವಿದೇಶದಲ್ಲಿಯೂ ವಹಿವಾಟು ವಿಸ್ತರಣೆ ಮಾಡುವ ಆಲೋಚನೆ ಇತ್ತು. ಆಟೊ, ಬೈಕ್ ಟ್ಯಾಕ್ಸಿ ಮತ್ತು ಕಾರ್ ಪೂಲ್ ಮಾಡುವ ಉದ್ದೇಶದಿಂದ ಸಿಬ್ಬಂದಿ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳಲಾಗಿತ್ತು. ಆದರೆ, ಕೋವಿಡ್–19 ಸಾಂಕ್ರಾಮಿಕದಿಂದಾಗಿ ನಮ್ಮ ಯೋಜನೆಗಳಿಗೆ ಅಡ್ಡಿಯುಂಟಾಗಿದೆ. ಹೀಗಾಗಿ ಕೆಲವರನ್ನು ಕೆಲಸದಿಂದ ತೆಗೆಯುವುದು ಅನಿವಾರ್ಯ ಆಯಿತು. ಆದರೆ, ಅವರಲ್ಲಿ ಬಹುತೇಕರಿಗೆ ಬೇರೆ ಕಂಪನಿಗಳಲ್ಲಿ ಕೆಲಸ ಕೊಡಿಸಲಾಗಿದೆ. ಮೂರು ತಿಂಗಳ ವೇತನ, ಡಿಸೆಂಬರ್‌ವರೆಗಿನ ವಿಮೆಯನ್ನೂ ನೀಡಿದ್ದೇವೆ' ಎಂದು ತಿಳಿಸಿದರು.



ವಿವೇಕಾನಂದ

'ಬೌನ್ಸ್‌ನಿಂದ ಹೊರಹೋದವರಲ್ಲಿ ಕೆಲವರು ಒಟ್ಟಾಗಿ ಆರು ಹೊಸ ನವೋದ್ಯಮಗಳನ್ನು ಸ್ಥಾಪಿಸಲು ಮುಂದಾಗಿದ್ದಾರೆ. ಅವರಿಗೆ ನಾವು ಬೆಂಬಲ ನೀಡುತ್ತಿದ್ದೇವೆ' ಎಂದು ವಿವೇಕಾನಂದ ತಿಳಿಸಿದರು. 'ಬೌನ್ಸ್‌ನಲ್ಲಿ ಹಣದ ಕೊರತೆ ಇಲ್ಲ. ಆದರೆ, ವಿದೇಶದಲ್ಲಿ ವಹಿವಾಟು ವಿಸ್ತರಣೆ ಸದ್ಯಕ್ಕೆ ಸಾಧ್ಯವಾಗದೇ ಇರುವುದು ಹಾಗೂ ವಿದ್ಯುತ್ ಚಾಲಿತ ವಾಹನಗಳತ್ತ ಹೆಚ್ಚು ಗಮನ ನೀಡುತ್ತಿರುವುದರಿಂದ ಕೆಲವೊಂದಿಷ್ಟು ಬದಲಾವಣೆ ಮಾಡಿಕೊಳ್ಳಲಾಗುತ್ತಿದೆ' ಎಂದರು.

'ಲಾಕ್‌ಡೌನ್ ಸಂದರ್ಭದಲ್ಲಿ ಶೂನ್ಯಕ್ಕೆ ತಲುಪಿದ್ದ ವಹಿವಾಟು ಈಗ ಶೇಕಡ 50ರಿಂದ ಶೇ 60ರವರೆಗೂ ಚೇತರಿಕೆ ಹಾದಿಗೆ ಮರಳಿದೆ' ಎಂದು ಅವರು ಹೇಳಿದರು.

'ಆರೋಗ್ಯಸೇವೆ: ವಾರ್ಷಿಕವಾಗಿ ₹50 ಸಾವಿರ ಕೋಟಿ ಉಳಿತಾಯ'

ನವದೆಹಲಿ (ಪಿಟಿಐ): ಔಷಧಿಗಳನ್ನು ಕೈಗೆಟಕುವ ಬೆಲೆಯಲ್ಲಿ ಒದಗಿಸಿದ್ದು, ಕೆಲವು ವೈದ್ಯಕೀಯ ಉಪಕರಣಗಳ ಬೆಲೆ ಕಡಿಮೆ ಮಾಡಿದ್ದು ಸೇರಿದಂತೆ ಆರೋಗ್ಯಸೇವಾ ಕ್ಷೇತ್ರದಲ್ಲಿ ತಮ್ಮ ಸರ್ಕಾರ ಕೈಗೊಂಡ ಕ್ರಮಗಳ ಪರಿಣಾಮವಾಗಿ, ಬಡವರಿಗೆ ವಾರ್ಷಿಕವಾಗಿ ಒಟ್ಟು ₹ 50 ಸಾವಿರ ಕೋಟಿಯಷ್ಟು ಉಳಿತಾಯ ಮಾಡಲು ಸಾಧ್ಯವಾಗುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.



7,500ನೆಯ ಜನೌಷಧಿ ಕೇಂದ್ರವನ್ನು ಶಿಲ್ಲಾಂಗ್‌ನಲ್ಲಿ ಉದ್ಘಾಟಿಸಿ ಮಾತನಾಡಿದ ಮೋದಿ, 'ಇಂತಹ ಕೇಂದ್ರಗಳನ್ನು ನಡೆಸುವವರು ಹಾಗೂ ಇದರ ಪ್ರಯೋಜನ ಪಡೆದವರ ಜೊತೆ ನಡೆಸಿದ ಮಾತುಕತೆಗಳ ಮೂಲಕ ನಾನು, ಈ ಯೋಜನೆಯು ಬಡವರು ಮತ್ತು ಮಧ್ಯಮ ವರ್ಗದ ಜನರಿಗೆ ದೊಡ್ಡ ನೆರವು ನೀಡಿದೆ ಎಂಬುದನ್ನು ಸ್ಪಷ್ಟವಾಗಿ ಕಂಡುಕೊಂಡಿರುವೆ' ಎಂದರು.

'ಆಯುಷ್ಮಾನ್ ಭಾರತ ಯೋಜನೆಯು 50 ಕೋಟಿ ಜನರಿಗೆ ₹ 5 ಲಕ್ಷದ ವರೆಗಿನ ಚಿಕಿತ್ಸೆ ಪಡೆಯಲು ನೆರವಾಗುತ್ತಿದೆ. 1.5 ಕೋಟಿಗಿಂತ ಹೆಚ್ಚು ಜನ ಈಗಾಗಲೇ ಯೋಜನೆಯ ಪ್ರಯೋಜನ ಪಡೆದಿದ್ದಾರೆ. ಈ ಯೋಜನೆಯು ಜನರಿಗೆ ₹ 30 ಸಾವಿರ ಕೋಟಿ ಉಳಿತಾಯ ಮಾಡಲು ನೆರವಾಗಿದೆ ಎಂಬ ಅಂದಾಜು ಇದೆ' ಎಂದು ಹೇಳಿದರು.

ಜನೌಷಧಿ, ಆಯುಷ್ಮಾನ್ ಭಾರತ ಯೋಜನೆಗಳು ಮತ್ತು ವೈದ್ಯಕೀಯ ಉಪಕರಣಗಳ ಬೆಲೆಯಲ್ಲಿ ಆಗಿರುವ ಇಳಿಕೆಯ ಪ್ರಯೋಜನಗಳ ಮೊತ್ತವನ್ನು ಒಟ್ಟುಗೂಡಿಸಿದರೆ, ಬಡವರು ಮತ್ತು ಮಧ್ಯಮ ವರ್ಗದ ಜನ ಪ್ರತಿ ವರ್ಷ ₹ 50 ಸಾವಿರ ಕೋಟಿ ಉಳಿತಾಯ ಮಾಡುತ್ತಿದ್ದಾರೆ ಎಂಬುದು ಗೊತ್ತಾಗುತ್ತದೆ ಎಂದು ಹೇಳಿದರು.

ಜಿಎಸ್‌ಟಿ ವ್ಯಾಪ್ತಿಗೆ ಪೆಟ್ರೋಲಿಯಂ ಉತ್ಪನ್ನ: ಎಚ್‌ಡಿಕೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೆಟ್ರೋಲಿಯಂ ಉತ್ಪನ್ನಗಳನ್ನು ಜಿಎಸ್‌ಟಿ ವ್ಯಾಪ್ತಿಗೆ ಒಳಪಡಿಸಿದರೆ ಅದು ರಾಜ್ಯಗಳ ಪಾಲಿಗೆ ಮರಣ ಶಾಸನವಾಗಲಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ತೈಲ ದರ ಏರಿಕೆ ವಿರುದ್ಧ ಜನರ ಆಕ್ರೋಶವನ್ನೇ ಬಳಸಿಕೊಂಡು, ದರ ಇಳಿಸುವ ನೆಪದಲ್ಲಿ ಪೆಟ್ರೋಲಿಯಂ ಉತ್ಪನ್ನಗಳನ್ನು ಜಿಎಸ್‌ಟಿಗೆ ಸೇರಿಸುವ ಹುನ್ನಾರವನ್ನು ಕೇಂದ್ರ ಸರ್ಕಾರ ವ್ಯವಸ್ಥಿತವಾಗಿ ನಡೆಸಿದೆ ಎಂದು ಸರಣಿ ಟ್ವೀಟ್‌ನಲ್ಲಿ ಹೇಳಿದ್ದಾರೆ.

ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಸೆಸ್ ರಾಜ್ಯಗಳ ಪ್ರಮುಖ ಆದಾಯ ಮೂಲಗಳಲ್ಲೊಂದು. ಕೇಂದ್ರ ಸರ್ಕಾರ ಮಿತಿ ಮೀರಿದ ತೆರಿಗೆ ವಿಧಿಸುತ್ತದೆ, ರಾಜ್ಯಗಳಿಗಿಂತಲೂ ಅಧಿಕ ಆದಾಯ ಸಂಗ್ರಹಿಸುತ್ತದೆ. ಈಗ ಪೆಟ್ರೋಲಿಯಂ ಅನ್ನು ಜಿಎಸ್‌ಟಿಗೆ ತಂದು ರಾಜ್ಯಗಳು ಪಡೆಯುತ್ತಿರುವ ಆದಾಯವನ್ನೂ ಲಪಟಾಯಿಸುವ ತಂತ್ರವನ್ನು ಮಾಡಿದೆ ಎಂದು ಅವರು ದೂರಿದ್ದಾರೆ.

ರಾಜ್ಯಗಳು ಆದಾಯವಿಲ್ಲದೇ, ಅಭಿವೃದ್ಧಿ ಕಾರ್ಯಗಳಿಗೆ ಅನುದಾನವಿಲ್ಲದೇ ಸಂಕಷ್ಟ ಅನುಭವಿಸಬೇಕಾಗುತ್ತದೆ. ಕೊರತೆ ಬಜೆಟ್ ಮಂಡಿಸುವ ಅಥವಾ, ಬಜೆಟ್ ಗಾತ್ರವನ್ನೇ ತಗ್ಗಿಸುವ ಸ್ಥಿತಿ ಬರಲಿದೆ. ಇದು ಅಭಿವೃದ್ಧಿ ವಿಚಾರದಲ್ಲಿ ಹಿಂದಕ್ಕೆ ಓಡಿದಂತೆ. ಪ್ರತಿಯೊಬ್ಬ ಪ್ರಜೆಯೂ ಇದರ ದುಷ್ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂದು ಹೇಳಿದ್ದಾರೆ.

ತೈಲ ಬೆಲೆ ಇಳಿಸುವ ಇದ್ದಲ್ಲಿ ತಾನು ವಿಧಿಸುತ್ತಿರುವ ತೆರಿಗೆಯನ್ನೇ ತಗ್ಗಿಸಲಿ. ರಾಜ್ಯಗಳಿಗೂ ತೆರಿಗೆ ತಗ್ಗಿಸಲು ಹೇಳಲಿ. ಅದು ಬಿಟ್ಟು ರಾಜ್ಯಗಳ ಪಾಲಿನ ಹಣಕ್ಕೂ ಕೈ ಇಡಬಾರದು. ರಾಜ್ಯಗಳನ್ನು ಶೋಷಿಸಿ ದೇಶ ಕಟ್ಟಲಾಗುತ್ತದೆಯೇ ಎಂದು ಪ್ರಶ್ನಿಸಿದ್ದಾರೆ.

ದೇಶಿ ಕಂಪನಿಗಳ ವಿದೇಶಿ ಹೂಡಿಕೆ ಶೇ 31ರಷ್ಟು ಇಳಿಕೆ



ಮುಂಬೈ (ಪಿಟಿಐ): ದೇಶದ ಕಂಪನಿಗಳ ವಿದೇಶಿ ನೇರ ಹೂಡಿಕೆಯು (ಒಎಫ್‌ಡಿಐ) ಫೆಬ್ರುವರಿಯಲ್ಲಿ ಶೇಕಡ 31ರಷ್ಟು ಇಳಿಕೆ ಆಗಿದ್ದು, ₹ 13,505 ಕೋಟಿ- ಗಳಷ್ಟಾಗಿದೆ ಎಂದು ಆರ್‌ಬಿಐ ಮಾಹಿತಿ ನೀಡಿದೆ.

ದೇಶಿ ಕಂಪನಿಗಳು ವಿದೇಶದಲ್ಲಿರುವ ತಮ್ಮ ಅಂಗಸಂಸ್ಥೆಗಳಲ್ಲಿ 2020ರ ಫೆಬ್ರುವರಿ ತಿಂಗಳಿನಲ್ಲಿ ₹ 19,418 ಕೋಟಿ ಹೂಡಿಕೆ ಮಾಡಿದ್ದವು. 2021ರ ಜನವರಿಯಲ್ಲಿ ₹ 8,687 ಕೋಟಿ ಹೂಡಿಕೆ ಆಗಿತ್ತು. ಇದಕ್ಕೆ ಹೋಲಿಸಿದರೆ 2021ರ ಫೆಬ್ರುವರಿಯಲ್ಲಿನ ಹೂಡಿಕೆಯು ಗರಿಷ್ಠ ಮಟ್ಟದಲ್ಲಿದೆ.

ಟಾಟಾ ಸ್ಟೀಲ್, ಸನ್ ಫಾರ್ಮಾಸ್ಯುಟಿಕಲ್ ಇಂಡಸ್ಟ್ರೀಸ್, ಒಎನ್‌ಜಿಸಿ ವಿದೇಶ್ ಲಿಮಿಟೆಡ್, ಜೆಎಸ್‌ಡಬ್ಲ್ಯು ಸ್ಟೀಲ್ ಸೇರಿದಂತೆ ಹಲವು ಕಂಪನಿಗಳು ವಿದೇಶಗಳಲ್ಲಿರುವ ತಮ್ಮ ಅಂಗಸಂಸ್ಥೆಗಳಲ್ಲಿ ಹೂಡಿಕೆ ಮಾಡಿವೆ ಎಂದು ಆರ್‌ಬಿಐ ಮಾಹಿತಿ ನೀಡಿದೆ.

ಬ್ಯಾಂಕ್‌ಗಳ ಆನ್‌ಲೈನ್ ವರದಿ ಆಧರಿಸಿ ಈ ಮಾಹಿತಿ ನೀಡಲಾಗಿದ್ದು, ಇವು ತಾತ್ಕಾಲಿಕವಾಗಿದೆ ಎಂದು ಆರ್‌ಬಿಐ ತಿಳಿಸಿದೆ.

ರಾಮನಗರ ರೇಷ್ಮೆ ಗೂಡು ಧಾರಣೆ



ಮಿಶ್ರತಳಿ (ಸಿ.ಬಿ)
₹235-395
ದ್ವಿತಳಿ (ಬಿ.ವಿ)
₹322-446

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು
100 ಮೊಟ್ಟೆಗೆ ₹415
12 ಮೊಟ್ಟೆಗೆ ₹55
ಮೈಸೂರು
100 ಮೊಟ್ಟೆಗೆ ₹418

ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ –14 ವೇಳಾಪಟ್ಟಿ

ದಿನಾಂಕ	ಆರಂಭ	ಸ್ಥಳ	ತಂಡಗಳು
ಏ.9	ಸಂಜೆ 7.30	ಚೆನ್ನೈ	ಮುಂಬೈ ಇಂಡಿಯನ್ಸ್–ರಾಯಲ್ ಚಾಲೆಂಜರ್ಸ್ ಬೆಂಗಳೂರು
ಏ.10	ಸಂಜೆ 7.30	ಮುಂಬೈ	ಚೆನ್ನೈ ಸೂಪರ್ ಕಿಂಗ್ಸ್–ಡೆಲ್ಲಿ ಕ್ಯಾಪಿಟಲ್ಸ್
ಏ.11	ಸಂಜೆ 7.30	ಚೆನ್ನೈ	ಸನ್‌ರೈಸರ್ಸ್ ಹೈದರಾಬಾದ್–ಕೋಲ್ಕತ್ತ ನೈಟ್ ರೈಡರ್ಸ್
ಏ.12	ಸಂಜೆ 7.30	ಮುಂಬೈ	ರಾಜಸ್ಥಾನ ರಾಯಲ್ಸ್–ಪಂಜಾಬ್ ಕಿಂಗ್ಸ್
ಏ.13	ಸಂಜೆ 7.30	ಚೆನ್ನೈ	ಕೋಲ್ಕತ್ತ ನೈಟ್ ರೈಡರ್ಸ್–ಮುಂಬೈ ಇಂಡಿಯನ್ಸ್
ಏ.14	ಸಂಜೆ 7.30	ಚೆನ್ನೈ	ಸನ್‌ರೈಸರ್ಸ್ ಹೈದರಾಬಾದ್–ರಾಯಲ್ ಚಾಲೆಂಜರ್ಸ್ ಬೆಂಗಳೂರು
ಏ.15	ಸಂಜೆ 7.30	ಮುಂಬೈ	ರಾಜಸ್ಥಾನ ರಾಯಲ್ಸ್–ಡೆಲ್ಲಿ ಕ್ಯಾಪಿಟಲ್ಸ್
ಏ.16	ಸಂಜೆ 7.30	ಮುಂಬೈ	ಪಂಜಾಬ್ ಕಿಂಗ್ಸ್–ಚೆನ್ನೈ ಸೂಪರ್ ಕಿಂಗ್ಸ್
ಏ.17	ಸಂಜೆ 7.30	ಚೆನ್ನೈ	ಮುಂಬೈ ಇಂಡಿಯನ್ಸ್–ಸನ್‌ರೈಸರ್ಸ್ ಹೈದರಾಬಾದ್
ಏ.18	ಮಧ್ಯಾಹ್ನ 3.30	ಚೆನ್ನೈ	ರಾಯಲ್ ಚಾಲೆಂಜರ್ಸ್ ಬೆಂಗಳೂರು–ಕೋಲ್ಕತ್ತ ನೈಟ್ ರೈಡರ್ಸ್
ಏ.18	ಸಂಜೆ 7.30	ಮುಂಬೈ	ಡೆಲ್ಲಿ ಕ್ಯಾಪಿಟಲ್ಸ್–ಪಂಜಾಬ್ ಕಿಂಗ್ಸ್
ಏ.19	ಸಂಜೆ 7.30	ಮುಂಬೈ	ಚೆನ್ನೈ ಸೂಪರ್ ಕಿಂಗ್ಸ್–ರಾಜಸ್ಥಾನ ರಾಯಲ್ಸ್
ಏ.20	ಸಂಜೆ 7.30	ಚೆನ್ನೈ	ಡೆಲ್ಲಿ ಕ್ಯಾಪಿಟಲ್ಸ್–ಮುಂಬೈ ಇಂಡಿಯನ್ಸ್
ಏ.21	ಮಧ್ಯಾಹ್ನ 3.30	ಚೆನ್ನೈ	ಪಂಜಾಬ್ ಕಿಂಗ್ಸ್–ಸನ್‌ರೈಸರ್ಸ್ ಹೈದರಾಬಾದ್
ಏ.21	ಸಂಜೆ 7.30	ಮುಂಬೈ	ಕೋಲ್ಕತ್ತ ನೈಟ್ ರೈಡರ್ಸ್–ಚೆನ್ನೈ ಸೂಪರ್ ಕಿಂಗ್ಸ್
ಏ.22	ಸಂಜೆ 7.30	ಮುಂಬೈ	ರಾಯಲ್ ಚಾಲೆಂಜರ್ಸ್ ಬೆಂಗಳೂರು–ರಾಜಸ್ಥಾನ ರಾಯಲ್ಸ್
ಏ.23	ಸಂಜೆ 7.30	ಚೆನ್ನೈ	ಪಂಜಾಬ್ ಕಿಂಗ್ಸ್–ಮುಂಬೈ ಇಂಡಿಯನ್ಸ್
ಏ.24	ಸಂಜೆ.7.30	ಮುಂಬೈ	ರಾಜಸ್ಥಾನ ರಾಯಲ್ಸ್–ಕೋಲ್ಕತ್ತ ನೈಟ್ ರೈಡರ್ಸ್
ಏ.25	ಮಧ್ಯಾಹ್ನ 3.30	ಮುಂಬೈ	ಚೆನ್ನೈ ಸೂಪರ್ ಕಿಂಗ್ಸ್–ರಾಯಲ್ ಚಾಲೆಂಜರ್ಸ್ ಬೆಂಗಳೂರು
ಏ.25	ಸಂಜೆ 7.30	ಚೆನ್ನೈ	ಸನ್‌ರೈಸರ್ಸ್ ಹೈದರಾಬಾದ್–ಡೆಲ್ಲಿ ಕ್ಯಾಪಿಟಲ್ಸ್
ಏ.26	ಸಂಜೆ 7.30	ಅಹಮದಾಬಾದ್	ಪಂಜಾಬ್ ಕಿಂಗ್ಸ್–ಕೋಲ್ಕತ್ತ ನೈಟ್ ರೈಡರ್ಸ್
ಏ.27	ಸಂಜೆ 7.30	ಅಹಮದಾಬಾದ್	ಡೆಲ್ಲಿ ಕ್ಯಾಪಿಟಲ್ಸ್–ರಾಯಲ್ ಚಾಲೆಂಜರ್ಸ್ ಬೆಂಗಳೂರು
ಏ.28	ಸಂಜೆ 7.30	ದೆಹಲಿ	ಚೆನ್ನೈ ಸೂಪರ್ ಕಿಂಗ್ಸ್–ಸನ್‌ರೈಸರ್ಸ್ ಹೈದರಾಬಾದ್
ಏ.29	ಮಧ್ಯಾಹ್ನ 3.30	ದೆಹಲಿ	ಮುಂಬೈ ಇಂಡಿಯನ್ಸ್–ರಾಜಸ್ಥಾನ ರಾಯಲ್ಸ್
ಏ.29	ಸಂಜೆ 7.30	ಅಹಮದಾಬಾದ್	ಡೆಲ್ಲಿ ಕ್ಯಾಪಿಟಲ್ಸ್–ಕೋಲ್ಕತ್ತ ನೈಟ್ ರೈಡರ್ಸ್
ಏ.30	ಸಂಜೆ 7.30	ಅಹಮದಾಬಾದ್	ಪಂಜಾಬ್ ಕಿಂಗ್ಸ್–ರಾಯಲ್ ಚಾಲೆಂಜರ್ಸ್ ಬೆಂಗಳೂರು
ಮೇ 1	ಸಂಜೆ 7.30	ದೆಹಲಿ	ಮುಂಬೈ ಇಂಡಿಯನ್ಸ್–ಚೆನ್ನೈ ಸೂಪರ್ ಕಿಂಗ್ಸ್
ಮೇ 2	ಮಧ್ಯಾಹ್ನ 3.30	ದೆಹಲಿ	ರಾಜಸ್ಥಾನ ರಾಯಲ್ಸ್–ಸನ್‌ರೈಸರ್ಸ್ ಹೈದರಾಬಾದ್
ಮೇ 2	ಸಂಜೆ 7.30	ಅಹಮದಾಬಾದ್	ಪಂಜಾಬ್ ಕಿಂಗ್ಸ್–ಡೆಲ್ಲಿ ಕ್ಯಾಪಿಟಲ್ಸ್
ಮೇ 3	ಸಂಜೆ 7.30	ಅಹಮದಾಬಾದ್	ಕೋಲ್ಕತ್ತ ನೈಟ್ ರೈಡರ್ಸ್–ರಾಯಲ್ ಚಾಲೆಂಜರ್ಸ್ ಬೆಂಗಳೂರು
ಮೇ 4	ಸಂಜೆ 7.30	ದೆಹಲಿ	ಸನ್‌ರೈಸರ್ಸ್ ಹೈದರಾಬಾದ್–ಮುಂಬೈ ಇಂಡಿಯನ್ಸ್
ಮೇ 5	ಸಂಜೆ 7.30	ದೆಹಲಿ	ರಾಜಸ್ಥಾನ ರಾಯಲ್ಸ್–ಚೆನ್ನೈ ಸೂಪರ್ ಕಿಂಗ್ಸ್
ಮೇ 6	ಸಂಜೆ 7.30	ಅಹಮದಾಬಾದ್	ರಾಯಲ್ ಚಾಲೆಂಜರ್ಸ್ ಬೆಂಗಳೂರು–ಪಂಜಾಬ್ ಕಿಂಗ್ಸ್
ಮೇ 7	ಸಂಜೆ 7.30	ದೆಹಲಿ	ಸನ್‌ರೈಸರ್ಸ್ ಹೈದರಾಬಾದ್–ಚೆನ್ನೈ ಸೂಪರ್ ಕಿಂಗ್ಸ್
ಮೇ 8	ಮಧ್ಯಾಹ್ನ 3.30	ಅಹಮದಾಬಾದ್	ಕೋಲ್ಕತ್ತ ನೈಟ್ ರೈಡರ್ಸ್–ಡೆಲ್ಲಿ ಕ್ಯಾಪಿಟಲ್ಸ್
ಮೇ 8	ಸಂಜೆ 7.30	ದೆಹಲಿ	ರಾಜಸ್ಥಾನ ರಾಯಲ್ಸ್–ಮುಂಬೈ ಇಂಡಿಯನ್ಸ್
ಮೇ 9	ಮಧ್ಯಾಹ್ನ 3.30	ಬೆಂಗಳೂರು	ಚೆನ್ನೈ ಸೂಪರ್ ಕಿಂಗ್ಸ್–ಪಂಜಾಬ್ ಕಿಂಗ್ಸ್
ಮೇ 9	ಸಂಜೆ 7.30	ಕೋಲ್ಕತ್ತ	ರಾಯಲ್ ಚಾಲೆಂಜರ್ಸ್ ಬೆಂಗಳೂರು–ಸನ್‌ರೈಸರ್ಸ್ ಹೈದರಾಬಾದ್
ಮೇ 10	ಸಂಜೆ 7.30	ಬೆಂಗಳೂರು	ಮುಂಬೈ ಇಂಡಿಯನ್ಸ್–ಕೋಲ್ಕತ್ತ ನೈಟ್ ರೈಡರ್ಸ್
ಮೇ 11	ಸಂಜೆ 7.30	ಕೋಲ್ಕತ್ತ	ಡೆಲ್ಲಿ ಕ್ಯಾಪಿಟಲ್ಸ್–ರಾಜಸ್ಥಾನ ರಾಯಲ್ಸ್
ಮೇ 12	ಸಂಜೆ 7.30	ಬೆಂಗಳೂರು	ಚೆನ್ನೈ ಸೂಪರ್ ಕಿಂಗ್ಸ್–ಕೋಲ್ಕತ್ತ ನೈಟ್ ರೈಡರ್ಸ್
ಮೇ 13	ಮಧ್ಯಾಹ್ನ 3.30	ಬೆಂಗಳೂರು	ಮುಂಬೈ ಇಂಡಿಯನ್ಸ್–ಪಂಜಾಬ್ ಕಿಂಗ್ಸ್
ಮೇ 13	ಸಂಜೆ 7.30	ಕೋಲ್ಕತ್ತ	ಸನ್‌ರೈಸರ್ಸ್ ಹೈದರಾಬಾದ್–ರಾಜಸ್ಥಾನ ರಾಯಲ್ಸ್
ಮೇ 14	ಸಂಜೆ 7.30	ಕೋಲ್ಕತ್ತ	ರಾಯಲ್ ಚಾಲೆಂಜರ್ಸ್ ಬೆಂಗಳೂರು–ಡೆಲ್ಲಿ ಕ್ಯಾಪಿಟಲ್ಸ್
ಮೇ 15	ಸಂಜೆ 7.30	ಬೆಂಗಳೂರು	ಕೋಲ್ಕತ್ತ ನೈಟ್ ರೈಡರ್ಸ್–ಪಂಜಾಬ್ ಕಿಂಗ್ಸ್
ಮೇ 16	ಮಧ್ಯಾಹ್ನ 3.30	ಕೋಲ್ಕತ್ತ	ರಾಜಸ್ಥಾನ ರಾಯಲ್ಸ್–ರಾಯಲ್ ಚಾಲೆಂಜರ್ಸ್ ಬೆಂಗಳೂರು
ಮೇ 16	ಸಂಜೆ 7.30	ಬೆಂಗಳೂರು	ಚೆನ್ನೈ ಸೂಪರ್ ಕಿಂಗ್ಸ್–ಮುಂಬೈ ಇಂಡಿಯನ್ಸ್
ಮೇ 17	ಸಂಜೆ 7.30	ಕೋಲ್ಕತ್ತ	ಡೆಲ್ಲಿ ಕ್ಯಾಪಿಟಲ್ಸ್–ಸನ್‌ರೈಸರ್ಸ್ ಹೈದರಾಬಾದ್
ಮೇ 18	ಸಂಜೆ 7.30	ಬೆಂಗಳೂರು	ಕೋಲ್ಕತ್ತ ನೈಟ್ ರೈಡರ್ಸ್–ರಾಜಸ್ಥಾನ ರಾಯಲ್ಸ್
ಮೇ 19	ಸಂಜೆ 7.30	ಬೆಂಗಳೂರು	ಸನ್‌ರೈಸರ್ಸ್ ಹೈದರಾಬಾದ್–ಪಂಜಾಬ್ ಕಿಂಗ್ಸ್
ಮೇ 20	ಸಂಜೆ 7.30	ಕೋಲ್ಕತ್ತ	ರಾಯಲ್ ಚಾಲೆಂಜರ್ಸ್ ಬೆಂಗಳೂರು–ಮುಂಬೈ ಇಂಡಿಯನ್ಸ್
ಮೇ 21	ಮಧ್ಯಾಹ್ನ 3.30	ಬೆಂಗಳೂರು	ಕೋಲ್ಕತ್ತ ನೈಟ್ ರೈಡರ್ಸ್–ಸನ್‌ರೈಸರ್ಸ್ ಹೈದರಾಬಾದ್
ಮೇ 21	ಸಂಜೆ 7.30	ಕೋಲ್ಕತ್ತ	ಡೆಲ್ಲಿ ಕ್ಯಾಪಿಟಲ್ಸ್–ಚೆನ್ನೈ ಸೂಪರ್ ಕಿಂಗ್ಸ್
ಮೇ 22	ಸಂಜೆ 7.30	ಬೆಂಗಳೂರು	ಪಂಜಾಬ್ ಕಿಂಗ್ಸ್–ರಾಜಸ್ಥಾನ ರಾಯಲ್ಸ್
ಮೇ 23	ಮಧ್ಯಾಹ್ನ 3.30	ಕೋಲ್ಕತ್ತ	ಮುಂಬೈ ಇಂಡಿಯನ್ಸ್–ಡೆಲ್ಲಿ ಕ್ಯಾಪಿಟಲ್ಸ್
ಮೇ 23	ಸಂಜೆ 7.30	ಕೋಲ್ಕತ್ತ	ರಾಯಲ್ ಚಾಲೆಂಜರ್ಸ್ ಬೆಂಗಳೂರು–ಚೆನ್ನೈ ಸೂಪರ್ ಕಿಂಗ್ಸ್
ಮೇ 25	ಸಂಜೆ 7.30	ಅಹಮದಾಬಾದ್	ಮೊದಲ ಕ್ವಾಲಿಫೈಯರ್
ಮೇ 26	ಸಂಜೆ 7.30	ಅಹಮದಾಬಾದ್	ಎಲಿಮಿನೇಟರ್
ಮೇ 28	ಸಂಜೆ 7.30	ಅಹಮದಾಬಾದ್	ಎರಡನೇ ಕ್ವಾಲಿಫೈಯರ್
ಮೇ 30	ಸಂಜೆ 7.30	ಅಹಮದಾಬಾದ್	ಫೈನಲ್

ಮಾಹಿತಿ: ಐಪಿಎಲ್ ವೆಬ್‌ಸೈಟ್


ಬೆಂಗಳೂರಿನಲ್ಲಿ 10 ಪಂದ್ಯಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ಸಲದ ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಟೂರ್ನಿಯ ಲೀಗ್ ಹಂತದ ಹತ್ತು ಪಂದ್ಯಗಳಿಗೆ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣವು ಆತಿಥ್ಯ ವಹಿಸಲಿದೆ.

ಏಪ್ರಿಲ್ 9ರಂದು ಟೂರ್ನಿಯ ಉದ್ಘಾಟನೆ ಪಂದ್ಯವು ಚೆನ್ನೈನಲ್ಲಿ ನಡೆಯಲಿದೆ. ಆದರೆ, ಬೆಂಗಳೂರಿನಲ್ಲಿ ಮೊದಲ ಪಂದ್ಯವು ಮೇ 9ರಂದು ಆಯೋಜನೆಗೊಂಡಿದೆ. ಅಂದು ಮಧ್ಯಾಹ್ನ 3.30ಕ್ಕೆ ಆರಂಭವಾಗುವ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಮತ್ತು ಪಂಜಾಬ್ ಕಿಂಗ್ಸ್ ಮುಖಾಮುಖಿಯಾಗಲಿವೆ. ಆದರೆ ನಗರದಲ್ಲಿ ಆರ್‌ಸಿಬಿಯ ಒಂದೂ ಪಂದ್ಯ ಇಲ್ಲ.

ಟೂರ್ನಿಯಲ್ಲಿ ಒಟ್ಟು 56 ಲೀಗ್ ಪಂದ್ಯಗಳು ನಡೆಯಲಿವೆ. ಇದರಲ್ಲಿ ಬೆಂಗಳೂರು, ಚೆನ್ನೈ, ಮುಂಬೈ ಮತ್ತು



ಚಿನ್ನಸ್ವಾಮಿ ಕ್ರೀಡಾಂಗಣ

ಕೋಲ್ಕತ್ತದಲ್ಲಿ ತಲಾ 10 ಪಂದ್ಯಗಳು ನಡೆಯಲಿವೆ. ಅಹಮದಾಬಾದ್ ಮತ್ತು ದೆಹಲಿಯಲ್ಲಿ ತಲಾ ಎಂಟು ಪಂದ್ಯಗಳು ಆಯೋಜನೆಗೊಂಡಿವೆ.

11 ಡಬಲ್ ಹೆಡರ್: ಒಟ್ಟು 11 ಡಬಲ್ ಹೆಡರ್‌ಗಳು (ದಿನ ಮೊಂದರಲ್ಲಿ ಎರಡು ಪಂದ್ಯ) ನಿಗದಿಯಾಗಿವೆ. ಮಧ್ಯಾಹ್ನ 3.30 ಮತ್ತು ಇನ್ನೊಂದು ಪಂದ್ಯವು ರಾತ್ರಿ 7.30ಕ್ಕೆ ಆರಂಭವಾಗಲಿವೆ. ಐಪಿಎಲ್ ವೇಳಾಪಟ್ಟಿಯ ಪ್ರಕಾರ ಎಲ್ಲ ಎಂಟು ತಂಡಗಳು ಲೀಗ್ ಹಂತದಲ್ಲಿ ಮೂರು ಬಾರಿ ಮಾತ್ರ ಒಂದು ತಾಣದಿಂದ ಮಗದೊಂದು ತಾಣಕ್ಕೆ ಪ್ರಯಾಣಿಸಲಿದೆ. ಈ ಮೂಲಕ ಕೋವಿಡ್ ಅಪಾಯವನ್ನು ಸಾಧ್ಯವಾದಷ್ಟು ಕಡಿಮೆ ಮಾಡಲಾಗಿದೆ.

ಬಂಗಾಳ ಚುನಾವಣೆ: ಮೇ 6ರವರೆಗೆ ಟೂರ್ನಿಯಲ್ಲಿ ಒಟ್ಟು 33 ಪಂದ್ಯಗಳು ನಡೆಯುತ್ತವೆ. ಆದರೆ ಈ ಅವಧಿಯಲ್ಲಿ ಕೋಲ್ಕತ್ತದಲ್ಲಿ ಯಾವುದೇ ಪಂದ್ಯಗಳನ್ನು ಆಯೋಜಿಸಲಾಗಿಲ್ಲ. ಬಂಗಾಳದಲ್ಲಿ ವಿಧಾನ ಸಭೆ ಚುನಾವಣೆ ನಡೆಯಲಿರುವ ಕಾರಣದಿಂದ ಮೇ ಎರಡನೇ ವಾರದಲ್ಲಿ ಪಂದ್ಯಗಳ ಆಯೋಜನೆಗೆ ಅವಕಾಶ ನೀಡಲಾಗಿದೆ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

‘ಈ ಬಾರಿ ಯಾವುದೇ ತಂಡವೂ ತವರು ಅಂಗಳದಲ್ಲಿ ಒಂದೂ ಪಂದ್ಯವನ್ನೂ ಆಡುವುದಿಲ್ಲ. ಆದ್ದರಿಂದ ಎಲ್ಲವೂ ತಟಸ್ಥ ತಾಣಗಳಾಗಿವೆ’ ಎಂದು ಐಪಿಎಲ್ ಸಮಿತಿಯ ಸದಸ್ಯರೊಬ್ಬರು ತಿಳಿಸಿದ್ದಾರೆ.

ಹಿಂದೆ ಸರಿದ ಬಾಕ್ಸರ್‌ಗಳು

ನವದೆಹಲಿ (ಪಿಟಿಐ): ಸ್ಪೇನ್‌ನ ಕ್ಯಾಸ್ಟೆಲ್ಲೋನ್‌ನಲ್ಲಿ ನಡೆಯುತ್ತಿರುವ ಬಾಕ್ಸಮ್ ಅಂತರರಾಷ್ಟ್ರೀಯ ಟೂರ್ನಿಯಲ್ಲಿ ಭಾರತದ ಬಾಕ್ಸರ್‌ಗಳ ಚಿನ್ನದ ಪದಕಗಳ ಕನಸಿಗೆ ಕೋವಿಡ್–19 ಪಿಡುಗು ಅಡ್ಡಿಯಾಯಿತು. ಟೋಕಿಯೊ ಒಲಿಂಪಿಕ್ಸ್ ಟಿಕೆಟ್ ಗಿಟ್ಟಿಸಿರುವ ಆಶಿಶ್ ಕುಮಾರ್ (75 ಕೆಜಿ ವಿಭಾಗ) ಅವರಿಗೆ ಕೊರೊನಾ ಸೋಂಕು ಇರುವುದು ದೃಢಪಟ್ಟಿದೆ. ಮೊಹಮ್ಮದ್ ಹುಸಾಮುದ್ದೀನ್ ಹಾಗೂ ಸುಮಿತ್ ಸಂಗ್ವಾನ್ ಕೂಡ ಶನಿವಾರ ರಾತ್ರಿ ನಡೆಯಬೇಕಿದ್ದ ಫೈನಲ್ ಬೌಟ್‌ಗಳಲ್ಲಿ ಸೆಣಸಲು ಸಾಧ್ಯವಾಗಲಿಲ್ಲ.

ವಿಜಯ್ ಹಜಾರೆ: ಕರ್ನಾಟಕಕ್ಕೆ ಕೇರಳ ತಂಡದ ಸವಾಲು

ಬೆಂಗಳೂರು: ವಿಜಯ್ ಹಜಾರೆ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಸೋಮವಾರ ಕರ್ನಾಟಕ ಮತ್ತು ಕೇರಳ ತಂಡಗಳು ಮುಖಾಮುಖಿಯಾಗಲಿವೆ.

ಪಾಲಂನ ಏರ್‌ಫೋರ್ಸ್ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಆರ್. ಸಮರ್ಥ್ ನೇತೃತ್ವದ ಕರ್ನಾಟಕ (16 ಪಾಯಿಂಟ್ಸ್) ತಂಡವು ಸಿ ಗುಂಪಿನಲ್ಲಿ ಅಗ್ರಸ್ಥಾನ ಗಳಿಸಿ ಎಂಟರಘಟ್ಟ ತಲುಪಿದೆ. ಲೀಗ್‌ನ ಮೊದಲ ಹಣಾಹಣಿಯಲ್ಲಿ ಉತ್ತರ ಪ್ರದೇಶ ತಂಡದ ಎದುರು ಸೋಲು ಅನುಭವಿಸಿದ್ದ ತಂಡವು ಬಳಿಕ ಪುಟಿದೆದ್ದಿತ್ತು. ನಂತರದ ನಾಲ್ಕು ಪಂದ್ಯಗಳಲ್ಲಿ ಜಯಭೇರಿ ಮೊಳಗಿಸಿತ್ತು.

ಕೇರಳ ಕೂಡ 16 ಪಾಯಿಂಟ್ಸ್ ಗಳಿಸಿತ್ತು. ಆದರೆ ರನ್ ರೇಟ್ ಆಧಾರದಲ್ಲಿ ಸಮರ್ಥ್ ಬಳಗಕ್ಕಿಂತ ಹಿಂದುಳಿದಿತ್ತು. ಉಭಯ ತಂಡಗಳ ನಡುವಣ ಲೀಗ್ ಪಂದ್ಯದಲ್ಲಿ ಕರ್ನಾಟಕ ಒಂಬತ್ತು ವಿಕೆಟ್‌ಗಳಿಂದ ಕೇರಳ ತಂಡವನ್ನು ಪರಾಭವಗೊಳಿಸಿತ್ತು.



ಕೆ.ವಿ.ಸಿದ್ಧಾರ್ಥ್, ಆರ್.ಸಮರ್ಥ್ ಮತ್ತು ದೇವದತ್ತ ಪಡಿಕ್ಕಲ್

ಭರ್ಜರಿ ಲಯದಲ್ಲಿರುವ ನಾಯಕ ಸಮರ್ಥ್, ದೇವದತ್ತ ಪಡಿಕ್ಕಲ್ ಹಾಗೂ ಕೆ.ವಿ.ಸಿದ್ಧಾರ್ಥ್ ಕರ್ನಾಟಕ ತಂಡದ ಬ್ಯಾಟಿಂಗ್ ಶಕ್ತಿಯಾಗಿ ದ್ದಾರೆ. ಬೌಲಿಂಗ್‌ನಲ್ಲಿ ವೇಗಿ ಅಭಿಮನ್ಯು ಮಿಥುನ್, ಸ್ಪಿನ್ನರ್‌ಗಳಾದ ಶ್ರೇಯಸ್ ಗೋಪಾಲ್ ಹಾಗೂ ಜಗದೀಶ ಸುಚಿತ್ ಮಿಂಚುತ್ತಿದ್ದಾರೆ. ಕೇರಳ ತಂಡದಲ್ಲಿರುವ ಕನ್ನಡಿಗ ರಾಬಿನ್ ಉತ್ತಪ್ಪ ಇದುವರೆಗೆ ಎರಡು ಶತಕ ದಾಖಲಿಸಿದ್ದಾರೆ. ವಿಷ್ಣು ವಿನೋದ್ ಉತ್ತಮ ಲಯದಲ್ಲಿದ್ದಾರೆ. ವೇಗಿ ಎಸ್. ಶ್ರೀಶಾಂತ್ ಹಾಗೂ ಎಂ.ಡಿ. ನಿಧೀಶ್ ಬೌಲಿಂಗ್ ಬಲವೂ ಅದಕ್ಕಿದೆ.

ಪಂದ್ಯ ಆರಂಭ: ಬೆಳಿಗ್ಗೆ 9ಕ್ಕೆ
ಸ್ಥಳ: ಏರ್‌ಫೋರ್ಸ್ ಕ್ರೀಡಾಂಗಣ, ಪಾಲಂ, ದೆಹಲಿ



ಈಜು: ಡಾಲ್ಫಿನ್ ಎರಡು ದಾಖಲೆ; ಬಿಎಸಿ ಪಾರಮ್ಯ

ರಿಧಿಮಾ, ಸುವನಾ ಕೂಟ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಾಲ್ಫಿನ್ ಅಕ್ವಾಟಿಕ್ಸ್‌ನ ಸುವನಾ ಸಿ.ಭಾಸ್ಕರ್ ಮತ್ತು ಬಸವನಗುಡಿ ಈಜುಕೇಂದ್ರದ (ಬಿಎಸಿ) ರಿಧಿಮಾ ವಿ.ಕುಮಾರ್, ರಾಜ್ಯ ಈಜುಕೂಟದಲ್ಲಿ ಭಾನುವಾರ ಕೂಟ ದಾಖಲೆ ನಿರ್ಮಿಸಿದರು. ರಾಜ್ಯ ಈಜು ಸಂಸ್ಥೆಯು ಡಾಲ್ಫಿನ್ ಅಕ್ವಾಟಿಕ್ಸ್, ಪಡುಕೋಣೆ–ದ್ರಾವಿಡ್ ಸೆಂಟರ್ ಫಾರ್ ಸ್ಪೋರ್ಟ್ಸ್ ಎಕ್ಸಲೆನ್ಸ್‌ನಲ್ಲಿ ಆಯೋಜಿಸಿದ್ದ ಕೂಟದ ಮಹಿಳೆಯರ ಮೆಡ್ಲೆಯಲ್ಲಿ ಡಾಲ್ಫಿನ್ ಅಕ್ವಟಿಕ್ಸ್ ಎರಡು ದಾಖಲೆ ಬರೆಯಿತು. ಬಾಲಕರ ಮೆಡ್ಲೆಯಲ್ಲಿ ಬಿಎಸಿ ದಾಖಲೆ ನಿರ್ಮಿಸಿತು. ಎರಡನೇ ದಿನ ಎರಡು ದಾಖಲೆ ಗಳನ್ನು ನಿರ್ಮಿಸಿದ್ದ ಬಸವನಗುಡಿ ಈಜುಕೇಂದ್ರದ ತನಿಶ್ ಜಾರ್ಜ್ ಮ್ಯಾಥ್ಯೂ ಕೊನೆಯ ದಿನ ಬಾಲರಕ ಗುಂಪು 1ರ 100 ಮೀಟರ್ಸ್ ಫ್ರೀಸ್ಟೈಲ್‌ನಲ್ಲಿ ದಾಖಲೆ ಮಾಡಿದರು. ಭಾರತ ಈಜು ಫೆಡರೇಷನ್‌ನ ಅತಿಥಿ ಈಜುಪಟು ಕೆನಿಶಾ ಗುಪ್ತಾ ಮಹಿಳೆಯರ ಗುಂಪು1ರ 100 ಮೀ ಫ್ರೀಸ್ಟೈಲ್‌ನಲ್ಲಿ ದಾಖಲೆ ಮಾಡಿದರು.

ಕೊನೆಯ ದಿನದ ಫಲಿತಾಂಶಗಳು: ಮಹಿಳೆಯರ 200 ಮೀ ಬಟರ್‌ಫ್ಲೈ: ವಿಭಾ ಅಪರ್ಣಾ (ಪೂಜಾ ಅಕ್ವಾಟಿಕ್ಸ್)-1. ಕಾಲ:2:56.03; ನಿಖಿತಾ (ಬಿಎಸಿ)-2; ಬಾಲಕರ ಗುಂಪು1ರ 200 ಮೀ ಬಟರ್‌ಫ್ಲೈ: ತನಿಶ್ ಜಾರ್ಜ್ ಮ್ಯಾಥ್ಯೂ (ಬಿಎಸಿ)-1. ಕಾಲ:2:06.61, ಉತ್ಕರ್ಷ್ ಪಾಟೀಲ್ (ಬಿಎಸಿ)-2, ಸಂಭವ್ (ಬಿಎಸ್‌ಆರ್‌ಸಿ)-3; ಮಹಿಳೆಯರ ಗುಂಪು 1ರ 200 ಮೀ ಬಟರ್‌ಫ್ಲೈ: ಅಣ್ವೇಷಾ ಗಿರೀಶ್ (ಡಾಲ್ಫಿನ್)-1. ಕಾಲ:2:30.85, ತಿತೀಕ್ಷಾ (ಬಿಎಸ್‌ಆರ್‌ಸಿ)-2, ಜೆಡಿಡಾ (ಡಿಕೆವಿ ಈಜು ಕೇಂದ್ರ)-3; ಬಾಲಕರ ಗುಂಪು 2ರ 200 ಮೀ ಬಟರ್‌ಫ್ಲೈ: ಅಮೋಘ್ (ಬಿಎಸಿ)-1. ಕಾಲ:2:20.08, ಕಾರ್ತಿಕೇಯನ್ ನಾಯರ್ (ಡಾಲ್ಫಿನ್)-2, ನೀಲೇಶ್ ದಾಸ್ (ಡಾಲ್ಫಿನ್)-3; ಬಾಲಲಿಯರ ಗುಂಪು 2ರ 200 ಮೀ ಬಟರ್‌ಫ್ಲೈ: ಹಾಶಿಕಾ (ಡಾಲ್ಫಿನ್)-1. ಕಾಲ:2:41.44, ಅನ್ನು ದೇಶಪಾಂಡೆ (ವಿಜಯನಗರ ಈಜು ಕೇಂದ್ರ)-2, ಶಿರೀನ್ (ಪೂಜಾ)-3; ಪುರುಷರ ಗುಂಪು 1ರ 100 ಮೀ ಫ್ರೀಸ್ಟೈಲ್: ಶ್ರೀಹರಿ ನಟರಾಜ್ (ಡಾಲ್ಫಿನ್)-1. ಕಾಲ:51.76, ಹರ್ಷವರ್ಧನ್ (ಬಿಎಸಿ)-2, ಆದಿತ್ಯ ಭಂಡಾರಿ (ಜೈಹಿಂದ್ ಈಜು ಕ್ಲಬ್)-3; ಮಹಿಳೆಯರ 100 ಮೀ ಫ್ರೀಸ್ಟೈಲ್: ಮಾಳವಿಕಾ (ಜಿಎಫ್‌ಆರ್‌ಎವೈ)-1. ಕಾಲ:1:00.54, ಸ್ನೇಹಾ (ಬಿಎಸಿ)-2, ರಿಯಾ ವಿಜಯ್ (ನೆಟ್ಟಕಲ್ಲಪ್ಪ ಈಜುಕೇಂದ್ರ)-3; ಬಾಲಕರ ಗುಂಪು 1ರ 100 ಮೀ ಫ್ರೀಸ್ಟೈಲ್: ತನಿಶ್ ಜಾರ್ಜ್ ಮ್ಯಾಥ್ಯೂ (ಬಿಎಸಿ)-1. ಕಾಲ: 52.50 (ಕೂಟ ದಾಖಲೆ), ಸಂಭವ್ (ಬಿಎಸ್‌ಆರ್‌ಸಿ)-2, ಹಿತೇನ್ ಮಿತ್ತಲ್ (ಜಿಎಫ್‌ಆರ್‌ಎವೈ)-3; ಪುರುಷರ 50 ಮೀ ಬ್ಯಾಕ್‌ಸ್ಟ್ರೋಕ್: ಶ್ರೀಹರಿ ನಟರಾಜ್ (ಡಾಲ್ಫಿನ್)-1. ಕಾಲ:26.04, ಲಿಖಿತ್ (ವಿಜಯನಗರ)-2, ಆದಿತ್ಯ ಭಂಡಾರಿ (ಜೈ ಹಿಂದ್)-3; ಮಹಿಳೆಯರ 50 ಮೀ ಬ್ಯಾಕ್‌ಸ್ಟ್ರೋಕ್: ಜಾಹ್ನವಿ ಗಿರೀಶ್ (ಕೆ.ವಿ.ಈಜುಕೇಂದ್ರ)-1. ಕಾಲ:38.11, ಮಹತಿ ಪಟವರ್ಧನ್ (ನೆಟ್ಟಕಲ್ಲಪ್ಪ ಈಜುಕೇಂದ್ರ)-2, ರಿಯಾ ವಿಜಯ್ (ನೆಟ್ಟಕಲ್ಲಪ್ಪ ಈಜುಕೇಂದ್ರ)-3; ಬಾಲಕರ ಗುಂಪು 1ರ 50 ಮೀ ಬ್ಯಾಕ್‌ಸ್ಟ್ರೋಕ್: ಫೃತನ್ ವಿ (ವಿಜಯನಗರ)-1. ಕಾಲ:29.69, ನಯನ್ ವಿಘ್ನೇಶ್ (ನೆಟ್ಟಕಲ್ಲಪ್ಪ ಈಜುಕೇಂದ್ರ)-2, ಸ್ವಯಂ (ಪೂಜಾ)-3, ಆರ್ಯನ್ ರಾಜೇಶ್ (ಜಿಎಫ್‌ಆರ್‌ಎವೈ)-3; ಮಹಿಳೆಯರ ಗುಂಪು 1ರ 50 ಮೀ ಬ್ಯಾಕ್‌ಸ್ಟ್ರೋಕ್: ಸುವನಾ ಸಿ.ಭಾಸ್ಕರ್ (ಡಾಲ್ಫಿನ್)-1. ಕಾಲ:30.67, ನೀನಾ ವೆಂಕಟೇಶ್ (ಡಾಲ್ಫಿನ್)-2, ರಿತು ಭರಮರಡ್ಡಿ (ಬಿಎಸಿ)-3; ಬಾಲಕಿಯರ ಗುಂಪು 2ರ 50 ಮೀ ಬ್ಯಾಕ್‌ಸ್ಟ್ರೋಕ್: ರಿಧಿಮಾ ಕುಮಾರ್ (ಬಿಎಸಿ)-1. ಕಾಲ: 30.98, ಮಾನವಿ ವರ್ಮಾ (ಡಾಲ್ಫಿನ್)-2, ಶಾಲಿನಿ (ಡಾಲ್ಫಿನ್)-3; ಪುರುಷರ 4x100 ಮೀ ಮೆಡ್ಲೆ: ಬಿಎಸಿ-1. ಕಾಲ:29.59, ಬಿಎಸಿ ಬಿ-2, ಬಿಎಸ್‌ಆರ್‌ಸಿ-3; ಮಹಿಳೆಯರ 4x100 ಮೀ ಮೆಡ್ಲೆ: ಬಿಎಸಿ-1. ಕಾಲ:5:40.46, ನೆಟ್ಟಕಲ್ಲಪ್ಪ ಈಜುಕೇಂದ್ರ-2; ಬಾಲಕರ ಗುಂಪು 1ರ 4x100 ಮೀ ಮೆಡ್ಲೆ: ಬಿಎಸಿ-1. ಕಾಲ:4:03.81 (ಕೂಟ ದಾಖಲೆ), ಜಿಎಫ್‌ಆರ್‌ಎವೈ-2, ಪೂಜಾ ಈಜುಕೇಂದ್ರ-3; ಮಹಿಳೆಯರ ಗುಂಪು 1ರ 4x100 ಮೀ ಮೆಡ್ಲೆ: ಡಾಲ್ಫಿನ್-1. ಕಾಲ:4:40.51 (ಕೂಟ ದಾಖಲೆ), ಜಿಎಫ್‌ಆರ್‌ಎವೈ-2, ಬಿಎಸ್‌ಆರ್‌ಸಿ-3; ಬಾಲಕರ ಗುಂಪು 2ರ 4x100 ಮೀ ಮೆಡ್ಲೆ: ಡಾಲ್ಫಿನ್-1. ಕಾಲ:4:27.32, ಬಿಎಸ್‌ಆರ್‌ಸಿ-2, ಪೂಜಾ ಈಜುಕೇಂದ್ರ-3; ಬಾಲಕಿಯರ ಗುಂಪು 2ರ 4x100 ಮೀ ಮೆಡ್ಲೆ: ಡಾಲ್ಫಿನ್-1. ಕಾಲ:4:48.57 (ಕೂಟ ದಾಖಲೆ), ಪೂಜಾ ಈಜುಕೇಂದ್ರ-2, ಬಿಎಸಿ-3.



ರಿಧಿಮಾ ಕುಮಾರ್



ಸುವನಾ ಸಿ.ಭಾಸ್ಕರ್

ಮಿಥಾಲಿ ಬಳಗಕ್ಕೆ ಆಘಾತ

ಲಖನೌ (ಪಿಟಿಐ): ಒಂದು ವರ್ಷ ಸ್ಪರ್ಧಾತ್ಮಕ ಕ್ರಿಕೆಟ್ ಕಣಕ್ಕೆ ಇಳಿಯದೇ ಇದ್ದ ಭಾರತದ ಮಹಿಳಾ ತಂಡಕ್ಕೆ ಭಾನುವಾರ ದಕ್ಷಿಣ ಆಫ್ರಿಕಾ ಮಹಿಳೆಯರ ತಂಡ ಆಘಾತ ನೀಡಿತು. ಏಕಾನ ಕ್ರೀಡಾಂಗಣದಲ್ಲಿ ನಡೆದ ಏಕದಿನ ಕ್ರಿಕೆಟ್ ಸರಣಿಯ ಮೊದಲ ಪಂದ್ಯದಲ್ಲಿ ಆತಿಥೇಯರನ್ನು ಪ್ರವಾಸಿ ತಂಡ ಎಂಟು ವಿಕೆಟ್‌ಗಳಿಂದ ಮಣಿಸಿತು.

ಭಾರತವನ್ನು 177 ರನ್‌ಗಳಿಗೆ ನಿಯಂತ್ರಿಸಿದ ದಕ್ಷಿಣ ಆಫ್ರಿಕಾ ತಂಡಕ್ಕೆ ಲಿಜೆಲಿ ಲೀ (ಔಟಾಗದೆ 83; 122 ಎಸೆತ, 11 ಬೌಂಡರಿ, 1 ಸಿಕ್ಸರ್) ಮತ್ತು ಲೌರಾ ವೊಲ್ವಾರ್ಟ್ (80; 110 ಎ, 12 ಬೌಂ) ಭರ್ಜರಿ ಆರಂಭ ಒದಗಿಸಿದರು. ಭಾರತದ ವಿರುದ್ಧ ದಾಖಲೆ ಮೊತ್ತದ (37.1 ಓವರ್‌ಗಳಲ್ಲಿ 169 ರನ್) ಮೊದಲ ವಿಕೆಟ್ ಜೊತೆಯಾಟವಾಡಿದ ಇವರಿಬ್ಬರು ತಂಡಕ್ಕೆ ಸುಲಭ ಜಯ ತಂದುಕೊಟ್ಟರು. 40.1 ಓವರ್‌ಗಳಲ್ಲಿ ತಂಡ ಜಯಭೇರಿ ಮೊಳಗಿಸಿತು.

100ನೇ ಏಕದಿನ ಪಂದ್ಯ ಆಡಿದ ಹರ್ಮನ್‌ಪ್ರೀತ್ ಕೌರ್ ಮೋಹಕ ಬ್ಯಾಟಿಂಗ್ ಮೂಲಕ ಮಿಂಚಿದರು. ಆದರೆ ಅರ್ಧಶತಕದ ಅಂಚಿನ ಲ್ಲಿದ್ದಾಗ ಸುನೆ ಲೂಜ್ ಬೌಲಿಂಗ್‌ನಲ್ಲಿ ಭರ್ಜರಿ ಹೊಡೆತಕ್ಕೆ ಮುಂದಾಗಿ ಲಾಂಗ್ ಆಫ್‌ನಲ್ಲಿದ್ದ ಶಬ್ನಿಮ್ ಇಸ್ಮಾಯಿಲ್‌ಗೆ ಕ್ಯಾಚ್ ನೀಡಿದರು.



ಲೌರಾ ವೊಲ್ವಾರ್ಟ್ –ಎಎಫ್‌ಪಿ ಚಿತ್ರ

ಸಂಕ್ಷಿಪ್ತ ಸ್ಕೋರು: ಭಾರತ: 50 ಓವರ್‌ಗಳಲ್ಲಿ 9ಕ್ಕೆ 177 (ಮಿಥಾಲಿ ರಾಜ್ 50, ಹರ್ಮನ್‌ಪ್ರೀತ್ ಕೌರ್ 40, ದೀಪ್ತಿ ಶರ್ಮಾ 27; ಶಬ್ನಿಮ್ ಇಸ್ಮಾಯಿಲ್ 28ಕ್ಕೆ3, ನೊಂಕುಲುಲೆಕೊ ಮಾಬ 41ಕ್ಕೆ2); **ದಕ್ಷಿಣ ಆಫ್ರಿಕಾ:** 40.1 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 178 (ಲಿಜೆಲಿ ಲೀ ಔಟಾಗದೆ 83, ಲೌರಾ ವೊಲ್ವಾರ್ಟ್ 80; ಜೂಲನ್ ಗೋಸ್ವಾಮಿ 38ಕ್ಕೆ2). **ಫಲಿತಾಂಶ:** ದಕ್ಷಿಣ ಆಫ್ರಿಕಾ ತಂಡಕ್ಕೆ 8 ವಿಕೆಟ್‌ಗಳ ಜಯ. **ಮುಂದಿನ ಪಂದ್ಯ:** ಮಾರ್ಚ್ 9, ಲಖನೌ.

ಸಿಂಧುಗೆ ನಿರಾಸೆ

ಬಾಸೆಲ್ (ಪಿಟಿಐ): ಭಾರತದ ಬ್ಯಾಡ್ಮಿಂಟನ್ ತಾರೆ ಪಿ.ವಿ. ಸಿಂಧು ಭಾನುವಾರ ಇಲ್ಲಿ ನಡೆದ ಸ್ವಿಸ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ಫೈನಲ್‌ನಲ್ಲಿ ನಿರಾಸೆ ಅನುಭ ವಿಸಿದರು.

ಸಿಂಧು 12–21, 5–21ರಿಂದ ತಮ್ಮ ಬದ್ಧ ಎದುರಾಳಿ, ಸ್ಪೇನ್‌ನ ಕ್ಯಾರೊಲಿನ್ ಮರಿನ್ ಅವರ ಎದುರು ಸಿಂಧು ಪರಾಭವಗೊಂಡರು. ಸಿಂಧು ಅವರು ಎರಡು ವರ್ಷಗಳ ಹಿಂದೆ ಇಲ್ಲಿ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಗೆದ್ದಿದ್ದರು.

ಆದರೆ ಭಾನುವಾರದ ನಡೆದ 35 ನಿಮಿಷಗಳ ಪಂದ್ಯದಲ್ಲಿ ಸ್ಪೇನ್ ಆಟಗಾರ್ತಿ ಪಾರಮ್ಯ ಮೆರೆದರು. ಈ ಋತುವಿನಲ್ಲಿ ಮರಿನ್ ಎದುರು ಸಿಂಧು ಶರಣಾದ ಮೂರನೇ ಪಂದ್ಯ ಇದಾಗಿದೆ. ಜನವರಿಯಲ್ಲಿನಡೆದಿದ್ದ ಥಾಯ್ಲೆಂಡ್ ಓಪನ್ ಸೂಪರ್ 1000 ಸರಣಿಗಳಲ್ಲಿಯೂ ಸಿಂಧು, ಮರಿನ್ ಎದುರು ಸೋತಿದ್ದರು. ವಿಶ್ವ ರ‍್ಯಾಂಕಿಂಗ್‌ನಲ್ಲಿ ಏಳನೇ ಸ್ಥಾನದಲ್ಲಿರುವ 25 ವರ್ಷದ ಸಿಂಧು, 18 ತಿಂಗಳುಗಳ ನಂತರ ಮೊದಲ ಬಾರಿಗೆ ಟೂರ್ನಿಯೊಂದರ ಫೈನಲ್ ಪ್ರವೇಶಿಸಿದ್ದರು.


ಟೂರ್ನಿಯ ಆರಂಭದಿಂದಲೂ ಉತ್ಕೃಷ್ಟ ಆಟವನ್ನು ಆಡಿದ್ದ ಸಿಂಧು ಪ್ರಶಸ್ತಿ ಜಯಿಸುವ ನೆಚ್ಚಿನ ಆಟಗಾರ್ತಿ ಎನಿಸಿದ್ದರು, ಆದರೆ ಫೈನಲ್‌ನಲ್ಲಿ ತೀವ್ರ ಒತ್ತಡಕ್ಕೊಳಗಾದಂತೆ ಕಂಡರು.

ಅಂಧರ ವಾಲಿಬಾಲ್: ದೀಪಾಂಜಲಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಇಲ್ಲಿನ ಮಾಧ್ಯಮಿಕ ಶಾಲಾ ಆವರಣದಲ್ಲಿ ನಡೆದ ರಾಜ್ಯಮಟ್ಟದ ಅಂಧರ ವಾಲಿಬಾಲ್ ಟೂರ್ನಿಯಲ್ಲಿ ಬೆಂಗಳೂರಿನ ದೀಪಾಂಜಲಿ ತಂಡವು ರಾಣೆಬೆನ್ನೂರಿನ ಸ್ನೇಹದೀಪ ತಂಡವನ್ನು ಭಾನುವಾರ 26–24, 25–19ರಿಂದ ಮಣಿಸಿ ಪ್ರಶಸ್ತಿ ಗೆದ್ದಿತು.

ಪ್ರಶಸ್ತಿ ಗೆದ್ದ ತಂಡಕ್ಕೆ ₹ 7 ಸಾವಿರ ಹಾಗೂ ರನ್ನರ್ ಅಪ್ ತಂಡಕ್ಕೆ ₹ 5 ಸಾವಿರ ನಗದು ಬಹುಮಾನ ನೀಡಲಾಯಿತು. ಚೆಂಡು ಸಾಗಲು ಮಾತ್ರ ಸ್ಥಳಾವಕಾಶ ಕಲ್ಪಿಸಿ ನೆಟ್ ಕಟ್ಟಲಾಗಿತ್ತು. ನೆಲದ ಮೇಲೆ ಉರುಳುತ್ತ ಬರುವ ಚೆಂಡಿನ ಶಬ್ದ ಗ್ರಹಿಸಿ ಆಡಬೇಕು. ಇಬ್ಬರು ಅರೆ ಅಂಧರು ಹಾಗೂ ನಾಲ್ವರು ಪೂರ್ಣ ಅಂಧರು ಅಂಕಣದಲ್ಲಿದ್ದರು.



ಡಬ್ಲುಟಿಸಿ: ನಿಯಮ ತಿದ್ದುಪಡಿಗೆ ರವಿ ಕಿಡಿ

ಅಹಮದಾಬಾದ್(ಪಿಟಿಐ): ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಪ್ರವೇಶದ ಅರ್ಹತಾ ಮಾನದಂಡವನ್ನು ಬದಲಾಯಿಸಿದ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಕ್ರಮಕ್ಕೆ ಭಾರತ ತಂಡದ ಮುಖ್ಯ ಕೋಚ್ ರವಿ ಶಾಸ್ತ್ರಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಶನಿವಾರ ಮೊಟೇರಾ ಕ್ರೀಡಾಂಗಣದಲ್ಲಿ ಇಂಗ್ಲೆಂಡ್ ವಿರುದ್ಧದ ನಾಲ್ಕನೇ ಟೆಸ್ಟ್‌ನಲ್ಲಿ ಭಾರತ ತಂಡವು ಗೆಲುವು ಸಾಧಿಸಿತ್ತು. ಅದರೊಂದಿಗೆ ಸರಣಿಯಲ್ಲಿ 3–1ರಿಂದ ಗೆದ್ದು ಡಬ್ಲುಟಿಸಿಗೆ ಅರ್ಹತೆ ಗಿಟ್ಟಿಸಿತ್ತು.

ಹೋದ ವರ್ಷ ಕೋವಿಡ್ –19 ಕಾರಣದಿಂದ ವಿಶ್ವದಾದ್ಯಂತ ಕ್ರಿಕೆಟ್ ಚಟುವಟಿಕೆಗಳು ಸ್ಥಗಿತವಾಗಿದ್ದವು. ಆ ಸಂದರ್ಭದಲ್ಲಿ ಡಬ್ಲುಟಿಸಿಯ ಟೆಸ್ಟ್ ಸರಣಿಗಳಲ್ಲಿ ಕೆಲವು ರದ್ದಾಗಿದ್ದವು. ಆದ್ದರಿಂದ ಐಸಿಸಿಯು ಪಾಯಿಂಟ್ ಪದ್ಧತಿಯ ನಿಯಮ ಬದಲಿಸಿ, ಪಂದ್ಯಗಳ ಜಯದ ಶೇಕಡಾವಾರು ಪಾಯಿಂಟ್ ಪದ್ಧತಿಯನ್ನು ಜಾರಿಗೆ ತಂದಿತ್ತು.

ವಿವಾದ ಸೃಷ್ಟಿಸಿದ ಹೇಳಿಕೆ: ತಮ್ಮ ಬಗ್ಗೆ ಮತ್ತು ತಂಡದ ಬಗ್ಗೆ ಸಾಮಾಜಿಕ ತಾಣಗಳಲ್ಲಿ ಬರುವ ಟ್ರೋಲ್‌ಗಳಿಗೆ ಖಾರವಾಗಿ ಉತ್ತರಿಸಿರುವ ರವಿಶಾಸ್ತ್ರಿ ‘ಹೀಗೆಲ್ಲ ಮಾಡುವವರು ನನ್ನ ಹೆಸರು ಹೇಳಿಕೊಂಡು ಕುಡಿಯಲಿ. ನಂತರ ಅದನ್ನು ಸಾಮಾಜಿಕ ತಾಣಗಳಿಗೆ ಹಾಕಲಿ. ಆಗ ತುಂಬ ಜನ ನಗುವರು’ ಎಂದು ಮಾರ್ಮಿಕವಾಗಿ ಹೇಳಿದ್ದಾರೆ.

ರೋಮ್ ರ‍್ಯಾಂಕಿಂಗ್ ಸಿರೀಸ್ ಕುಸ್ತಿ

ವಿನೇಶಾಗೆ ಅಗ್ರಸ್ಥಾನ

ರೋಮ್(ಪಿಟಿಐ): ಎರಡು ವಾರಗಳ ಅಂತರದಲ್ಲಿ ಎರಡನೇ ಚಿನ್ನದ ಪದಕ ಮುಡಿಗೇರಿಸಿಕೊಂಡ ಭಾರತದ ವಿನೇಶಾ ಪೋಗಟ್, ವಿಶ್ವ ಕ್ರಮಾಂಕದಲ್ಲಿ 53 ಕೆಜಿ ವಿಭಾಗದಲ್ಲಿ ಅಗ್ರಸ್ಥಾನಕ್ಕೆ ಮರಳಿದರು.

ಇಲ್ಲಿ ನಡೆಯುತ್ತಿರುವ ಮಾಟಿಯೊ ಪೆಲಿಕೋನ್ ರ‍್ಯಾಂಕಿಂಗ್ ಸಿರೀಸ್ ಕುಸ್ತಿ ಟೂರ್ನಿಯಲ್ಲಿ ಅವರು ಮೊದಲ ಸ್ಥಾನ ಗಳಿಸಿದರು.

ಟೋಕಿಯೊ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿರುವ ಭಾರತದ ಏಕೈಕ ಮಹಿಳಾ ಕುಸ್ತಿಪಟು ಎನಿಸಿಕೊಂಡಿರುವ ವಿನೇಶಾ, 53 ಕೆಜಿ ವಿಭಾಗದ ಫೈನಲ್ ಬೌಟ್‌ನಲ್ಲಿ 4–0ರಿಂದ ಕೆನಡಾದ ಮೇರಿ ಹೆಲನ್ ವಿಕ್ಕರ್ ಅವರನ್ನು ಮಣಿಸಿದರು.

ಕಳೆದ ವಾರ ಉಕ್ರೇನ್ ಕೀವ್‌ನಲ್ಲಿ ನಡೆದ ಟೂರ್ನಿಯಲ್ಲೂ ಅವರಿಗೆ ಚಿನ್ನದ ಪದಕ ಒಲಿದಿತ್ತು.

ರೋಮ್ ಟೂರ್ನಿಗೂ ಮೊದಲು ವಿನೇಶಾ ಅವರು ವಿಶ್ವ ರ‍್ಯಾಂಕಿಂಗ್‌ನಲ್ಲಿ ಮೂರನೇ ಸ್ಥಾನದಲ್ಲಿದ್ದರು. ಇಲ್ಲಿ 14 ಪಾಯಿಂಟ್ಸ್ ಕಲೆಹಾಕುವ ಮೂಲಕ ಅಗ್ರಸ್ಥಾನಕ್ಕೆ ಮರಳಿದರು. ಕೆನಡಾದ ಮೇರಿ ಅವರು ಎರಡನೇ ಸ್ಥಾನದಲ್ಲಿದ್ದಾರೆ.

ವಿನೇಶಾ ಅವರು ಈ ಟೂರ್ನಿಯಲ್ಲಿ ಒಂದೂ ಪಾಯಿಂಟ್ ಅನ್ನು ಎದುರಾಳಿಗೆ ಬಿಟ್ಟುಕೊಟ್ಟಿಲ್ಲ. ಇಲ್ಲಿ ಚಿನ್ನ ಗೆಲ್ಲುವ ಮೂಲಕ ಒಲಿಂಪಿಕ್ಸ್‌ಗೂ ಭರ್ಜರಿಯಾಗಿ ಸಿದ್ಧತೆ ನಡೆಸಿದರು.


ವಿನೇಶಾ ಪೋಗಟ್–ಪಿಟಿಐ ಚಿತ್ರ

ಫೈನಲ್‌ಗೆ ಬಜರಂಗ್: ಪುರುಷರ 65 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದ ಬಜರಂಗ್ ಪೂನಿಯಾ ಟೂರ್ನಿಯ ಫೈನಲ್‌ಗೆ ಲಗ್ಗೆಯಿಟ್ಟರು. ಸೆಮಿಫೈನಲ್ ಬೌಟ್‌ನಲ್ಲಿ ಅವರು 6–3ರಿಂದ ಅಮೆರಿಕದ ಕ್ರಿಸ್ಟೋಫರ್ ಮೆಕ್ ಕೆನ್ನಾ ಅವರನ್ನು ಸೋಲಿಸಿದರು.

ಫೈನಲ್ ಮೇಲೆ ಮುಂಬೈ ಕಣ್ಣು

ಬ್ಯಾಂಬೊಲಿಮ್ (ಪಿಟಿಐ) : ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಟೂರ್ನಿಯಲ್ಲಿ ಮೊದಲ ಬಾರಿ ಫೈನಲ್ ತಲುಪುವ ಹಂಬಲದಲ್ಲಿರುವ ಮುಂಬೈ ಸಿಟಿ ಎಫ್‌ಸಿ ತಂಡವು ಎರಡನೇ ಲೆಗ್‌ನ ಸೆಮಿಫೈನಲ್‌ನಲ್ಲಿ ಆತಿಥೇಯ ಎಫ್‌ಸಿ ಗೋವಾ ತಂಡವನ್ನು ಎದುರಿಸಲಿದೆ.

ಉಭಯ ತಂಡಗಳ ನಡುವೆ ನಡೆದ ಮೊದಲ ಲೆಗ್‌ನ ಸೆಮಿಫೈನಲ್ ಪಂದ್ಯ 2–2ರ ಡ್ರಾನಲ್ಲಿ ಕೊನೆಗೊಂಡಿತ್ತು. ಆದರೆ ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿರುವ ಮುಂಬೈ ತಂಡವು ಆ ಪಂದ್ಯದಲ್ಲಿ ನಿರೀಕ್ಷೆಗೆ ತಕ್ಕ ಆಟವಾಡಿರಲಿಲ್ಲ. ಪ್ರಮುಖ ಆಟಗಾರ ಪ್ರಿನ್ಸ್‌ಟನ್ ರೆಬೆಲ್ಲೊ ತಂಡದಿಂದ ಹೊರಗುಳಿದಿದ್ದರೂ, ಆಲ್ಬರ್ಟೊ ನೊಗ್ವೆರಾ ಹಾಗೂ ಇವಾನ್ ಗೊಂಜಾಲೆಜ್ ಅವರ ಉಪಸ್ಥಿತಿ ಈ ಪಂದ್ಯದಲ್ಲಿ ಗೋವಾಗೆ ಆತ್ಮವಿಶ್ವಾಸ ಹೆಚ್ಚಿಸಿದೆ.

ಪಂದ್ಯ ಆರಂಭ: ಸಂಜೆ 7.30

ಸ್ಥಳ: ಜಿಎಂಸಿ ಕ್ರೀಡಾಂಗಣ

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಲಾಲ್‌ರಿನ್‌ಸಂಗಾಗೆ ಯೂತ್ ಕಿರೀಟ

ನವದೆಹಲಿ (ಪಿಟಿಐ): ಭಾರತದ ಬಾಕ್ಸರ್ ಲಾಲ್‌ರಿನ್‌ಸಂಗಾ ತ್ಲಾವು ಅವರು ಘಾನಾದ ಎರಿಕ್ ಕುರಮ್ ಅವರನ್ನು ಮಣಿಸಿ ವಿಶ್ವ ಬಾಕ್ಸಿಂಗ್ ಕೌನ್ಸಿಲ್ (ಡಬ್ಲ್ಯುಬಿಸಿ) ಯೂತ್ ವಿಶ್ವ ಸೂಪರ್ ಫೆದರ್‌ವೇಟ್ ವಿಭಾಗದ ಪ್ರಶಸ್ತಿ ಜಯಿಸಿದರು. ಮಿಜೋರಾಂನ ಐಜ್ವಾಲ್‌ನಲ್ಲಿ ನಡೆದ ಎಂಟು ಸುತ್ತುಗಳ ಹಣಾಹಣಿಯಲ್ಲಿ ಅವರು ಚಾಂಪಿಯನ್ ಆಗಿ ಹೊರಹೊಮ್ಮಿದರು.

ಅಂಧರ ಚೆಸ್: ಶಶಿಧರ್‌ಗೆ ಪ್ರಶಸ್ತಿ

ವಿಜಯನಗರ (ಹೊಸಪೇಟೆ): ಮೈಸೂರಿನ ಕೆ.ಎಂ.ಶಶಿಧರ್ ನಗರದಲ್ಲಿ ನಡೆದ ರಾಜ್ಯ ಮಟ್ಟದ ಅಂಧರ ಮುಕ್ತ ಚೆಸ್ ಟೂರ್ನಿಯಲ್ಲಿ ಚಾಂಪಿಯನ್ ಆದರು.

ಅವರು ಒಟ್ಟು ಎಂಟು ಪಾಯಿಂಟ್ ಕಲೆಹಾಕಿ ಮೊದಲ ಸ್ಥಾನ ಪಡೆದು ₹10 ಸಾವಿರ ನಗದು, ಪ್ರಮಾಣ ಪತ್ರ ಹಾಗೂ ಟ್ರೋಫಿ ಪಡೆದರು. ದ್ವಿತೀಯ ಹಾಗೂ ತೃತೀಯ ಬಹುಮಾನ ಕ್ರಮವಾಗಿ ರಾಯಚೂರಿನ ಬಸಲಿಂಗಪ್ಪ ಮರಡ್ಡಿ ಮತ್ತು ಶಿವಮೊಗ್ಗದ ಕೃಷ್ಣ ಉಡುಪ ಪಾಲಾದವು. ಮಹಿಳಾ ವಿಭಾಗದಲ್ಲಿ ಬೆಂಗಳೂರಿನ ಕೆ.ಎಸ್.ಶೀಲಾವತಿ ಅತ್ಯುತ್ತಮ ಆಟಗಾರ್ತಿ ಪ್ರಶಸ್ತಿ ಪಡೆದರು. ಬೆಂಗಳೂರಿನ ದೀಪಾ ಅಕಾಡೆಮಿ ಹಾಗೂ ಶಿವಮೊಗ್ಗದ ಶಾರದಾದೇವಿ ಅಂಧರ ವಿಕಾಸ ಕೇಂದ್ರ ಬೆಸ್ಟ್ ಸ್ಕೂಲ್ ಪ್ರಶಸ್ತಿ ಪಡೆದುಕೊಂಡವು.


ಕೆ.ಎಂ.ಶಶಿಧರ್